ಗಡಿ). ಮಾರಲ್ ಬೇಡಿ ಅಂಗಡಿಯಲ್ಲಿ ಪಸರಿಸಿದ ದ್ರವ್ಯವು (ಕ್ರಯ್ಯ Nr.). ಜಲತರಣಿತಯುವನ್ ಒಯ್ದು, ಅಂಗಡಿಯೊಳಗೆ ಮಾಜ' (Bp. 27, 21). ಅಂಗಡಿಯೊಳಗೆ ವಿಕ್ರಯಿಸಿ (30, 4). ಅಂಗಡಿಯೊಳ್ ಆ ತುಂಬ ಸುಡಿಗಳ್ (54, 78; see also 32, 52; 42, 5). ಕರ್ಡಾಯದ ಅಂಗಡಿಯಲಿ ಇಷ್ಟು ಫಲವೇನು? (Dp. 148, 3). ದೇವರಿಲ್ಲದ ಗುಡಿ ಯು ಹಾಡು ಬಿದ್ದ ಅಂಗಡಿಯು (54, 1). ಅಂಗಡಿ ಮಾಡಿ' ಗೊಂಗಡಿ ಹೊದ್ದ ಹಾಗೆ. — ಅಂಗಡಿಯಲ್ಲಿ ಮುಂಗಡಿ ಸಿಕ್ಕದೆ? (Prvs.). — ಅಂಗಂಗಡಿ. rep. = ಅಂಗಡಿ ಅಂಗಡಿ. (C.). — ಅಂಗಡಿಕೇರಿ. = ಅಂಗಡಿ ಬೀದಿ. (ಪಟಣಿ Si. 420). ಅಂಗಡಿಚೀಟಿ. A note to a shopkeeper (S. Mr.). — ಅಂಗಡಿಬೀದಿ. A market-street, a market (ಪಟಣಿ Nr.; ನಿಗಮ Si. 442; ಹಟ್ಟ 490). — ಅಂಗಡಿಮನೆ. A house with a shop (Bp. 52, 11). — ಅಂಗಡಿಮಳಿಗೆ. A prolongation of the front roof of a shop, a sort of verandah in front of a shop (C.). — ಅಂಗಡಿಮೂಲಿಕೆ. A shop drug (C.). — ಅಂಗಡಿಯವ. -ಅವ. A shopkeeper (C.). — ಅಂಗಡಿವ್ಯಾಪಾರ. Shop-trade. ಅಂಗಡಿವ್ಯಾಪಾರ ಒಸರುನೀರಿನ ಹಾಗೆ (Prv.). — ಅಂಗಡಿಸರಕು. The goods of a shop (C.). — ಅಂಗಡಿಸಾಲ. A shop-debt (C.). — ಅಂಗಡಿ ಹಚ್ಚು. To open a shop (My.). ಅಂಗಡೀ ಹಚ್ಚಿ ಇರುತ್ತಾರೆ (B. 3, 77). — ಅಂಗಡಿ ಹಾಕು. = ಅಂಗಡಿ ಹಚ್ಚು. (My.). ಅವನು ಕಾಗದ ಮಸಿ ಮುನ್ನಾದ ಒಡವೆಗಳ ಅಂಗಡಿ ಯನ್ನು ಹಾಕಿ (B. 5, 218). ಅಂಗಡೀ ಹಾಕುವದು (5, 273). 2, to shut a shop (C.). — ಅಂಗಡಿ ಹೂಡು. = ಅಂಗಡಿ ಹಾಕು. (My.).

ಅಂಗಡಿಕಾರ **aṅgaḍi-kâra.** A shopkeeper (C.; B. 4, 178; 5, 282).

ಅಂಗಡಿಗಾರ **aṅgaḍi-gâra.** = ಅಂಗಡಿಕಾರ. (C.).

ಅಂಗಣ aṅgaṇa. = ಅಂಕಣ, ಅಂಗನ, ಅಂಗಳ. A Tbh. of ಅಂಕನ or ಅಂಗನ (Śmd. 364), and also one of the Tatsamas (Śmd. 384; Śm. 77; Kk. 95). A court, a yard, especially one in front of a house; an open space, an area (ಚತ್ವರ, ಅಜಿರ Nr.; ಅಜಿರ, ಪ್ರಾಂಗಣ, etc. Hlâ.; ಪ್ರಾಂಗಣ, ಅಂಗಳ Nn. 117; ಅಂಗಳ, ಮನೆಯ ಮುಂದ್ದಿನ ಸ್ಥಳ G.; see ರೋದೋಂಗಣ). ಅಂಗಣದ ಸಿಪ್ಪ, ಅವರೆಯ ಜೇನ್, ಅಂಗಳದ ಸುಧೆ ಎನಲ್ ಎಸವ ಶಿವನಂಗಣಸಿಪ್ಪಾಸ್ತಿಕಸ್ತಂ (Bp. 60, 44). — ಅಂಗಣವಲಯ. (Śmd. 386; Kk. 97). The boundary or circumference of a yard. — ಅಂಗಣವಾಪಿ. -ವಾಪಿ. (Śmd. 364. 386; Kk. 97). A well in a yard. — ಅಂಗಣವೆಟ್ಟು. -ವೆಟ್ಟು (? Śmd. 386, o. r. -ಬೆಟ್ಟು; Kk. 97).

ಅಂಗತ **aṅgata.** (fr. ಅಡಿ2?) = ಅಂಗತಕ್ಕಲು, ಅಂಗತ್ತ, ಅಂಗತ q. v. (My.).

ಅಂಗತಕ್ಕಲು **aṅgatakkalu.** = ಅಂಗತ. (My.; also -ಲಿ).

ಅಂಗತ್ತ **aṅgatta.** = ಅಂಗತ. (My.).

ಅಂಗದ aṅgada. *A bracelet worn on the upper arm.* 2, N. of an ape, son of Bâli.

ಅಂಗನ aṅgana. = ಅಂಗಣ, ಅಂಗಳ. Going, walking. 2, *a court, a yard, an area.*

ಅಂಗನಾಜೀವಿ aṅganâ-jîvi. One who gets a livelihood by his wife. 2, a dancer, an actor (ಜಾಯಾಜೀವ Mr. 378).

ಅಂಗನಾರಜಸ್ aṅganâ-rajas. *The menstrual flux.*

ಅಂಗನೆ aṅganĕ. ಅಂಗನಾ. *A woman with a beautiful body.* 2, *a woman, a female.* 3, *the female elephant of the north.*

ಅಂಗನ್ಯಾಸ aṅga-nyâsa. Ceremony of touching certain parts of the body. (My.).

ಅಂಗಪ್ರದಕ್ಷಿಣ aṅga-pradakshiṇa. Rolling the body to the right for a considerable distance or round a temple. (R.).

ಅಂಗಭವ aṅga-bhava. = ಅಂಗಜ. Kâma.

ಅಂಗಭವಾಂಗನಾಶ aṅgabhava-aṅga-nâśa. The destroyer of Kâma's body, Śiva (Bp. 18, 94).

ಅಂಗಭೇದ aṅga-bhêda. A certain limb of the body; any of its limbs (My.).

ಅಂಗಮಣಿ aṅgamaṇi. A present given in a girl's marriage, or in her first pregnancy after her marriage (T.; R.).

ಅಂಗಮರ್ದ aṅga-marda. *A man who has to shampoo the body of others.*

ಅಂಗಮರ್ದಿ aṅga-mardi. *A man who has to shampoo the body of others.*

ಅಂಗಯ್ಸು **aṅgaysu.** = ಅಂಗವಿಸು. (J. 20. 29).

ಅಂಗರ aṅgara. Tbh. of ಅಂಗಾರ. (ಅಂಗಾರ Śm. 11; ಇಂಗಳ 113; ಅಂಗಾರ, ಬೂದಿ G.). — ಅಂಗರಗಡ್ಡೆ. = ಅಂಗಾರ-. (ಅಮುಕರೆ St. & Pl.). — ಅಂಗರಪೋಳಗೆ. -ಪೋಳಗೆ. Tbh. of ಅಂಗಾರಸ್ಫೋಟಕ (Čt. II, 57).

ಅಂಗರಕ್ಷ aṅga-raksha. A body-protector. 2, protection or preservation of the body. 3, a coat of mail (ಕವಚ, ಜಗರ, ಜೋಡು, etc. Mr. 292).

ಅಂಗರಕ್ಷಕ aṅga-rakshaka. A body-guard (Bp. 59, 28).

ಅಂಗರಕ್ಷಣೆ aṅga-rakshaṇĕ. Protection or preservation of the body (My.).

ಅಂಗರಕ್ಷೆ aṅga-rakshĕ. Protection or preservation of the body (My.). 2, a body-guard (My.; ಮೆಯ್ಗಾವಲಿ, ಕಾವಲ G.). 3, an amulet or charm (My.). 4, a coat of mail (R.). ಅಂಗರಕ್ಷೆ ಇಲ್ಲದ ಮೇಲೆ ಬಂಗಾರ ಯಾಕೆ? (Prv.).

ಅಂಗರಣೆ **aṅgaraṇĕ.** = ಅಗರಣೆ, etc. (My.).

ಅಂಗರಾಗ aṅga-râga. *Different unguents used for perfuming the body.* 2, perfuming the body after bathing (ವಿಲೇಪನ, ಉದ್ವರ್ತನ, ಶೀವಿ ಪೂಸುವುದು Mr. 339).

ಅಂಗರಾಜ aṅga-râja. Karṇa, the king of Aṅga. (My.).

ಅಂಗರುಹ aṅga-ruha. What grows on the body, as hair, wool, etc. (R.).

ಅಂಗರೇಖು aṅgarêkhu. A long coat (My.; H.).

ಅಂಗಲ್ **aṅgal.** = (ಅಂಚಲ್, ಅಂಯಲ್, *i. e.*) ಅಬಲ್ 1. — ಅಂಗಲಾಚಿಕೆ. -ಆಚಿಕೆ. Crying from grief (My.). — ಅಂಗಲಾಚಿಸು. -ಆಚಿಸು. To cause to lament, etc. (My.). — ಅಂಗಲಾಚು. -ಆಚು. = ಅಂಗಲಾಚುರ್. To cry from grief; to grieve or sorrow (C.; T., M. ಅಂಗಲಾಯು; Tĕ. ಅಂಗಲಾರ್ಚು). ಅಂಗಲಾಚುತ್ತ ಅಳುವುದು (Bp. 36, 14). — ಅಂಗಲಾಪು. -ಅಪು. Lamentation; grief (My.; Tĕ. ಅಂಗಲಾರ್ಪು; T. ಅಂಗಲಾಯ್ಪು). — ಅಂಗಲಾಚುರ್. -ಆಚುರ್. = ಅಂಗಲಾಚು. (My.).

ಅಂಗಲ **aṅgala** = ಅಗಲ, etc. The state of being separate or more or less apart; the thinness of corn in a field, etc. (C.). — ಅಂಗಂಗಲ. rep. = ಅಂಗಂಗಲು. (C.).

ಅಂಗಲು **aṅgalu.** = ಅಂಗಲ, etc. (C.). (ಕಹಾವ್ಯಗದ) ಗೋಧಿನ ಮೇಲೆ ಬಿತುಸುಗೂಡಲು ಅಂಗಲಾಗಿ ಬೆಳೆದು ಇರುತ್ತದೆ (B. 4, 191). ಅಂಗಲಾಗಿ ಬಿತ್ತಿದ್ದು ಅಗಲವಾಗಿ ಬಿಮಿವದು (Prv.). — ಅಂಗಂಗಲು. rep. (C.).

ಅಂಗಪಡಿ aṅga-paḍi (?). = ಅಂಕೋಲಣಿ. A stirrup (T. ಅಂಗಬಡಿ, ಅಂಗಪಡಿ; R.).

ಅಂಗವಣೆ aṅgavaṇĕ. Ability from practice, habitude; — force, vigour; prowess or power (Mhr. ಅಂಗವಣ; see Bp. 12, 9; Bh. 7, 18, 14; Râm. 31, 32; J. 11, 16; 26, 21).

Digitized by Google

ಅಂಗವಸ್ತ್ರ aṅga-vastra. = ಅಂಗೋಸ್ತ್ರ. A small cloth for wiping off one's perspiration, cleaning the nose and drying the body after bathing; it is either worn loosely over the shoulder or put into the pocket (S. Mhr.). 2, an upper garment, a dôtra (My.; ಉತ್ತರೀಯ Čb.; see s. ಪೊದ್ದು 1). ಅಂಗವಸ್ತ್ರ ಇಲ್ಲದಿದ್ದರೆ ಅಂಗಾರಕ ಇಡ ಬಾರದೇ? (Prv.). ಅಂಗಮೂರ್ತಿಗೆ ಮಜ್ಜನಕ್ಕೆ ಎಱೆದು, ಅಂಗವಸ್ತ್ರದಿನ್ ಒತ್ತಿ (Bp. 43, 30).

ಅಂಗವಿಕಾರ aṅga-vikâra. Change of bodily appearance; collapse, bodily disease or disorder; fainting, apoplexy. (Bp. 59, 54).

ಅಂಗವಿಕ್ಷೇಪ aṅga-vikshêpa. *Gesticulation.* 2, a kind of dance (ಒನ್ದು ತರದ ಕುಣಿತ G.).

ಅಂಗವಿಸು aṅgavisu. = ಅಂಗಯ್ಸು. To come together, to join, to meet, to crowd (v. i.);— to lay hold of, to seize; to concern one's self in (Mhr. ಅಂಗಾವಿಣೇಂ, to embrace). ಇನಿತು ಇನಿತು ನೆನಪುಗಳಂಗವಿಪ ತಮತಮ್ಮ ಪವಣಿನ ನುಡಿಗಡಣೆಯಿನ್ದ ವಿನುತಿಸು ವಡೆ ಅದು ಕೊಱತೆ, ಅಲ್ಲಾ? (Bp. 7, 10). ಲಿಂಗವನ್ತನ ಬರವಿಗೆ ಅವ ರುಗಳ್ ಅಡ್ಡಗಟ್ಟಿ ಇರಲು, ತುಂಗವಿಕ್ರಮನ್ ಅಯ್ಸಱಿ ವಸ್ತ್ರಂಗಳಂ ಪೊತ್ತು, ಅಯ್ತರುತ ನೆರದು ಅಂಗವಿಸಿ ಬಪ್ಪವರನ್ ಆ ಮದದಾನೆಯಂ ಕಣ್ದು (21, 39). ಮುನ್ನಿನ ಕರ್ಮಕ್ಕೆ ಇನ್ನು ಆರ್ ಅಂಗವಿಸುವವರು? (45, 40). ಅದಕೆ ಅಂಗವಿಸಿ, ದಯಗೆಟ್ಟು (55, 15). ಹಿಂಗದೆ ಆ ಘುಕ್ತಾವಶೇಷವನ್ ಅಂಗವಿಸಿ, ಮೊಗಮೊಗದು (56, 12). See Č. Bp. 37, 49; V. 39, 23.

ಅಂಗವೈಕಲ್ಯ aṅga-vaikalya. A defective or imperfect state of any limb or organ. (My.; B. 4, 34).

ಅಂಗಸಂಸ್ಕಾರ aṅga-saṁskâra. *Embellishment of person, bathing, perfuming and adorning the body.*

ಅಂಗಸಂಗ aṅga-saṅga. Bodily contact, coition. (My.; J. 23, 59).

ಅಂಗಸ್ತಾನ aṅgastâna. = ಅಂಗುಸ್ತಾನಿ. (S. Mhr.).

ಅಂಗಹಾರ aṅga-hâra. *Gesticulation.* 2, a kind of dance (ಒನ್ದು ತರದ ಕುಣಿತ G.).

ಅಂಗಹೀನ aṅga-hîna. *Mutilated, maimed.* 2, incorporeal. 3, Kâma.

ಅಂಗಹೀನತ aṅga-hînata. A man who is mutilated. ಅಂಗ ಹೀನತನ್ ಆದೊಡಂ (Bp. 38, 54).

ಅಂಗಹೀನತೆ aṅga-hînatĕ. The state of being mutilated, etc. (My.).

ಅಂಗಳ aṅgaḷa. = ಅಂಗಳು, ಅಂಗುಳ, ಅಂಗುಳಿ, ಅಂಗುಳೆ, (ಅಟ್ಟಣ). The palate of the mouth (C.; Tĕ. ಅಂಗಿಲಿ; T. ಅಣ್ಣಿ, ಅಣ್ಣ; M. ಅಣ್ಣ; *cf.* ಅಣ್ 2). — ಅಂಗಳದ ಮುಳ್ಳು. = ಅಂಗುಳಿಯ ಮುಳ್. (My.).

ಅಂಗಳ aṅgaḷa. = ಅಂಗಣ, etc. (ಚತ್ವರ, o. r. ಚಪ್ಪರ, ಪ್ರಾಂಗಣ Nn. 143; ಚತ್ವರ, ಅಜಿರ, ಅಂಗಣ Si. 110; My.). ಹಟ್ಟಿಯ ಅಂಗಳ (ಚತ್ವರ, ಆಚಿರ, ಅಂಗಣ Si. 110). ತಲಬಾಗಿಲ ಮುನ್ದುಗಡೆ ಇರುವ ಅಂಗಳ (ಪ್ರಘಣ, ಪ್ರಘಾಣ 110). ಮನೆತಲಬಾಕಲುಮುನ್ದೆ ಇರುವ ಬಯ್ಲು, ಅಂಗಳ (ಮುಖ, ನಿಸ್ಸರಣ 113). ಪಟ್ಟಣದ ಸುತ್ತಲೂ ಪುರ ಜನಸಂಚಾರಾದಿಗಳಿಗೆ ಆಗಿ ಬಿಡಲ್ ಪಟ್ಟು ಇರುವ ಬಯ್ಲು, ಊರುಹೊ ಱಗಣ ಅಂಗಳ (ಸನ್ನಿವೇಶ, ನಿಕರ್ಷಣ 113). ಹಿತ್ತಲ ತೋಟ, ಅಂಗಳ ತೋಟ (ಗೃಹಾರಾಮ, etc. 118). ನಾಲ್ಕು ಕಡೆಯೂ ಅಭಿಮುಖವಾಗಿ ಕೆಯ್ಸಾಲೆ ಕಟ್ಟಿ ಮಧ್ಯದಲ್ಲಿ ಅಂಗಳವನ್ನು ಬಿಟ್ಟು ಕೊಣ್ಡು ಇರುವ ಮನೆ (ಸಂಜವನ, etc. 107). ಅಂಗಳದಲ್ಲಿ ಆಗಲಿ ಹಿತ್ತಲಲ್ಲಿ ಆಗಲಿ ಹೊಲ ಸು ಇರಗೊಡ ಬಾರದು (B. 4, 25). ಅಂಗಳದಲ್ಲಿ ಹೇತು, ಮಂಗಳ ಕಪ್ಪ ಅನ್ದ ಹಾಗೆ (Prv.).

ಅಂಗಳು aṅgaḷu. -ಳ್. = ಅಂಗಳ. (My.). ನಾಲಿಗೆಯೂ ಅಂ ಗಳೂ ಅದಱ ಸವಿ ತಕ್ಕೊಳ್ಳುತ್ತವೆ (B. 4, 85). ನಾಲಿಗೆ ಅಂಗಳುಗಳಿನ್ದ ಸ್ವಾದ ತಿಳಿಯುತ್ತದೆ (4, 86).

ಅಂಗಾಂಗಿ aṅga-aṅgi. Limb and limb, jointly or reciprocally, in consequence of being related, as one limb to another or to the body (Kâvy. III, 3, B, 164 under saṁślêsha).

ಅಂಗಾತ aṅgâta. = ಅಂಗತ, etc. Flatways, on the back (C.; ಉತ್ತಾನ G.). ಅಂಗಾತ ಬೀಱು (C.).

ಅಂಗಾಧಿಪ aṅga-adhipa. Karṇa, the king of Aṅga (Šmd. 263).

ಅಂಗಾರ aṅgâra. = ಅಂಗರ. *Charcoal, either heated or not heated* (ಇಂಗಳ Čt. II, 56; ಅಂಗರ, ಕೆಣ್ಡ, ಇಂಗಳ Šm. 11; ಕೊಳ್ಳಿ, ಕೆಣ್ಡ G.). 2, the planet Mars (ಮಂಗಳ G.). 3, ashes (see G. s. ಅಂಗರ; Mhr.). See Prv. s. ವೈಷ್ಣವ. 4, one of the gandharvas (Bh. 1, 11 sum.). — ಅಂಗಾರಗಡ್ಡೆ. = ಅಂಗರಗಡ್ಡೆ. The plant Physalis flexuosa Lin. (St. & Pl.).

ಅಂಗಾರಕ aṅgâraka. = ಅಂಗಾರ No. 1. 2, *the plant Mars* (ಕುಜ, ಮಂಗಳ Nn. 4). 3, a sectarial mark made with charred wood or ashes. 4, the plant Eclipta prostrata (ಗರುಗ, ಭೃಂಗ Mr. 130). ಅಂಗವಸ್ತ್ರ ಇಲ್ಲದಿದ್ದರೆ ಅಂಗಾರಕ ಇಡ ಬಾರದೇ? (Prv.).

ಅಂಗಾರಕವಾರ aṅgâraka-vâra. Tuesday. (My.).

ಅಂಗಾರಧಾನಿಕೆ aṅgâra-dhânikĕ. *A portable fire-place.*

ಅಂಗಾರವಲ್ಲರಿ aṅgâra-vallari. *The plant Galedupa arborea* (= ಮರ್ಕಟ, ಷಡ್ಗ್ರನ್ಥ).

ಅಂಗಾರವಲ್ಲಿ aṅgâra-valli. *The plant Clerodendrum siphonanthus* R. Br. (Siphonanthus indica).

ಅಂಗಾರಶಕಟಿ aṅgâra-śakaṭi. *A portable fire-place* (ಬಾಣಲೆ Mr. 211).

ಅಂಗಾರಸ್ಫೋಟಕ aṅgâra-sphôṭaka. = ಅಂಗರಪೋಳಿಗೆ. A cake (hôḷigĕ) baked on coals.

ಅಂಗಾಲ್ aṅgâl. -ಲು. See s. ಅಂ (ಅಜ್).

ಅಂಗಿ aṅgi. 1. Having limbs (Šmd. 136).

ಅಂಗಿ aṅgi. 2. A coat, a frock, a jacket (C.; H., Mhr.). ಹಬ್ಬಕ್ಕೆ ಒನ್ದು ಅಂಗೀ ಹೊಲಿಸಿ ಕೊಡುತ್ತೇನೆ (B. 1, 26). ದೊಡ್ಡವನು ತೊಟ್ಟು ಕೊಣ್ಡ ಅಂಗಿಯು (4, 92). ಅಂಗಿಯನ್ನೂ ಟೊಪ್ಪಿಗೆಯನ್ನೂ ಹಾಕ ಬೇಕಾಗುತ್ತದೆ (5, 273). ಅಂಗಿ ಕೊಟ್ಟು, ಬಂಗಿ ಸೇದಿ, ಮಂಗ ನಾದ. — ಅಂಗನೆ ಬರುವಾಗ ಅಂಗಿ ತೊಡ ಬೇಡವೇ? — ಅಂಗಿಗೆ ಇಲ್ಲದಿದ್ದರೆ ನುಂಗಲಿಕ್ಕೆ ಬೇಡವೇ? (Prvs.). See ನಿಲವಂಗಿ.

ಅಂಗಿರಸ್ aṅgiras. N. of a ṛishi.

ಅಂಗಿರಸ aṅgirasa. Tbh. of ಅಂಗಿರಸ್. (Mr. 258).

ಅಂಗೀ aṅgî. Assent.

ಅಂಗೀಕರಣ aṅgî-karaṇa. Assenting, agreeing, accepting; promising. See ಒಪ್ಪು ಕೆಯ್.

ಅಂಗೀಕರಿಸು aṅgî-karisu. To agree to, to accept, to adopt, to choose, to promise. (Šmd. 5; Bp. 40, 88; My.). ಅಂಗೀ ಕರಿಸಿದಲ್ಲಿ (ಪಕ್ಷೀಕರ Nn. 112). ಕಪ್ಪಿಗರ ಕೆಯ್ಪಿಡಿಯನ್ ಅಂಗೀಕ ರಿಪುದು ಅಖಿಲಸುಜನರ್ಕಳು (Kk. 101). ಅಂಗೀಕರಿಸಲ್ ಪಟ್ಟವನು (ವೃತ, ವೃತ್ತ, etc. Si. 378).

ಅಂಗೀಕರಿಸುವಿಕೆ aṅgî-karisuvikĕ. Agreeing, etc. (Si. 389).

ಅಂಗೀಕಾರ aṅgî-kâra. = ಅಂಗೀಕರಣ. *Assenting, agreeing,* etc. See ಒಪ್ಪು, ಅಪ್ಪು ಕೆಯ್, ಎಮ್ಬು ಕೆಯ್.

ಅಂಗೀಕೃತ aṅgî-kṛita. *Agreed to, accepted, promised.*

ಅಂಗೀಕೃತಿ aṅgî-kṛiti. *Agreement, assent, promise.*

Digitized by Google

ಅಂಗು aṅgu. = ಪಂಗು, etc. (My.).

ಅಂಗುಟ aṅguṭa. Tbh. of ಅಂಗುಷ್ಠ. (Rsv. 6 after 11; My.). 2, the leather-nose of a sandal (My.).

ಅಂಗುಡಿ aṅguḍi. ಅಂಗುಡಿ ಪಸರಂ (Ĉt. I, 85, o. r. ಉಂಕುಡಿ).

ಅಂಗುರಿ aṅguri. = ಅಂಗುಲಿ. *A finger; a toe.*

ಅಂಗುಲ aṅgula. -ಳ. A finger (Bp. 15, 11; 46, 58; ಬೆರಳು G.; My.). 2, the thumb. 3, *a finger's breadth, a measure equal to eight barley corns.* 4, N. of the sage Ĉāṇakya.

ಅಂಗುಲಿ aṅguli. -ಳಿ. *A finger.* 2, a toe. 3, the thumb. 4, the great toe. 5, *the finger-like tip of an elephant's trunk.* 6, = ಕಟಿಕೀರ, ಆನಿಕಾರ Mr. 102. 7, an ornament for the ears of an elephant (ಆನೆಯ ಕಿವಿಯೊಳಗಿನ ಆಭರಣ G.). 8, = ಅಂಗುಲೀಯ (My.).

ಅಂಗುಲಿಕ್ರಿಯೆ aṅguli-kriyĕ. A performance with the fingers. See ಬೆರಣ್ಣು.

ಅಂಗುಲಿಖನನ aṅguli-khanana. Digging with the fingers. See ಪರಚು.

ಅಂಗುಲಿತ್ರಾಣ aṅguli-trāṇa. A finger-protector, a contrivance like a thimble used by archers to protect the fingers from being injured by the bow-string. (R.).

ಅಂಗುಲಿದರ್ಶನ aṅguli-darśana. Pointing at with the finger. See ಸುಟ್ಟು.

ಅಂಗುಲಿಪ್ರಹರಣ aṅguli-praharaṇa. Striking, shooting or propelling with the finger. See ಅಡಿ, ಅಣೆ, ಮಿಡಿ, ಸೂಣೆ.

ಅಂಗುಲಿಮುದ್ರೆ aṅguli-mudrĕ. *A seal-ring.*

ಅಂಗುಲಿಮೋಟನ aṅguli-môṭana. Snapping or cracking the fingers. (R.).

ಅಂಗುಲಿವಿಸರ್ಜನ aṅguli-visarjana. Sending forth the fingers or letting them loose. See ಚಿಗಿ.

ಅಂಗುಲಿಸನ್ದೇಶ aṅguli-sandêśa. Snapping or cracking the fingers as a sign. (R.).

ಅಂಗುಲಿಸಮ್ಭೂತ aṅguli-sambhûta. Produced on or from the finger, a finger nail. (R.).

ಅಂಗುಲೀಯ aṅgulîya. = ಅಂಗುಲೀಯಕ. (My.).

ಅಂಗುಲೀಯಕ aṅgulîyaka. *A finger-ring.*

ಅಂಗುಷ್ಠ aṅgushṭha. = ಅಂಗುಟ, ಉಂಗುಟ, ಉಂಗುಟ್ಟ. *The thumb* (ಹೆಬ್ಬೆರಳು G.). 2, the great toe. 3, a thumb's breadth. ಅಂಗುಷ್ಠ ಮಾತರೆ ಪರ್ವತವಾದೀತೇ? (Prv.).

ಅಂಗುಸ aṅgusa. Tbh. of ಅಂಕುಶ. (My.).

ಅಂಗುಸ್ತಾನಿ aṅgustâni. = ಅಂಗಸ್ತಾನ. A thimble (Mhr. ಅಂಗುಸ್ತಾನ; Br. ಅಂಗುಸ್ತಾನು; R.).

ಅಂಗುಳ aṅguḷa. = ಅಂಗಳ, etc. The palate. — ಅಂಗು ಳಾರು. -ಒಣಗು. The palate to become dry. ತುಟಿಗಳು ಮಿಡು ಕಿದೆ. ಅಂಗುಳವಾರಿತು, ಗುಕ್ಕೆನ್ನದೇ (Bp. 54, 81).

ಅಂಗುಲ aṅgula. = ಅಂಗುಳ. (My.).

ಅಂಗುಳಿ aṅguḷi. = ಅಂಗಳ, etc. — ಅಂಗುಳಿಯ ಮುಳ್. A disease of the uvula, attended with difficulty of breathing and swallowing. (ಶಿವನಿಂ) ಅಂಗುಳಿಯ ಮುಳ್ಳಂ ಸುಡತಿ ತನ್ನ ಅಂಗಾಲಲಿಪ್ ಒತ್ತುವಳು (Bp. 15, 11). ನಿನಗೆ ಏನ್? ಅಜೀರ್ಣದ ಕೋವೇನೋ? ಅಂಗುಳಿಯ ಮುಳ್ಳೋ? (15, 20).

ಅಂಗುಳೆ aṅguḷĕ. = ಅಂಗುಳಿ. — ಅಂಗುಳೆಮುಳ್. = ಅಂಗುಳಿಯ ಮುಳ್. ಇದೆ! ಮುಟ್ಟಿಸಲಿ ಬೊಪ್ಪಂಗೆ ಬೆಟ್ಟಿತು ಅಂಗುಳೆಮುಳ್ಳದು ಆ ಹಾ! ಶಿವ್ವನ್! ಇನ್ನು ಹಿಗುವೆಂ? (Bp. 15, 22).

ಅಂಗೂರ aṅgûra. A grape, or grapes. (R.; Br. ಅಂಗೂರು; Mhr., H. ಅಂಗೂರ).

ಅಂಗೂಷ aṅgûsha. Rapid in motion. 2, an arrow. 3, an ichneumon. (R.).

ಅಂಗೆಯ್ aṅgey. ಅಂಗೈ. See s. ಅಂ (ಅಜ್).

ಅಂಗೋಟೆ aṅgôṭĕ. = ಉಂಗೋಟೆ. (My.).

ಅಂಗೋದ್ಭವ aṅga-udbhava. Kâma (J. 3, 29).

ಅಂಗೋಪಾಂಗ aṅga-upâṅga. The body and its members (J. 19, 16).

ಅಂಗೋಸ್ತ್ರ aṅgôstra. Tbh. of ಅಂಗವಸ್ತ್ರ (Si. 222).

ಅಂಗ್ರಾಣೆ aṅgrâṇĕ. = ಅಂಗರಣೆ. (My.).

ಅಂಘ್ರಿ aṅghri. A foot (ಕಾಲು Nn. 130; Mr. 332); the fourth part (My.). 2, *the root of a tree.* 3, a verse-line (Ĉh.).

ಅಂಘ್ರಿಜ aṅghri-ja. The foot-born: a Śûdra (My.).

ಅಂಘ್ರಿತಲ aṅghri-tala. A foot (ಅಡಿ Ĉt. I, 102).

ಅಂಘ್ರಿತ್ರಾಣ aṅghri-trâṇa. A shoe (Bp. 55, 57).

ಅಂಘ್ರಿಪ aṅghri-pa. Drinking with the foot or root. 2, *a tree.*

ಅಂಘ್ರಿಪರ್ಣಿಕೆ aṅghri-parṇikĕ. = ಅಂಘ್ರಿವಲ್ಲಿಕೆ. (Si. 144).

ಅಂಘ್ರಿವಲಯ aṅghri-valaya. The circumference of the foot or the hoof (of a horse, Mr. 278).

ಅಂಘ್ರಿವಲ್ಲಿಕೆ aṅghri-vallikĕ. *The plant Hedysarum logopodioides* Roxb. (see Si. 144).

ಅಚ್ ac. = ಅರ2. — ಅಚ್ಚೇರು. -ಸೇರು. Half a *seer* (C.; Mhr.).

ಅಚಕ್ಷು a-cakshu. Tbh. of ಅಚಕ್ಷುಸ್. (ಅಬಿ'ಗಣ್ Mr. 159).

ಅಚಕ್ಷುಸ್ a-cakshus. *A bad or miserable eye, no eye.* 2, blind.

ಅಚಣ್ಡ a-caṇḍa. Not of a hot temper, gentle, tractable.

ಅಚಣ್ಡಿ a-caṇḍi. *A tractable cow.*

ಅಚತುರ a-catura. Not dexterous. (My.; feminine ಅಚತುರೆ).

ಅಚಪಲ a-capala. Not oscillating; unmoveable, steady. (My.).

ಅಚಪಲತೆ a-capalatĕ. Steadiness. (My.).

ಅಚಮತ್ಕಾರ a-camatkâra. Want of admiration; a style which is not elaborate (Bp. 1, 18).

ಅಚರ a-cara. Immoveable. (My.). See ಚರಾಚರ.

ಅಚಲ a-cala. Immoveable, fixed (ಅಲ್ಲಾಡದ್ದು, ಸ್ಥಿರ G.). 2, perpetual, eternal (ನಿತ್ಯ, ಕೇಡಿಲ್ಲದುದು Nn. 41). 3, *a mountain* (ಅದ್ರಿ, ಪರ್ವತ 41). 4, the earth (ಭೂಮಿ G.). 5, exemption from further transmigration (ಅಪುನರ್ಭವ, ಮುಕ್ತಿ 41). 6, an ascetic (ಪರಮಯೋಗಿ, ಯತಿ 41). 7, a ray (ಮರೀಚಿ, ಕಿರಣ 41). 8, a man of a barbarous mountain tribe (ಪಾಮರ, ಕಿರಾತ 41). 9, a bolt or pin.

ಅಚಲರಿಪು acala-ripu. The mountain-foe: Indra (Ĉb.).

ಅಚಲಿತ a-calita. Not shaking; immoveable. (Bp. 6, 3; 7, 4; 13, 9; 39, 9).

ಅಚಲೆ a-calĕ. *The earth.*

ಅಚಲೇನ್ದ್ರ acala-indra. = ಅಗೇನ್ದ್ರ.

ಅಚಲೇನ್ದ್ರತನುಜೆ acalêndra-tanujĕ. Pârvatî (J. 15, 17).

ಅಚಾತುರ್ಯ a-câturya. Want of dexterity or ability. (B. 4, 89; ಮೂಢತ್ವ Ĉb.; My.).

ಅಚಿ aci. = ಚೀ. (My.). — ಅಚಚಿ. Impurity, filth (My.).

ಅಚಿಕ್ಕಣ a-cikkaṇa. *Not smooth, rough.*

Digitized by Google

ಅಚಿನ್ತ a-cinta. Free from anxiety (Bp. 8, 47).

ಅಚಿನ್ತ್ಯ a-cintya. Surpassing all thought or conception. (My.).

ಅಚಿರ a-cira. Not of long duration, brief, momentary. 2, recent.

ಅಚಿರದ್ಯುತಿ acira-dyuti. Lightning. (My.).

ಅಚಿರರೋಚಿಸ್ acira-rocis. Lightning. (R.).

ಅಚಿರಾಂಶು acira-aṁśu. *Lightning* (ಮಿಂಚು Mr. 43).

ಅಚುಮ್ಬಿತ a-cumbita. Not kissed. 2, unconnected, incongruous (My.).

ಅಚೇತ a-cēta. Tbh. of ಅಚೇತಸ್. (My.); also: very poor (My.).

ಅಚೇತನ a-cētana. Destitute of consciousness, inanimate (My.; ಜೀವವಿಲ್ಲದದ್ದ G.). 2, unconscious, insensible, fainting (My.; ಪ್ರಾಣವಿಲ್ಲದ G.). See ಚೇತನಾಚೇತನ. ಅಚೇತನಪದಾರ್ಥಗಳು (B. 4. 13).

ಅಚೇತನಾರ್ಥ acētana-artha. An inanimate thing (Kāvy. V, 939).

ಅಚೇತಸ್ acētas. = ಅಚೇತ, ಅಚೇತನ. (Sk.).

ಅಚೈತನ್ಯ a-caitanya. Unconsciousness; insensibility; ignorance; the material world; matter; — also: great poverty (My.).

ಅಚೋದ್ಯ a-cōdya. Not marvellous, not strange. (R.).

ಅಚ್ಚ **acca.** = ಅಚ್ಚು 1, q. v. (S. Mhr.). — ಅಚ್ಚಕಟ್ಟು. = ಅಚ್ಚುಕಟ್ಟು. A well-defined or proper boundary or proportion; suitable order, size, weight, etc. (S. Mhr.). ಅಚ್ಚಕಟ್ಟಾದ ಕೆಲಸ ಚನ್ದ, ಬಚ್ಚುಕಟ್ಟಾದ ಊಟ ಚನ್ದ (Prv.). — ಅಚ್ಚಕಟ್ಟುಮಾತು. A proper word (S. Mhr.). — ಅಚ್ಚಕಟ್ಟುಹಾಸಿಗೆ. A bed of proper size (S. Mhr.). — ಅಚ್ಚಕಟ್ಟೂಟ. -ಊಟ A meal that suits one's means (S. Mhr.).

ಅಚ್ಚ acca. 1. Tbh. of ಅಚ್ಛ q. v., ಅಚ್ಛ. (Śmd. 340; C.). — ಅಚ್ಚಕೆಮ್ಪು. Beautiful redness. ಅತ್ತಿಯ ಹಣ್ಣು ಅಚ್ಚಕೆಮ್ಪಾದರೂ ಒಳಗೆ ನೋಡಿದರೆ ಹುಳುಇಲ್ಲ (Prv.). — ಅಚ್ಚಕ್ಕಿ. Clean rice, rice entirely cleared of its husk (S. Mhr.). — ಅಚ್ಚಗನ್ನಡ. -ಕನ್ನಡ. Pure Kannaḍa (Śmd. 44. 45. 375. 386; Kk. 3; Čt. II, 2). ಆ ಸಮಸಂಸ್ಕೃತಂಗಳನ್ ಅಚ್ಚಗನ್ನಡದೊಳ್ ಬೆರಸಿ ಸಮಾಸಂ ಮಾಡಲ್ ಆಗದು (Śmd. 98). — ಅಚ್ಚತಾಮ್ರ. Pure copper (B. 4, 140). — ಅಚ್ಚದೊಗರ. -ತೊಗರ. = ಅಚ್ಚದೊವರ. — ಅಚ್ಚದೊವರ. -ತೊವರ. Tbh. of ಅಚ್ಚತುವರ (Śmd. 381, o. r. -ದೊಗರ). — ಅಚ್ಚನೀರು. Pure and fresh water (S. Mhr.). — ಅಚ್ಚಮಲ್ಲಿಗೆ. Tbh. of ಅಚ್ಚಮಲ್ಲಿಕೆ (Śmd. 380). — ಅಚ್ಚಮುತ್ತು. A white, silvery pearl (Čpr. 7, 41). — ಅಚ್ಚಲಿಂಗ. An excellent linga or one of crystal (Bp. 57, 43). — ಅಚಬಣ್ಣ. -ಬಣ್ಣ. A good colour (My). — ಅಚ್ಚಬಂಗಾರ. Pure gold (My.). — ಅಚ್ಚವಳಿಕು. Tbh. of ಅಚ್ಚಸ್ಫಟಿಕ (Śmd. 376). — ಅಚ್ಚವಿಷ. A refined, effective poison (ಸಿಂಹನಾದ, ಕ್ಷ್ವೇಡ Mr. 463; *cf.* ವಿಷ No. 3?). — ಅಚ್ಚವೆಳ್ದಿಂಗಳ್. -ಬೆಳ್ದಿಂಗಳ್. Clear moon-light. ಸಗಲನ್ತೆ ಇದರ್ ಅಚ್ಚವೆಳ್ದಿಂಗಳನ್ ಇಸಕಿರಣಶ್ರೇಣಿಗೆತ್ತಾಗಳ್ (Śmd. 134). — ಅಚ್ಚಶಿವ. A real Śiva (Bp. 6, 1; 28, 47). — ಅಚ್ಚಾನೆ. -ಆನೆ. (Śmd. 63). A fine elephant. — ಅಚ್ಚೆಳ್ಳು. Good ellu (My.). — ಅಚ್ಚೆಸಳ್. -ಎಸಳ್. A fine, beautiful petal (J. 3, 36).

ಅಚ್ಚ acca. 2. (= ಅಜ್ಜ; *cf.* ಅಚ್ಚಿ 2?). — ಅಚ್ಚಪ್ಪ. -ಅಪ್ಪ. N. See Prv. s. ಅಚ್ಚುಬೆಲ್ಲ. — ಅಚ್ಚಯ್ಯ. -ಅಯ್ಯ. N. (My.).

ಅಚ್ಚಗ **accaga.** = ಅಚ್ಚಿಗ. Agitation of mind; bewilderment. ತನ್ನ ಬತ್ತವು ವೆತ್ತಕೆ ಇಬ್ಬಳಮ್ ಆಗೆ ಕುನ್ದವು. ದೆಚ್ಚವು; ಅದದಿಂ ಜಂಗಮರಾವಳಿಗೆ ಒಲಿದು ಮಾಡುತ್ತ ಅಚ್ಚಗದನ್ ಉಡಿದ ಅಮಲಚಿತ್ತಂ ಪೆಚ್ಚಿ (Bp. 29, 9).

ಅಚ್ಚಡ accaḍa. = ಅಂಚಡ, ಪಚ್ಚಡ, etc. (My.).

ಅಚ್ಚತೆ accatĕ. Tbh. of ಅಕ್ಷತ. (My.; Tu. ಅಚ್ಚದ).

ಅಚ್ಚನೆ accanĕ. Tbh. of ಅರ್ಚನೆ (Śmd. 345).

ಅಚ್ಚನ್ತೆ accantĕ. = ಅಚ್ಚತೆ. (My.).

ಅಚ್ಚಯ accaya. Tbh. of ಅಕ್ಷಯ (My.; T.).

ಅಚ್ಚರ accara. 1. Tbh. of ಅಪ್ಸರ, ಅಪ್ಸರಸ್ (Kk. 10 *b*, 11 *a*). *Cf.* ಅಚ್ಚರಿ 2.

ಅಚ್ಚರ accara. 2. Tbh. of ಅಕ್ಷರ. (My.).

ಅಚ್ಚರಸಿ accarasi. Tbh. of ಅಪ್ಸರಸಿ (Śmd. 348; Rsv. 2, 22).

ಅಚ್ಚರಿ accari. 1. = ಅಚ್ಚರ್ಯ, ಅಚ್ಚರಿಯು. Tbh. of ಆಶ್ಚರ್ಯ (Śmd. 366. 393; Čt. II, 29. 103; Rsv. 1, after 135). ಜನರ ಅಚ್ಚರಿಗಳ್ (Bp. 40, 61). ಭುವನದೊಳ್ ಇದು ಪರಿದು ನಿಲ್ವುದು ಬನ್ದು ಅಚ್ಚರಿಯೋ? (Kāvy. I, 1 *a*, 4). See ಕಟ್ಟಚ್ಚರಿ. — ಅಚ್ಚರಿಗಿಡಿ. -ಕಿಡಿ. Surprise to fall upon (Bp. 18, 50). — ಅಚ್ಚರಿವಡೆ. = ಅಚ್ಚರಿಬಡು. ನಡೆ ನಡೆ! ಎನ್ದು, ಏನ್ ನಡೆದುದೊ ಪಡೆ, ಪಡೆದು ಅಚ್ಚರಿಯುಂ (Śmd. 272). — ಅಚ್ಚರಿಬಡು. -ಪಡು. To be surprised, to wonder (Bp. 3, 22). — ಅಚ್ಚರಿಮೂಡು. Surprise to arise (Bp. 37, 68). — ಅಚ್ಚರಿ ಮೊಳೆ. Surprise to sprout (Bp. 56, 53). — ಅಚ್ಚರಿಯತ. -ಅತ. A man who wonders or is surprised (Bp. 22, 35; 26, 17). — ಅಚ್ಚರಿಯೊನ್ದಿಸು. -ಒನ್ದಿಸು. To cause to experience surprise, to cause to be surprised (Bp. 32, 26). — ಅಚ್ಚರಿಯೊನ್ದು. -ಒನ್ದು. To be surprised (Bp. 39, 70). — ಅಚ್ಚರಿವಡು. -ಪಡು. = ಅಚ್ಚರಿಬಡು. (Bp. 18, 60; 20, 34; 24, 47; 29, 32; 32, 49; 38, 15; 44, 42; 49, 29). — ಅಚ್ಚರಿವೆರಸು. -ಬೆರಸು. = ಅಚ್ಚರಿಯೊನ್ದು. (Bp. 52, 3).

ಅಚ್ಚರಿ accari. 2. Tbh. of ಅಪ್ಸರೆ (Rsv. 1, after 135; J. 7, 15; Tĕ. ಅಚ್ಚರೆ).

ಅಚ್ಚರ್ಯ accarya. = ಅಚ್ಚರಿ 1. (ಅದ್ಭುತ Nn. 8).

ಅಚ್ಚಾವಿಚ್ಚಿ accā-vicci. ಅಚ್ಚಾವುಚ್ಚಿ accā-vucci. Unmeaningly, unconnectedly (in speech); dirtily, foully (in eating, S. Mhr.; Mhr. ಅಚ್ಚಾವಚ್ಚಾ, ಅಚಾವಚಾ).

ಅಚ್ಚಾಳ್ (accul-āḷ). -ಳು. = ಅಚ್ಚಾಳು *a.* ಅಚ್ಚು 1 (?). ಕಲುಕುಟಿಗರಂ, ಬಡಗಿಯರನ್, ಆ ಬಡಿಗೆಲಸಮಂ ಮಾಡ್ಪವರ, ಅನ್ತರವರರನ್, ಅಚ್ಚಾಳುಗಳನ್, ಎಕ್ಕಟಿಗರನು, ಸಬಳಿಗರ, ಹಲಗೆಕಾರರನ್, ಅಸ್ತ್ರರಂ, ದೇವಲಕರಂ.... ಅಳ್ದು (Bp. 16, 13). ಓಳಯಿನ್ದವೆ ಹಳಚುವ ಅಚ್ಚಾಳುಗಳುಮಂ ಕಳೆದು (61, 27).

ಅಚ್ಚಾಳಿಕೆ accul-ālikĕ. Firmness of a man, his strength of body (My.).

ಅಚ್ಚಿ **acci.1.** Bread (S. Mhr.). The term is used only when young children are concerned. *Cf.* ಅಪ್ಪಚ್ಚಿ.

ಅಚ್ಚಿ **acci.2.** Mother. ಅಚ್ಚಿಯೂ ಬೇಕು, ಅಪ್ಪಚ್ಚಿಯೂ ಬೇಕು (My. Prv.). **2,** a Malayāḷa woman (R.; M. ಅಚ್ಚಿ, mother; ಅಚ್ಚಿ, mother; a woman of the Nāya or Śūdra caste; a female of animals; ಅಚ್ಚ = Tbh. ಅಜ್ಜ. *Cf.* ಅಜ್ಜಿ). — ಅಚ್ಚಮ್ಮ. -ಅಮ್ಮ. N. (My.).

ಅಚ್ಚಿ **acci. 3.** A pap, a teat (R.; M. ಅಂಗ್ರಿ; Mhr. ಆಂಚಳ; *cf.* ಬಂಗು; ಅಮ್ಮಣ್ಣಿ).

ಅಚ್ಚಿ acci. Tbh. of ಅಕ್ಷಿ (Śmd. 346; Čt. II, 54. 100; Kk. 32; ಅಲಿ, ಏಟ್ಟ Śm. 70).

Digitized by Google

ಅಚ್ಚಿಕೆ accike. 1. = ಅಚ್ಚು 4. (Tĕ.; My. only in ಅಚ್ಚಿಕೆಮಚ್ಚಿಕೆ). — ಅಚ್ಚಿಕೆಮಚ್ಚಿಕೆ. dupl. (My.).

ಅಚ್ಚಿಕೆ accike. 2. (fr. ಅಚ್ಚು 3). Paying unjustly (My.).

ಅಚ್ಚಿಗ acciga. (ಅಚ್ಚಿಗ). = ಅಚ್ಚಗ. ಪಚ್ಚದ ಅಡವಿಯೊಳ್ ಬಟ್ಟೆಗೆಟ್ಟ ಶಿವನ್ ಅಚ್ಚಿಗನೆದೆಗೆ ಇದಿರ್ದನ್, ಅರಬ್ಬಿತ! (Bp. 16, 2). See Abh. P. 9, 149; 14, 100; Rśv. 11, 83; J. 30, 2.

ಅಚ್ಚಿಗ acciga. Tbh. of ಅರ್ಚಕ. A worshipper; a priest (My.; cf. ಅಚ್ಚನ).

ಅಚ್ಚು accu. 1. (fr. ಅದಚು 1). = ಅಚ್ಚೆ. (The state of being firmly pressed), firmness; (bodily) strength; cf. ಅಕ್ಷ No. 30. **2,** (the state of being confined, limited or controlled), a well-defined, proper boundary or proportion. **3,** (that into which something is pressed, etc.), a mould; what has been formed with a mould. **4,** (what is impressed), an impression; a sign. **5,** (that with which impressions or signs are made), a type, a stamp. **6,** a weaver's reed (C.; T., M., Tĕ.; Tu. ಅಚ್ಚು). ಕಬ್ಬಿಣದ ಅಚ್ಚು (Bp. 28, 47). ನಾಣ್ಯಗಳ ಮೇಲೆ ಅಚ್ಚು ಸ್ಪಷ್ಟವಾಗಿ ಬೀಳುವುದು (B. 4, 125). ಅಚ್ಚಿನ ಮನುಷ್ಯನಿಗೆ ನುಚ್ಚಿನ ಅನ್ನ (Prv.). See ಪಡಿಯಚ್ಚು. — ಅಚ್ಚಕ್ಷರ. -ಅಕ್ಷರ. A printed letter (My.). — ಅಚ್ಚಳಿ. -ಅಳಿ. Form to be destroyed, to be annihilated (V. 23, after 11). — ಅಚ್ಚಳಿಸು. -ಅಳಿಸು. To destroy the form, to annihilate (Kaivalyapaddhati 3. 15, 1). — ಅಚ್ಚಾಳು. -ಆಳು. A firm, strong man (My.; see it separately). — ಅಚ್ಚುಕಟ್ಟು. = ಅಚ್ಚುಕಟ್ಟು. (My.). — ಅಚ್ಚುಕೂಟ. A printing press (M.), a printing office (My.; B. 5, 216). ಅಚ್ಚುಕೂಟಗಳು ಸಾಗುತ್ತವೆ (B. 4, 103). ಅಚ್ಚುಕೂಟಗಳನ್ನು ಇಡುವವರು (5, 196). ಅಚ್ಚುಕೂಟದ ಒಡೆಯನು (5, 214). — ಅಚ್ಚುಗೊಳ್. -ಕೊಳ್. To become firm, as devotion (S. Mhr.). — ಅಚ್ಚುಗೋಲು. -ಕೋಲು. A pin inserted in a mill-stone to turn it (My.; also ಅಚ್ಚುಗೂಟ). — ಅಚ್ಚುಬೆಲ್ಲ. Boiled treacle poured into a mould and thus made into a cake, such a cake of jaggory. ಅಚ್ಚುಬೆಲ್ಲ ಅಚ್ಚಪ್ಪಗೆ, ನುಚ್ಚುಗಂಜಿ ಬೆಪ್ಪಣ್ಣಗೆ (Prv.). — ಅಚ್ಚುಭಕ್ತಿ. Firm devotion (Bp. 28, 47). — ಅಚ್ಚುಮರ. A wooden mould (My.). — ಅಚ್ಚುವಡಿ. -ಪಡಿ. The state of being regular or of a good fine character like the impression from a stamp, as household affairs, work, etc. (My.). — ಅಚ್ಚು ಹಾಕಿಸು. To cause to be printed (B. 5, 301). — ಅಚ್ಚು ಹಾಕು. To seal (My.; ಮುದ್ರಿಸು G.); to print (B. 5, 101). ಪುಸ್ತಕಗಳನ್ನು ಅಚ್ಚುಹಾಕುವ ಯುಕ್ತಿ (B. 4, 206). — ಅಚ್ಚೊತ್ತು. -ಒತ್ತು. To impress with a mark, to seal; —to impress firmly, or to press firmly to. ನೊಸಲೊಳು ವಾಸಿಗವನ್ ಅಚ್ಚೊತ್ತಿದನ್ತೆ ಸುವರ್ಣಪಟ್ಟವನ್ ಒತ್ತಿ (Bp. 2, 52). ಹುಸಿದೊಡೆ (ಕುಪ್ಪಾಯಂ) ಹೋಗಿ ಬಿಡೆನು, ಅಚ್ಚೊತ್ತಿ ಬಿಡು ಬಿಡು (24, 16). See Abh. P. 14, 70; Č. Bp. 32, 44.

ಅಚ್ಚು accu. 2. = ಹಚ್ಚು, to affix etc. (My.).

ಅಚ್ಚು accu. 3. (= ಅಚುಕಿಸು 1). To pay unjustly, as rent for land on which the crop has failed, to make a payment which is not properly due and on account of which one suffers loss (My.; Tĕ.; M. ಅಚ್ಚುಕ್ಕ, expense, waste, custom, demand for; ಅಚ್ಚು, expense, esp. customary; see ಅಚ್ 1).

ಅಚ್ಚು accu 4. = ಅಚ್ಚಿಕೆ 1, ಅಚ್ಚುಕ. Intimacy, friendliness, affability, love (cf. ಅಚ್ಚು 1; ಅದಸು; ಅಚ್ಚ; ಅಚ್ಛ). — ಅಚ್ಚುಮೆಚ್ಚು. dupl. (My.).

ಅಚ್ಚು accu. 1. Atcheen (R.; T., Tĕ., M. ಅಚ್ಚಿ). — ಅಚ್ಚುಮಟ್ಟ. An Atcheen or Pegu poney (R.; Tĕ., T. ಅಚ್ಚಿ-).

ಅಚ್ಚು accu. 2. Tbh. of ಅಕ್ಷ (Śmd. 346. 364). A die for playing with (ದ್ಯೂತದ ಅಚ್ಚು Mr. 245; Bp. 40, 76); playing at dice, or a dice-box (ದುರೋದರ Hlâ.). 2, an axle (Mr. 286; ರಥದ ಅಚ್ಚು Nn. 37; see Si. 276. 277). ಅಚ್ಚಿನ ಕಡೆ ಗಾಲಿನಲ್ಲಿ ಆಣಿ ಎನಿಸುಗು (Nr.). 3, a certain weight of gold (ದೀನಾರ, ನಿಷ್ಕ Nr.). 4, the soul; —a vowel (My.; Tĕ., T.; cf. T. ಉಯಿರ್, the soul; a vowel).

ಅಚ್ಚುಕ accuka. = ಅಚ್ಚು 4, etc. ಅಚ್ಚುಕದ ದರಹಾಸಲಕ್ಷ್ಮಿ ಮುಖಾಬ್ಜದೊಳ್ ತೋರಿಯು (Bp. 2, 23).

ಅಚ್ಚುತ accuta. Tbh. of ಅಚ್ಯುತ (My.; T.).

ಅಚ್ಚುಳ accuḷa. Intimacy (fr. ಅಚ್ಚು 4 ?); or subordination (fr. ಅದಚು 1?).

ಅಚ್ಚುಳಾಯ್ತ accuḷa-âyta. = ಅಚ್ಚುಳಾಯ್ಲ. An attendant, a guard, a servant (ಪರಿಚಾರಕ Kk. 36). ಆಯ್ತು ಅಚ್ಚುಳಾಯ್ತು ಗೂಡಿಸುವನ್ತೆ, ಆಯ್ತು ಅರಮನೆಯೊಳಗೆ ಪುಗುವ ಪ್ರೊಬಿಸುವ ಝುಳಪ್ಪಾಯ್ತರ ಸೂಬಾಯ್ತರ ಕಲ್ಲಾಯ್ತರ ಕಡಂಗಾಯ್ತರ ಅಚ್ಚುಳಾಯ್ತರ ರಭಸಂ (Śmd. 234. 289).

ಅಚ್ಚುಳಾಯ್ಲ accuḷa-âyla. = ಅಚ್ಚುಳಾಯ್ತ, etc. (ಪರಿಚಾರಕ Śm. 45).

ಅಚ್ಚೆ accĕ. 1. A kind of fish (Rśv. 5, 115).

ಅಚ್ಚೆ accĕ. 2. = ಹಚ್ಚೆ. Scarifying, tattooing (My.).

ಅಚ್ಛ accha. = ಅಚ್ಚ 1, ಅಚ್ಛ. *Pellucid, transparent, clear, pure, genuine* (ಸ್ವಚ್ಛ, ಹಸನಾದ G.). 2, crystal (ಸ್ಫಟಿಕಮಣಿ G.). 3, *a bear.*

ಅಚ್ಛತುವರಿ accha-tuvari. = ಅಚ್ಚತೊವರಿ (Śmd. 381). A good kind of tuvari.

ಅಚ್ಛಭಲ್ಲ accha-bhalla. *A bear.*

ಅಚ್ಛಮಲ್ಲಿಕೆ accha-mallikĕ. = ಅಚ್ಚಮಲ್ಲಿಗೆ (Śmd. 380). A true Jasminum zambac.

ಅಚ್ಛಸ್ಫಟಿಕ accha-sphaṭika. = ಅಚ್ಚಬಳಿಕು (Śmd. 376). Transparent crystal.

ಅಚ್ಛಿದ್ರ a-c-chidra. Free from clefts or flaws; unbroken (ತೂತು ಇಲ್ಲದ್ದು G.). 2, uninjured, new (ಹೊಸದು G.). 3, free from defects, not deficient (ಕೊರತೆ ಇಲ್ಲದ್ದು G.; J. 2, 26).

ಅಚ್ಛಿನ್ನ a-c-chinna. Uncut, uncurtailed, uninjured; —undivided, inseparable. (My.).

ಅಚ್ಛೋಟನ acchôṭana. *Hunting.*

ಅಚ್ಯ acya. (= ಅಚ್ಚು 4? or Tbh. of ಅತಿಶಯ ?). Excessive love (in ಅಚ್ಯಾ ಮಾಡು, to fondle, to spoil by indulgence, as a child, S. Mhr.).

ಅಚ್ಯುತ a-cyuta. = ಅಚ್ಚುತ. What has not given way or fallen. 2, firm; permanent, imperishable. 3, *Vishṇu, Krishṇa* (Bp. 61, 53). 4, the plant Morinda tinctoria.

Digitized by Google

5, a kind of fish (ಒನ್ದು ತರದ ಮೀನ G.). 6, N. of a vṛitta (Čh.).

ಅಚ್ಯುತಕ a-cyutaka. N. of a vṛitta (Čh.).

ಅಚ್ಯುತತ್ವ a-cyutatva. The state of being permanent. 2, the state of being Acyuta or Vishṇu (Bp. 54, 31).

ಅಚ್ಯುತಾಗ್ರಜ acyuta-agraja. Vishṇu's or Krishṇa's elder brother: *Balarâma*. 2, Indra.

ಅಚ್ಛ achya. The MS. form of ಅಚ್ಛ in Śmd. 340. Regarding this form cf. e. g. ಉಪಚ್ಛಾರ & ವಿಚ್ಛಾರ.

ಅಜ a-ja. 1. Not born, existing from eternity. 2, *Brahmâ* (ಪಂಕಜಾಸನ, ಬ್ರಹ್ಮನು Nn. 47; ಬ್ರಹ್ಮನು Mr. 524; ಬೇದಬಿಜ್ಜೆಗ Čt. II, 3). 3, *Vishṇu or Krishṇa* (ವನಜಾಕ್ಷ, ಕೃಷ್ಣ 47; ಹರಿ 524). 4, *Śiva* (ಈಶ್ವರ 47; ಭರ್ಗ 524). 5, a Jina or sovereign saint of the Jainas (ಜಿನ 47; ಜಿನಪ 524). 6, Kâma (ಮನ್ಮಥ 47; ಮನೋಜ 524). 7, any one of the seven Munis (ಮುನಿ, ಯತಿ 47; ಸತ್ಯಮುನಿ 524). 8, the number nine (Bp. 5, 64). 9, the sun (ಪತಂಗ, ಸೂರ್ಯ 47). 10, rain (ವೃಷ್ಟಿ, ಮಳೆ 47; ವೃಷ್ಟಿ 524). 11, a woman (ಕಾಮಿನಿ, ಸ್ತ್ರೀ 47; ತರುಣಿ 524). 12, old paddy (ಹಳೆನೆಲ್ಲು, ಹಳೆಯ ನೆಲ್ಲು 47; ಶಾಲಿ 524). 13, ಧರಣಿ (o. r. ವರುಣಿ, 524). 14, N. of a son of king Raghu (G.), the father of Daśaratha.

ಅಜ aja. A driver, mover, leader. 2, *a ram* (ತಗರ Śm. 104; ಕುರಿ G.). 3, *a he-goat* (ಆಡು Śm. 94; ಹೋತು Nn. 47; Mr. 524). 4, the sign Aries.

ಅಜಕವ ajakava. = ಅಜಕಾವ, ಅಜಗವ, ಅಜಗಾವ. Śiva's bow. (Colebr.).

ಅಜಕಾವ ajakâva. = ಅಜಕವ. (Colebr.).

ಅಜಕುಮಾರಕುಮಾರ aja-kumâra-kumâra. The grand-son of Aja: Râma (Râm. 26, 17).

ಅಜಗ ajaga. = ಅಜಗವ. N. of a snake (Bp. 46, 28).

ಅಜಗಣ aja-gaṇa. A class of metrical feet (Čh.).

ಅಜಗನ್ಧಿ aja-gandhi. Smelling like a goat. 2, the plant ತವುತಂಗಿ (Mr. 124; Sk. ಅಜಗನ್ಧಾ = ಅಜಗನ್ಧಿಕಾ).

ಅಜಗನ್ಧಿಕೆ aja-gandhikĕ. *The shrubby Basil* or *Tulasi, Ocymum gratissimum* (ತುಂಗಿ, ನಾಬಳ್ಳಿ G.; see ನಾಯಿತುಳಸಿ).

ಅಜಗರ aja-gara. That swallows a goat: *a huge serpent, Boa constrictor* (ಶಯು, ವಾಹಸ, etc., ಹಿರಿಯ ಹಾವು Mr. 400).

ಅಜಗಲಸ್ತನ aja-gala-stana. = ಅಜಾಗಲಸ್ತನ. (J. 20, 57).

ಅಜಗವ ajagava. = ಅಜಕವ, etc. *Śiva's bow*. 2, N. of a snake (= ಅಜಗ).

ಅಜಗವಪಾಣಿ ajagava-pâṇi. Śiva (Râm. 6, 55, 18).

ಅಜಗಾವ ajagâva. = ಅಜಗವ, etc. (Colebr.).

ಅಜಗಿಜ aja-gija. reit. Brahmâ and persons like him (Bp. 54, 5).

ಅಜಜಟಿ aja-jaṭi. Wearing clotted or twisted hair: the flower Artemisia indica (ದವನ, ಮುಷಿಪುತ್ರಿ, ತಪಸ್ವಿ Mr. 136).

ಅಜಣ್ಡ ajaṇḍa. Not sewed, of one piece, as a cloth (My.).

ಅಜತ್ವ ajatva. The state of being Brahmâ (Bp. 18, 22; 54, 31).

ಅಜಧ್ವನಿ aja-dhvani. The cry of a ram or he-goat. See ಚೆಕ್ಕರಿಸು.

ಅಜನ a-jana. 1. Destitute of living beings. 2, a desert. 3, an insignificant person.

ಅಜನ ajana. 2. Driving, instigating. See ಪ್ರಾಜನ.

ಅಜನನಿ a-janani. Destitute of birth, or of a mother. A word used in cursing (= ತಬ್ಬಲಿ ಹುಟ್ಟು Si. 401).

ಅಜನೆ ajanĕ. Oh, Brahmâ! even Brahmâ. 2, N. of a metrical foot (Čh.).

ಅಜನ್ಯ a-janya. Improper to be born or produced. 2, unfavourable for mankind. 3, *a natural phenomenon foreboding evil*.

ಅಜಪ್ರಾಸ aja-prâsa. A kind of alliteration (Čh.).

ಅಜಬಾಬು ajabâbu. Goods and chattels, furniture, tools, apparatus, baggage, things (My.; Mhr., H.; Br. ಅಸ್ಬಾಬು).

ಅಜಭೇದ aja-bhêda. A kind of sheep. See ತಗರ.

ಅಜಮಾಸು ajamâsu. Rough calculation; about, more or less (C.; ಉಜ್ಜು Cb.; Mhr., H.).

ಅಜಮೀಢ aja-mîḍha. = ಅಜಾಮಿಳ. N. of men. 2, the town Ajmeer and its district (My.).

ಅಜಮೋದ aja-môda. = ಅಜಮೋದೆ. Goat's delight. 2, Bishop's weed, Ligusticum ajwaen Roxb. (ಲೋಮಶರ್ಕರೆ, ಓವು Mr. 136).

ಅಜಮೋದೆ aja-môdĕ. = ಅಜಮೋದ, ಅಜಾಮುಲ, ಅಜಾಮೋದ. *Bishop's weed, Ligusticum ajwaen* Roxb. (ಅಜವಾನ G.). 2, common carraway, Carum carui (see ಓದಕ್ಕಿ). 3, a species of parsley, Apium involucratum.

ಅಜಯ a-jaya. Non-victory, defeat; defeated (ಸೋತವನು G.). 2, unconquered, invincible. (My.). 3, Vishṇu.

ಅಜರ ajara. = ಅಜುರ. (T. ಅವರಿ, ಅವುರಿ, M. ಅಮರಿ, ಅವರಿ, Tĕ. ಅವಿರಿ, the Indigo plant, Indigofera tinctoria L.). — ಅಜರನುಲಿ. = ಅಜುರನೀಲಿ. A low under-shrub, perhaps Indigo aspalathoides Vahl. (Z.; *cf.* ನೀಲಗಿಡ).

ಅಜರ a-jara. Not subject to old age, undecaying (ಮುಪ್ಪಿಲ್ಲದ G.; Bp. 54, 58).

ಅಜರ್ಯ a-jarya. Not friable, not digestible. 2, not subject to decay. 3, *friendship*.

ಅಜಶೃಂಗಿ aja-śringi. Goat's horn: *the shrub Odina wodier* Roxb. (others: Odina pinnata), the fruit of which resembles a goat's horn. See ಉಡಿಮರ; ಕುರುಟಿಗೆ.

ಅಜಸ್ರ a-jasra. Not to be injured or interrupted. 2, *perpetual, continual.* ಅಜಸ್ರಂ, *continually, eternally.*

ಅಜಹೆ ajahĕ. *A plant stinging like nettles, Mucuna pruriens* Hook.; — according to others: cowhage, Carpopogon pruriens (ಆತ್ಮಗುಪ್ತೆ, ಅಧ್ಯಣ್ಡೆ, etc., ನಸಗುನ್ನಿ, or also ಕಪಿತು ಬಿಚಿ Si. 143).

ಅಜಾಗರ a-jâgara. Not awake, not vigilant, not wakeful. (My.). 2, a common weed, Eclipta alba Hassk. (St. & Pl.).

ಅಜಾಗರೂಕತೆ a-jâgarûkatĕ. The state of being not wakeful (My.; Si. 69).

ಅಜಾಗಲಸ್ತನ ajâ-gala-stana. Nipple or fleshy protuberance pending from the neck of some goats. 2, a useless object. (My.).

ಅಜಾಗ್ರತೆ a-jâgratĕ. = ಅಜಾಗರೂಕತೆ. (My.).

ಅಜಾಜಿ ajâji. *Cumin seed, Cuminum cyminum* (ಜೀರಿಗೆ, ಪೃಥ್ವಿಕೆ Mr. 137).

ಅಜಾಜೀವ ajâ-jîva. Who lives by goats, *a goat-herd*.

ಅಜಾಣ a-jâṇa. An unwise, foolish man. ಅಜಾಣನ ಒಡನಾಟ ಕಲ್ಲು ಪಾದನ್ತೆ (Sp.).

ಅಜಾಣ್ಡ aja-aṇḍa. Brahmâ's egg: the universe (Bp. 8, 50; 32, 57; 58, 61).

Digitized by Google

ಅಜಾತ a-jâta. *Unborn, not being in existence.*

ಅಜಾತಶತ್ರು ajâta-śatru. Having no enemy (ನಾಶ, ಹಗೆಗಳು ಇಲ್ಲದವನು Nn. 74). 2, N. of Śiva, and of several princes, *e. g.* of Dharmarâja (My.).

ಅಜಾಮ ajâma. = ಜಾಮಾ. (My.).

ಅಜಾಮಿಳ ajâmila. Tbh. of ಅಜಮೀಢ. (J. 15, 37; 28, 31).

ಅಜಾಮುಲ ajâmula. A plant, = ಅಜಮೋದ (St. & Pl.).

ಅಜಾಮೋದ ajâmôda. A plant, = ಅಜಮೋದ, etc. (ಓಮುಕಾಳು Si. 158).

ಅಜಾರ ajâra. = ಜಜಾರ. (My.).

ಅಜಿ aji. — ಅಜಿಗಜಿ. reit. Pounded or ground lime (ಅರದ ಚೂರ್ಣ Bhn. 43); crushed, bruised state (My.). ಚರಣಾಂಗುಷ್ಠದಿಂ ಪಿಪ್ಪುರದಿನ್ ಊಡ' ನಟಿಸಿದಡೆ ಅಜಿಗಜಿ ಆಯ್ತು ತತ್ಕಮಠಂ (Bp. 17, 17).

ಅಜಿತ a-jita. Not conquered, invincible (ಸೋಲದವ G). 2, unsurpassed. 3, *Vishṇu.* 4, a sovereign saint of the Jainas (ನೃಪ, ಜಿನ Nn. 16). 5, Śiva (G.).

ಅಜಿತಸೇನಪಂಡಿತ ajita-sêna-paṇḍita. N. of a Jaina scholar, mentioned in three MSS., in the introduction to Ch., in the following verse: ಅರಸಂ ರಕ್ಕಸಗಂಗಂ (and) ಗುರುಗಳ್ (and) ನೆಗಳ್ದ ಅಜಿತಸೇನಪಂಡಿತದೇವರ್ (or ನೆಗಳ್ದ ಜಿತ-?) ಪೊರೆದ ಕೃತಿಗುಣಗಳ್ ಎನೆ ಮತ್ತರಿಸುವರ್ ಆರ್? ನಾಕಿಯರುಳೊಳ್ ಏಂ ಪ್ರಬುದ್ಧನೋ?

ಅಜಿತೃ ajitri. A driver, a mover. See ಪ್ರಾಜಿತೃ.

ಅಜಿನ ajina. *The skin, a hide.* 2, the skin of an antelope (ಚಿಗರಿಯ ತೊಗಲು G.).

ಅಜಿನಕ ajinaka. N. of a snake (Bp. 46, 28; it is also possible to read ಜಿನಕ).

ಅಜಿನಪತ್ರೆ ajina-patrĕ. That has skin-wings: *a bat.*

ಅಜಿನಯೋನಿ ajina-yôni. Origin of the skin. 2, *an antelope, a deer* (ಚಿಗರಿ G.).

ಅಜಿರ ajira. Agile, quick. 2, *a court, a yard, an area* (ಅಗಲದ ಅಂಗಣ Mr. 199). 3, *an object of sense.* 4, air, wind (ಗಾಳಿ G.). 5, the body (ಶರೀರ G.). 6, a frog (ಕಪ್ಪೆ G.).

ಅಜಿವಾನ ajivâna. = ಅಜ್ವಾನ. Bishop's weed and its seed (My.; ಅಜಮೋದ, ಗಣ, ಗಣಹಾಸಕ, ದೀಪಕ, ದೀಪ್ಯ, ಬ್ರಹ್ಮದರ್ಭೆ, ಯವಾನಿಕೆ, ರಾಕ್ಷಸಿ, ಶ್ಲೇಷ್ಮ G.; Mhr., H. ಅಜವಾನ).

ಅಜಿಹ್ಮ a-jihma. *Not crooked, straight, upright.* 2, a fish. 3, a frog.

ಅಜಿಹ್ಮಗ ajihma-ga. Going straight on. 2, *an arrow.*

ಅಜೀರ್ಣ a-jîrṇa. Not decomposed. 2, unimpaired. 3, undigested. 4, indigestion (My.; ಅಜಿವೆ, ಅಜ್ಜಿಮೆ Śm. 60, v. r. ಜೀರ್ಣ; B. 4, 32. 123; Bp. 15, 20). ಅಜೀರ್ಣದಿನ್ದ ಮೆಯ್ ಬಿಸಿ ಆಗುವಿಕೆ (ಜ್ವರ Si.).

ಅಜೀರ್ಣವಟಕ ajîrṇa-vaṭaka. A pill for curing flatulence (My.).

ಅಜೀರ್ಣವಿಕಾರ ajîrṇa-vikâra. = ಅಜೀರ್ಣ No. 4. (B. 4, 123; Mhr.).

ಅಜೀರ್ಣಾಂಶ ajîrṇa-amśa. Slight indigestion (B. 4, 135; Mhr.).

ಅಜುರ ajura. = ಅಜರ. — ಅಜುರಸೀಲಿ. = ಅಜರಸುಲಿ (Z.).

ಅಜೆ a-jê. ಅಜಾ. Prakriti or the original source of the material world, Nature. 2, mâyâ or illusion. 3, a she-goat.

ಅಜೇಯ a-jêya. Invincible (Bp. 1, 41; 5, 63; 36, 40; 39, 9; 52, 25; 54, 35).

ಅಜ್ಜ ajja. 1. Time or circumstances favourable for the purpose, opportunity (S. Mhr.; Te. ಅಜ್ಜ; T. ಅಜ್ಜಿ). — ಅಜ್ಜಗಳ್ಳ. -ಕಳ್ಳ. A crafty thief (S. Mhr.).

ಅಜ್ಜ ajja. 2. = ಅಜ್ಜು 2. (A light substance), the dry filaments of the ĕkkĕ and hâlĕ capsules (S. Mhr.; T. ಅಜ್ಜ, ಅಜ್ಜಿ, thinness, lightness; *cf.* ಹಗುರ?). ಅಜ್ಜನು ಹಾರಿಸು, to cause such filaments to fly about, as children do (S. Mhr.).

ಅಜ್ಜ ajja. (= ಅಜ್ಜ 2). Tbh. of ಆರ್ಯ q. v. (Smd. 356; Kk. 68; Sm. 64). A grandfather (ಪಿತಾಮಹ, ತನ್ದೆಯ ತನ್ದೆ G.; B. 3, 25; My.; Tu. ಅಜ್ಜೆ; M. ಅಚ್ಚ; T. ಅಚ್ಚ, ಅತ್ತ). ಕೂಸಿನ ಅಜ್ಜ ಮುತ್ತಜ್ಜರು (B. 3, 111). ಅಜ್ಜಗೆ ಮೊಮ್ಮಗ ಅಕಳಿಕೆ ಕಲಿಸಿದನು ಅನ್ತೆ. — ಅಜ್ಜ ಊರಿ'ದ್ದು ಮೊಮ್ಮಗ ಹಾರಿ'ದ್ದು ಜೋಡು ಬಾರದು. — ಅಜ್ಜಾ, ಮದುವೆ! ಎನ್ದರೆ ಎನಗೋ? ಅನ್ದ (Prvs.). See ಮುತ್ತಜ್ಜ; Smd. 89. 234; Kâvy. I, 4, 5.

ಅಜ್ಜಿ ajji. Tbh. of ಆರ್ಯಾ. A grandmother (My.; Tu.; ತನ್ದೆಯ ತಾಯಿ, ಪಿತಾಮಹಿ G.; *cf.* ಅಜ್ಜಿ 2). ಅಜ್ಜಿಗೆ ಅರಿ'ವೆಯ ಚಿನ್ತೆ, ಮಗಳಿಗೆ ಮಿಣ್ಡನ ಚಿನ್ತೆ. — ಅಜ್ಜಿ ನೂತದ್ದೆಲ್ಲಾ (for her livelihood) ಅಜ್ಜನ ಉಡಿದಾರಕ್ಕೆ ಸರಿ. — ಅಜ್ಜಿಯ ಮನೆಗೆ ಅಜ್ಜ ಬನ್ದ ಹಾಗೆ ಆಯ್ತು. — ಅಜ್ಜಿ ಸಾಕಿದ ಮಗು ಬೊಜ್ಜಕ್ಕೂ ಬಾರದು. — ಕಜ್ಜ ಇದ್ದವರೆ ಲಜ್ಜೆ ಇಲ್ಲ, ಅಜ್ಜ ಇದ್ದವರೆ ಯೋಚನೆ ಇಲ್ಲ (Prvs.). See Prvs. s. ಪಟ್ಟೆಂ ಸೀರೆ, ಬಜ್ಜ. — ಅಜ್ಜಿಕಥೆ. A grandmother's story; an idle or foolish story (My.). — ಅಜ್ಜಿಗಡ್ಡೆ. = ಮುಜ್ಜಿಗೆಗಡ್ಡೆ, q. v. (Si. 146). — ಅಜ್ಜಿಕಾಟ. A kind of spider (My.).

ಅಜ್ಜಿಗೆ ajjigĕ. = ಅಜ್ಜುಗೆ. Tbh. of ಆರ್ಯಕ. A double jasmine, a great-flowered jasmine, Jasminum grandiflora and J. auriculatum (ಇರವನ್ತಿ Sm. 27; ಇರವನ್ತಿಗೆ Ss.; ಜಾಜಿಮಲ್ಲಿಗೆ, ಗಣಿಕೆ, ಜಾತಿ, ಮಾಗಧಿ, ಸುಮನಸ್ G.). 2, = ಸಹಾರಣ, ಮರುವಕ, ಪ್ರಸ್ಥಪುಷ್ಪ, ಫಣಿಜ್ಝಕ, ಜಂಬೀರ; ಕೆಲಮ್ಬರು ಮರುಗ ಎನ್ದೂ ಎಮ್ಬರು (Nr. *a*).

ಅಜ್ಜು ajju. 1. (= ಅಜ್ಜು 4). The state of living or dwelling together, or that of being associated or on friendly terms (ಸಾವಾಸಿ Smd. 11; *cf.* ಅಡಸು).

ಅಜ್ಜು ajju. 2. = ಅಜ್ಜ 2. — ಅಜ್ಜುಗುಜ್ಜು. The state of being thin and small. — ಅಜ್ಜುಗುಜ್ಜುಪ್ರಾಯ. The age of corporeal debility (My.). — ಅಜ್ಜುಗುಜ್ಜುಮುದುಕ. An imbecile old man (My.).

ಅಜ್ಜು ajju. 3. = ಅದ್ದು 1, etc. To immerse (My.).

ಅಜ್ಜುಕೆ ajjukĕ. *A courtesan.*

ಅಜ್ಜುಗೆ ajjugĕ. = ಅಜ್ಜಿಗೆ (Nr. *b.*).

ಅಜ್ಝಟೆ ajjhaṭĕ. = ಅರ್ಝಟಿ. *The plant Flacourtia cataphracta* (ನೆಲನೆಲ್ಲಿಯ ಗಿಡ G.).

ಅಜ್ಞ a-jña. Not knowing. 2, *ignorant* (ಅವುದನರಿ'ಯದವಂ Mr. 239). 3, *unwise, stupid, foolish.* ಅಜ್ಞನ ಬುದ್ಧಿ ಮೊಗ್ಗಿನ ಹಾಗೆ, ಪ್ರಾಜ್ಞನ ಬುದ್ಧಿ ಫಲದ ಹಾಗೆ (Prv.).

ಅಜ್ಞತೆ a-jñatĕ. Ignorance (ಅಜ್ಞಾನ Nn. 124. 156).

ಅಜ್ಞಾತ a-jñâta. Unknown. (J. 24, 62).

ಅಜ್ಞಾತವಾಸ ajñâta-vâsa. Whose dwelling is unknown. 2, an unknown dwelling-place (Bh. 3, 23, 50). ಅಜ್ಞಾತವಾಸದಲ್ಲಿಯೂ ಅಜ್ಞಾನಿಗಳ ಕಾಟ ತಪ್ಪಲಿಲ್ಲ (Prv.).

Digitized by Google

ಅಜ್ಞಾನ a-jñâna. *Ignorance.* 2, inadvertence. 3, mâyâ or prakṛiti.

ಅಜ್ಞಾನಕೃತ ajñâna-krita. Done inadvertently. (My.).

ಅಜ್ಞಾನತನ ajñânatana. Ignorance (My.; B. 5, 169).

ಅಜ್ಞಾನಿ a-jñâni. Ignorant, unwise, stupid; a stupid person (ಜಡು Śm. 110). See Bp. 57, 24; 58, 33.

ಅಜ್ವಾನ ajvâna. = ಅಜವಾನ. (My.).

ಅಂಚ añca. = ಅಂಚನ. See ರೋಮಾಂಚ.

ಅಂಚಡಿ añcadi. = ಅಚ್ಚಡ. See ಅಡಿ'ವೆ.

ಅಂಚನ añcana. Going. 2, bending, curling. See ಉದಂಚನ, ರೋಮಾಂಚನ.

ಅಂಚಲ añcala. -ಳ. *The end or border of a cloth* (ಸೆರಗು Mr. 342).

ಅಂಚಿಕೆ añcikĕ. = ಹಂಚಿಕೆ. (My.).

ಅಂಚಿತ añcita. *Gone.* 2, bent. 3, *worshipped, honoured.* 4, manifest, distinguished, noted, apparent, clear, pure; shining, bright; beautiful (ವಿಶದ, ಪ್ರಕಟ, ಸ್ಪಷ್ಟ, ಪ್ರಕಾಶ, ಸ್ಫುಟ, ಕಾಣ್ಬುದು Mr. 449; ಚನ್ನ G.). 5, asked, requested. See Bp. 2, 4; 4, 68; 22, 4; 24, 3; 39, 57; 55, 47; 60, 44.

ಅಂಚು añcu. 1. = ಹಂಚು. To divide (My.).

ಅಂಚು añcu 2. = ಹಂಚು (My.). See ಕಬ್ಬಿಣಂಚು, ಕಬ್ಬಿಣಂಚು.

ಅಂಚು añcu. 3. = ಹೊಂಚು. To lurk, etc. (My.).

ಅಂಚು añcu. Tbh. of ಅಂತ. (Tĕ.; *cf.* ಅರಗು 1, No. 1 & 2). An end or top (ಕೋಟಿ, ಅಶ್ರಿ Si. 415); the edge or face of a sword (ಆಯುಧಗಳ ಬಾಯಿಧಾರೆ, ಕೋಣ, ಪಾಲಿ, etc. Si. 291); a brim; the corner or brim of the mouth (ಬಾಯಿಯ ಅಂಚು, ಸೃಕ್ವ Si. 214); selvage, skirt, border; a boundary, a bank, a shore; side, proximity (My.). ನೀರೆಯ ಅಂಚು (ಅಂಚಲ, ಅಂತುಕಪ್ರಾನ್ತ Nr.; see B. 3, 102. 103; Si. 222). ಅಂಚಿನಲ್ಲಿ ಹೋದರೆ ಮಿಂಚಿನ ಭಯ ತಪ್ಪೀತೇ?— ಅಂಚು ಇಲ್ಲದ ಹೊಲವಿಲ್ಲ, ಸಂಚು ಇಲ್ಲದ ಮಾತು ಇಲ್ಲ (Prvs.).— ಅಂಚುಗಟ್ಟು. -ಕಟ್ಟು. To construct a bank, boundary, etc.; to fold up the border of a cloth; to form a selvage, etc. (My.).

ಅಂಚೆ añcĕ. 1. A postal road (ಪಥಭೇದ Śm. 85); a stage, a relay;—the post (ಟಪಾಲು Ċb.; My.; Tu., T., M. ಅಂಚಲ್, ಅಂಚಲ್; Tĕ. ಅಂಚೆ). ಅಂಚೆಯ ಮೇಲೆ ಹೋಗುವದು, to go by post (C.). ಅಂಚೇ ಕಾಗದ ಮುಂಚೇ ಬನ್ದರೆ ಲಂಚ ಯಾಕೆ? (Prv.).— ಅಂಚೆಕಚೇರಿ. A post office (My.).— ಅಂಚೆಕಟ್ಟೆ. A post stage or office (B. 4, 86).— ಅಂಚೆಟಪಾಲ್. A post carried on by means of post runners (S. Mhr.).— ಅಂಚೆಮಾರ್ಗ. A post road (B. 5, 2. 299. 300).— ಅಂಚೆಯವ. -ಅವ. A post runner (My.).— ಅಂಚೆಯಿಡು. -ಇಡು. To place a relay of horses, etc. (V. 4, 10).

ಅಂಚೆ a12-ñ-cĕ. 2. = ಆಚೆ. On that side, beyond (Ċh. v. 87; Tu. ಅಂಚಿ).

ಅಂಚೆ añcĕ. Tbh. of ಹಂಸ (Śmd. 348. 357; Śm. 29. 85) or ಹಂಸ (Kk. 9). See ಅರಸಂಚೆ. ಬಿಜ್ಜಮೈತ್ತು ಎಸೆವ ಅಂಚೆಯ ಸಮ್ಮುಲಂ (Śmd. 24).— ಅಂಚೆದುಪ್ಪಟಿ. -ತುಪ್ಪಟಿ. Goose-down (Rsv. 4, after 14).— ಅಂಚೆದುಪ್ಪಟಿವಾಸು. -ತುಪ್ಪಟಿವಾಸು. A bed of goose-down (J. 11, 19).— ಅಂಚೆದೇರ. -ತೇರ. He who rides on a goose or swan: Brahmâ (Śm. 8; ಬೊಮ್ಮ Kk. 9).— ಅಂಚೆವಱಿ. -ಮಱಿ. A young añcĕ (Rsv. 12, 23).— ಅಂಚೆವಿಣ್ಡು. Tbh. of ಹಂಸಪಿಣ್ಡ (Śmd. 380). A flock of geese or swans.

ಅಂಚೆದಾರ añcĕ-dâra. A postal officer (My.).

ಅಂಜಕ añjaka. Anointing; making clear. See ವ್ಯಂಜಕ.

ಅಂಜನ añjana. Anointing; making clear. 2. *a black collyrium applied to the eye-lashes* (ಕಜ್ಜಳ, ಕಾಡಿಗೆ Nn. 61; ಬಯಕೆಗಪ್ಪು Ċt. II, 80). 3, material of this collyrium, as lamp-black, antimony, etc. 4, magic ointment. 5, ink. 6, night. 7, fire. 8, *the elephant of the west or south-west* (ದಿಗ್ಗಜಭೇದ Nn. 61). 9, a kind of domestic lizard. 10, *a kind of tree* (perhaps Terminalia arjuna W. & A., as our MS. reads ಅರ್ಜುನ).

ಅಂಜನಕೇಶಿ añjana-kêsi. *N. of a vegetable perfume.*

ಅಂಜನಕ್ರಿಯೆ añjana-kriyĕ. Smearing, anointing. See ಎಚ್ಚು.

ಅಂಜನಾದ್ರಿ añjana-adri. The collyrium-mountain of the west (J. 7, 55), one of the hills at Tirupati (My.).

ಅಂಜನಾವತಿ añjanâ-vati. *The female elephant of the north-east.* 2, = ಅಂಜನೆ (My.).

ಅಂಜನಿ añjani. A hollow tube for black collyrium (ಕಾಡಿಗೆಯ ಕೊಳವಿ Mr. 337).

ಅಂಜನಿಕೆ añjanikĕ. *A species of lizard.* 2, a small mouse.

ಅಂಜನೆ añjanĕ. -ನಾ. N. of Hanumanta's mother.

ಅಂಜಲಿ añjali. = ಅಂಜುಲಿ. *The cavity formed by putting the hands side by side, hollowing the palms* (ಬೊಗಸೆ G.); when the hands in this form are raised towards the forehead, it forms the appropriate salutation from inferiors to their superiors. 2, a measure of corn, etc. sufficient to fill both hands when placed side by side, a kuḍava.

ಅಂಜಲಿಕಾರಿಕೆ añjali-kârikĕ. Making the añjali: *an earthen doll.* 2, the plant Mimosa pudica.

ಅಂಜಲಿಪುಟ añjali-puṭa. = ಅಂಜಲಿ No. 1. (My.).

ಅಂಜಲಿಬನ್ಧ añjali-bandha. Salutation, with the añjali raised towards the forehead. (My.).

ಅಂಜಸ añjasa. Straight. See ಸಮಂಜಸ.

ಅಂಜಸಾ añjasâ. *Straight on, truly, justly* (ದಿಟ, ಸಿಬುದ್ಧಿ Nn. 129; ದಿಟ Mr. 537). 2, quickly, soon (ತ್ವರಿತ, ಬೇಗ 129; ತುರಿತ 537).

ಅಂಜಿ añji. = ಹಂಜಿ, etc. (My.).

ಅಂಜಿಕೆ añjikĕ. Fear (ಸುಗಿ Śm. 80; ಭಯ, etc. Si. 67; My.; B. 2, 16). ಬಹಳ ಅಂಜಿಕೆಯನ್ನು ಉಣ್ಟು ಮಾಡುವ ಕಾಳಗ ನಡಿಯುವ ಸ್ಥಲ (ವೀರಾತಂಕಸ Si. 293). ಅಂಜಿಕೆ ಹುಟ್ಟಿದೆ ಇಹುದೇ? (Bp. 18, 15).

ಅಂಜಿಸು añjisu. To frighten. ಅಂಜಿಸಿದಂ ಮೂಲೋಕಮಂ ತಾರಕಂ (Śmd. 260). See J. 20, 25; Si. 294; B. 5, 232.

ಅಂಜೀರ añjîra. = ಅಂಜೂರ. A species of fig-tree, Ficus oppositifolia. 2, a fig.

ಅಂಜು añju. 1. = ಅಳಕು 1, of which it is a contraction. To fear, to feel anxiety; to be afraid of (ಭಯ Śmd. Dh.; C.; T., M., Tĕ., Tu.). ಕೈತವಕೆ ಅಂಜಿ, ಪೊಡಮಟ್ಟು ಇರ್ದಂ (Śmd. 67). ಪುಲಿಗೆ ಅಂಜಿ, ಪುತ್ರಮಂ ಪೊಸ್ತು, ಆದರೆ ಪಾವು ಕೊನ್ದುದು (159). ಪಾಪಕ್ಕೆ ಅಂಜುಗುಂ ತಕ್ಕಂ (159). ಉಱಿಮೆ? ಅಂಜಿಮೆ? (177). ಅಂಜಿ ಕೊಡುವ ಧನ (ಅತ್ಯಾಚಾರ, ಲಂಚ, etc. Mr. 270). ಅಂಜಿದವನು (ಅಧೀರ, ಕಾತರ Si. 359). ಆಳುಕದೆ ಅಂಜದೆ (Bp. 17, 11). ಕಣ್ಣು, ಹರಣಕ್ಕೆ ಅಂಜಿ, ನೆಱೆ ಭಯಗೊಣ್ಡು, ನೀನ್ ಅರಿಯ ಇರ್ದೆಯೋ? (18, 56). ಅಪವಾದಕೆ ಅಂಜಿ (25, 29). ಆ ಕುವರಿಗಳಿಗೆ ಅಂಜುವೆನೆ? (43, 58). ದಹನಂ ದಹಿಸ

Digitized by Google

ದ್ ಅಂಜಿ (50, 22). ಪಾಪಕ್ಕೆ ಅಂಜದೆ (56, 22; *cf.* B. 2, 10). ಅಂಜುವವನ ಮೇಲೆ ಕಪ್ಪೆ ಹಾರಿದ ಹಾಗೆ. — ಎಲ್ಲರೂ ನನಗಂಜದರೆ ನಾನು ಚಿರಾಜಿಗಂಜುವೆನು (Prvs.). **2**, to fear (v. t.). ಅಂಜಿಸ್ ಬಿಸುವನು (Bp. 31, 25). — ಅಂಜಂಜು. rep. ಅಂಜದೆ ಇರು, ಅಂಜದೆ ಇರು! (Bp. 24, 70). ಅಂಜಂಜುತ್ತಾ ರಾಕ್ಷಸನನ್ನು ನೋಡ ಹತ್ತಿದನು (B. 5, 132).

ಅಂಜು añju. 2. = ಅಳಕು 2. Fear (in compositions). — ಅಂಜುಪುರುಕ. = ಅಂಜುಬುರುಕ. (My.). — ಅಂಜುಬುರುಕ. -ಪುರುಕ. A coward (Čb. 161; My.). — ಅಂಜುಬುರುಕಿ. A female coward (My.).

ಅಂಜುಕುಳಿ añju-kuḷi. = ಅಂಜುಗುಳಿ. A male or female coward (My.).

ಅಂಜುಗುಳಿ añju-guḷi. = ಅಂಜುಕುಳಿ. (My.).

ಅಂಜುಲಿ añjuli. -ಳಿ. = ಅಂಜಲಿ. (ಕುತಪ, ಕೈಯ್ಯ ಬಗಸೆ Nn. 107; ಬೊಗಸೆ G.; ಹಸ್ತ Bhn. 60; Mhr.). See ಪುಷ್ಪಾಂಜುಲಿ; J. 3, 11; 12, 51. — ಅಂಜುಲಿಗೊಡು. -ಕೊಡು. To salute with the añjuli. ಅವನಿಗೆ ಬಾಗಿ ಪೊಡಮುಡುವನ್, ಅಂಜುಲಿಗೊಡುವನ್, ಅಮಿವನು (Bp. 18, 63). — ಅಂಜುಲಿಸಲಿಲ. Water in the hollow of the palms. ಅಲನೆ ಅಂಜುಲಿಸಲಿಲದಿಂ ತಪ್ಪಿಸುತಂ (Bp. 15, 9).

ಅಂಜುಲೀಕೃತ añjulî-kṛita. Placed together to form the añjuli. ಅಂಜುಲೀಕೃತಕರಕಮಲನ್ ಆಗಿ (Bp. 29, 24).

ಅಂಜುಳಿ añjuḷi. The nozzle of a vessel (J. 3, 11; My.; from ಅಂಜುಲಿ?).

ಅಂಜೂರ añjûra. A fig; a fig-tree (C.; Mhr., H.; Sk. ಅಂಜೀರ). ಅತ್ತಿಮರ, ಇದೇ ಹುಬುವುಳ್ಳ ಅಂಜೂರ (ಉದುಮ್ಬರ, etc. Sl. 126).

ಅಂಜೆ añjé. (= ವಂಜೆ, etc.). (ಕನ್ನಡ ಕೈ.).

ಅಂಜೇ añjê. = ಹಂಜೇ. (My.).

ಅಂಝಟೆ añjhaṭĕ. = ಅಜ್ಝಟೆ. *The plant Flacourtia cataphracta* Roxb.

ಅಟ aṭa. 1. = ಆಟ, etc., ಆಟ. Motion; acting; play; jest; speech, sound (*cf. e. g.* ಅಬ್ಬಟ). — ಅಟಮಟ. dupl. (= ತಟವಟ). Trickery, guile, fraud (ಠಕ್ಕು Bhn. 35, o. r. ಕಪಟ; My.; Tu.; Tĕ. ಅಟಮಟು). 2, escape, evasion (ತಪ್ಪಿಸ್ ಹೋಗುವುದು G.). ಅಟಮಟದ ಆರ್ಭಟನೆಗಳಂ ಮಾಡಿ (Bp. 43, 52). — ಅಟಮಟಗಾರ. = ಅಟಮಟಿಗ. (My.). — ಅಟಮಟಿಗ. ಅಟಮಟ-ಗ (Śmd. 233). A juggler, a cheat. — ಅಟಮಟಿಸು. To play off tricks, to deceive (Tĕ. ಅಟಮಟಿಂಚು, ಅಟಮಟಿಂಚು). 2, to evade. ಭಟ ಮರಳಿ ಸನ್ನಯ್ಯ್ಸಿ ಕೊಣ್ಡು, ಅಟಮಟಿಸಿ, (ಸಹಸನಂ) ಗದೆಯಲ್ಲಿ ಹೊಯ್ದು (Bh. 3, 13, 34). ಸಿಟಿಲದಲಿ ಬಿಡು ಬರದ ಬರಹವನ್ ಅಟಮಟಿಸಲ್ ಅರ ಅಳವು (Râm. 32, 42). — ಅಟಮುರಿಸು. = ಅಟಮಟಿಸು. (My.). 2, to take stealthily away (My., also ಅಟಮಾರಿಸು).

ಅಟ aṭa. 2. = ಅಟು, ಅಟ್ಟು 11, ಅಷ್ಟು, etc., ಅಪ 1. That much, so much (S. Mhr.; Tĕ. ಅಟು, in that manner; that).

ಅಟ aṭa. 1. — ಅಟಕಟ. dupl. Weariness (ಬಳಲಿಕೆ Bhn. 66, o. r. ಅಟಕಟಿ, ಅಟಕುತುಟ; Mhr. ಅಟಾಅಟ, ಅಟಾಘಾಟ, etc., vehement efforts, toil, pains; the state of exhaustion, that of being harassed, etc.; *cf.* ಅಟ್ಟು 7).

ಅಟ aṭa. 2. An obstruction; a bar, nail, etc. used as a lever, etc. (Mhr.). — ಅಟಗೋಲು. (= ಅಟ್ಟಗೋಲು). A pole used by two men to lift sacks in lading oxen (S. Mhr.).

ಅಟ aṭa. 3. = ಪಟ. (My.; Tu.).

ಅಟ aṭa. 4. = ಅಟ್ಟ 1, etc. (Mhr. ಅಠ, ಅಠ). — ಅಟತಾಳ. = ಅಟ್ಟತಾಳ, etc., ಅಷ್ಟತಾಳ. (My.; Tĕ.).

ಅಟ aṭa. 5. Roaming, wandering. See ಘೂಮ್ಯಾಟ, ನಗ್ನಾಟ, ವ್ಯಾಘ್ರಾಟ.

ಅಟಕಾಯಿಸು aṭakâyisu. To stop, hinder, check (My.; Mhr., H. ಅಟಕ, obstruction; restraint, control, etc.).

ಅಟಕಾವು aṭakâvu. Obstruction, impediment (My.; Mhr., H. ಅಟಕಾವ, ಅಡಕಾವ).

ಅಟಕಿಸು aṭakisu. = ಅಟಕಾಯಿಸು. (My.).

ಅಟನ aṭana. Wandering about. See ನಿಶಾಟನ, ಪರ್ಯಟನ; J. 19, 10.

ಅಟನಿ aṭani. *The notched extremity of a bow.*

ಅಟರುಷ aṭarusha. = ಅಟರೂಷ, ಅಡಸಲ, ಅಡಸಲೆ, ಅಡಸಾಲ, ಅಡಸಾಲೆ, ಅಡ್ಡಸರ, ಅಡ್ಡಸಲ, ಅಟರೂಷ, ಅಟರೂಷಕ, ಅಡಸೋಗೆ, ಅಡಸೋಗೆ, ಅಡುಸೋಗೆ. *The shrub Justicia adhatoda* (and ganderussa) Lin. (Adhatoda vasica Nees.). See ಅಡುಮುಟ್ಟದ ಗಿಡ No. 1.

ಅಟರೂಷ aṭarûsha. = ಅಟರುಷ. *Justicia adhatoda.*

ಅಟರೂಷಕ aṭarûshaka. = ಅಟರೂಷ. *Justicia adhatoda.*

ಅಟವಣೆ aṭavaṇĕ. 1. = ಅಟ್ಟವಣೆ. Addition and subtraction (in arithmetic, My.). 2, revenue (R.; Br. ಅಠಾವಣೆ; Mhr. ಆಟವಣೇಂ, to gather together, in, up).

ಅಟವಣೆ aṭavaṇĕ. 2. Remembrance; memory (R.; Mhr. ಆಠವಣ).

ಅಟವಿ aṭavi. = ಅಡವಿ, ಅಡಿವಿ, ಅಡಿವೆ. *A wood, a forest, a jungle.*

ಅಟವಿಚರ aṭavi-čara. A wood-roamer: a sportsman (ಬೇಟೆಗಾತಿ Mr. 379).

ಅಟವ್ಯವಿ aṭavi-avi. A jungle-sheep (ವನೇರಣ, ಕೊಣ್ಣಗುರಿ Mr. 160).

ಅಟಾಟ್ಯೆ aṭa-aṭyĕ. *Roaming.*

ಅಟಾಣ aṭâṇa. The name of a tune (My., also ಅಠಾಣ; T. ಅಡಾಣಾ).

ಅಟಿಗ aṭiga. = ಅಡಿಗ 1, etc. A player; one who is engaged with. It is used as a suffix, *e. g.* ಕೊಲ್ಲಟಿಗ (Śmd. 240).

ಅಟಿಲ್ aṭil. = ಅಟಿಲ್ 2, q. v.

ಅಟಿಸು aṭisu. Verb of ಅಟ1. See ಅಬ್ಬಟಿಸು.

ಅಟು aṭu. = ಅಟ 2, etc. (S. Mhr.).

ಅಟೆ aṭĕ. = ಅಟ 1, ಅಟ್ಟು 1, ಅಡ 1, ಅಡಿ 1, ಅಡಿಕೆ 1, ಅಣ 3, ಅಣಿಗೆ 2, ಅಣೆ 5, (ಅಣ್ಣೆ 4). Playing, etc. See ಅಲಪಟೆ, ಉಬ್ಬಟೆ, ಅಬ್ಬಟೆ, ಲಮ್ಪಟೆ, ಹೋರಟೆ.

ಅಟೆ aṭĕ. ಅಟಾ. Roaming (ತಿರುಗಾಡೋಣ G.).

ಅಟೋಪ aṭôpa. = ಅಟೋಪು. (My.).

ಅಟೋಪು aṭôpu. = ಅಟೋಪ, ಅಟೋಬು, ಆಟೋಪ 1, ಆಟೋಪು. Control, power (My.; S. Mhr.; Mhr. ಆಟಪ, ಆಟೋಪ, control).

ಅಟೋಬು aṭôbu. = ಅಟೋಪು. (My.).

ಅಟ್ಟ aṭṭa. 1. = ಅಟ್ಟು 2. — ಅಟ್ಟವ್ಯಟ್ಟಂ. dupl. Closeness and expansion. — ಅಟ್ಟವ್ಯಟ್ಟಮಾರಣ್ಯ. A thick and expansive jungle (S. Mhr.).

ಅಟ್ಟ aṭṭa. 2. See ಅಟ್ಟ 2 (tatsama).

ಅಟ್ಟ aṭṭa. 1. = ಅಟ 4, ಅಡ. Tbh. of ಅಷ್ಟ. Eight. — ಅಟ್ಟತಾಳ. = ಅಟತಾಳ. (My.).

ಅಟ್ಟ aṭṭa. 2. One of the Tatsamas (Śmd. 384; Čt. 2, 48; Kk. 95; Śm. 77). High, lofty; loud; exceeding. 2, na

Digitized by Google

upper loft in a house used as a place of lumber and repository for stores (C.). 3, *an apartment on the roof.* 4, a tower, a buttress. 5, a scaffold or stand on poles (My.; ಮಂಚಿಗೆ Si. 110; T. ಅಟ್ಟಳೈ). *Cf.* ಅಟ್ಟವೆ 2, ಅಟ್ಟು. 6, = ಅಟ್ಟಣ No. 2, ಅಂಗಳ, etc., the palate of the mouth (My.). ಅಟ್ಟಕ್ಕೆ ಹಾರಿದ ಬೆಕ್ಕು ಆಕಾಶಕ್ಕೆ ಹಾರ್ಯಾತೇ?— ಅಟ್ಟದ ಮೇಲೆ ಅಮ್ಮು, ಚಿಟ್ಟದ ಮೇಲೆ ಬೆಲ್ಲು; ಕುಟ್ಟು, ಎಕಾ, ಮೂಗಾವುದ!— ಅಟ್ಟದಿನ್ದ ಬಿದ್ದ ವನ ದಡಿಯಿನ್ದ ಡಕ್ಕಿದರು. — ಅಟ್ಟ ಸ್ವರ್ಗವಲ್ಲ, ಗಟ್ಟ ಮೇರುವಲ್ಲ (Prvs.). See B. 4, 121. 136. — ಅಟ್ಟಗವಲ್. -ಕವಲ್. (Śmd. 385). A tall bifurcated (or lateral) branch. — ಅಟ್ಟಗೋಲ್. -ಕೋಲ್. (= ಅಟಗೋಲು). A long staff or pole (ಕುರುದಣ್ಡ Mr. 350, o. r. ಕುರದಣ್ಡ). — ಅಟ್ಟಬಡಿ. (-ಬಡಿ?). (Śmd. 385; Kk. 96). A long stick (?). — ಅಟ್ಟಹಾಸ. (Śmd. 385; Kk. 96). = ಅಟ್ಹಾಸ. A loud laughter or outcry. 2, pomp, parade, ostentation (ಬಿಡಿವಾರ Čb.; My.). See J. 10, 35; 16, 25; 26, 34. — ಅಟ್ಟಹಾಸಗಾರ. An ostentatious man (My.). — ಅಟ್ಟಾಸುರ. -ಅಸುರ. Excessive trouble (Abh. P. 13, 51).

ಅಟ್ಟ aṭṭa. 3. = ಹಟ್ಟ. A market-place. — ಅಟ್ಟವಿಲಾಸಿನಿ. Dallying in market places: a prostitute (ಹಟ್ಟವಿಲಾಸಿನಿ Nr.).

ಅಟ್ಟ aṭṭa. 4. Dried, dry (Sk.; *cf.* ಅಟ್ಟು 8).

ಅಟ್ಟ aṭṭa. 5. Boiled rice, food (Sk.; *cf.* ಅಟ್ಟು 10).

ಅಟ್ಟಣ aṭṭaṇa. (The hind part of) the deck of a vessel (used as a cook-room). ಹಡಗಿನ ಅಡಿಸ ಅಟ್ಟಣಂ ತರ್ಪಣವೆನಿಸಲ್ಕು (Mr. 408). 2, = ಅಟ್ಟ 2, No. 6, the palate (Mg.).

ಅಟ್ಟಣೆ aṭṭaṇe. = ಅಟ್ಟಳೆ. See ಹಡಿಯಟ್ಟಣೆ, ಮುಗಿಲಟ್ಟಣೆ.

ಅಟ್ಟವಣೆ aṭṭavaṇe. = ಅಟವಣೆ 1. (My.).

ಅಟ್ಟವೆ aṭṭave. 1. Tbh. of ಅಷ್ಟಮ (Śmd. 365; Śm. 19).

ಅಟ್ಟವೆ aṭṭave. 2. = ಅಟ್ಟ 2, No. 2. (My.). 2, a structure of poles put on stones, on which a stack is heaped (My.).

ಅಟ್ಟಳೆ aṭṭaḷe. = ಅಟ್ಟಣ, ಅಟ್ಟಣೆ, (ಅಟ್ಟೋಳಿ, ಅಟ್ಟು). Tbh. of ಅಟ್ಟಾಲ (Čt. II, 39; ಅಟ್ಟೋಳಿ Čt. I, 9; ಅಟ್ಟ, ಕ್ಷಿತಿ, ತಲ್ಪ Nr.; ಅಟ್ಟ Mr. 192). See Bp. 16, 10; Abh. P. 5, 103; ಮುಗಿಲಟ್ಟಳೆ.

ಅಟ್ಟಾಲ aṭṭâla. = ಅಟ್ಟಳೆ q. v. & ಅಟ್ಟಾಲಕ. An apartment on the roof (Sk.). 2, a palace (ಅರಮನೆ G.). 3, a breast-high wall, a parapet (ಎದೆಯುದ್ದ ಗೋಡೆ G.). 4, a bastion (ಕೊತ್ತಲ, ಬುರುಜು G.).

ಅಟ್ಟಾಲಕ aṭṭâlaka. *An apartment on the roof.*

ಅಟ್ಟಾಸ aṭṭâsa. Tbh. of ಅಟ್ಟಹಾಸ. (My.; Mhr. ಅಟಾಸ).

ಅಟ್ಟಿ aṭṭi. 1. = ಹಟ್ಟಿ. (My.).

ಅಟ್ಟಿ aṭṭi. 2. (= ಅತಿ?). See ಅಟ್ಟಟ್ಟ s. ಅಟ್ಟು 2.

ಅಟ್ಟಿಗಾಲಿಗ aṭṭigâliga. See ಅಲ್ಲಿಗಾರಿಗ.

ಅಟ್ಟಿಸು aṭṭisu. 1. To take or retain possession of (S. Mhr.; Mhr. ಆಟಪಣೇಂ, to take up, take possession, etc.). ಅವನು ಆ ಕಾವ್ಯವನ್ನು ಅಟ್ಟಿಸಿ ಕೊಣ್ಡನು (S. Mhr.). ಪುಣ್ಣು ಸಾವನ್ತನನ್ನು ಗೋವೆಸರಕಾರದವರು ಅಟ್ಟಿಸಿ ಕೊಣ್ಡರು (S. Mhr.).

ಅಟ್ಟಿಸು aṭṭisu. 2. To cause to pursue, etc. (C.).

ಅಟ್ಟಿಸು aṭṭisu. 3. To cause to evaporate by boiling or the agency of natural heat (C.). 2, to cause to be wasted or become worn out (C.). ಸಮುದ್ರದ ನೀರು ಕೊಪ್ಪರಿಗೆಗಳೊಳಗೆ ಹಾಕಿ, ಒಲೆಯ ಮೇಲೆ ಏರಿಸಿ, ಬುಡಕೆ ಉರಿ ಹಚ್ಚಿ, ಅಟ್ಟಿಸಿ, ಉಪ್ಪು ಮಾಡುತ್ತಾರೆ; ಈ ಉಪ್ಪಿಗೆ ಅಟ್ಟುಪ್ಪು ಅನ್ನುತ್ತಾರೆ (B. 4, 204). ನೀರು ಅಟ್ಟಿಸಿದ ತೆಂಗಿನ ಕಾಯಿ (ಗಟಕ G.). ನಿನ್ನನ್ನು ನಾನು ಇಷ್ಟರ ತನಕ (ನನ್ನ) ಜೀವಾ ಅಟ್ಟಿಸಿ ಕೊಣ್ಡು ಜೋಪಾನ ಮಾಡಿ, ಈಗ ಪರದೇಶಿಯವರ ಕೈಯ್ಯೊಳಗೆ ಹ್ಯಾಗೆ ಕೊಡಲಿ? (B. 2, 33).

ಅಟ್ಟು aṭṭu. 1. (= ಅಣ್ಟು 1) An (obsolete) verb to which the krit ಅಟ್ಟು 2 (Śmd. 204) belongs. To be joined.

ಅಟ್ಟು aṭṭu. 2. = ಅಟ್ಟ 1, (ಅಣ್ಟು 2). The state of being joined. 2, closeness; imperviousness. 3, the state of being crowded or thronged, pressed or squeezed. 4, joining, fitting, being becoming or proper. 5, relationship (Te. ಅಣ್ಟು, relationship; T., M. ಅಡು, to come into contact, come nigh, etc.; to beseem, to be fit or proper, to be proportionate to; ಅಡುತ್ತವ, a relation; *cf.* ಅಡು 4, ಅಟ್ಟು 3, ಅಡಗು 3, ಅಡವು 1, ಅಣ್ಪು 2). — ಅಟ್ಟಟ್ಟ. -ಅಟ್ಟ. Intimate love (? Abh. 11, 23). — ಅಟ್ಟಡವಿ. An impervious forest (S. Mhr.; Bp. 23, 19; 32, 6). — ಅಟ್ಟುಂಜಗಳ. ಅಟ್ಟು-ಅಂ-ಜಗಳ (Śmd. 204). A close fight. — ಅಟ್ಟುಮ್ಬರಿ. ಅಟ್ಟು-ಅಂ-ಬರಿ (Śmd. 204). = ಅಟ್ಟುಮ್ಬಳಿ, ಅಟ್ಟುಮ್ಬುಳಿ. Gifts from relations or friends to the bride and bridegroom at the time of marriage (ಬಳುವಳಿ Kk. 53, o. r. ಅಟ್ಟುಮ್ಬಳಿ). — ಅಟ್ಟುಮ್ಬಳಿ. = ಅಟ್ಟುಮ್ಬರಿ, etc. (ಬಳುವಳಿ Śm. 61). — ಅಟ್ಟುಮ್ಬುಳಿ. = ಅಟ್ಟುಮ್ಬರಿ. (My.).

ಅಟ್ಟು aṭṭu. 3. (= ಅಣ್ಟು 1, No. 3). To keep close to, to follow, to run after. 2, to pursue, to chase, to drive; to drive away (ಅನುಧಾವನ Śmd. Dh.; J. 4, 16; My.). 3, to send, people or things (Abh. P. 4, after 42; 11, 22. 23. 24; My.; *cf.* T. ಅನುಪ್ಪು, Te. ಅನುಪು, to send). ಎಡಬಲದರನ್ ಅಟ್ಟ ನೋಡುವ ಪಡಿಯಬಿಗಟ್ಟಿಗೆಗಳ್ (Śmd. 16). ಅನ್ಧಕಾರಂಗಳಂ ಸಿಲ್ಕೆ ಈಯದೆ, ಅಟ್ಟಿ (J. 26, 4). ಪಾಣ್ಡವರ ಸೇನೆ ಅಟ್ಟಿ ಸುಡುವ ಅನಲಧೂಮಜ್ವಾಲೆಗೆ ಒಡನೆ ಗೋಬಿಟ್ಟು (8, 40). ಅಟ್ಟ ಬಹ ಮದಕರಿಯ ಕಟ್ಟ ಬಹುದು (Dp. 172, 2). ಅವರು ಓಡಿ ಹೋದರು; ದೆರಾಯಸನು (Darius) ಅವರ ಬೆನ್ನ ಹತ್ತಿದನು; ಈ ಪ್ರಕಾರ ಸ್ಕುತೀ (Scythian) ಜನರನ್ನು ಅಟ್ಟ ಕೊಣ್ಡು ಹೋಗುತ್ತಾ ಹೋಗುತ್ತಾ (B. 4, 217). ಕಾಡುಗುದುರೆಗಳು ಮಾತ್ರ ಎರಡನೆಯ ಕುದುರೆಗಳನ್ನು ತಮ್ಮ ಹಿಣ್ಡಿನೊಳಗೆ ಸೇರಗೊಡದೆ, ಲತ್ತೀ ಹಾಡಿಸಿ, ಬೆನ್ನುಹತ್ತಿ, ಅಟ್ಟುತ್ತವೆ (B. 5, 13). — ನೃಪಂ ಬೆಸ್ಪೆಟ್ಟಿಂ ದೂತನ ಅಟ್ಟೆಯುಂ ಬಾರಂ (Śmd. 283). ಎಮ್ಮುವನ್ ಇಲ್ಲಿಗೆ ಅಟ್ಟದಂ (Bp. 28, 38). ನಾರಿ (ಹುಗ್ಗಿಯಂ) ದಾಸಿಯ ಕೆಯ್ಯಲಿ ಅಟ್ಟಲು (33, 17). ನೀನ್ ಅದ ನೋಡಿ ಕೋ, ತಿವನ್ ಅಟ್ಟದ ಓಲೆಯನು! (53, 17). ವಿದುರನ್ ಅಟ್ಟಿದ ಖನಕ ಬನ್ದನು (Bh. 1, 8, 86). ಇದು ಕಾಮ್ಭೋಜನರೇನ್ದ್ರನ್ ಅಟ್ಟಿದ ಹಯವ್ರಾತಂ (Rśv. 5, 22). See also Abh. P. 11, 23; Bp. 5, 6; 25, 29; 28, 36; 39, 44. 48; Prv. s. ಓಡು 2; ಅಬೆಯಟ್ಟು, ಎಬ್ಬಟ್ಟು, ಬೆನ್ನಟ್ಟು, ಹಿನ್ದಟ್ಟು. — ಅಟ್ಟಾಡು. -ಆಡು. To pursue, to chase about (My.).

ಅಟ್ಟು aṭṭu. 4. Pursuing, sending. See ಅಟ್ಟುಳಿ 2.

ಅಟ್ಟು aṭṭu. 5. To put (My.; Tu.). ಆರೋಗಿಸುವ ಬುದ್ಧಿ ಹುಟ್ಟಿದೋ? ಸೀ ಇತ್ತೋ? ತುಪ್ಪವನ್ ಅಟ್ಟಿನ್ ಎನ್ದೋ? ಕುಡಿಯಲ್ ಆಬೆಯೋ? (Bp. 14, 9). See ನೀರಟ್ಟಿ ಕೊಳ್ಳು. ಪಿಟ್ಟಟ್ಟ (*i. e.* ಅಟ್ಟಲಾಗಿ), ನೀರಟ್ಟ ಮುದ್ದೆ ಗಣವಾಯಿತು (Prv.).

ಅನ್ತು antu. 1. That manner, so as that, in that manner, thus, so, as (ಪ್ರಕಾರಕಾಲ್ಯಾರ್ಥ Śmd. 399; ಹಾಗೆ or ಹಾಂಗೆ 17. 19. 38. 46. 88 Cm.; Tu. ಅಂಚ; Tĕ. ಅಟು). It occasionally serves to complete a verse (Śmd. 398). ಅನ್ತು, ಇನ್ತು, ಉನ್ತು, ಎನ್ತು (899).— ನಾನ್ ಅನ್ತು ಬಂತಿ ಆದೇನು (B. 2, 44). ಮುಂಚಿನ ಪುಸ್ತಕವನ್ನು ಅನ್ತು ನೀವು. . ಓದಿ ಮುಗಿಸಿದಿರಿ (3, 1). ಚಿತ್ರ ಬರೆದು ನಾಳಿಗೇ ತರುತ್ತೇನೆನ್ದು, ಒಪ್ಪಿಕೊನ್ದು. ಅನ್ತು ಬನ್ದೆನು (3, 49). ನಿನ್ನಿನ್ದ ನನಗೆ ಭಯವಿಲ್ಲ ಎಮ್ಬ ಮಾತು ಅನ್ತು ನಿಜವೇ (4, 18). ನನಗೆ ಅನ್ತು ನಿನ್ನ ಗೆಳೆತನವೇ ಸಾಕು (4, 45). ಸಾಕು, ಬಿಡು! ಸಾಕು, ಈಗ ಅನ್ತು ನಿನ್ನ ಮಾತು ನನಗೆ ತೀರ ಸ್ಪಷ್ಟವಾಗಿ ತಿಳಿಯ ಬನ್ತು (4, 184). **2,** = ಅನ್ತೂ No. 2, q. v. Perhaps all the instances quoted above from B., are to come here. — ಅನ್ತಪ್ಪ. ಅನ್ತು-ಅಪ್ಪ. (or occasionally) ಅನ್ತೆ-ಅಪ್ಪ. Being of that kind; such, such a or an;—being of that very kind. ಆತನ ಮನೋವೃತ್ತಿಯಿನ್ದೆ ಧವಲವರ್ಣಮ್ ಅನ್ತಪ್ಪ ಅಕ್ಷರಸ್ವರೂಪಮ್ ಅಪ್ಪ ತಪ್ಪಂ ಪುಟ್ಟುಗುಂ (Śmd. 46). ಅನ್ತಪ್ಪ ಪರಮ ಶಿವಭಕ್ತರುಗಳ್ (Bp. 25, 15). — ಅನ್ತಪ್ಪಂ. ಅನ್ತಪ್ಪ-ಅಂ 3. Such a man; a man like him, her, etc. (Śmd. 191; Kk. 61). — ಅನ್ತಪ್ಪಳ್. ಅನ್ತಪ್ಪ-ಅಳ್. -ಳು. Such a woman. ಗಣ್ಡನು ಒಮಸುವ ಅನ್ತಪ್ಪಳು (ಕಾನ್ತೆ Nr.). — ಅನ್ತಲ್ಲದೆಯುಂ. -ಅಲ್ಲದೆ ಯುಂ. Thus and further. This expression occurs in narration, *e. g.* Rsv. 13, after 63. — ಅನ್ತಹ. -ಅಹ. = ಅನ್ತಪ್ಪ, ಅನ್ತ 1 (Śmd. 191) and ಅನ್ದ, etc. ಅತ್ಯನ್ತಭಯಗೊಳಿಸುವ ಸ್ಮಶಾನ ಮುದ್ಧಭೂಮಿ (ವೀರಾಶಂಸನ Nr.). ಬಲದ ಕಯ್ಯ ನೆಗಹಿ ಇಕ್ಕಿಟು ಪಟ್ಟಸ್ತಹ ಯಜ್ಞಸೂತ್ರವು (ಉಪವೀತ Nr.). ಚನ್ದ್ರನಂ ಕಾಣ ಬಾರ್ಪನ್ತಹ ಅಮಾವಾಸ್ಯೆ ಸಿನೀವಾಲಿ ಎಮ್ಬುದು (Hlâ.). Frequently in the Cm. on Śmd. as represented in a Mdb. MS., *e. g.* ತಮ್ಮಲ್ಲಿ ಕೂಡಿದನ್ತಹ ವಿಭಕ್ತಿಗಳಂ (90). ಸುಲಲಿತಾಕ್ಷರವಹನ್ತಹ ಪ್ರಕೃತಿಗಳಂ (98). ಪ್ರತ್ಯಯಾನ್ತವಹನ್ತಹ ವಿಕಾರಾನ್ತವು (101); also 125. 140. 141. 142. 169. 173. ಮಾಡುವನ್ತಹ ಕೆಲಸಂ (Bp. 36, 18). ಅನ್ತಹ ದೋಸಂ (57, 78). ಮಾಡುವನ್ತಹ ನಿಮ್ಮ (58, 44). — ಅನ್ತಹಂ. = ಅನ್ತಪ್ಪಂ q. v., ಅನ್ನಂ (s. ಅನ್ನ 1, Śmd. 192; ಅನ್ನಂ Ćt. II, 64). — ಅನ್ತಾಗಿ. -ಆಗಿ. (better ಅನ್ತಾಗೆ?). Having become thus; now, therefore (Bp. 4, 46; 56, 1). ಅನ್ತಾಗಿಯುಂ, and therefore (2, 38). — ಅನ್ತಿನ್ತು. -ಇನ್ತು. In that manner and in this manner (ಹಾಗೆ ಹೀಗೆ G.). 2, differing from the ordinary form and practice. ಪ್ರಾಸಪ್ರಸ್ಥೋಽನ್ವಯ ವಿನ್ಯಾಸದಿನ್ ಅನ್ತಿನ್ತು ಶಬ್ದಮ್ ಇರ್ಕುಂ (Śmd. 5; ವ್ಯತ್ಯಯವಾಗಿ in ವೃತ್ತಿ; ಪಲ್ಲಟವಾಗಿ Cm.). 3, ಅನ್ತು-ಉ 9, ಇನ್ತು-ಉ 9. = ಅನ್ತೂ ಇನ್ತೂ, either so or thus (My.; ಹಾಗೂ ಹೀಗೂ G.). — ಅನ್ತಿರೆ. -ಇರೆ. While being so; so that it becomes thus. 2, = ಅನ್ತೆ, as, like (ಉಪಮಾನ Śmd. 397; ಪೋಲಿಸುವುದು 73; ಹಾಂಗೆ 210 Cm.; ಪೋಲಿಪುದು Śm. 55). ವರಸನ್ತ್ಯಕ್ಷರದನ್ತಿರೆ (Śmd. 18). ಎಲ್ಲರುಮ್ ಆ ಕಣ್ಣನನ್ತಿರೆ ಪಿನ್ ಚಾಗಿಗಳ್ (183). ಅಕ್ಕಂ ಪದಾನ್ತ್ಯಲೋಪಂ ತಕ್ಕನ್ತಿರೆ ಕವೀಶ್ವರಧಾರಯಕ್ಕಂ (210). ಬಳನನ್ತಿರೆ ಮೆಲ್ಲನೆ ಮೆಟ್ಟು (272). ಸಿರಿಗೂಡಿದ ಗೃಹದನ್ತಿರೆ (Rsv. 12, 23). — ಅನ್ತುಂ. -ಉಂ 1. And thus. Used in narration, *e. g.* Rsv. 10, after 1. ಅನ್ತುಮ್ ಅಲ್ಲದೆಯು (Bp. 60, 49). — ಅನ್ತೂ -ಊ 7. And so. 2, = ಅನ್ತು No. 2. As for, as to, in regard to. ಹೊಸವು ಅನ್ತೂ ತೋರಲಿಲ್ಲ, *as for new ones* they did not appear (B. 2, 40). ನಾನು ಅನ್ತೂ ಹೊತ್ತು ನೋಡಿಕೊಣ್ಡು, *as for me* I look out for an opportunity (2, 46). ಆಟದ ಒಡವೆಗಳು ಅನ್ತೂ ನನಗೆ ಬೇಡ, as for toys I do not want any (3, 62). ಸತ್ಯ ಮಾತಾಡುವವರಿಗೆ ಅಂಜಿಕೆ ಅನ್ತೂ ಇರುವದೇ ಇಲ್ಲ (3, 96). ಎಮ್ಬುದು ಅನ್ತೂ ಸಹಜವೇ (4, 72). ಅದರಿನ್ದ ಅನ್ತೂ in regard to (this) "thereby" (4, 80). ಆಗ ಅನ್ತೂ, with respect to that time (4, 95). ತೆಂಗಿನ ಕಾಯಿಯ ಬೆಲೆಯನ್ನು ಮೂರು ಪಾಲು ಬೆಳೆಸಿದ್ದನ್ನು ಅನ್ತೂ ನಾನು ಮನಗಣ್ಡೆನು (4, 179). — ಅನ್ತೂ ಇನ್ತೂ. = ಅನ್ತಿನ್ತು No. 3. As well so as thus, either so or thus, howsoever it may be, at any rate. ಅನ್ತೂ ಇನ್ತೂ ಕುನ್ತೀ ಮಕ್ಕಳಿಗೆ ರಾಜ್ಯವಿಲ್ಲ (Prv.). — ಅನ್ತೆ. -ಎ 3. = ಅನ್ತೇ. Even in that manner, in the very same wise, even so; even at the rate of; just like; just as; in such a manner that, even so that; just as if (ಉಪಮಾನ Śmd. 397. 250; ಪೋಲಿವ ಎಡೆ Kk. 63; ಪೋಲ್, ತೋಱು, ಪಡಿ, ಸಾಮ್ಯ Ćt. I, 88). ಗಿರಿಯನ್ತೆ ಬಿಣ್ಪಿದಂ, ಸುರಕರಿಯನ್ತೆ ಬಲಾಢ್ಯನ್, ಅಬ್ಧಿಯನ್ತೆ ಗಭೀರಂ (Śmd. 251). ಬಿಸಿಲೊಳ್ ಉರಿ ಕಿಮುಟ್ಟಿದ ತಳಿರನ್ತೆ ನೊನ್ದಂ (39). ಮನಮ್ಮುಗುವನ್ತೆ ಪೇಳ್ದಂ (3). ಇವಂ ಬೆರಳ್ ಕೊರಳ್ ಎಮ್ಬನ್ತೆ ಕುಳನಾಗೆ ಉಚ್ಚರಿಸಲಾಗದು (41). ಆತನುಂ ನೀನುಂ ಕೂಡಿದಿರ್ ಅಪ್ಪೊಡೆ (o. r. ಅದಿಪ್ಪೊಡೆ) ಆಹವಕ್ಕೆ ಕಿಚ್ಚುಂ ಗಾಳಿಯುಂ ಕೂಡಿದನ್ತೆ (262). ಜನ್ನವಿರದನ್ತೆ ಇಕ್ಕಿದ ಪೂವಿನ ಮಾಲೆ (ವೈಕಕ್ಷಕ Hlâ.). ಮನ ಬನ್ದನ್ತೆ ನುಡಿವ ನುಡಿ (ಕೋಲಾಹಲ, etc. Hlâ.). ಹಡಗು ಮುನ್ದಕ್ಕೆ ಹಾಯುವನ್ತೆ ಕೆಳಗಡೆ ನೀರನ್ನು ಹಿನ್ದಕ್ಕೆ ತಳ್ಳುವ ಮರಮುಟ್ಟು (Si. 84). ರಕ್ತವನ್ನು ನೋಯಿಸದನ್ತೆ ಹೀರಿ ಕೊಳ್ಳಲ್ ಉಳ್ಳ ಜನ್ತು (89). ಅಭಿನವ ಮಂಗನ್ ಉಸುರಿದಂ ಸ್ತ್ರೀ ದಾಲರ್ ಅದೇವನ್ತೆ ಅಭಿಧಾನಮುಂ (Mr. 4). ಎನ್ದುವುಂ ಜನಬುಧಸಮಯಮ್ ಇದು ಎನ್ದು ಉಲಿವ ಪೆಸರಿಲ್ಲದನ್ತೆ ತೊಡದು, ಕಳೆದು (Bp. 50, 50). ಇನ್ಧನದೊಳ್ ಇಹ ಪಾವಕನನ್ತೆ (51, 32). ಅನ್ತಿರಲಿ! (59, 18). ಕತ್ತಲೆಯ ಮನೆಗೆ ಮಣಿದೀಪವಾದನ್ತೆ, ಸಲೆ ಬತ್ತಿದ ಸರೋವರಕ್ಕೆ ನವಜಲಮ್ ಬದವಿದನ್ತೆ (J. 28, 63). ರೂಪಾಯಿಗೆ ಎಣ್ಟು ಆಣೆಗಳನ್ತೆ ತೆರಿಗೇ ತೆಗದು ಕೊಳ್ಳ ಬೇಕು (B. 5, 120). ನಿಶ್ಶಬ್ದಿಗಳ ಹಲ್ಲಿಗೆ ಒಬ್ಬನನ್ತೆ ಎಷ್ಟೋ ಮನ್ದಿ ಮೇಲಿನ್ದ ಕೆಳತನಕ ಸಾಲಾಗಿ ಕೂತಿದ್ದರು! (4, 150). ಆ ಹೆಂಗಸರು ಒನ್ದೊಂದು ವಾರಕ್ಕೆ ಒಬ್ಬೊಬ್ಬರು ಆಗೆ, ಎರಡು ಆಣೆಯನ್ತೆ ಒಬ್ಬ ಗೃಹಸ್ಥರ ಸ್ತ್ರೀಯಳ ಹತ್ತರ ತನ್ದು ಕೊಡುತ್ತಾರೆ (5, 303). 2, likewise, also, too. ಷ್ಟತಕ್ಕಮ್ ಅನ್ತೆ ಸನ್ಧಿಯಿಲ್ಲ (Śmd. 68). ಪುತ್ರಕ್ಕಮ್ ಅನ್ತೆ (ಹಾಂಗೆ

Digitized by Google

Cm.) ಸಸ್ಸಿವಿಕಲ್ಪಂ (73). ಅನ್ತೆ (ಹಾಂಗೆ Cm.) ಸರ್ವನಾಮದೊಳಂ ತಾಂ ಪ್ರಕಟಂ ಗಳಾಗಮಂ (123). ದಿಗ್ವಾಚಕದೊಳ್ ಅನ್ತೆ ಅಣಾಗಮಮುಮ್ ಆಕ್ಕುಂ (135). ಆ ತೃತೀಯಾಕ್ಷರಮ್ ಅನ್ತೆ (373). — ಅನ್ತೆವೊಲ್. -ವೊಲ್. = ಅನ್ತೆ. (ಉಪಮಾನ Šmd. 397. 250. 110; ಪೋಲಿಪುದು Šm. 55; ಪೋಲಿಪ ಎಡೆ Kk. 63; ವೋಲ್, etc., ಸಾಮ್ಯ Čt. II, 32). ಅವನ್ ಅವಳ್ ಅದು ಎಮ್ಬಿವು ಇರ್ದನ್ತೆವೊಲ್ ಇರ್ದಪುದು (Šmd. 173; ಇರ್ದ ಹಾಗೆ Cm.). ರವಿಸುತನನ್ತೆವೊಲ್ ಅಧಿಕದಾನಿ, ಪರಾಕ್ರಮಿ ಸಿಂಗದನ್ತೆವೊಲ್ (251). ಬಲಿಯನ್ತೆವೊಲ್ ಅಧಿಕದಾನಿ ದಾನವಿನೋದಂ (251). ಚನ್ತ್ರಯನ್ ಅಳ್ವನ್ತೆವೊಲ್ (Rśv. 12, 13). — ಅನ್ತೆವೋಲ್. -ವೋಲ್. = ಅನ್ತೆವೊಲ್. (Šmd. 397. 73; Kk. 63; Šm. 55). ಎರಡುಂ ರೇಫೆಗಳಂ ತನ್ದು, ಉರವಣೆಯಿಂ ಕೂಡಿದನ್ತೆವೋಲ್ (Šmd. 75; ಕೂಡಿದ ಹಾಂಗೆ Cm.). ಬಿಗಿದ ಬೆಳ್ಳಿಯ ನುಣ್ಮಣಿಯನ್ತೆವೋಲ್ ಭಗಣಮ್ ಒಪ್ಪಿದುದು (Rśv. 11, 23). — ಅನ್ತೇ. -ಏ 2. = ಅನ್ತೆ. ಅನ್ತೇ ಬನ್ದು, ಉನ್ತೇ ಹೋಯಿತು (Prv.).

ಅನ್ತು antu. 2. The whole, total (Tĕ., R.; see ಅನಿತು, ಅನಿತುಂ).

ಅನ್ತು antu. 3. = ಅನ್ದಿತು, it said (C.). See ಅನ್ 1.

ಅನ್ತುಟು antuṭu. = ಅನಿತು. *Cf.* ಇನ್ತುಟು, ಎನ್ತುಟು. ಎನ್ತುಂ ಮುಮ್ಪೇಳ್ದ ಅರ್ಥಾನ್ತರಮ್ ಅನ್ತುಟನೆ ಬರ್‍ಕ ತೋಱುವುದು ಅದು ದೃಷ್ಟಾನ್ತಂ (Kâvy. III, 3, 99). ತುಡುಕಿದ ದೋಷಿಯನ್ ಅಲ್ಲದೆ ಪಿಡಿಯದು ಘಟಸರ್ಪನ್, ಅನ್ತುಟಲ್ಲದೆ ತನ್ನಂ ತುಡುಕದ ನಿರ್ದೋಷಿಯುಮಂ ಪಿಡಿವುದು ಖಲಮುಖಘೋರೋಗ್ರಜಿಹ್ವಾಸರ್ಪಂ (Jnv. 1, 12). ವರಚೈತ್ರನಿಂದ ವನಮ್ ಎನ್ತು ಅನ್ತೆ, ಕಮಲದಿಂ ಸರಸಿ ಎನ್ತು ಅನ್ತೆ, ತಿವಲಿಂಗದಿಂ ದೇಗುಲಂ ಶೋಭಿಪನ್ತೆ, ಶಶಧರನಿಂ ನಿಶಾವದನಮ್ ಎನ್ತುಟು ಅನ್ತುಟು, ...ದ್ವಾದಶಾತ್ಮಕನಿನ್ದಲೆ ಉದಿತ ದಿವಸಮ್ ಎನ್ತು ಅನ್ತೆ ದೇವರಾಜೇನ್ದ್ರನಿಂ ಪಿರಿದು ಸೊಬಗಿನ್ದ ಒಪ್ಪಿತು ಅತುಲಪಮ್ಪಾನಗರಮ್ ಅಖಿಲಸುಖತತಿಗೆ ಆಗರಂ (Râghč. 1, 42).

ಅನ್ತುವಾಳ antuvâḷa. = ಅನ್ತರಳೆ, etc. (St. & Pl.).

ಅನ್ತೆ antĕ. 1. It is said See s. ಅನ್ 1.

ಅನ್ತೆ antĕ. 2. See s. ಅನ್ತು 1.

ಅನ್ತೆವೊಲ್ antĕvŏl. See s. ಅನ್ತು 1.

ಅನ್ತೆವೋಲ್ antĕvôl. See s. ಅನ್ತು 1.

ಅನ್ತೇವಾಸಿ antê-vâsi. Being in, at or on the end or confines. 2, living near. 3, a Čaṇḍâla. 4, *a pupil.*

ಅನ್ತೇವೆ antêvĕ. = ಅನುತೇವೆ, ಅನ್ನುತ್ತೇವೆ, we say (C.).

ಅನ್ತ್ಯ antya. *Last, ultimate.* 2, *final.* 3, immediately following. 4, inferior, lowest. 5, the end (ಕಡೆ Nn. 111; Šm. 90; ಎಜ್ಞದ ಅನ್ತ್ಯ, ಯಜ್ಞದ ಕಡೆ Nn. 36). 6, a man of the lowest caste (ಗಂಗಡಿಕಾಱ Mr. 375). 7, the number 1000 billions. 8, the twelfth sign of the zodiac, Pisces. ಅನ್ತ್ಯವಿಲ್ಲದ ಕಡೆಯಿಲ್ಲ, ಆದಿಯಿಲ್ಲದ ಆರಮ್ಭವಿಲ್ಲ (Prv.).

ಅನ್ತ್ಯಜ antya-ja. Latest born. 2, *a Sûdra.* 3, a man of the lowest caste (My.; ಹೊಲೆಯ, ಚಣ್ಡಾಲ G.). See Bp. 57, 39. 67. 69. 71. ಅನ್ತ್ಯಜನಲ್ಲಿ ಹೋಗಿ ಮಿನ್ತ್ಯ ಕದ್ದ ಹಾಗೆ (Prv.).

ಅನ್ತ್ಯಜನ್ಮ antya-janma. = ಅನ್ತ್ಯಜ. (My.).

ಅನ್ತ್ಯಜಾತಿ antya-jâti. *A person of low caste, a Mlêččha.* See s. ನಾಲ್ಕು ವರ್ಣ.

ಅನ್ತ್ಯಯಮಕ antya-yamaka. A kind of yamaka (Kâvy. III, 2, B, 3 seq.).

ಅನ್ತ್ಯರಂಗ antya-ranga. Šrîranga near Trichinopoly (My.).

ಅನ್ತ್ಯಲೋಪ antya-lôpa. The dropping of a final consonant or syllable (Šmd. 106. 123; Kâvy. I, 3, 69. 74).

ಅನ್ತ್ಯವರ್ಣ antya-varṇa. *A Sûdra.* 2, the final (9) consonants (Šmd. 21). 3, the last syllable of a word (122. 123).

ಅನ್ತ್ಯಾಕ್ಷರ antya-akshara. A final syllable (Šmd. 289).

ಅನ್ತ್ಯಾದರ್ಶನ antya-adarśana. = ಅನ್ತ್ಯಲೋಪ. (Šmd. 105).

ಅನ್ತ್ಯೇಷ್ಟಿ antya-ishṭi. Funeral ceremonies (My.).

ಅನ್ತ್ರ antra. 1. *An entrail, a gut.*

ಅನ್ತ್ರ antra. 2. Tbh. of ಅನ್ತರ. See ಅವಾನ್ತ್ರ, ದೇಶಾನ್ತ್ರ, ಮುಹೂರ್ತಾನ್ತ್ರ.

ಅನ್ತ್ರವೃದ್ಧಿ antra-vriddhi. Inguinal hernia, rupture. (R.).

ಅನ್ತ್ರಿ antri. *A plant,* (either) *Ipomoea pes caprae* Roth (or Convolvulus argenteus). *Cf.* ಥಗಲಾನ್ತ್ರಿ.

ಅನ್ಥ antha. = ಅನ್ತ 2, ಅನ್ತಾ 2, ಅನ್ಥಾ, and ಅನ್ತಹ, of which it is a common form. Being of that kind, such, such a or an. A Mdb. MS. of the commentary on the Šmd. has *e. g.* ಪ್ರತಿಷೇಧವಹನ್ಥ (86), ಸ್ತ್ರೀಕರಿಸಲು ಪಟ್ಟನ್ಥ (93), ಇಸುವಹನ್ಥ ಪ್ರತ್ಯಯವನೆ (92), ಹಿಂಗಿದನ್ಥದು (ರಹಿತಂ, 98). ನಿನ್ನನ್ಥ (Bp. 15, 36). ತಕ್ಕನ್ಥ (B. 1, 15). ಹಣ್ಣಿನನ್ಥ (2, 52). ಮೂಗಿನನ್ಥ (4, 22).

ಅನ್ಥಾ anthâ. = ಅನ್ಥ, etc. The Mdb. MS. mentioned s. ಅನ್ಥ has *e. g.* ರಚಿಸಲ್ಪಟ್ಟನ್ಥಾ (93), ಕೂಡಲ್ಪಟ್ಟನ್ಥಾ (98). ಬೆಟ್ಟದಲ್ಲಿ ಹುಟ್ಟಿದನ್ಥಾ ಆ ಒಗನಿ (ಆಕ್ರೋಟ, etc. Nr.). ಪಾಪಿಯೊಳು ಧುಮ್ಮಿಕ್ಕಿ ಬಿದ್ದನ್ಥಾತನಂ ಹಿಡಿದು (Bp. 13, 9). ಅವನಂ ವಿಧ್ವಂಸವಂ ಮಾಡಿ ಇಕ್ಕಿದನ್ಥಾ ಭೋಜನವೆ ಹಿತವು (24, 7). ಅನ್ಥಾದ್ದು (Si. 44). ತಳಸಿಕ್ಕದೆ ಇರುವನ್ಥಾದ್ದು (86). ಅನ್ಥಾವನ ಹೆಸರು (250). ಅನ್ಥಾ ಮಂಗಗಳನ್ನು ಹಿಡಿದು (B. 1, 13). ಅನ್ಥಾದಟಿಳಗೆ (5, 90). ಅನ್ಥಾದು (5, 165).

ಅನ್ದ anda. (= ಅನು 1, etc.; My.; T., M., Tĕ., Tu.). Fitness; beauty; pleasantness (ಚೆಲ್ವು Kk. 32; Šm. 55; *cf.* Sk. ಅನ್ತ = ರಮ್ಯ). ಬಿಜ್ಜಳನ ಅಖಿಲರಾಜ್ಯವನ್ ಅನ್ದದಿಂ ಪ್ರತಿಪಾಲಿಸುತ್ತಂ (Bp. 5, 71). ಅನ್ದವಮ್ ಆಹ ಬಿಜನಾಡಪುರದೊಳ್ (40, 3). ಅನ್ದದಿಂ ಸತ್ತಿಗೆಗಳಂ ಸತ್ತಿಗೆಗಳ್ ಒತ್ತರಿಸೆ (56, 13). ಇದಱ ಮೋಱ ಬಹು ಅನ್ದ ಕಾಣಿಸುತ್ತದೆ (B. 3, 55). ನೋಟಕ್ಕೆ ಅನ್ದವಾದವುಗಳು (5, 75). ಅದು ನಿನಗೆ ಅನ್ದವ್ ಅಲ್ಲಾ? (Bp. 61, 57). **2,** suitable, nice or good form or manner; array. ಎರಡುಂ ಪಲವುಂ ವರ್ಣಂ ಪರಸ್ಪರಂ ಕೂಡುವ ಅನ್ದಮ್ ಅದು ಸನ್ಧಿ (Šmd. 59). ಧೃಷ್ಟದ್ಯುಮ್ನಭೀಷ್ಮರ ಪಾಳೆಯದಲಿ ಅನ್ದು ಅನ್ದಮ್ ಆಯ್ತು, ಅಯ್ದೆ ಇಳೆಗೆ ಹೊಸತೆನಿಸೆ (Bh. 6, 2, 1). **3,** manner, form. ಎಲ್ಲ ಅನ್ದದೊಳಂ ಪೋಲಿಸುವಲ್ಲಿ ಗುಣಾಧಿಕರೊಳ್ ಅನ್ತೆವೋಲ್ ಎನಲ್ ಅಕ್ಕುಂ (Šmd. 73). ಜವಂ ತಳರ್ವನ್ದದಿಂ (73). ಇವಱೊಳ್ ಚತುರ್ಥಿ ಷಷ್ಠಿಗಳ್ ಪತ್ತುವನ್ದಮುಮ್ ಉದಾಹರಿಪೆಂ (401). ಬಿಸಿಲ್ಗುದುರೆಗಳನ್ದದಿಂ ಕುದುರೆಗಳ್ ಪೊಳೆದು ಉಳ್ಕಿದವು ಇರ್ಬಲಂಗಳೊಳ್ (Abh. P. 13, 60). ರುಧಿರಂ ದಿಗನ್ತಮಂ ಮೇಳಿಸಿ, ಕೊರ್ವಿ, ಕಲ್ಪದ ಅವಸಾನದ ಸಂಜೆಮುಗಿಲ್ಗಳ ಅನ್ದಮಂ ಪಾಳಿಸಿದುದು (13, 63). ಸ್ಫುರಿತರತ್ನಪರೀಕ್ಷೆಯಂ ತಾನ್ ಅಱಿದು ಕೆಯ್ಕೊಮ್ಬ ಹರದನನ್ದದಿ (Bp. 8, 9). ಕಿವುಡರಂ ಕರೆವ ಅನ್ದದಿನ್ದ ಅಂ ಕರೆಯಲ್ (18, 18; see further 1, 62; 18, 38; 20, 20; 37, 58; 39, 51; 40, 75; 43, 71. 83; 47, 24; 51, 32. 33; 54, 56). ಕರಿಯಿಱುವೆಗಳ ರಾಶಿಗಳನ್ ಉಱಿ ಹರಹಿದನ್ದದಿ (58, 50). ಲಗ್ನದ ಅನ್ದಮ್ ಅದು ಲಗುನ (Šm. 20). ಪಲವನ್ದಮ್ ಆದುದು (ನಾನಾರೂಪ Nr.). ಸುಲಿದ ಬಾಟಿಯ ಹಣ್ಣಿನನ್ದದಿ, ಕಳಿದ ಸಿಗುರಿನ ಕಪ್ಪಿನನ್ದದಿ, ಅಟಿದ ಉಪ್ಪಿನ ಹಾಲಿನನ್ದದಿ ಸುಲಭಮ್ ಆಗಿರ್ದ ಲಲಿತಮ್ ಆಹ ಕನ್ನಡದ ಸುಡಿ Anubhavâmrita 1, 5). ಅರ್ಜುನನು ಭಗದತ್ತನ ಆನೆಯನ್ ಎಚ್ಚನ್ ಎಮ್ಬನ್ದದಿಂ (Râghč. 17, 69). See Čh. v. 281. 282; ಎನ್ದಿನನ್ದ. **4,** nature (ರೂಪ Nr.); faculty. ಕಣ್ಣಿಂ ಕಾಣಂ, ಕಿವಿಯಿಂ ಕೇಳಂ, ಕಾಣ್ಬ ಅನ್ದಮ್ ಎನ್ತು ತಲೆಯಿಲ್ಲದನಾ? (Šmd. 128). ಒನ್ದು ಜಾತಿಗೆ ಎಪವು ಪುಷ್ಪದೊಳ್ ಇಹುದು; ...ಒನು ಜಾತಿಗೆ

Digitized by Google

ಮೆಯ್ಯ ಅನ್ದವೆಲ್ಲವು ಎಸವು (Dp. 172). 5, the true state. ಆದವ ಅನ್ದವಱಿಯೆವು (Bp. 21, 17). ಅಂಗನೆಗೆ ತತ್ಕಾರ್ಯದ ಅನ್ದವನು, ಎದಿತಮ್ ಅಗಲು, ಮೆಲ್ಲನೆ ಅಱುಪಲು (24, 10). — ಅನ್ದಗೆಡಿಸು. -ಕೆಡಿಸು. To destroy the proper form, etc.; to spoil, to ruin. ಇನ್ದು ನೀನ್ ಆ ಪಾಂಡುಪುತ್ರರನ್ ಅನ್ದಗೆಡಿಸದೆ ಬಿಟ್ಟೆ ಮಾಡೊಡೆ ಮುನ್ದೆ ಬೆಟ್ಟಿತು ರಾಜಕಾರಿಯಮ್ ಎನ್ದನ್ ಆ ಶಕುನಿ (Bh. 1, 8, 20). ದುರ್ಯೋಧನಗಳ ನಾನಾರ್ಥನ್ದದಲಿ ಬೋಧಿಸಿ, ಸುನೀತಿಯನ್ ಅನ್ದಗೆಡಿಸಿದಂ (1, 8, 54). See J. 11, 5. — ಅನ್ದಗೆಡು. -ಕೆಡು. To be spoiled; to become or be ugly. ಇವುಗಳನ್ದ ನನ್ನ ಚೆಲ್ವಿಕೆಯೇ ಅನ್ದಗೆಟ್ಟು ಹೋಗಿದೆ (B. 3, 18). ಅನ್ದಗೆಟ್ಟ ಗೋಡೆ (ಐಡೂರ G.). — ಅನ್ದಗೆಯ್. To make beautiful, to embellish, to form well. ಅನ್ದಗೆಯ್ವುದು (ಪ್ರಶಸ್ತ, ಸಂಸ್ಕೃತ Mr. 458). — ಅನ್ದಗೇಡಿ. -ಕೇಡಿ. A deformed or ugly creature; a person devoid of good manners (My.). ಗೇಣ್ದಾ ಮೃಗಗಳು ಸ್ಥೂಲವಾಗಿಯೂ ಅನ್ದಗೇಡಿಗಳಾಗಿಯೂ ಇರುತ್ತವೆ (B. 5, 248). ಅನ್ದನಿಸಿಕೊಮ್ಬು ಅನ್ದಗೇಡಿಯ ಮನೆ ಎಲ್ಲಿ? (Prv.). — ಅನ್ದಗೊಳಿಸು. -ಕೊಳಿಸು. = ಅನ್ದಂಗೊಳಿಸು. (My.). — ಅನ್ದಂಗೊಳಿಸು. -ಂ-ಕೊಳಿಸು. To cause to look nice, etc. (Rśv. 13, after 59). — ಅನ್ದಚನ್ದ. dupl. ಅನ್ದಚನ್ದ ನೋಡಿದರೆ ಮನ್ದತ್ವ ಹೋಗುವದೇ? (Prv.). See Dp. 61, 2. — ಅನ್ದಮ್ಬಡೆ. -ಂ-ಪಡೆ. To be adorned or beautiful. ಮನ್ದುರದೊಳ್ ಅನ್ದಮ್ಬಡೆದು ನಿನ್ದ ಬಳ್ಗಚ್ಚನ ಮುಣ್ಡಿಗೆಯಂ ಮುಟ್ಟಿದು (Rśv. 6, after 11). — ಅನ್ದವೆಟ್ಟು. -ಂ-ಪೆಟ್ಟು. = ಅನ್ದಮ್ಬಡೆ. ಅನ್ದವೆಟ್ಟಿತ್ತು ಬನ್ದುಗೆಯೆಸಳ್ (Ćpr. 7, after 92). — ಅನ್ದವಱ್. -ಅಱ್. Becoming state or behavior to be lost; to abandon becoming behavior (J. 13, 55). — ಅನ್ದವೇಱು. -ಏಱು. Beauty to rise; to become bright. ಕನ್ದಿದವು ಮೋಱೆಗಳು ಗಂಗಾನನ್ದನದ್ರೋಣಾದಿಸುಜನರಿಗೆ, ಅನ್ದವೇಱಿತು ಮುಸುಡು ಕೌರವಸುಯೋಧನಾದಿಗಳ (Bh. 2, 13, 42).

ಅನ್ದಗಾಱ anda-gāṟa. A handsome man; a showy man (My.; Tĕ. ಅನ್ದಗಾಡು). Feminine ಅನ್ದಗಾಱಳು (My.).

ಅನ್ದಗಾರ್ತಿ anda-gārti. = ಅನ್ದಗಾಱಳು. (My.; Tĕ. ಅನ್ದಕತ್ತೆ).

ಅನ್ದಣ andaṇa. = ಅನ್ದಳ q. v. (ದೋಳ, ನೃಪರ ಪಲ್ಲಕ್ಕಿ Mr. 262; My.). See Bp. 61, 28; J. 7, 5. 21; ಹೊನ್ನನ್ದಣ; Sp. s. ಬಿದರು.

ಅನ್ದರ andara. 1. = ಪನ್ದರ್, etc. (My.).

ಅನ್ದರ andara. 2. = ಹನ್ದರ 2. (My., not general).

ಅನ್ದಳ andaḷa. = ಅನ್ದಣ. Tbh. of ಆನ್ದೋಲ (Śmd. 376). A litter, a palankeen (ಆನ್ದೋಲ Nr.; ಶಿಬಿಕೆ, ಯಾಪ್ಯಯಾನ Nr.; ಮೇನ, ಡೋಲಿ, ಪಾಲಕ್ಕಿ Si.). ಹೊನ್ನ ಅನ್ದಳ (Śmd. 75). See Bp. 55, 10; J. 4, 67.

ಅನ್ದಳಸತ್ತಿಗೆ andaḷa-sattigĕ. Tbh. of ಆನ್ದೋಲಛತ್ರಿಕೆ (Śmd. 376).

ಅನ್ದಾ andā. — ಅನ್ದಾದುಡ್ಡಿ. Extravagance; prodigally, wastefully (S. Mhr.). 2, = ಎಪ್ಪವ (Ćb.).

ಅನ್ದಾಜು andāju. Proportion or ratio; estimate, valuation (My.; Mhr., H. ಅನ್ದಾಜಾ). — ಅನ್ದಾಜು ಕಟ್ಟು. To make an estimate, to estimate (B. 4, 125).

ಅನ್ದಿ andi. = ಅನ್ದಿಹುಱು. (T. ಅನ್ದು). — ಅನ್ದಿಹುಱು. A small, grey and winged insect that infests grain, Tinea oryzella Kl. (My.; T. ಅನ್ದುಪೂಚ್ಚಿ).

ಅನ್ದಿಕೆ andikĕ. = ಅನ್ದಿಕೆ No. 1. (Sk.).

ಅನ್ದಿಗೆ andigĕ. = ಅನ್ದುಗೆ, etc. (My.; ಪಾದಾಂಗದ, etc. Si. 220).

ಅನ್ದಿಪುನಾರು andipunāru. (Tu. ಅಣ್ಡಿನಾರ್, ಅಣ್ಡಿಪುನಾರ್, ಅ..). — ಅನ್ದಿಪುನಾರುಮರ. An evergreen tree, Carallia integerrima (St. & Pl.).

ಅನ್ದು andu. 1. That time; at that time, then (ಕಾಲ Śmd. 147. 398; C.; T. ಅನ್ರು). ಅನ್ದು, ಇನ್ದು, ಉನ್ದು, ಎನ್ದು (398). ಅನ್ದಿಂ, ಅನ್ದಿಂಗೆ, ಅನ್ದಿನತ್ತಣಿಂ, ಅನ್ದಿನ (147; Bp. 27, 23); ಅನ್ದಿನಿಂ (J. 29, 12); ಅನ್ದಿನಿನ್ದ (B. 4, 139. 185). ಅನ್ದು ಮಾಡುಗುಂ (Śmd. 267). ಅದು ಅದನ್ದು (93; ಅದ ಕಾಲದಲ್ಲಿ Cm.). ಓತ್ವಮ್ ಆದನು ಉತ್ವಂ (358; ಆದಲ್ಲಿ Cm.). ಅತ್ವಮ್ ಇರ್ದನ್ದು ಉತ್ವಂ (360; ಇರ್ದಲ್ಲಿ Cm.). ಅನ್ದಿನ ನಿಜಭುಜವಿಕ್ರಾನ್ತಮ್ ಎನ್ ಆದುದು? (137). ಹಿನ್ದೆ ಪರಸತಿಗಾಗಿ ಹಿಡಿವಡೆದನನ್ದು (Bp. 18, 53). ಅನ್ದುವಿನ್ದು ಆವಾವ ಕಾಲದೊಳೆನ್ದುವುಂ (19, 31). ಚಿಕ್ಕನ್ದಿನ ಕೂಡುಗೆಳೆಯಂ (ವಯಸ್ಯ, etc. Nr.). ಅದುದು ಉತ್ಸವಮ್ ಅನ್ದಿನ ಇರುಳು (Bh. 2, 13, 16). ಅನ್ದಿನ ದಿವಸದ ಓಲಗದ ಒಡ್ಡು ಚಲುವಾಯ್ತು (2, 13, 31). Used expletively *e. g.* in ವೈಶಾಖಕೆ ಅನ್ದು ಒಗೆದ ಬೇಸಗೆಯು (Śm. 20). ಅನ್ದು ಬಾ! ಅನ್ದರೆ ಮಿನ್ದು ಬನ್ದ. — ಅನ್ದಿಗೆ ಅದೇ ಸುಖ, ಇನ್ದಿಗೆ ಇದೇ ಸುಖ (Prvs.). — ಅನ್ದುಂ. -ಉಂ. Also then (Bp. 25, 15). — ಅನ್ದು ಮೊದಲಾಗಿ. From that time (J. 29, 6). — ಅನ್ದನ್ದಿಗೆ. -ಎನ್ದಿಗೆ. = ಅನ್ದೆನ್ದು. (S. Mhr.; also ಅನ್ದನ್ದಿಗು). — ಅನ್ದೆನ್ದು. -ಎನ್ದು. Always, ever (Bp. 58, 38).

ಅನ್ದು andu. 2. P. p. of ಅನ್ 1.

ಅನ್ದು andu. 3. To meet with or suffer (Tĕ.);—to reach, to get at; to obtain, to gain (Tĕ.);—to reach, to arrive (T. ಅಣ್ಡು);—to be within reach (My.). ಅದು ನನ್ನ ಕೆಯ್ಗೆ ಅನುವದಿಲ್ಲ (My.). (T. ಅನ್ವು, to be united; to agree; *cf.* ಅಟ್ಟು 12, ಅಣೆ 3).

ಅನ್ದುಕ anduka. = ಅನ್ದುಗೆ, etc. A chain, a fetter. 2, *the chain for an elephant's feet.* 3, a ring or chain worn on the ankle, an anklet.

ಅನ್ದುಗ anduga. = ಅನ್ದುಗೆ, etc. (Grj. 3, 89).

ಅನ್ದುಗು andugu. The clearing nut plant, Strychnos potatorum (Tĕ.). — ಅನ್ದುಗ ಬೀಜ. (ತುರುಷ್ಕ, ಪಿಣ್ಡಕ, ಸಿಹ್ಲ, ಯಾವನ Si. 227).

ಅನ್ದುಗೆ andugĕ = ಅನ್ದಿಗೆ, ಅನ್ದುಗ, ಒನ್ದುಗೆ. Tbh. of ಅನ್ದುಕ (Śmd. 364; Ćt. II, 13; My.; ಕಡಿಲ್ Śmd. I; ಮಂಜೀರ, ಹಂಸಕ Hlā.; ಮಂಜೀರ Mr. 344; ನೇವುರ Bhn. 21; ಕಾಲಗಡಗ, ಸರಪಳಿ G.) See Bp. 2, 52; 24, 44; 56, 5; Grj. 3, after 91; ಹೊನ್ನನ್ದುಗೆ.

ಅನ್ದೂಕ andūka. = ಅನ್ದುಕ. (Sk.; G.).

ಅನ್ದ್ರೆ andrĕ. = ಅನ್ದರೆ, if one says, etc. (My.; Ćb. 16. 175).

ಅನ್ಧ andha. 1. *Blind* (ಕುರುಡ Mr. 388). 2, making blind. 3, *darkness* (ಕತ್ತಲೆ Nn. 109). 4, turbid water. 5, *water*. 6, = ಅನ್ಧಕ No. 2 (Bp. 54, 56). *Cf.* ಅನ್ಧಾಸುರ.

ಅನ್ಧ andha. 2. Tbh. of ಅನ್ಧಸ್. (ಅನ್ನ G.). See ಅಮೃತಾನ್ಧ.

ಅನ್ಧಕ andhaka. Blind; a blind man (ಕುರುಡ Nn. 85; ಕಣ್ಣಿಲಿಮೊಗ Śs.). 2, N. of a Daitya or Asura, a son of Kaśyapa and Diti (ದೈತ್ಯ, ರಾಕ್ಷಸಭೇದ 85; Bp. 18, 23). 3, darkness (ತಮ, ಕತ್ತಲೆ 85). 4, water (ವಾರಿ, ಉದಕ 85). 5, an elephant (ಗಜ, ಆನೆ 85). 6, N. of a country (ರಾಷ್ಟ್ರವಿಭೇದ, ದೇಶಭೇದ 85). 7, N. of a descendant of Yadu (J. 14, 3). ಅನ್ಧಕನಿಗೆ ಕತ್ತಲೆಯಿಲ್ಲ, ಮನ್ದಭಾಗ್ಯನಿಗೆ ದರಿದ್ರವಿಲ್ಲ (Prv.).

ಅನ್ಧಕಜಿತ್ andhaka-jit. The conqueror of the daitya Andhaka: Śiva. (My.).

ಅನ್ಧಕರಿಪು andhaka-ripu. Andhaka's enemy, *Śiva*.

ಅನ್ಧಕವೈರಿ andhaka-vairi. Śiva (My.).

Digitized by Google

ಅನ್ಧಕಾರ andha-kâra. *Darkness.* — ಅನ್ಧಕಾರ ಕವಿ. Darkness to cover or to spread. ಪುರದೊಳಗೆ ಕವಿಯಿತ್ತು ಅನ್ಧಕಾರವು (Bp. 57, 47).

ಅನ್ಧಕಾರಾತಿ andhaka-arâti. Śiva (My.).

ಅನ್ಧಕಾಸುರ andhaka-asura. = ಅನ್ಧಕ No. 2. (Č. Bp. 47 sum.; 47, 7. 8).

ಅನ್ಧತಮಸ andha-tamasa. *Great darkness.*

ಅನ್ಧಮೂಷಿಕೆ andha-mûshikĕ. N. of a grass, Lepeocercis serrata. (R.).

ಅನ್ಧರಾಜ andha-râja. Dhṛitarâshṭra, who was born blind (ಪಾಣ್ಡು, ಧೃತರಾಷ್ಟ್ರ Mr. 264).

ಅನ್ಧಸ್ andhas. = ಅನ್ಧ 2. *Food.* 2, *boiled rice.*

ಅನ್ಧಾದರಬಾರು andhâ-darabâru. A public office notoriously ill-conducted, a bad government (My.; H.).

ಅನ್ಧಾಸುರ andha-asura. = ಅನ್ಧಕಾಸುರ. (Č. Bp. 47, 12).

ಅನ್ಧಾಸುರಭೇದಿ andhâsura-bhêdi. The destroyer of the asura Andha, Śiva (Bp. 54, 26).

ಅನ್ಧು andhu. *A well* (ಕೂಪ, ನೀರಪ್ಪ ಬಾವಿ Mr. 421).

ಅನ್ಧ್ರ andhra. The Tĕlugu country (Čh. p. 22; Bp. 6, 18). 2, a Tĕlugu man (ತೆಲುಗನ್ Mr. 382).

ಅನ್ನ anna. 1. = ಅನ 2, ಅನ್ತಹ, of which it is another form (Śmd. 191; Čt. II, 64; ಪೋಲಿಪ ಎಡೆ Kk. 61; T. ಅನ್ನ), ಅನ 2. Being of that kind or so; such, such a or an. ಅನ್ನವು (Abh. P. 9, 151). See ಉದ್ದನ್ನ, ತಣ್ಣನ್ನ, ತೆಳ್ಳನ್ನ, ದಟ್ಟನ್ನ, ದಪ್ಪನ್ನ, ದುಣ್ಡನ್ನ, ನೆಟ್ಟನ್ನ, ಬಟ್ಟನ್ನ, ಬೆಚ್ಚನ್ನ, ಬೆಳ್ಳನ್ನ, ಮೆತ್ತನ್ನ. — ಅನ್ನಂ. = ಅನ್ತಹಂ (Śmd. 191. 192; Čt. II, 64; Kk. 61; T. ಅನ್ನಾನ್). ಸಿಡಿಲನ್ನಂ ಸಿಂಗದನ್ನಂ ಪುರಹರನ ಉರಿಗಣ್ಣನ್ನನ್ ಈ ನಾರಸಿಂಹಂ (Śmd. 192). ಬಿಸದನ್ನರ್ (Abh. P. 11, 20). See Grj. 2, 93; ಮನದನ್ನಂ. — ಅನ್ನಳ್. Such a woman as, one who is like or conformable to. See ಮನದನ್ನಳ್.

ಅನ್ನ anna. 2. = ಅನ್ನೆ 1. ಎನ್ನ ಜಾಣಿನ ಕಾಲಮ್ ಉಳ್ಳನ್ನ (Bp. 9, 34). *Cf.* ಅನ್ನಕ; ಇನ್ನೆ, ಉನ್ನೆ. — ಅನ್ನಂ. (Śmd. 293). That time; at the time when (ಸತಿಸಪ್ತಮಿಯ ಎಕಾರಕ್ಕೆ ಆದೇಶಂ 293); meanwhile. ಉದ್ಧವಿದರನ್ ನೆಗೆವನ್ನಂ ಪೊಯ್ಯಲ್ ಎನ್ದು ಅವ್ವಳಿಪುದು (294). ಕೊಲ್ವನ್ನಂ ಇಕ್ಕಿ ಕೊಣ್ಡಂ (o. r. ಇಕ್ಕಿ ಕೊನ್ದಂ, 294). ಬರಮ್ಬುಡೆವನ್ನಮ್ ಆರಾಧಿಸಿದಂ (295). ಆ ಧನುರ್ದಣ್ಡಟಂಕೃತಮ್ ಉದ್ದಾಮಯಮಾಟ್ಟಹಾಸರವಮ್ ಎಮ್ಬನ್ನಂ (Abh. P. 13, 67). ಈ ಪೊಬಲ್ಗೆ ಈ ಕುನ್ತಲಾಧೀಶನ್ ಆಳ್ವನ್ನಮ್ (ಚನ್ದ್ರಹಾಸನ್) ಈ ಪೊಡವಿಗೆ ಒಡೆಯನ್ ಆಹಂ (J. 28, 27). *Cf.* ಇನಂ, ಇನ್ನಂ. 2, = ಅನ್ನ, ಅನ್ನಬರ, ಅನ್ನೆಗಂ No. 2. So long as, till (ಸೀಮಾರ್ಥ Kk. 69). — ಅನ್ನಬರ. -ಬರ. = ಅನ್ನಬರೆ, ಅನ್ನೆವರಂ, ಅನ್ನೆವರೆ, ಅನ್ನೆವರೆಗಂ. So long as, till, until. ಪ್ರಸಾದವನ್ ಒಸೆದು ಸೇವಿಸುವನ್ನಬರ ಹುಗಲ್ ಈಯದೆ ಅರುವನು (Bp. 26, 53). ಸಮಾನಪಿಣ್ಡಮ್ ಅಹರು ಪಿಬಿ ತಲೆಗಡವನ್ನಬರ ಸನಾಭಿಗಳ್ ಎನಿಸುಗು (Nr.). ನಿನ್ನಯ ಜೀವಮ್ ಉಳ್ಳನ್ನಬರ ನಿನ್ನಯ ದೈವವೇ ಗತಿ (Bh. 1, 8, 26). — ಅನ್ನಬರವುಂ. -ಉಂ. And so long as (Bp. 20, 26). — ಅನ್ನಬರೆ. -ಬರೆ. = ಅನ್ನಬರ. (Bp. 47, 20).

ಅನ್ನ anna. 3. = ಅಸ್ನು 2, etc. (C.). See ಅಕ್ಕನ್ನ, ಬಾವನ್ನ in Prv. s. ಅಕ್ಕ 1; ರಾಕ್ಷಸನ್ನ in Prv. s. ಅರಳಿಮರ; ನಾಯನ್ನ in Prv. s. ಅಮ್ಬಲಿ. ಗುಗ್ಗಳವನ್ನ (Bp. 43, 20).

ಅನ್ನ anna. *Eaten.* 2, *food;* a dish. 3, *boiled rice.* 4, Vishṇu. 5, the sun. 6, water. — ಅನ್ನಗಡಕ. -ಗಡಕ. One who cheats about food: one who falsely pretends not to have eaten any food, also that of others (S. Mhr.).

ಅನ್ನಂ annam. 1. See s. ಅನ್ನ 1.

ಅನ್ನಂ annam. 2. See s. ಅನ್ನ 2.

ಅನ್ನಋಣ anna-ṛiṇa. One's allotment to eat rice in the present birth (My.). 2, the obligation (upon one person) to afford a maintenance (to another, S. Mhr.; Mhr.).

ಅನ್ನಕ annaka. = ಅನಕ, etc. (*Cf.* ಅನ್ನ 2). ಬೆಳಗನ್ನಕ (Bp. 12 sum.; 12, 46; 15, 24; 57, 15). ಬೆಳಗನ್ನಕಂ (12, 50). ವೇಳೆಯಪ್ಪನ್ನಕ (43, 43). ಬಸುಬು ತುಪ್ಪುಸುವನ್ನಕ ಆರೋಗಿಸು (59, 10).

ಅನ್ನಕಣ್ಟಕ anna-kaṇṭaka. One who hinders or thwarts another's meal, living, or welfare (My.).

ಅನ್ನಕಣ್ಟಕತನ anna-kaṇṭakatana. Hindering or thwarting another's meal, etc. (My.).

ಅನ್ನಗತ anna-gata. Being in or connected with food, depending on food (My.). ಅನ್ನಗತಪ್ರಾಣ, ಚರ್ಮಗತದೃಷ್ಟಿ (Prv.).

ಅನ್ನಚತ್ರ anna-čatra. ಅನ್ನಛತ್ರ. Tbh. of ಅನ್ನಸತ್ರ. (My.; ಸತ್ರಶಾಲೆ Čb.).

ಅನ್ನದಾತ anna-dâta. Giving food; a man who gives food (Bp. 24, 27).

ಅನ್ನದಾನ anna-dâna. The giving of food (Bp. 24, 32). ಅನ್ನದಾನಕ್ಕೆ ಸಮಾನವಿಲ್ಲ, ಬನ್ನಬಡುವದು ತಪ್ಪವದಿಲ್ಲ (Prv.).

ಅನ್ನದಾನಿ anna-dâni. = ಅನ್ನದಾತ.

ಅನ್ನದಾನೀಶ annadâni-îśa. N. (Rśv. 1, 60).

ಅನ್ನದ್ವೇಷ anna-dvêsha. Dislike of food, want of appetite. (My.).

ಅನ್ನಪಚನೆ anna-pačanĕ. Cooking food. 2, digesting food; digestion (My.).

ಅನ್ನಪದಾರ್ಥ anna-padârtha. Rice and curry (C.).

ಅನ್ನಪಾನ anna-pâna. Meat and drink (C.).

ಅನ್ನಪೂರ್ಣೆ anna-pûrṇĕ. A goddess, a form of Durgâ; — N. (My.).

ಅನ್ನಪ್ರಾಶನ anna-prâśana. Putting rice into a child's mouth for the first time, a ceremony performed between the fifth and eighth month. (My.).

ಅನ್ನಬರ anna-bara. See s. ಅನ್ನ 2.

ಅನ್ನಬರೆ anna-barĕ. See s. ಅನ್ನ 2.

ಅನ್ನಭೇದಿ anna-bhêdi. Green vitriol, sulphate of iron (My.; Br.).

ಅನ್ನಮದ anna-mada. Pride on account of possessing the means for sumptuous meals (My.).

ಅನ್ನಮಯ anna-maya. Made from or composed of food, sustained by food. (My.).

ಅನ್ನಮಯಕೋಶ annamaya-kôśa. The gross material body, that which is sustained by food. (My.).

ಅನ್ನಯ annaya. = ಅನ್ವಯ. (ಅನ್ಯಾಯ Śs.; Abh. P. 6, 102; 9, 92; My.).

ಅನ್ನರಸ anna-rasa. Essence of food, chyle. (My.).

ಅನ್ನವರ್ಜಿತವ್ರತ anna-varjita-vrata. A vow to abandon food (ಪ್ರಾಯ Nn. 88).

ಅನ್ನವಸ್ತ್ರ anna-vastra. Food and clothing (C.). See B. 3, 93; 5, 83.

ಅನ್ನವಾಟಿಕೆ anna-vâṭikĕ. A shed for cooking rice (J. 34, 7).

ಅನ್ನಶಾನ್ತಿ anna-śânti. Distributing food (*e. g.* when reading a purâṇa, My.); — feeding the hungry (Mhr.).

Digitized by Google

ಅನ್ನಶ್ರಾದ್ಧ anna-śrâddha. Cooked food distributed at a śrâddha (My.). *Cf.* ಅಮಶ್ರಾದ್ಧ.

ಅನ್ನಸತ್ರ anna-satra. = ಅನ್ನಛತ್ರ. A building erected for the distribution of food (C.).

ಅನ್ನಸಂತರ್ಪಣೆ anna-santarpaṇĕ. = ಅನ್ನಶಾಂತಿ. (C.).

ಅನ್ನಳ್ annaḷ. = ಅನ್ನೆ 2. See s. ಅನ್ನ 1.

ಅನ್ನಾಭಾವ anna-abhâva. Want of food (My.).

ಅನ್ನಾರ್ಥಿ anna-arthi. Asking for food; a beggar. (My.).

ಅನ್ನಿಸು annisu. = ಅನಸು, ಅನಿಸು 1, etc. (C.; see ಅನ್ನಿಸಿಕೊಳ್ s. ಅನ್ 1). To cause to say. — ಅನ್ನಿಸಿ ಕೊಳ್, -ಕೊಳ್ಳು. To make or get one's self called, to be called, (to pass for). (C.; see Prv. s. ಅವಲಕ್ಷಣ).

ಅನ್ನು annu. 1. = ಅನ್ 1, etc. To say, etc. (C.). ಇವು ಗಳಲ್ಲಿ ಗಂಡಿಗೆ ಹೋತು ಎನ್ನು, ಹೆಣ್ಣಿಗೆ ಆಡು ಎನ್ನು, ಅನ್ನುತ್ತಾರೆ (B. 5, 23). ಹೆಣ್ಣುಬೆಕ್ಕಿಗೆ ಕಾಮಿ ಎನ್ನೂ ಗಂಡಿಗೆ ದಾವುಗ ಎನ್ನೂ ಅನ್ನುತ್ತಾರೆ (5, 32). ಇದಕ್ಕೆ ಏನು ಅನ್ನುತ್ತಾರೆ? ಗಂಗೆದೊಗಲು ಅನ್ನುತ್ತಾರೆ (1, 20). ಯಾವ ಆಟ ಆಡ ಬೇಕು ಅನ್ನುತ್ತೀ? (1, 16). ಇದನ್ನು ಮೊಸರು ಅನ್ನುತ್ತಾರೆ (My.). See ಬೇಕನ್ನು. Observe that at the end of imitating words, anukaraṇapadas, ಅನ್, ಅನ್ನು, etc. are applied to sound, scent, and feeling, *e. g.* ಗಮಗಮ ಅನ್ನು, ದಬದಬ ಅನ್ನು, ಜುಮ್ ಅನ್ನು, etc.

ಅನ್ನು annu. 2. = ಅಂ, am 4, etc. (My.). ಕಾಗದವನ್ನು ಅಟ್ಟೆ ಚೀ ತುಣ್ಣುಗಳನ್ನು ಕಟ್ಟಿ ಮಾಡುತ್ತಾರೆ (B. 1, 14). ಆಟ್ಟೆಯನ್ನು (1, 15). ಅದನ್ನು (1, 16). ಬಾಗಿಲವನ್ನು (Bp. 31, 16). ಮಂಗ ಳನ್ನು (59, 40). ಮಾಗಿಯನ್ನು (J. 8, 3). ವಾರಿಯನ್ನು (8, 5).

ಅನ್ನುವಿಕೆ annuvikĕ. = ಎನ್ನುವಿಕೆ. Saying, etc. ಅಗ್ನಿ ಷ್ಟೋಮಾದ ಮುನ್ನಾದ 38 ಅಗ್ನಿಹೋತ್ರನ ಹೆಸರು, ಅನ್ನದ ಬೆಂಕಿಯ ನ್ನುವಿಕೆ (Si. 24).

ಅನ್ನೆ annĕ. 1. = ಅನ್ನ 2. — ಅನ್ನೆಗಂ. -ಗಂ. = ಅನ್ನಂ No. 1. (Śmd. 293. 294). ಅನ್ನೆಗಂ, ಇನ್ನೆಗಂ, ಉನ್ನೆಗಂ (295). ಒಲಿಯೊ ಪಿನೆ ಮುತ್ತುಂಗಾಲೋಳ್ ನರೆ ಬರೆನ್ನೆಗಮ್ ಇರ್ (294). ನೆನೆವ ನ್ನೆಗಂ ಬಸ್ಸಂ (294). ಈವನ್ನೆಗಮ್ ಇರ್ದಂ (295). ಕ್ಷಿತಿಚಕ್ರಂ ಸಿಂಹಾಸನದಿಂ ತಳರಿದತ್ತು ಎಂಬನ್ನೆಗಂ (Abh. P. 13, 67). ಅನ್ನೆಗಂ .. ಅಕ್ಕಾರಂಗಳಂ ನಿಲಲ್ ಈಯದೆ (J. 26, 4). ಅನ್ನೆಗಂ ಬಿಸಿಯ ಬಿಸಿಲ್ ಎಬ್ಬಿದುದು (3, 41). ಅಸ್ತಿಪರ್ನ್ನೆಗಂ (Rśv. 13, after 27). **2,** = ಅನ್ನಂ No. 2. (ಸೀಮಾರ್ಥ Kk. 69).—See *e. g.* J. 2, 45. 53; 4, 1. 56; 7, 54. — ಅನ್ನೆವರಂ. -ವರಂ. = ಅನ್ನಬರ, etc. So long; so long as; until that time; till, until (ಸೀಮೆ, ಸೀಮಾರ್ಥ Śmd. 295); meanwhile. ಪೇಟ್! ಎನಿತ ಕಾಲಮ್ ಬಳಂ ಮುರಾನ್ತಕನ್, ಬಳರ್ ಅನ್ನೆವರಂ ಮಾರ್ಬಲದೊಳಗೆ ಇಲ್ಲಿಯಲ್ ಮಿಡುಗುವ ಅತಿಥಿಯರ್ (292). ಎನ್ನೆವರಂ ಸಿರಿ ತಮಗೆ ಕೈಸಾರ್ಗ್ಗು, ಅನ್ನೆವರಂ ಸೇವ್ಯರ್ ಅಲ್ತೆ ಖಲರುಂ? (296). ವಾಜಿಗಳನ್ ಇದಿಸು, ದಣ್ಣನಾಥಮಣ್ಡಲಿಕಾದಿಯಂ ಯಥಾಕ್ರಮಂ ಬೀಳ್ಕೊಟ್ಟು, ಸೂರ್ಯ ಕಿರಣಂಗಳಂ ಪೊಕ್ಕು ಇರ್ದರ್; ಅನ್ನೆವರಮ್ ಇತ್ತಲ್ ನೆರೆದು ಪುರ ಜನಂ (Rśv. 13, after 97). — ಅನ್ನೆವರೆ. -ವರೆ. = ಅನ್ನೆವರಂ. ಸಸಿಪ ಅವಸರಮ್ ಅಹನ್ನೆವರೆ (Bp. 43, 43). — ಅನ್ನೆವರೆಗಂ. -ವರೆಗಂ. = ಅನ್ನೆವರಂ. (Śmd. 295).

ಅನ್ನೆ anna1-ĕ. 2. = ಅನ್ನಳ್. See ಮನದನ್ನೆ.

ಅನ್ನೆ annĕ. 3. Truly, certainly. ನಿಜಗುಣನ್ ಎನಲ್ಕೆ ಅನ್ನೆ ಮಾಮರಂ (Ct. I, 62). *Cf.* ನನ್ನಿ.

ಅನ್ನೆಗಂ annĕ-gam. See s. ಅನ್ನೆ 1.

ಅನ್ನೆಯ annĕya. = ಅನ್ನಯ. Tbh. of ಅನ್ಯಾಯ (Śmd. 351. 360).

ಅನ್ನೆವರಂ annĕ-varam. See s. ಅನ್ನೆ 1.

ಅನ್ನೆವರೆ annĕ-varĕ. See s. ಅನ್ನೆ 1.

ಅನ್ನೆವರೆಗಂ annĕ-varĕgam. See s. ಅನ್ನೆ 1.

ಅನ್ಮಾನ anmâna. Tbh. of ಅನುಮಾನ. (Nn. 117).

ಅನ್ಯ anya. *Other; another* (ಪೆಱಂ, ಪೆಱತು Ct. II, 86). 2, *different.* 3, the third person (Śmd. 266; ಪ್ರಥಮ 267, ಪ್ರಥಮಪುರುಷ Cm.; Kâvy. I, 5, 6-12. 24-31). Feminine ಅನ್ಯಳ್ (ಪೆಱಳ್ Ct. II, 86).

ಅನ್ಯಕ anyaka. Another, other. (My.).

ಅನ್ಯಕರ್ತೃ anya-kartṛi. Another agent: the agent indicated by a verb as causing anything to be done by another (Śmd. 273; *cf.* ಭಿನ್ನ-, ಪರ-).

ಅನ್ಯಜಾತಿ anya-jâti. A different origin; another family or caste. (My.).

ಅನ್ಯತರ anya-tara. *Either of two.*

ಅನ್ಯತರೇದ್ಯುಸ್ anyatarê-dyus. *On either of two days.*

ಅನ್ಯತಸ್ anya-tas. From another. 2, *elsewhere.* 3, otherwise.

ಅನ್ಯತ್ರ anya-tra. *Elsewhere.* 2, on another occasion.

ಅನ್ಯಥ anyatha. Tbh. of ಅನ್ಯಥಾ. What is different, another thing. Bp. 15, 20. 34; 28, 66; 32, 60; 61, 77.

ಅನ್ಯಥಾ anyathâ. Otherwise, in a different manner (Bp. 27, 72). 2, inaccurately, untruly, erroneously (ಸುಮಾರು G.).

ಅನ್ಯದ್ anyad. ಅನ್ಯತ್. Something else; it; they (Śmd. 300 Cm.).

ಅನ್ಯದರ್ಥ anyad-artha. Another thing, meaning, purpose or sense (Śmd. 300 Cm.).

ಅನ್ಯದೈವ anya-daiva. Another deity (Bp. 53, 4. 35).

ಅನ್ಯಪಾಕ anya-pâka. Cooked by others (My.).

ಅನ್ಯಪುರುಷ anya-purusha. The third person (ಪ್ರಥಮಪುರುಷ Śmd. 264 Cm.).

ಅನ್ಯಪುಷ್ಟ anya-pushṭa. Reared by others: the cuckoo (ಕೋಗಿಲೆ Mr. 169).

ಅನ್ಯಭಾವ anya-bhâva. Another mind or purport;—the mind of another (My.).

ಅನ್ಯಭೃತ anya-bhṛita. = ಅನ್ಯಪುಷ್ಟ. *The cuckoo.*

ಅನ್ಯಲಿಂಗ anya-liṅga. Having or taking the gender of another (word), *an adjective.*

ಅನ್ಯಲಿಂಗಕ anya-liṅgaka. *An adjective.*

ಅನ್ಯಸ್ಥ anya-stha. A man who lives with others;—a man of another caste (My.).

ಅನ್ಯಾಯ a-nyâya. = ಅನ್ನೆಯ, etc. Unjust or unlawful action, injustice; impropriety (Bp. 18, 33; 50, 73). ಅನ್ಯಾಯದಲ್ಲಿ ಸಮ್ಪಾದಿಸಿದ್ದು ಅಸಡ್ಡಾಳಾಗಿ ಹೋಯಿತು (Prv.).

ಅನ್ಯಾಯಕಾರ anyâya-kâra. A man who acts unlawfully or improperly (Bp. 28, 62).

ಅನ್ಯಾಯಿ anyâyi. = ಅನ್ಯಾಯಕಾರ. (Bp. 59, 54).

ಅನ್ಯಾರ್ಥ anya-artha. = ಅನ್ಯದರ್ಥ. (Śmd. 300 Cm.; Kâvy. III, 3, B, 103).

ಅನ್ಯೇದ್ಯುಸ್ anyê-dyus. On the other or following day. 2, *the other day, once.*

ಅನ್ಯೋಕ್ತಿ anya-ukti. The third person (Kâvy. I, 2, 66-70; Śmd. 269). 2, another expression or word.

Digitized by Google

ಅನ್ಯೋನ್ಯ anyônya. *One another, mutual, reciprocal;*—reciprocity. 2, mutual attachment, intimacy, friendship, amity (My.; Br.; ಪರಸ್ಪರಸ್ನೇಹ G.). ಅನ್ಯೋನ್ಯಂ, mutually (ಇತರೇತರಂ, ಪರಸ್ಪರಂ, ಬೇಱೆ ಬೇಱೆ Mr. 437). ಅನ್ಯೋನ್ಯದ ಆಲಿಂಗನಗಳ್ (J. 7, 24).

ಅನ್ಯೋನ್ಯಕಲಹ anyônya-kalaha. Mutual quarrel;—sportive contest (My.).

ಅನ್ಯೋನ್ಯಭಾವ anyônya-bhâva. Mutual affection or emotion (J. 11, 23).

ಅನ್ಯೋನ್ಯವಿರುದ್ಧ anyônya-viruddha. Mutually opposed or disagreeing (Kâvy. III, 3, B, 122).

ಅನ್ಯೋನ್ಯಸಂಘರ್ಷಣ anyônya-sangharshaṇa. Mutual friction (J. 12, 7).

ಅನ್ಯೋನ್ಯಸಲ್ಲಾಪ anyônya-sallâpa. Mutual discourse or chat, conversation (Bp. 59, 9).

ಅನ್ಯೋನ್ಯೋಪಮೆ anyônya-upamĕ. A kind of simile (Kâvy. III, 3, B, 63 seq.).

ಅನ್ವಕ್ಷ anu-aksha. *Following* (ಅನುಪದ, ಅನ್ವಂಗ, ಬೆನ್ನುಬಿ Mr. 445). ಅನ್ವಕ್ಷಂ, afterwards.

ಅನ್ವಂಗ anvanga. Tbh. of ಅನ್ವಂಚ್. (ಅನ್ವಕ್ಷ, ಬೆನ್ನುಬಿ Mr. 445).

ಅನ್ವಂಚ್ anvanč. ಅನ್ವಚ್. ಅನ್ವಗ್.= ಅನ್ವಂಗ. *Following.*

ಅನ್ವಯ anu-aya. Following, succession. 2, connection, association. 3, *race, family, lineage.* 4, logical connection. 5, the natural order or connection of words in a sentence; grammatical construction of a sentence; position of words in a sentence (Šmd. 1, seq.; 5. 173; Kâvy. II, 2, B, 4-6). 6, drift, tenor, purport (Šmd. 170, ಅರ್ಥ 171 Cm.; 298).

ಅನ್ವಯಸ್ವತನ್ತ್ರ anvaya-svatantra. Having an independent character in a sentence (Šmd. 174).

ಅನ್ವಯಿಸು anvayisu. = ಅನುವೇಸು. To construe (Šmd. 171). 2, to be used in a well-constructed sentence (174). 3, to be connected or associated (Bp. 42, 18). 4, to arrange words (used in poetry) in their natural order (My.).

ಅನ್ವರ್ಥ anu-artha. Having the meaning obvious, intelligible, clear (Kâvy. III, 3, B, 164).

ಅನ್ವರ್ಥನಾಮ anvartha-nâma. A word of which the meaning is self-evident (Šmd. 93. 94).

ಅನ್ವವಾಯ anu-avâya. *Family, race, lineage.*

ಅನ್ವಾಚಯ anu-âcaya. *Laying down a rule of secondary importance after that which is primary.*

ಅನ್ವಾಸನ anu-âsana. Sitting down after. 2, service, worship. 3, regret, affliction. 4, *a workshop, a manufactory.* 5, an unctuous or cooling enema.

ಅನ್ವಾಹಾರ್ಯ anu-âhârya. A certain gift presented to the priests. 2, *the monthly śrâddha or funeral repast in honour of the manes, held on the day of the new moon.*

ಅನ್ವಾಹಾರ್ಯಪಚನ anvâhârya-pacana. N. of a sacrificial fire. See ಪಂಚಾಗ್ನಿ.

ಅನ್ವಾಹಿತ anu-âhita. Deposited with a person to be delivered ultimately to the right owner. 2, renewed, as a sacred fire which had gone out through neglect (My.).

ಅನ್ವಿತ anu-ita. Joined, connected with; connected; endowed with, possessed of; acquired, understood; following (ಯುತ, ಸಂಹಿತ, ಸಹಿತ, etc., ಕೂಡಲ್ Mr. 440; Šmd. 228. 297; Ch. v. 171. 207). 2, suitableness, etc. (ಹಿತ Šmd. Cm. 238). 3, a learned man (ವಿದ್ವಾಂಸ Cm. 252; ಬಲ್ಲವ Cm. 298; ಏದ್ Mr. 440).

ಅನ್ವಿತಾರ್ಥ anvita-artha. Having a clear meaning, perspicuous. 2, euphonic combination (Kâvy. I, 1*b*, 32-41).

ಅನ್ವಿತೆ anvitĕ. A woman that is connected or endowed with (Šmd. 2).

ಅನ್ವಿಷ್ಟ anu-ishṭa. *Sought.*

ಅನ್ವೀಕ್ಷಣ anu-îkshaṇa. -ಣೆ. *Searching, investigating.*

ಅನ್ವೀಕ್ಷೆ anu-îkshĕ. = ಅನ್ವೀಕ್ಷಣ. See ಅನ್ವೀಕ್ಷಕ.

ಅನ್ವೇಷಣ anu-êshaṇa. *Seeking for, searching, investigating.* See ಅಱಸು, ಅರಯ್, ತಡವರಿಸು, ಬೆದಕು.

ಅನ್ವೇಷಣೆ anu-êshaṇĕ. = ಅನ್ವೇಷಣ. *Seeking for, etc.*

ಅನ್ವೇಷಿತ anu-êshita. *Sought.*

ಅನ್ವೇಷ್ಟೃ anu-êshṭṛi. *Searching;* a searcher, inquirer.

ಅಪ್ ap. = ಅಪ್ಪು 1. *Water.*

ಅಪ apa. 1. = ಅಪ್ಪ 2. Father (frequently at the end of compounds; Mhr. ಅಪಾ). See *e.g.* ಕಣ್ಣಪ, ಕಲಪ.

ಅಪ apa 2. = ಅಪ್ಪ 4, ಅಮು, q. v. (My.). — ಅಪಪ. rep. = ಅಮುಮು, q. v. (C.; Prll. 3, 27). ಅಪಾ. = ಅಪ. (C.).

ಅಪ apa. 3. = ಅಪ್ಪ 1, etc. See ದಪ 1.

ಅಪ apa. Away. 2, improperly. 3, negatively, contradictorily. 4, without. 5, away from.

ಅಪಕಾರ apa-kâra. *Wrong, offence, injury, hurt, harm* (ದ್ರೋಹ Mr. 448). 2, wickedness, enmity. ಅಪಕಾರಾ ಮಾಡುವವ ಅಪಕೀರ್ತಿಗೆ ಅಂಜ್ಯಾನೇ? (Prv.).

ಅಪಕಾರಗೀ apakâra-gî. -ಗಿರ್. *An offending or menacing speech.*

ಅಪಕಾರಿ apa-kâri. A man who acts wrong or does ill, an offender (Bh. 8, 26, 28).

ಅಪಕೀರ್ತಿ apa-kîrti. Censure, reproach (ಉಪಕ್ರೋಶ, etc., ನಿನ್ದೆ Mr. 87; J. 18, 54). 2, infamy, disgrace. See Prv. s. ಅಪಕಾರ.

ಅಪಕೃತ apa-kṛita. Done wrong, wickedly committed; —injury, offence, malice (J. 17, 50).

ಅಪಕೃತಿ apa-kṛiti. = ಅಪಕಾರ. (Cb.).

ಅಪಕೃತ್ಯ apa-kṛitya. A wrong act, damage, injury, hurt (ಅಲ್ಲದ ಕೃತ್ಯ Nn. 127).

ಅಪಕೃಷ್ಟ apa-kṛishṭa. Drawn away; brought down. 2, *low, inferior, vile.* 3, a crow.

ಅಪಕ್ರಮ apa-krama. Going away. 2, *flight.* 3, = ಅಕ್ರಮ, disorder.

ಅಪಕ್ರಮಣ apa-kramaṇa. Passing off or away, retiring. (R.).

ಅಪಕ್ವ a-pakva. Uncooked, raw. 2, not properly cooked or baked. 3, unripe. 4, undigested.

ಅಪಕ್ವರಸ apakva-rasa. The taste of something unripe. See ಕಸರ್. 2, broth not properly prepared (My.).

ಅಪಖ್ಯಾತಿ apa-khyâti. Injured reputation, disgrace (Bh. 1, 10, 13). See Prvs. s. ಪ್ರಖ್ಯಾತಿ, ವಿಖ್ಯಾತಿ.

ಅಪಗತ apa-gata. Gone, departed, gone off or away (Bp. 7, 1; 22, 3; 28, 62; 38, 4; 56, 44). 2, dead, deceased.

ಅಪಗತಿ apa-gati. = ಅಪಗಮ. 2, downward movement: low condition (My.).

Digitized by Google

ಅಪಗಮ **apa-gama.** Going away; *passing away.* 2, separation; departure; death.

ಅಪಗಮನ **apa-gamana.** = ಅಪಗಮ. See ಸ್ಥಾನಾಪಗಮನ.

ಅಪಗಮಿತ **apa-gamita.** = ಅಪಗತ. (ಹೋದದ್ದು G.).

ಅಪಗೆ **apa-gé.** A river. (ನದಿ, ಹೊಳೆ³ G.).

ಅಪಘನ **apa-ghana.** *Any limb or member of the body* (Bp. 38, 68).

ಅಪಘಾತಿ **apa-ghâti.** Murderous, killing; — a murderous affair (Bh. 8, 24, 57).

ಅಪಚಯ **apa-čaya.** *Decrease, decline, deterioration, loss in property or health, privation.* 2, gathering, collecting (of flowers, Grj. 5, after 92).

ಅಪಚಾಯಿತ **apa-čâyita.** *Honored, respected.*

ಅಪಚಾರ **apa-čûra.** Want, absence. 2, defect. 3, fault, improper conduct, offence, mistake (My.).

ಅಪಚಿತ **apa-čita.** 1. *Honored, respected.*

ಅಪಚಿತ **apa-čita.** 2. Diminished, lessened, wasted.

ಅಪಚಿತಿ **apa-čiti.** *Honor, respect.* 2, *loss, destruction.* 3 compensation (ಪ್ರಾಯಶ್ಚಿತ್ತ G.). 4, expense (ವೆಚ್ಚ G.).

ಅಪಜಯ **apa-jaya.** Defeat, discomfiture, overthrow, reverse; detriment (ಪ್ರತ್ಯವಾಯ Nn. 149; Bp. 50, 8; My.). See ಸೋಲು. — ಅಪಜಯ ಪಡಿಸು. To defeat (My.; ಭಂಗಿಸು Čb.). — ಅಪಜಯ ಹೊಂದು. To be defeated (My.; ಸೋಲು G.).

ಅಪಜ್ಞಾನ **apa-jñâna.** *Concealment of knowledge, denying* (ಅಪಹ್ನವ, etc., ಮರೆಸು Mr. 441).

ಅಪಟಾಂತರ **a-paṭa-antara.** Not separated by a curtain; *adjoining, contiguous.*

ಅಪಟಿ **apaṭi.** *A screen, especially the screen surrounding a tent* (ಪ್ರತ್ಯಸ್ತರ, etc., ಸುತ್ತುತೆರೆ Mr. 203).

ಅಪಟು **a-paṭu.** *Not clever, awkward.* 2, *diseased, sick.*

ಅಪದ್ದಾಳ **apaddâḷa.** Small, contemptible (V. 37, 83).

ಅಪತಿಕ **a-patika.** Without a husband. (R.).

ಅಪತ್ನೀಕ **a-patnîka.** Without a wife. (My.).

ಅಪತ್ಯ **apatya.** *Offspring,* a child, a descendant (Kâvy. I, 2, 74-83; Šmd. 187; ಮಗ, ಹುಡುಗ G.). 2, *a patronymical affix.*

ಅಪತ್ಯಕೆ **apatyakĕ.** A female or male child (Kâvy. I, 2, 74).

ಅಪತ್ಯಾಂತ **apatya-anta.** *A patronymic.*

ಅಪತ್ರಪಿಷ್ಣು **apa-trapishṇu.** *Bashful.*

ಅಪತ್ರಪೆ **apa-trapĕ.** *Bashfulness;* embarrassment.

ಅಪಥ **a-patha.** *A bad or wrong road; pathless state.* 2, heresy. 3, the vulva.

ಅಪಥಿ **a-pathi.** *A bad or wrong road; pathless state.*

ಅಪಥ್ಯ **a-pathya.** Unfit; unsuitable; unwholesome (Bp. 24, 8); bad diet (My.); a lie (My.).

ಅಪದಗಾಮಿ **a-pada-gâmi.** Not walking on feet (ಕಾಲಿಲ್ಲದೆ ನಡೆಯುವವ G.). 2, a reptile (ಹಾವು Čb.).

ಅಪದಾನ **apa-dâna.** (= ಅವದಾನ). Correct or pure conduct, approved occupation. 2, a great or noble work (ಚಲೋ ಕೆಲಸ G.). 3, object of a legend; a legend (ಪೂರ್ವಚರಿತ್ರ G.).

ಅಪದಾಂತರ **a-pada-antara.** Not separated by a foot; *contiguous, adjoining, near* (ಸಮೀಪ Mr. 425).

ಅಪದಿಶಂ **apa-diśam.** *In an intermediate region of the compass.*

ಅಪದೂರು **apa-dûru.** = ಅವದೂರು. Slander, calumny; disgrace (My.; Br.).

ಅಪದೆಸೆ **apa-dĕsĕ.** An intermediate region of the compass (Bh. 1, 17, 10); — a low, miserable state or condition (My.).

ಅಪದೇಶ **apa-dêśa.** *The statement of the reason, adducing a reason or cause.* 2, *a pretence, a feint.* 3, *a butt, a mark.* 4, fame, reputation. 5, *place, quarter.* See ದೆಸ.

ಅಪಧ್ವಂಸ **apa-dhvaṁsa.** Falling away; degradation.

ಅಪಧ್ವಂಸಿ **apa-dhvaṁsi.** Causing to fall; *destroying.*

ಅಪಧ್ವಸ್ತ **apa-dhvasta.** *Reviled, blamed.* 2, pounded, pounded badly.

ಅಪನಮ್ಬಿಕೆ **apa-nambikĕ.** = ಅಪನಮ್ಬುಗೆ, ಅಪನಮ್ಬುಗೆ, ಅಪನಮ್ಬಿಕೆ. Doubt of (a person's) sincerity, distrust (My.; Tĕ. ಅಪನಮ್ಮಿಕ). ಅವನಲ್ಲಿ ನನಗೆ ಅಪನಮ್ಬಿಕೆ ಉಣ್ಟು (My.).

ಅಪನಮ್ಬಿಗೆ **apa-nambigĕ.** = ಅಪನಮ್ಬುಗೆ. (My.).

ಅಪನಮ್ಬುಗೆ **apa-nambugĕ.** Want of confidence, mistrust (ಅವಿಶ್ವಾಸ, ನಿಷ್ಟವ Nr.; My.).

ಅಪನಿನ್ದೆ **apa-nindĕ.** = ಅವನಿನ್ದೆ. Unjust censure, abuse, reproach. — ಅಪನಿನ್ದೆ ಹೊರಿಸು. To accuse falsely. ಅಪನಿನ್ದೆಯನ್ನು ಹೊರಿಸಿ ಅಪಕಾರ ಮಾಡುವಿಕೆ (ನಿಕಾರ, ವಿಪ್ರಕಾರ Si. 392).

ಅಪಪ್ರಯೋಗ **apa-prayôga.** Misapplication (My.; Br.).

ಅಪಭ್ರಂಶ **apa-bhraṁśa.** Falling down or away. 2, *incorrect language.* 3, *a word corrupted from the Saṁskṛita language* (Šmd. 6. 19. 334. 375. 386). 4, the most corrupt of the Prâkṛita dialects (Čh. p. 22).

ಅಪಭ್ರಂಶತೆ **apa-bhraṁśatĕ.** = ತದ್ಭವ. (Šmd. 29 Cm.).

ಅಪಮರ್ಜನ **apa-marjana.** Wiping off, removing; cleansing; shaving, paring. See ಒರಸು.

ಅಪಮಾನ **apa-mâna.** = ಅವಮಾನ. Disrespect, dishonour, disgrace. 2, = ಖಪುರ Nn. 102. 3, = ದಣ್ಡ (the penis? Nn. 127; Mr. 525). See ಭಂಜಿಸು. — ಅಪಮಾನ ಮಾಡು. To disgrace. ಗುರುಗಳು ಅವನ ಅಪಮಾನ ಮಾಡಿ (B. 4, 198).

ಅಪಮಿತ್ಯ **apa-mitya.** = ಅಪಮಿತ್ಯಕ. See ಅಪಮಿತ್ಯಕ.

ಅಪಮಿತ್ಯಕ **apa-mityaka.** *A debt* (ಋಣ, ಉದ್ಧಾರ, ಸಾಲ Mr. 346). See ಕೊಳುಕ.

ಅಪಮೂರ್ಧ **apa-mûrdha.** *Headless.*

ಅಪಮೃತಿ **apa-mṛiti.** = ಅಪಮೃತ್ಯು No. 1. (My.).

ಅಪಮೃತ್ಯು **apa-mṛityu.** A sudden or violent death, dying by some accident (Bp. 61, 90; J. 24, 82; C.). 2, a minor death, *i. e.* a desperate sickness from which a person, contrary to expectation, recovers. 3, N. of a goddess of death (My.).

ಅಪಯಾನ **apa-yâna.** *Retreat, flight.*

ಅಪರ **apara.** 1. Posterior, hinder, later, latter (Čh. v. 291. 292). 2, following. 3, inferior, lower. 4, other, another. 5, different (ಬೇರೆ³ G.). 6, distant, opposite (ಅತ್ತಲಾಗಿನ G.). 7, the hind foot of an elephant (ಆನೆಯ ಹಿಂಗಾಲುಕಡೆಯ ಭಾಗ G.). 8, the hind quarter of an elephant. 9, the future. 10, western; the west (ಪಶ್ಚಿಮದಿಕ್ಕು Čb.). 11, = ವಂಶ, (the spine? Mr. 519).

ಅಪರ **a-para.** 2. Having nothing beyond or after, having no rival or superior, unsurpassed. 2, handsome, pleasing (ಮನೋಹರ, ಸೌಮ್ಯ, etc. Mr. 424).

ಅಪರಕ್ರಿಯೆ **apara-kriyĕ.** Funeral rites (My.; Tĕ.).

ಅಪರಂಜಿ **(apa-rañji).** Fine refined gold (My.; Tĕ., T.).

Digitized by Google

ಅಪರಪಕ್ಷ apara-paksha. The latter half of the month. 2, the other or opposing side, the defendant. (My.).

ಅಪರರಾತ್ರಿ apara-râtri. = ಅಪರಾತ್ರಿ. The end of the night.

ಅಪರವಯಸ್ apara-vayas. Old age (J. 6, 26).

ಅಪರವಾರ್ಧಿ apara-vârdhi. The western ocean (Č. Bp. 47, 47).

ಅಪರಸ್ಪರ a-paraspara. Not one by the other; *uninterrupted.*

ಅಪರಾಗ apara-aga. The western mountain. 2, apa-râga: aversion, enmity. (R.).

ಅಪರಾಜಿತ a-parâjita. Unconquered, unsurpassed. 2, Vishṇu. 3, Śiva.

ಅಪರಾಜಿತೆ a-parâjitĕ. The unsurpassed woman: Durgâ. 2, *the creeper Clitoria ternatea* Lin. 3, *the plant Marsilea quadrifolia* Lin. 4, = ವಿಷ್ಣುಕ್ರಾನ್ತೆ (G.).

ಅಪರಾತ್ರಿ aparâtri. Tbh. of ಅಪರರಾತ್ರಿ (My.; Mhr. ಅಪರಾತ್ರ).

ಅಪರಾದ್ಧ apa-râddha. Sinned; criminal, guilty; erring.

ಅಪರಾದ್ಧಪೃಷತ್ಕ aparâddha-prishatka. *An archer whose arrows always miss the mark.*

ಅಪರಾದ್ಧೇಷು aparâddha-ishu. *An archer whose arrows always miss the mark.*

ಅಪರಾದ್ರಿ apara-adri. = ಅಪರಾಗ No. 1. (R.).

ಅಪರಾಧ apa-râdha. *An offence, a crime.* (Bp. 38, 72). 2, a fine, punishment, penalty (C.; T., Tĕ.). 3, a fault, a mistake, an omission, failure in an engagement or promise (C.; ತಪ್ಪು G.). — ಅಪರಾಧ ಕ್ಷಮಿಸಿ ಬಿಡು. To pardon or forgive an aparâdha (My.). — ಅಪರಾಧ ಕ್ಷಮಿಸು. = ಅಪರಾಧ ಸಯ್ರಿಸು. To bear with an aparâdha, to exercise forbearance or patience with regard to it, to put up an aparâdha (My.; B. 4, 89. 155). — ಅಪರಾಧ ಕಾಯು. To exercise forbearance with regard to an aparâdha (S. Mhr.). — ಅಪರಾಧ ಕೊಡು. To pay a fine (C.). — ಅಪರಾಧ ತೆಕ್ಕೊಳ್ಳು. To take a fine (C.). — ಅಪರಾಧ ತೆಱು. To pay a penalty (My.). — ಅಪರಾಧ ಮನ್ನಿಸು. = ಅಪರಾಧ ಕ್ಷಮಿಸು. (C.). — ಅಪರಾಧ ಮಾಡು. To commit an aparâdha (Bp. 38, 73; 53, 43; B. 4, 201). — ಅಪರಾಧ ಸಯ್ರಿಸು. = ಅಪರಾಧ ಕ್ಷಮಿಸು. (Bp. 22, 63; 34, 13). — ಅಪರಾಧ ಹೊಱಿಸು. To charge an aparâdha upon or against (B. 4, 198).

ಅಪರಾಧರತಿ aparâdha-rati. One who takes pleasure in crime, etc. (Bp. 40, 66).

ಅಪರಾಧಸ್ಥ aparâdha-stha. = ಅಪರಾಧಿ. (My.).

ಅಪರಾಧಿ aparâdhi. A guilty person, a criminal, an offender; a person in fault, one who has committed a mistake (Bp. 22, 50; 54, 14; My.; B. 4, 142; 5, 234).

ಅಪರಾಹ್ಣ apara-ahṇa. *The afternoon* (ಕುತಪ, ಸಂಜೆ Nn. 107).

ಅಪರಿಚ್ಛಿನ್ನ a-paricchinna. Without interval or division, continuous (Bp. 2, 22).

ಅಪರಿಮಿತ a-parimita. Unmeasured, unlimited, unbounded (Šmd. 402; Bp. 1, 4. 23; 20, 10; etc.; B. 4, 172).

ಅಪರೂಪ apa-rûpa. = ಅಪರೂಪು, ಅಪ್ರರೂಪ, (ಅಪೂರ್ವ?). Deformed, ugly. 2, odd-shaped, strange, singular. 3, uncommon, rare (C.; B. 2, 52; 4, 95).

ಅಪರೂಪು aparûpu. Tbh. of ಅಪರೂಪ. (C.; B. 5, 75; ಅನರ್ಘ್ಯ, ವಿರಳ G.).

ಅಪರೂಪುತನ aparûputana. The state of being rare (B. 5, 75).

ಅಪರೇದ್ಯುಸ್ aparê-dyus. *On the following day.*

ಅಪರೋಕ್ಷ a-parôksha. Not invisible; perceptible, manifest. 2, present. (My.).

ಅಪರ್ಣ a-parṇa. Leafless.

ಅಪರ್ಣೆ a-parṇĕ. She who has not even leaves for food during her religious austerities: *Durgĕ or Umĕ.*

ಅಪಲಗ್ನ apa-lagna. = ಅವಲಗ್ನ No 3. An inauspicious time or moment (My.).

ಅಪಲಾಪ apa-lâpa. *Denial or concealment of knowledge, abnegation, turning off the truth;* — concealing, hiding (ಅಪಹ್ನವ, etc., ಮುಚ್ಚು Mr. 441). 2, affection, regard. 3, a senseless outcry (see ಅಪಲಾಪಿಸು No. 2). See ಮೂಂಜು, ವಂಚಿಸು. — ಅಪಲಾಪಗೊಳಿಸುವಿಕೆ. -ಕೊಳಿಸುವಿಕೆ. (ನಿಹ್ನವ Si. 458).

ಅಪಲಾಪನ apa-lâpana. ಅಪಲಾಪನೆ. = ಅಪಲಾಪ. (Bp. 41, 9; 45, 22).

ಅಪಲಾಪಿಸು apa-lâpisu. To deny (Bp. 44, 61; 51, 40). 2, to cry out (45, 33).

ಅಪವರಕ apa-varaka. *An inner apartment, a lying-in-chamber.*

ಅಪವರ್ಗ apa-varga. Getting rid of, quitting (ಬಿಡೋಣ, ತಟ್ಟೋಣ G.). 2, completion, end. 3, *exemption from further transmigration* (Bp. 24, 12; ಮೋಕ್ಷ G.). 4, a gift, donation. 5, restriction to a general rule, exception.

ಅಪವರ್ಜನ apa-varjana. Quitting, abandoning. 2, *a gift, a donation.* 3, = ಅಪವರ್ಗ No 3.

ಅಪವಾದ apa-vâda. *Evil speaking, censure, blame* (Bp. 25, 29), unjust imputation. 2, refutation. 3, exception to a rule. 4, *an order.*

ಅಪವಾರಣ apa-vâraṇa. *Covering, concealment;* a pretence (ವ್ಯವಧಾನ, etc., ನೆವ Mr. 435).

ಅಪವಾರಿತ apa-vârita. *Covered, concealed* (ಸಂವೃತ, etc., ಮುಚ್ಚಲ್ Mr. 441).

ಅಪವಾಹ apa-vâha. Deduction. 2, N. of a vritta (Čh.).

ಅಪವಿತ್ರ a-pavitra. Impure, unclean, as the mind, clothes, vessels, etc. (Bp. 18, 34; 38, 70; 40, 59. 63; My.; B. 4, 165).

ಅಪವಿದ್ಧ apa-viddha. Badly pierced. 2, *rejected, discarded, disowned.*

ಅಪಶಕುನ apa-śakuna. = ಅವಶಕುನ. A bad omen. (My.; Mhr.).

ಅಪಶಬ್ದ apa-śabda. A bad, harsh word (My.; B. 4, 73). 2, *incorrect or ungrammatical language* (ಅಪಭ್ರಂಶ G.).

ಅಪಷ್ಠು apa-sthu. *Contrary, opposite.*

ಅಪಸದ apa-sada. *An outcaste;* a low man.

ಅಪಸರ apa-sara. = ಅಪಸರಣ. 2, excuse, apology. See Bp. 38, 18; 49, 11. 3, Tbh. of ಅಪಸ್ವರ (My.).

ಅಪಸರಣ apa-saraṇa. = ಅವಸರಣ. Going away, moving off, retreating; escaping; removing; egress. See ಅಗ್ಗಳಿಸು 2, ಒಳ ಸೋರ್, ಓಸರಿಸು, ಜಗುಳ್, ತೆ, ನುಣ್ಚು.

ಅಪಸರಿ apa-sari. A person who goes away or astray (Bp. 40, 54).

ಅಪಸರ್ಪ apa-sarpa. = ಅವಸರ್ಪ. *A secret emissary, a spy.*

ಅಪಸರ್ಪಣ apa-sarpaṇa. (= ಅವಸರ್ಪಣ). Gliding or moving off; going back, retreating.

ಅಪಸವ್ಯ apa-savya. *Not left, right* (ದಕ್ಷಿಣ, ಬಲ Mr. 436). 2, *contrary, adverse.*

Digitized by Google

ಅಪಸಾಕ್ಷಿ apa-sâkshi. False witness (C.).

ಅಪಸಿದ್ಧಾಂತ apa-siddhânta. An erroneous conclusion. (My.).

ಅಪಸ್ಕರ apa-skara. *Any part of a carriage*, a wheel, etc. 2, = ರಥಾಗ್ರ, ಕುಬುಗೆಯ್ಯೊ Hlâ. MS.; ಕುಬುಗೆಯ್ Mr. 286. 3, excrements. 4, the anus. 5, the vulva.

ಅಪಸ್ನಾತ apa-snâta. *Bathed or bathing after the performance of a funeral ceremony.*

ಅಪಸ್ನಾನ apa-snâna. *Funeral bathing.*

ಅಪಸ್ಮಾರ apa-smâra. Forgetfulness; one of the sañcâribhâvas (Kâvy. IV, 2, 16). 2, epilepsy (My.).

ಅಪಸ್ವರ apa-svara. = ಅಪಸರ No. 3. An unmusical note or sound (ಗೊಗ್ಗರ G.).

ಅಪಹ apa-ha. Repelling; destroying (Bp. 34, 1; 59, 47). See ತಮೋಽಪಹ, ಮಲಾಪಹ, ಸ್ವಾಪಹ.

ಅಪಹರಣ apa-harana. Taking away, carrying off. 2, destroying. 3, stealing. See ಪ್ರಾಣಾಪಹರಣ.

ಅಪಹರಣೆ apa-haraṇĕ. = ಅಪಹರಣ. (ಅಪಹಾರ Mr. 490). 2, a fine, a mulct (ದಣ್ಡ Mr. 525). ಜೀವದ ಅಪಹರಣೆ (ನಿರ್ವಾಣ Mr. 507).

ಅಪಹರಿಸು apa-harisu. To take away, to remove; to destroy (Bp. 22, 62; 26, 66; 34, 33; 49, 25; 50, 29. 75; 51 sum.: 51, 67; 52, 37; 53, 10; 54, 45. 56. 70; 61, 7; J. 24, 43). 2, to steal, to rob (Nn. 151; B. 2, 52; 5, 91).

ಅಪಹಸನ apa-hasana. Laughing at, deriding, ridiculing, scorn, mockery. See ವಿಕೃತಾಂಗಾಪಹಸನ.

ಅಪಹಸನಕ್ರೋಧ apahasana-krôdha. Scorning wrath. See ಬಸಲ್.

ಅಪಹಸಿತ apa-hasita. Laughed at, scorned, despised (ಅನಾದೃತ, ಅವಜ್ಞಾತ, ಉದಾಸೀನ Mr. 432).

ಅಪಹಸ್ತಿತ apa-hastita. *Thrown away, thrown off, rejected.*

ಅಪಹಾರ apa-hâra. Taking away. 2, stealing; concealing; withholding. 3, *loss through robbery.*

ಅಪಹಾಸ apa-hâsa. = ಅಪಹಸನ. (J. 9, 4; My.).

ಅಪಹಾಸ್ಯ apa-hâsya. = ಅಪಹಸನ. (Bp. 34, 12; 39, 59; 40, 60; 49, 17). 2, to be laughed at (Sk.).

ಅಪಹೃತಿ apa-hriti. Taking away. 2, that has been stolen or robbed (ಉಪ್ಪ, ಕಳವಿನೊಡವೆ Mr. 226).

ಅಪಹ್ನವ apa-hnava. = ಅಪಾಹ್ವ, q. v. *Concealment of knowledge, denial* (= ಅಪಲಾಪ, etc., ಮರೆಹು Mr. 441). 2, secreting; dissimulation. 3, affection, love.

ಅಪಹ್ನುತಿ apa-hnuti. = ಅಪಹ್ನವ. 2, applying a description or simile to other than its obvious application (Kâvy. III, 3, B, 61. 103 seq.). See ಶುದ್ಧಾಪಹ್ನುತಿ.

ಅಪಾ apâ. (= ಅಪ 2). — ಅಪಾಪೋಲಿ. Stray, as cattle; bad, disorderly, unruly, as a man; ill-done, out of order, as a business (My.).

ಅಪಾಕೃತ apa-âkrita. Taken away, removed, void of (Kâvy. III, 1, A, 15).

ಅಪಾಂಗ apa-anga. Wanting or deformed in some limb. 2, *the outer corner of the eye.* 3, *a sectarial mark or circlet on the forehead.*

ಅಪಾಂಗದರ್ಶನ apânga-darśana. *A side-glance, a leer, a wink.*

ಅಪಾಂಗದೇಶ apânga-dêśa. *The place round the outer corner of the eye.*

ಅಪಾಂಗಿ apângi. A woman having such and such an outer corner of the eye. (My.).

ಅಪಾಚಿ apâci. *The south.*

ಅಪಾಚೀನ apâcîna. *Turned away;* looking down or away (ಅವಾಙ್ಮುಖ, ತಲೆವಾಗುಹಂ Mr. 455). 2, *southern.*

ಅಪಾಂಚ್ apa-añc. ಅಪಾಚ್. Going or situated backwards. 2, *southern.* 3, western.

ಅಪಾಟವ a-pâṭava. *Sickness, disease.* 2, awkwardness.

ಅಪಾತ್ಯಯ apa-atyaya. Concealment of knowledge (? ಅಪಹ್ನವ, etc. Mr. 441, originally ಅಪತ್ಯಯ).

ಅಪಾತ್ರ a-pâtra. A worthless or common utensil. 2, an inferior, undeserving or worthless man (Bp. 39, 59; My.); unworthy, unfit. Feminine ಅಪಾತ್ರಳು (My.).

ಅಪಾತ್ರಪಾತ್ರ apâtra-pâtra. A worthless utensil or person (Bp. 40, 63).

ಅಪಾದಾನ apa-âdâna. Taking away; removal; the state of being removed from (ಅವಧಿಯನೊನ್ದರಿಂ ತೊಲಗುವುದು Śmd. 160). 2, the sense of the ablative case (115. 159; Kâvy. I, 2, 2. 3). See ಓಸರಿಸು.

ಅಪಾದಾನಕಾರಕ apâdâna-kâraka. = ಅಪಾದಾನ No. 2. (Śmd. 160 Cm.).

ಅಪಾದಾನವಾಚಕ apâdâna-vâcaka. The ablative case (My.).

ಅಪಾನ apa-ana. *The air which goes downwards and out at the anus* (ಗುದದೊಳ್ ಎಡೆಯಾಡುವ ಅನಿಲ Mr. 51). 2, *the anus.*

ಅಪಾನವಾಯು apâna-vâyu. = ಅಪಾನ No. 1. (ಮಣಿ Nn. 67). See ತಿಣಕು, ಪೂಸು.

ಅಪಾಮಾರ್ಗ apâ-mârga. *The plant Achyranthes aspera* (ಉತ್ತರಣಿ, ಕಿಖರಿ Mr. 128).

ಅಪಾಮ್ಪತಿ apâm-pati. The lord of the waters: *the ocean.* 2, Varuṇa.

ಅಪಾಮ್ಪಿತ್ತ apâm-pitta. The bile of the waters: *fire.*

ಅಪಾಯ apa-aya. Going away. 2, destruction, death. 3, injury, loss (Ch. v. 38). 4, misfortune, evil, ill;—calamity, peril, danger (Bp. 17, 4; 45, 3; 46, 34; My.).

ಅಪಾರ apâra. 1. *The opposite bank of a river.*

ಅಪಾರ a-pâra. 2. A bad shore: a kind of mental acquiescence or indifference. 2, shoreless, unbounded, interminable, very abundant, great (Bp. 3, 45; 36, 29; My.).

ಅಪಾರದರ್ಶಕತ್ವ apâra-darśakatva. Want of transparency, opacity (B. 4, 96; My.).

ಅಪಾರ್ಥ apa-artha. Without any object. 2, unmeaning. 3, incoherent or false argument. (My.).

ಅಪಾವೃತ apa-âvṛita. Open, laid open. 2, covered. 3, *unrestrained, self-willed.*

ಅಪಾಶ್ರಯ apa-âśraya. A refuge, a recourse. 2, *a fence or hedge in front of a building;—an awning spread over a court or yard.* 3, helpless, destitute. See ಮತ್ತವಾರಣ.

ಅಪಾಸಂಗ apa-âsanga. A quiver. (R.).

ಅಪಾಸನ apa-âsana. Throwing away. 2, *killing.*

ಅಪಾಹ್ವ apâhva. A Tbh. of ಅಪಹ್ನವ, q. v. (ಪುಸಿ, ಹುಸಿ; ಸ್ನೇಹ Nn. 158).

ಅಪಿ api. On. 2, near to, towards. 3, *and, and also, moreover, besides* (ಪುನರ್ವಹ, ಮರಳಿ ನುಡಿಹ Nn. 167). 4, *even, though.* 5, *certainly, indeed* (ದಿಟ Mr. 534). 6, *perhaps, likely* (ಪ್ರತ್ಯಕ್ಷಮ್ ಅಲ್ಲದುದು 534). 7, it expresses also *contempt* or wrath (ಮನಕ್ಲೇಶದೊಡನೆ ಅಮರ್ದ ಮುನಿಸು 534; ಮುನಿಸು, ಕೋಪ Nn. 167). 8, and is used in *inquiry* (ಪ್ರಶ್ನೆ, ಬೆಸಗೊಮ್ಬಲ್ಲಿ 167).

Digitized by Google

ಅಪಿಗೀರ್ಣ api-gîrṇa. *Praised.*

ಅಪಿಗೆ apigĕ. = ಅಸ್ಪಿಗೆ No. 2. (S. Mhr.).

ಅಪಿಧಾನ api-dhâna. Covering, concealment. 2, *a cover.*

ಅಪಿನದ್ಧ api-naddha. Tied on (ಬದ್ಧ, ಪಿನದ್ಧ, ಕಟ್ಟು Mr. 457, o. r. ಕೆಯ್ದು). 2, *clothed, accoutred.*

ಅಪಿನಿ apini. = ಅಫಿನಿ, etc. (Č. Bp. 47, 45; My.). ಅಪಿನಿ ತಿನ್ನು, ಲಹರಿ ಏರಿತು (Prv.).

ಅಪಿಸ apisa. = ಅಪಿಸ q. v. See ನೆತ್ತಿಗರಪಿಸ.

ಅಪುತ್ರ a-putra. Not a son. 2, sonless (Bp. 24, 32).

ಅಪುನರ್ಜಾತ a-punarjâta. A creature exempt from transmigration (Bp. 55, 46), or one that is not regenerated.

ಅಪುನರ್ಭವ a-punarbhava. Not occurring or being again. 2, *exemption from further transmigration* (ಅಚಲ, ಮುಕ್ತಿ Nn. 41; ಅಕ್ಷರ, ಮುಕ್ತಿ 75; Bp. 27, 19).

ಅಪುರನ್ಧ್ರಿ a-purandhri. Not intelligent or wise (Bp. 40, 70).

ಅಪುರೂಪ apurûpa. Tbh. of ಅಪರೂಪ. (S. Mhr.).

ಅಪುಷ್ಪ a-pushpa. Not flowering. 2, the glomerous fig tree. (R.).

ಅಪುಷ್ಪಿಕೆ a-pushpikĕ. = ಅಪುಷ್ಪಿಣಿ. (My.).

ಅಪುಷ್ಪಿಣಿ a-pushpiṇi. A female not yet arrived at puberty (My.).

ಅಪೂಪ apûpa. *A cake of flour, meal, etc.* (ಪೂಪ, ಆಯತದ ಪಕ್ವಾನ್ನ Mr. 215).

ಅಪೂಪರ apûpara. Tbh. of ಅಪರೂಪ (? or of ಅಪೂರ್ವ? S. Mhr.).

ಅಪೂರಣಿ apûraṇi. The tree Bombax heptaphyllum. (ಬೂರಗದ ಮರ St. & Pl.).

ಅಪೂರ್ಣಾಙ್ಕ a-pûrṇa-aṅka. A fraction (My.).

ಅಪೂರ್ವ a-pûrva. Unpreceded, unprecedented (ಅಕ್ಷಣಮ್ ಆದ ಕಾರ್ಯ Nn. 101). 2, not having existed before, quite new (ಹೊಸ G.). 3, extraordinary, wonderful, incomparable, unparalleled (Ch. v. 2.; Kâvy. III, 3, B, 108; Bp. 57, 68; ವಂಶ Šm. 57; Kk. 58. 77). 4, not first. 5, strange, inauspicious (ಅಶುಭ Nn. 101).

ಅಪೂರ್ವಕ a-pûrvaka. = ಅಪೂರ್ವ. (Bp. 10, 54).

ಅಪೇಕ್ಷ apêksha. Tbh. of ಅಪೇಕ್ಷೆ. (C.).

ಅಪೇಕ್ಷತೆ apa-îkshatĕ. Desire (Bp. 21, 6; Rsv. 13, 63).

ಅಪೇಕ್ಷಿ apêkshi. Looking to, *considering, respecting.* 2, looking for, expecting, desiring.

ಅಪೇಕ್ಷಿತ apa-îkshita. Looked to, considered. 2, looked for, wished, hoped, required, (looking for; Bp. 6, 29; 24, 16; 35, 19).

ಅಪೇಕ್ಷಿಸು apa-îkshisu. To consider; to expect, to desire, to wish for (Bp. 61, 83; My.; Si. 56. 71; B. 3, 95).

ಅಪೇಕ್ಷಿಸುವಿಕೆ apêkhisuvikĕ. Desiring, desire (Si. 246).

ಅಪೇಕ್ಷೆ apa-îkshĕ. Looking round or about. 2, *consideration, reference, regard.* 3, expectation, hope, desire; —want, need. — ಅಪೇಕ್ಷೆ ಹುಟ್ಟಿಸು. To produce or excite desire (G. 38).

ಅಪೇತ apa-ita. Departed, gone. 2, having retired from, free from. See ಅನಪೇತ.

ಅಪೋಗಣ್ಡ apogaṇḍa. *Having a limb too many or too few.* 2, very timid. 3, a child, infant. 4, not under sixteen years of age.

ಅಪೋಹ apa-ûha. Pushing away. 2, removal of doubt by the exercise of reasoning faculty. 3, arguing. See Kâvy. III, 3, B, 18-20.

ಇತ್ it. = ಇರ್, etc. Two. — ಇತ್ತಟ. Two, or both, banks or sides (Râm. 4, 2, 49). — ಇತ್ತಡ. = ಇತ್ತಟ. (My.; ಎರಡೂ ದಣ್ಡೆ, ಎರಡೂ ಕಡೆ G.). — ಇತ್ತಡಿ. Two, or both, banks (J. 9, 24). — ಇತ್ತಣ್ಡ. Two companies or forces; two parties; two, or both, persons. See Bh. 1, 8, 16; J. 9, 15; 12, 27; 25, 47. 58; 28, 48. — ಇತ್ತರ. = ಇತರ. Two lines or rows (ಎರಡು ಪಂಕ್ತಿ Ct. I, 81); two sides; both sides. See Bp. 5, 45; 16, 10; 18, 62; 24, 12; 38, 17; 43, 25; 61, 64. — ಇತ್ತರಮ್ಬಡಿ. -ಂ-ಬಡಿ. To form two rows; to occupy both sides, to be on both sides (Rsv. 1, after 133; 2, 59; 6, after 24). — ಇತ್ತಲೆ. = ಇತರಲೆ. Two, or both, heads. — ಇತ್ತಲಿಗ. = ಇತ್ತಲಿಯ, q. v. — ಇತ್ತಲಿಗುಯ್ಯ. -ಗುಯ್ಯ. = ಇತ್ತಲಿಯ, ಇತರಲೆ ಹಾವು No. 1, ಎರಡುತಲೆಹಾವು No. 1. The two-headed stick: the snake called Tortrix cylindrophis rufus, a short-tailed earth snake with a depressed rounded head not distinct from neck, and a tail very short, conical and smooth at the end, not venomous (ಅಹೀರಣಿ Hlâ.). — ಇತ್ತಲಿಯ. = ಇತ್ತಲಿಗುಯ್ಯ. (ಅಹೀರಣಿ, ದ್ವಿಮುಖ Mr. 401, o. r. ಇತ್ತಲಿಗ). — ಇತ್ತಲೆಹಾವು. = ಕೊಡಿಕುಮಣ್ಡಲ. (My.). — ಇತ್ತಿಗ. Two tigas, in playing (Bp. 43, 5). — ಇತ್ತೆಱ. = ಇತರಱ. Two manners or kinds (My.; ಎರಡು ಪ್ರಕಾರ G.).

ಇತ್ it. Going. See ಸಮಿತ್.

ಇತ ita. Gone. See ಅತೀತ, ಅನ್ತರಿತ, ಉದಿತ, ಪರೀತ, etc.

ಇತಬಾರಿ itabâri. = ಹಿತಬಾರಿ. Trustworthy (My.; Mhr., H.).

ಇತರ itara. The other (of two), another; *other, different.* 2, *low, vile, vulgar.*

ಇತರತ್ರ itaratra. At another place (My.; Mhr.).

ಇತರಾರ್ಥ itara-artha. The meaning contained in ಇತರ, *i. e.* another thing, something different (Šmd. 392).

ಇತರೇತರ itara-itara. *Mutual, reciprocal.* (Kâvy. III, 3, B, 54).

ಇತರೇತರಕ್ರಿಯೆ itarêtara-kriyĕ. An action or performance in which two or several persons take part (Šmd. 219).

Digitized by Google

ಇತರೇದ್ಯುಸ್ itarê-dyus. *On another or different day.*

ಇತಸ್ itas. ಇತಃ. *From hence, hence.*

ಇತಿ iti. = ಇತ್ತಿ. An affix to form feminines (Šmd. 244. 246). See also ದವಡಿತಿ, ಲಿಂಕಿತಿ.

ಇತಿ iti. 1. (= ಈತಿ 2). *Therefore* (ಕಾರಣ Nn. 93; ಹೇತು Mr. 532). 2, *thus, similarly.* 3, *it is so* (ಇನ್ತೀ ಪ್ರಕಾರ 93; 532). 4, in conclusion, here ends (ಪೂರ್ಣ, ಸಮ್ಪೂರ್ಣ 93; ಅನ್ತ 532). 5, with ಆದಿ: and so on. 6, ನಿಷೇಧ (ಮಾಣಿಸುಹ 93). 7, ಅನ್ತರ (ಬಳಗು 93). 8, ಪೂರಣೆ (ಮುಕ್ತಾಯ 93). 9, ಕುತೂಹಲ (ಆಶ್ಚರ್ಯ 93). 10, ಪ್ರಕಟಾರ್ಥ (93).

ಇತಿ iti. 2. Going. See ಸಮಿತಿ.

ಇತಿಹ iti-ha. Thus indeed (ಪ್ರೇರಣೆ, ಪ್ರೇರಣೆಸುವುದು Nn. 93); *according to tradition* (ಉಪದೇಶ, ಉಪದೇಶಪರಮ್ಪರೆ 93; Mr. 533). 2, heaven (ಊರ್ಧ್ವಲೋಕ, ಸ್ವರ್ಗಲೋಕ 93; ಊರ್ಧ್ವಲೋಕ Mr. 533).

ಇತಿಹಾಸ iti-ha-âsa. So indeed it was. 2, *a traditional account, a legend,* heroic history.

ಇತಿಹಾಸಕಾರ itihâsa-kâra. A writer of itihâsas, a narrator. (My.; B. 5, 45).

ಇತಿಹಾಸಗಾಱ itihâsa-gâṟa. = ಇತಿಹಾಸಕಾರ. (My.).

ಇತು itu. = ಇತ್ತು 1, (ಇದು, ತು 1, etc.; *cf.* ಅತು, ಅತ್ತು 1 & 2). A termination of the third person singular neuter of the imperfect (Šmd. 265), *e. g.* ಮುಟ್ಟಿತು, ಮೆಟ್ಟಿತು (266; C.), ಮಾಡಿತು, ಕೊಟ್ಟಿತು, ಆಯಿತು (C.). In verbs with final ಇ and ಎ it is added directly to this ಇ and ಎ (or rather to short P. ps. of that form, which may be inferred from the common short P. ps. with final ಅ and ಉ), *e. g.* ಉರುಳಿಯಿತು, ಬಡಿಯಿತು, ಹರುಳಿಯಿತು, ಬೆಳೆಯಿತು (C.), which forms are vulgarly contracted into ಉರುಳೀತು (see Prv. s. ತಿರುಳು), ಬಡೀತು (see Prv. s. ಇದ್ದು), ಹರುಳೀತು (see Prv. s. ತೇಗು 3), ಬೆಳೀತು (see Prv. s. ತೊಣ್ಣೆ); see ಈ 5, No. 2. **2**, another form of the pronoun ಇದು, *e. g.* ಬಳ್ಳಿತು, ತಳ್ಳಿತು, ತೋರಿತು, ದೊಡ್ಡಿತು, ಮೆಲ್ಲಿತು, etc. (see ತು 1, No. 2).

ಇತು itu. ನಿಶ್ಚಯ, and ಬೇಱು, ಬೇಱಿಪ್ಪುದು (Nn. 164).

ಇತ್ತ itta. = ಇತ್ತಲ್ (Šmd. 145), ಇತ್ತಲು, ಇತ್ಲು. This side; on this side; in this direction, part or place; to this side; this time; after this, hereafter; further. Declension: ಇತ್ತಣ, ಇತ್ತಣಿಂ (Šmd. 135). ಅತ್ತ ಇತ್ತ ಉತ್ತ ಎತ್ತಂ ಸಾರ್ವರ್ ಇನ್ನು ಅಹಿತರ್ಕಳ್ (145). See Bp. 3, 66; 14, 24; 40, 12; Rsv. 5, 119; Bh. 2, 13, 23 (ಇತ್ತಣ); J. 11, 26; 12, 10; 17, 44; 30, 42; 31, 26. ಇತ್ತಿನ್ದ ಅತ್ತ, ಅತ್ತಿನ್ದ ಇತ್ತ ಹಾರಾಡುವ ಹಕ್ಕೀ ನೋಡು! (B. 2, 5). ಅತ್ತಿನ್ದ ಇತ್ತ, ಇತ್ತಿನ್ದ ಅತ್ತ ತಿರುಗಾಡಿ (B. 4, 43). — ಇತ್ತ ಅತ್ತ. From this side to that side, to and fro. ಇತ್ತ ಅತ್ತ ಹಾರಾಡುತ್ತ (B. 3, 68). — ಇತ್ತ ಕಡೆ. This side; to this side; to this place; in this direction (B. 3, 113. 123). ಇತ್ತ ಕಡೆಗೆ (B. 5, 122). 2, hereafter (C.). — ಇತ್ತಣಂ. (Šmd. 136). A man of this direction, place or time. — ಇತ್ತತ್ತಲ್. -ಅತ್ತಲ್. On both sides (J. 28, 48). — ಇತ್ತಿತ್ತ. -ಇತ್ತ. rep. This side, this side, *i. e.* nearer, quite close by one. ಇತ್ತಿತ್ತ ಬಾ! ಅನ್ದರೆ ಇದ್ದ ಮನೆಯ ಕಿತ್ತು ಕೊಣ್ಡ.— ಇತ್ತಿತ್ತ ಬಾ! ಅನ್ದರೆ ಹೆಗಲ ಮೇಲೆ ಹತ್ತಿ ಕೊಣ್ಡ (Prvs.). 2, in course of time (B. 3, 12. 57. 64; 4, 68). — ಇತ್ತಿತ್ತಲ್. -ಇತ್ತಲ್. = ಇತ್ತಿತ್ತ No. 2 (B. 4, 28).

ಇತ್ತಲ್ itta-al. (Šmd. 145). = ಇತ್ತ, etc. See Bp. 30, 14; J. 2, 45; 14, 4. 24; 23, 50.

ಇತ್ತಲು ittalu. = ಇತ್ತಲ್, etc. (C.; Bp. 31, 29; Bh. 1, 10, 33; J. 10, 31). — ಇತ್ತಲಾಗಿ. -ಆಗಿ. To this side, this way (C.). 2, hereafter, afterwards (B. 4, 19. 28. 55. 196. 207). — ಇತ್ತಲಾಗೆ. -ಆಗೆ. = ಇತ್ತಲಾಗಿ. (S. Mhr.). — ಇತ್ತಲಿನ್ದತ್ತ. -ಅತ್ತ. From this side to that side. ಇತ್ತಲಿನ್ದತ್ತ ಅತ್ತಲಿನ್ದಿತ್ತ . . ಓಡ್ಯಾಡಿ (B. 3, 80).

ಇತ್ತಾಳೆ ittâḷĕ. = ಹಿತ್ತಾಳೆ. (My.).

ಇತ್ತಿ itti. = ಇತಿ. See ಕೊಲ್ಲಟಗಿತ್ತಿ, ಕೋಮಟಗಿತ್ತಿ, ಗವಳಗಿತ್ತಿ, ಗಾಣಗಿತ್ತಿ, ನಟ್ಟವಗಿತ್ತಿ, ನಾಡಿಗಿತ್ತಿ, ಮುದಲಿಗಿತ್ತಿ. *Cf.* the wrong ಗಿತ್ತಿ.

ಇತ್ತಿಲ್ಲೆ ittillĕ. Written information, especially as furnished to government (My.; Mhr. ಇತಲ್ಲಾ).

ಇತ್ತು ittu. 1. = ಇತು, etc. (Šmd. 265), *e. g.* ಅಲ್ಲಾಡಿತ್ತು, ಓಡಿತ್ತು (266), ಒದವಿತ್ತು (64);—ಬಳ್ಳಿತ್ತು, ಕೂರಿತ್ತು, ತೋರಿತ್ತು, etc.

ಇತ್ತು ittu. 2. (fr. ಇರ್ 1, to be). = ಇರ್ದುದು, ಇರ್ದತ್ತು. It was (C.). ನನಗೆ ಸಂಶಯವಿತ್ತೇ ಇತ್ತು (B. 4, 197).

ಇತ್ತು ittu. 3. P. p. of ಈ 9. Having given, etc.

ಇತ್ಥಂ ittham. *In this manner, thus.*

ಇತ್ಯರ್ಥ iti-artha. The sum and substance; the whole matter (Mhr.);—settlement, adjustment, decision (My.).

ಇತ್ಯಾದಿ iti-âdi. *And so on.* ಇತ್ಯಾದಿಗಳು (Si. 327).

ಇತ್ಲು itlu. = ಇತ್ತಲ್, etc. — ಇತ್ಲಾಗಿ. = ಇತ್ತಲಾಗಿ. (C.). — ಇತ್ಲಾಗೆ. = ಇತ್ತಲಾಗೆ. (S. Mhr.).

ಇತ್ವ itva. The letter ಇ (Šmd. 200. 215. 246. 249. 278. 352).

ಇತ್ವರ itvara. Going; a traveller. 2, poor, indigent. 3, low, vile. 4, deficiency, want (My.).

ಇತ್ವರಿ itvari. *An unchaste woman.*

ಇತ್ವವೃತ್ತಿ itva-vritti. The state of being an ಇ (Šmd. 354).

ಇತ್ವಾನ್ತ itva-anta. A term with final ಇ (Šmd. 103).

ಇದ್ id. = ಇರ್, etc. Two. — ಇದ್ದುಗೆ. Two dugĕs, in playing (Bp. 43, 5). — ಇದ್ದೆಸೆ. = ಇರ್ದೆಸೆ. Both directions or sides; on both sides (ಉಭಯತಸ್, ಅಭಿತಸ್ Nr.). ಹದಗಿನ ಇದ್ದೆಸೆ (ಪುಲಿಂಗ, ಮುಂಗ Mr. 408). ಇದ್ದೆಸೆಗೆ (Bp. 32, 34). — ಇದ್ದೊಱೆ. -ತೊಱೆ. A river with two arms (Bp. 32, 32).

ಇದ idu-a14. = ಇದಾ, (ಇದೆ 1, ಇದೋ). Lo! see here! (S. Mhr.; Bp. 48, 28).

ಇದಕೊ idu-akŏ. = ಇದ, etc., ಇದುಕೋ. (J. 16, 25; Dp. 165; My.).

ಇದನ್ತ i-d-anta. A term with final ಇ (Šmd. 203).

ಇದನ್ದೇವ idam-dêva. (Šmd. 100). This god or master.

ಇದನ್ನಿಮಿತ್ತ idam-nimitta. (Šmd. 100). On account of this.

ಇದಮ್ idam. (Šmd. 100). This.

ಇದರು idaru. -ರ್. = ಇದಿರ್, etc. (C.). — ಇದರು ನೋಡು. To look straight at a person, etc., *e. g.* ಅವನ ಇದರು ನೋಡು (C.). 2, to expect (My.). — ಇದರು ಮಾಡಿಸು. = ಇದುರು-. (S. Mhr.).

ಇದಾ idu-â5. = ಇದ. (S. Mhr.; Prll. 3, 29; T., Tu. ಇನ್ದಾ).

ಇದಾನೆ idânĕ. (fr. ಇರ್ದಪನು or ಇರ್ದಹನು-ಎ 3). = ಇದ್ದಾನೆ. He is (My.). ಇದಾಳೆ, she is (My.). Plural ಇದಾರೆ, they are (Čd. 14. 192. 193. 194. 195. 197. 203).

Digitized by Google

ಇದಾನೀಮ್ idânîm. *Now, at present.*

ಇದಿಗೋ idu-igô. = ಇದರೊ. (C.; Tĕ.).

ಇದಿರ್ idir. = ಇದಿರು, ಇದಿರು, ಇದುರು, ಎದರು, ಎದಿರ್, ಎದುರ್, ಎದುರು. That which is opposite; the front; in front; that is hostile; opposition (ಮುನ್ತೆ Šmd. 53; ಪರ 62. 65. 70. 274; ಮುನ್ದೆ 53. 69. 71. 129. 223 Cm.; ಅಗ್ರ Mr. 516; Nn. 82; ಅಗ್ರತಸ್, ಪುರತಸ್, ಪುರಸ್, ಪುರಸ್ತಾತ್ Nr.; ಮೊದಲು Šm. 117; T. ಎದಿರ್; Tĕ., Tu. ಎದುರು). ಇದಿರೊಳ್ ಪಣ್ತ ಅರಪೆ (Šmd. I). ಇದಿರ (274). ಇದಿರಿನೊಳ್ (Šm. 117). ಇದಿರಿನಲ್ಲಿ (Nn. 82). ಇದಿರಲಿ (Bh. 2, 13, 45). ಇದಿರಲ್ಲಿ (Šmd. 192 Cm.). ಇದಿರೆ (Bp. 55, 42). ಇದಿರೆ ನಿಲ್ (J. 11, 11). ಇದಿರಂ ಬಗೆಯದವಂ (ಅದುಷ್ಟ Mr. 237). See Bp. 14, 24; 60, 29; Rśv. 13, 87. — ಇದಿರಯ್. -ಅಯ್. To go or come to meet (Bp. 37, 70). — ಇದಿರಾಗು. -ಆಗು. To become opposite or facing, to be with the face towards, to face, to go towards (in a friendly or hostile manner). ಸರೇಘಮ್ ಇದಿರಾಗೆ (Šmd. 71). ಹಿರಿಯರಿಗೆ ಇದಿರಾಗಿ ಎದ್ದುವುದು (ಅಭ್ಯುತ್ಥಾನ, ಗೌರವ Nr.). ಕನಸ್ಸು, ಇದಿರಾಗಿ (Bp. 61, 39). ಅವನಾನೊಬ್ಬನು ಹಗೆಯ ಗೆಲಲು ಸಮರ್ಥನಾಗಿ ಇದಿರಾಗಿ ನಡೆದಾನು, ಆತನು ಅಥಮಿತ್ರ್ಯ, etc. ಎನಿಸುಗು (Nr.). ಅವನ ಇದಿರಾಗಿ ನಡೆ ತನ್ದು (Bh. 2, 4, 7). ಪಥದೊಳ್ ಇದಿರಾಗಿ ಬನ್ದು (J. 31, 28). ಇದಿರಾಗ ಬನ್ದು, ಆರತಿಯನ್ ಎತ್ತಿ (31, 31). ಇದಿರಾದವರಂ (Č. Bp. 11, 11). ಬನ್ದು, ತಾವು ಇದಿರಾಗಿ, ಕುಸ್ತೀನನ್ದನರ ಪೊಗಿಸಿದರು (Bh. 1, 8, 83). See J. 11, 7; 13, 21; 14, 8. 24. 28; 16, 11; 25, 15; 7, 57. — ಇದಿರಾನ್. -ಆನ್. To oppose (Bp. 21, 38. 40; J. 2, 39. 41; 8, 35). — ಇದಿರಿಕ್ಕು. -ಇಕ್ಕು. To put in front, opposite, etc.;—to oppose (J. 5, 29; 6, 35). — ಇದಿರಿಡು. -ಇಡು. = ಇದಿರಿಕ್ಕು. (J. 4, 29). — ಇದಿರಿರ್. -ರು. -ಇರ್. To be in front or opposite (Šmd. 53. 192. 203. 223); to be hostile (see s. ಪರರಾಷ್ಟ್ರ). — ಇದಿರುತ್ತರ. -ಉತ್ತರ. A repugnant answer, contradiction (J. 6, 26; My.). — ಇದಿರೆತ್ತು. -ಎತ್ತು. To commence the onset (Abh. P. 10, 20). — ಇದಿರೇರಿಸು. -ಏರಿಸು. To cause to ascend what is opposite (Rśv. 6, after 11; 13, 82). — ಇದಿರೇರು. -ಏರು. To rise or go successfully against a current of water, a strong wind, etc. (Bp. 50, 38). — ಇದಿರೇಳ್. -ಏಳ್. -ಏಳು. To rise or stand up in front of or before (Bp. 4, 66; 5, 61; Rśv. 4, 45; Č. Bp. 47, 16; J. 16, 24; 17, 31). ಇದಿರೆದ್ದು ಕಾಸಿ ಕೊಳುಹ (ಅಭಿಹಾರ, ಅಭಿಗ್ರಹಣ Nr.). ಇದಿರೆದ್ದು ಕಾದುಹ (ಅಭಿಯೋಗ, etc. Nr.). ಇದಿರೇಳ್ವುದು (ಅಭ್ಯುತ್ಥಾನ, ಗೌರವ Hlà.). 2, to stand erect, as hair. ನವಿರ್ ಇದಿರೆರ್ದುದ ತನುವಿನೊಳ್ ಪರಿರಾಜಿಸಲು (Râghe. 17, 64). — ಇದಿರೇಳುಹ. -ಏಳುಹ. Rising up to meet or face, setting about (ಪ್ರತ್ಯುತ್ಕ್ರಮ, ಪ್ರಯೋಗ Nr.). — ಇದಿರೊಡ್ಡಣ. -ಒಡ್ಡಣ. The hostile army (Abh. P. 10, 19). — ಇದಿರೊಡ್ಡು. -ಒಡ್ಡು. To raise obstacles; to oppose (My.). — ಇದಿರೊನ್ದು. -ಬನ್ದು. To come to meet out of respect or love (Bp. 31, 29). — ಇದಿರ್ಗೊಳ್. -ಕೊಳ್. ಇದಿರ್ಗೊಳ್ಳು. To come to meet out of respect or love. ಶಿವನನ್ ಅವನ್ ಇದಿರ್ಗೊಣ್ಡಂ (Rśv. 13, 50). ಪಾರ್ಥನನ್ ಇದಿರ್ಗೊಳ್ವ ಸಮ್ಭ್ರಮದೊಳು (J. 33, 19). See Grj. 4, 8; Bp. 4, 5; 5, 11; Rśv. 6, after 137; J. 2, 47; 4, 66; 7, 17. 22; 9, 21; 24, 71; 27, 28; 29. 44; 33, 22. — ಇದಿರ್ಗೊಳಿಸು. -ಕೊಳಿಸು. To cause to come to meet (J. 29, 10). — ಇದಿರ್ವರ್. -ರು. -ಬರ್. To come to meet, to come and meet, out of respect or love. ಇದಿರ್ವರ್ಪ ಪ್ರೇಮಮ್ ಅಪ್ಪಿ ಕೊಣ್ಡಂ (Šmd. 294). See Bp. 53, 21; 57, 60; Rśv. 4, 14; J. 28, 59; 29, 32; 30, 48. 2, to come or go successfully against a current of water, etc. (Bp. 50, 40).

ಇದಿರಿಸು idirisu. = ಇದಿರ್ಚು, etc. (My.).

ಇದಿರು idiru. = ಇದಿರ್, etc. — ಇದಿರುಂಬರ್. -ಉಂಬರ್. = ಇದಿರುವರ್. (Bp. 43, 72). — ಇದಿರುವರ್. -ಬರ್. = ಇದಿರ್ವರ್. (Bp. 27, 74). — ಇದಿರುಗೊಳ್. -ಕೊಳ್. = ಇದಿರ್ಗೊಳ್. (Bp. 24, 42; 53, 24). — ಇದಿರು ಮಲೆ. To fight against, to oppose (Bp. 61, 32).

ಇದಿರ್ಚು idirču. = ಇದಿರಿಸು, ಎದರಿಸು, ಎದಿರಿಸು, ಎದುರಿಸು. To face (generally in a hostile manner); to oppose, to withstand; to come into hostile contact (ನೋಳ್ಪ Kk. 87). ಇದಿರ್ಚಿ ನಡೆದಂ (ನೋಳ್ಪದಂ Šmd. II). ರಥಂ ರಥಂಗಳೊಡನೆ ಇದಿರ್ಚಿದುವು ಆಗಳ್ (Abh. P. 13, 68). See Grj. 6, 76; 10, 74; Rśv. 6, after 11; 13, after 83; 13, 85. 88. — ಇದಿರ್ಚಿದಿರ್ಚು. rep. (Šmd. 231; Rśv. 5, 121).

ಇದು idu. (= ಇತು, etc.), ಇನ್ 3. Proximate demonstrative pronoun neuter (Šmd. 96. 111): this, it. ಅದು ಇದು ಉದು (97). ಆಳ್ ಇವಂ, ಆಳ್ ಇದು (109). ಓಪಾಳಿ ಇವಂ, ಓಪಾಳಿ ಇದು (111). ಇದು ಕಳತ್ರಂ, ಇದು ಜನಂ, ಇದು ಲೋಕಂ, ಇದು ಅಪತ್ಯಂ (187). ಇದು ಪೂರ್ವಪ್ರಕರಣಂ (61). ಈ is used as a substitute of ಇದು when it is an adjective pronoun (169. 202). Some examples wherein ಈ may be substituted for ಇದು, are *e. g.* ಇದು ಉತ್ಸಹಂ (J. 31, 29), ಇದು ಕಾರಣ (Bp. 27, 75; 33, 5; 43, 61), ಇದು ದಿವಸ (41, 12), ಇದು ನಿಮಿತ್ತಂ (2, 9; 3, 29; 22, 65; 23, 42), ಇದು ಮೇರೆ (B. 2, 36), ಇದೇ ಮೇರೆ (B. 3, 60), ಇದೇ ಈಗ (= ಈ ಈಗಲೇ, even this moment, B. 4, 136. 138), ಇದು ಪರಿಯಿಗೆ (Sl. 403), ಇದು ಪರಿಯಿಗೂ (403. 407), ಇದು ಪರಿಗೆ (B. 4, 198). ಬಾಲಕವಧಮ್ ಇದಂ (Rśv. 13, 99).—ಅದುಎದುವುದುವೆಮ್ಬ ಇದರ ಅನ್ತ್ಯದ ಉಕಾರಂ (Šmd. 181). ಇದುವುಂ (13). ಇದುವೆ (117; Bp. 1, 59; 2, 36; 3, 83; 39, 65; 41, 8; 47, 5). ಇದುವೆನುತ (Bp. 41, 19). ಇದೆ (Bp. 41, 19; Rśv. 13, 45). ಇದೇ (Si. 442). ಇದಾರ ಆಳ್ ಇವಂ? (Bp. 47, 33). Declension (Šmd. 134. 135): ಇದಂ (3. 181; Rśv. 13, after 96), ಇದ (Bp. 27, 24), ಇದನು, ಇದನ್ನು (C.); ಇದರ (C.), ಇದರೊಳ್ (Šmd. 61. 298); ಇದರ್ಕೆ (135), ಇದಕ್ಕೆ (C.), ಇದಕೆ (C.; Bp. 24, 70; 40, 30; Kk. 3); — ಅವು, ಇವು, ಉವು (Šmd. 117), ಇವು (117. 113; C.), ಇವುಗಳು (C.; Si. 330); ಇವಂ (Šmd. 41. 42), ಇವನು, ಇವನ್ನು, ಇವುಗಳನ್ನು (C.); ಇವರ (Šmd. 109. 179. 185), ಇವುಗಳ (C.), ಇವರೊಳ್ (Šmd. 24. 37. 392), ಇವರಲ್ಲಿ (235 Cm.), ಇವುಗಳಲ್ಲಿ (C.); ಇವರ್ಕೆ (Šmd. 191), ಇವಕ್ಕೆ, ಇವಕೆ, ಇವುಗಳಿಗೆ (C.).—ಇದೊನ್ದು ಸಾರಿ (B. 4, 45). ಒಳ್ಳೆಯನ್ ಇರದ ಊರು, ಕಳ್ಳನ ಒಡನಾಟವೂ, ಸುಳ್ಳನ ಮಾತು, ಇವು ಮೂರು ಕೆಸರೊಳಗೆ ಮುಳ್ಳು ತುಳಿದನ್ತೆ (Sp.). ಇವೆರಡುಂ (Bp. 22, 64). ಇವೆರ್ದು (= ಇವೆರಡು, B. 5, 74). ಇವೇ ಕಾರಣಗಳನ್ದ (= ಈ ಕಾರಣಗಳನ್ದಲೇ, 5, 170). — ಇದು ತಾನ್. -ನು. Even this. ಲಿಂಗಾರ್ಚನಕ್ಕೆ ಇದು ತಾನ್ ಅವಸರಂ (Bp. 47, 55; My.).

ಇದುಕೊ idu-kŏ. = ಇದರೊ. (My.).

ಇದುಗೊ idu-gŏ. = ಇದುಕೊ. (My.).

ಇದುರು iduru. = ಇದಿರ್, etc. (My.). — ಇದುರುವಾದಿ. A contradicter (My.). 2, a defendant (in law, My.). — ಇದುರುವಾದಿಸು. = ಇದರು-. To contradict (My.). 2, to plead as a defendant, to contend (My.).

ಇದೆ idu-ĕ3. 1. (ಇದೇ). = ಇದ, ಇದಾ. Lo! see here! just now! (C.; Tĕ.; Bp. 5, 11; 24, 59; 29, 8. 30; 31, 7;

Digitized by Google

39, 40; 45, 37; 47, 42; 48, 8; 51, 80; 53, 25; 55, 30; 57, 62; 59, 3. 10; J. 2, 46; B. 2, 7).

ಇದೆ idĕ. 2. (fr. ಇರುದು-ಎ3; *cf.* ಅದೆ4). It certainly is, it is, there is, is (C.). See *e. g.* Bp. 5, 57; 16, 5; 17, 2; 29, 5. ಮಾಸಿ ಇದೆ, ಆಗಿ ಇದೆ (B. 1, 6); ಉಕ್ಕಾಗಿ ಅದೆ (2, 20); ಬಿಟಿಕೆಗೊಣ್ಡು ಇದೆ (Si. 19); ಪಡೆದು ಇದೆ (53). 2, ಇದೆ is used to form the third person singular neuter of the present (C.). ಉಬ್ಬರಿಸುತ್ತಲಿದೆ (Bp. 15, 22), ಉಬ್ಬುತ್ತಲಿದೆ (15, 28), ಗುಡುಗುಡಿಸುತ್ತಿದೆ (18, 40), ಸುರಿವುತಿದೆ (18, 51; see also 24, 42; 31, 27; 56, 30; 59, 1). ಕೆಮ್ಮು ಮೂಡುತ್ತ ಇದೆ, etc. (Rsv. 13, 45). ತಿರುಗುತಿದೆ (J. 3, 24). See its plural ಇವೆ.

ಇದೋ idu-ŏ3. = ಇದಾ, etc. (ಅಹೋ Mr. 536; C.; T.).

ಇದ್ದಲ್ iddal. ಇದ್ದಲು. = ಇಜ್ಜಲು, ಇದ್ದಲಿ. Charcoal (My.; T. ಇರುನ್ದು, ಇರುನ್ದೈ, M. ಇರುನ್ನಲ್). ಚಾರುಚನ್ದ್ರೋತ್ಪಲ ರಚಿತಸೋಪಾನರತುನಾವಳಿಯ ರಾಶಿಗಳ್ ಇದ್ದಲಾದವು ಬಿದ್ದ ಕಿಡಿಗಳಿ (Bh. 1, 20, 54). ಇದ್ದಲು ಮಸಿಯನ್ತಾ ಮೆಯ್ಯು ಉಜ್ಜ ಉಜ್ಜ ತೊಳದರೂ ಇದ್ದ ರೂಪವಲ್ಲದೇ ಪ್ರತಿರೂಪವಾಗದು (Prv.). See ಪಾವಿದ್ದಲ್.

ಇದ್ದಲಿ iddali. = ಇದ್ದಲ್. (C.; ಅಂಗಾರ Si. 308). ಇದ್ದಲೀ ಬಣ್ಣ (B. 1, 4).

ಇದ್ದಾನು iddânu. The common form of ಇದ್ಧಾನು. He may be, he perhaps is, (he is likely to be; C.). Conjugation: ಇದ್ದೇನು, ಇದ್ದೀ (B. 2, 47), ಇದ್ದಾಳು, ಇದ್ದೀತು (B. 3, 54), etc.

ಇದ್ದಾನೆ iddânu-ĕ3. = ಇದ್ಧಾನೆ, q. v. (C.). *Cf.* ಈದಿ = ಇದ್ದಿ, *i. e.* ಇದ್ಧಿ.

ಇದ್ದು iddu. = ಇರ್ದು. P. p. of ಇರು 1, to be. ಹೆತ್ತವಳ್ ಇದ್ದ ಮನೆ (ಅರಿಷ್ಟ, ಸೂತಿಕಾಗೃಹ Nr.). ಇದ್ದನ್ತೆ (Bp. 58, 56; 60, 25). ಇದ್ದ ಊರ ಹಗೆ ಸಲ್ಲ, ಕದ್ದು ಕೊಮ್ಬುವರ ನೆರೆ ಸಲ್ಲ.— ಇದ್ದ ತಂಗಳು ನನಗೆ ಇಕ್ಕು, ನಿನಗೆ ಎಲ್ಲಿಗೂ ಹಸಿವಿಲ್ಲದ ಹಾಗೆ ಮಾಡುತ್ತೇನೆ.— ಇದ್ದದ್ದು ಹೋಗಲಾಡಿಸಿದ್ದಲ್ಲದೆ ಕಲಿತ ಬುದ್ಧಿ ಅಲ್ಲಾ.— ಇದ್ದದ್ದೂ ಹೋಯ್ತು ಮದ್ದಿನ ಗುಣ.— ಇದ್ದ ಮಕ್ಕಳಿಗೆ ಕೂಟಿಲ್ಲ; ಮತ್ತೊನ್ದು ಕೊಡೋ, ಶಿವರಾಯ!— ಇದ್ದ ಮತಿ ಹಾಟಿತೋ, ಸಿದ್ಧಿಗನೇತ?— ಇದ್ದ ಮನೆ ಬಿದ್ದು ಹೋದರೆ ಗೆದ್ದು ಕೊಣ್ಡ ರಾವುತ.— ಇದ್ದಲ್ಲಿ ಇರುವದಿಲ್ಲ, ಬಿದ್ದ ಗೋಡೆ ಹಾಕುವದಿಲ್ಲ.— ಇದ್ದವರು ಇದ್ದ ಹಾಗೆ (ಉಟಿದರು), ಸಿದ್ದಾದೇವಿಗೆ ಸಿಡಿಲು ಬಡೀತು.— ಇದ್ದವರು ಮೂವರು, ಕದ್ದವರು ಯಾರು? (Prvs.). ಶರೀರದಲ್ಲಿ ಆರೋಗ್ಯವಿಲ್ಲದಿದ್ದರೆ ಇತರ ಸೌಖ್ಯಗಳು ಇದ್ದೂ ಇಲ್ಲದ ಹಾಗೇ ಸರಿ (B. 4, 24). By means of ಇದ್ದು a subjunctive mood is formed, *e. g.* ಮರದ ಮೇಲಿನ್ದ ಬಿದ್ದಿದ್ದರೆ ಸತ್ತು ಹೋಗುತ್ತಿದ್ದಿ, if thou hadst fallen from the tree, thou woudst have died (B. 1, 9). See further B. 1, 20. 21; B. 2, 24. 40; B. 3, 19. — ಇದ್ದಕ್ಕಿದ್ದ ಹಾಗೆ. Just as it was, just as they were, etc. (C.; B. 3, 44). 2, without an apparent cause (C.). — ಇದ್ದಿದ್ದು. rep. (Bp. 47, 7. 18). — ಇದ್ದೇ ಇರು. To exist indeed or certainly, etc. (C.; B. 5, 227).

ಇದ್ಧಾನು iddhânu. = ಇರ್ದಪನು or ಇರ್ದಹನು, ಇದ್ದಾನು, q. v. In opposition to ಇದ್ಧಾನೆ (see ಅದಾನು) this term means "he perhaps is", etc.

ಇದ್ಧಾನೆ iddhânu-ĕ3. = ಇದಾನೆ, ಇದ್ದಾನೆ. He is indeed, he certainly is, he is (C.; B. 2, 24. 34). Conjugation: ಇದ್ಧೇನೆ, I am; ಇದ್ಧೀ or ಇದ್ಧಿ, thou art; ಇದ್ಧಾಳೆ, she is (B. 2, 7; 4, 137); ಇದೆ, it is; ಇದ್ಧೇವೆ, we are; ಇದ್ಧೀರಿ, you are (B. 1, 15); ಇದ್ಧಾರೆ, they are; ಇದ್ಧಾವೆ, they are (B. 3, 58. 69, or ಇವೆ).

ಇಧ್ idh. Kindling; blazing. See ಸಮಿಧ್.

ಇಧ್ಮ idhma. *Fuel.*

ಇಧ್ರ idhra. One who kindles. See ಅಗ್ನೀಧ್ರ.

ಇನ್ in. 1. = ಇರ್, etc. Two. — ಇನ್ನೂಱಾ ಅಯ್ವತ್ತು. Two hundred and fifty (B. 4, 159). — ಇನ್ನೂಱು. Two hundred (C.).

ಇನ್ in. 2. = ಇಂ (ಇಜ಼್), etc. Sweetness, etc. — ಇನ್ದುಟಿ. -ತುಟಿ (Šmd. 214, or ಈನ್ದುಟಿ). A sweet lip. — ಇನ್ದೋಳ್. -ತೋಳ್. (Šmd. 143. 214, or ಈನ್ದೋಳ್). A nice arm. — ಇನ್ನುಣಿಸು. -ನ್-ಉಣಿಸು. (Šmd. 214). A sweet meal.

ಇನ್ in. 3. = ಇದು. — ಇನ್ತನಕ. Till now (My.).

ಇನ ina. *A master, a lord, a king* (ಭೂಕಾನ್ತ, ಅರಸು Nn. 120). 2, *a wealthy or powerful man.* 3, *the sun* (ಭಾನು, ಸೂರ್ಯ 120). 4, the universal soul (ಪರಮಾತ್ಮ 120). 5, a husband (G.). 6, N. of a metrical foot (Čh.).

ಇನಂ inam̂. = (ಇನೆಗಂ), ಇನ್ನಂ2. That (this) time, at the time when (Šmd. 293); so long as; till. See Šmd. 294. 295. 64. 79. 81. 135. 136. 173. 259. 282; Rsv. 6, after 32; 6, 34; 6, after 116; J. 28, 20; Abh. P. 13, 75; Bhn. 2. *Cf.* ಅನ್ನ 2.

ಇನಕುಮಾರ ina-kumâra. Saturn (My.). 2, Yama (My.). 3, Sugrîva (My.). 4, Karṇa (My.).

ಇನಕುಲ ina-kula. The family or race of the sun, the solar race of kings (Šmd. 275; Bp. 50, 17).

ಇನಜ ina-ja. = ಇನಕುಮಾರ. Yama (Bp. 46, 78). 2, Karṇa (J. 2, 40).

ಇನಜಾತ ina-jâta. Yama (Mr. 49).

ಇನತನುಜ ina-tanuja. = ಇನಕುಮಾರ. (My.).

ಇನರಿಪು ina-ripu. Râhu (Mr. 39).

ಇನವಿರಹಿಣಿ ina-virahiṇi. She who is separated from her master or husband (Rsv. 11, 10).

ಇನಾಗಮ in-âgama. The augment ಇಂ (Šmd. 132. 133).

ಇನಾನ್ವಯ ina-anvaya. = ಇನಕುಲ. (Rsv. 4, 5).

ಇನಾಮ inâma. = ಇನಾಮು. (B. 5, 185; Mhr., H.).

ಇನಾಮತಿ inâmati. Land assigned either in favour or charity, or compensation of the duties of hereditary officers (My.; H.).

ಇನಾಮು inâmu. = ಇನಾಮ. A grant in perpetuity without conditions; a grant in general; a present, a gift (C.).

ಇನಾಮುದಾರ inâmu-dâra. A holder of an inâm (C.; Mhr.).

ಇನಾಯತು inâyatu. Favour, grace: a grant from a superior (My.; Br.; Mhr., H.). ಇನಾಯತುನಾಮೆ, a letter of favour (My.; Mhr.).

ಇನಿ ini. = ಇನ್1. Sweetness; pleasantness, charm, loveliness. — ಇನಿದು. (Šmd. 95. 110). That is sweet, etc. (ಇಷ್ಟ Čt. I, 52). 2, ambrosia (ಅಮರ್ದು, ಸೊದೆ, ಅಮೃತ Kk. 10*a*). ಇನಿದು ಅಪ್ಪ ಧ್ವನಿ (ಕಲ Hlâ.). ಇನಿದಂ ನುಡಿವವ (ಶ್ಲಕ್ಷ್ಣ, etc. Hlâ.). ಪೂಗಳ ಇನಿದು (ಮಕರನ್ದ Mr. 108). See Šmd. 69; Čh. v. 16; Bp. 42, 25; 60, 49; Rsv. 2, 48. — ಇನಿದುಗಱೆ. -ಕಱೆ. To rain ambrosia (Rsv. 14, after 106). — ಇನಿಯಂ. -ಅಂ3. (Šmd. 110). = ಇನಿಯಂ. A beloved man; a husband. See

Digitized by Google

Śmd. 68. 73. 184; ನುಡಿವೆಣ್ಣೆನಿಯ. ಯಾವರಸವನ್ ಊಡಿದ ನಿಗ ಪದ ಒಳೆಗಳ, ಒಲಿಗಳ ಮಿಣ್ಣೆವೆಣ್ಣತಿಯರ್ ಇನಿಯರ್ಗೆ ಹರುಷಮಂ ಪುಟ್ಟಿಸುತೆ ನಡೆ ತನ್ದರು (Râghc. 17, 65). — ಇನಿಯರ್ವು. Plural of ಇನಿಯ. ಇನಿಯರ್ವು ವಿಷಯಸುಖಂ ನಂಜನ ಸವಿಪೋಲ್ (Šmd. 117). — ಇನಿಯಳ್. -ಅಳ್ 4. (Šmd. 110). A beloved woman; a wife (ಪ್ರಿಯತಮೆ Kk. 30; ನಲ್ಲಳ್, ಒವಳ್, ಕಾದಲೆ Šm. 74). — ಇನಿವಣ್. -ಪಣ್. A sweet ripe fruit (Šsv. 1, 18). — ಇನಿವಾತು. -ಮಾತು. A sweet or lovely word. See Rśv. 2, 35; 11, 165; 13, 104; J. 18, 20. — ಇನಿವಿರಿ. -ಬಿರಿ. Pleasantness, or welfare, to burst, separate, or go away: to become unpleasant (Abh. P. 7, 14; 10, after 51; 15, 79). — See ಇಂ (ಇಚ್).

ಇನಿತು initu. (= ಇನಿತುಟು), ಇನಿತ್ತು. ಇನಿಸು, (ಇಷ್ಟು, etc.). A proximate demonstrative noun and pronoun (Šmd. 121. 122. 243; Kk. 61; Tu. ಈತು). This much, this measure, etc. (see ಅನಿತು, of which it is the proximate form). ಇನಿತರಿಂ (Šmd. 135). ಇನಿತರೊಳ್ (Bp. 40, 24). ಇನಿತರೊಳಂ (Šmd. 160. 179). ಇನಿತು ಚಿನ್ತಿಸಲ್ ಏಕೆ? (Bh. 1, 8, 32). ಇನಿತಲ್ಲಮಂ (J. 3, 41). ಇನಿತೊನ್ದು (Šmd. 73; Rśv. 13, 27; cf. ಒನ್ದನಿತು). ಇನಿತಾದೊಡಂ (Bp. 58, 20). See Bp. 2, 34; ಒನ್ದನಿತು, ಅವದನಿತು. — ಇನಿತನೆಯ. -ಅನೆಯ. (Šmd. 243). Amounting to this much. — ಇನಿತನೆಯಂ. -ಅನೆಯಂ. (243). A man of so much (power, influence, rank, etc.) as this or these. — ಇನಿತಿನಿತು. rep. See Bp. 2, 34; 13, 13; 22, 66; 35, 26; 38, 38; 54, 57. — ಇನಿತು. -ಉ 9. All this or these. 2, although only so much as this, a little, a trifle. See Bp. 2, 18; 24, 61. 62; 28, 35; 43, 85; 45, 52; 48, 25; 57, 16. 80; 53, 51; 60, 49; Rśv. 8, 122. ಇನಿತನು = ಇನಿತುಮಂ (Bp. 8, 42). — ಇನಿತುಂ. -ಉಂ 1. All this or these (Šmd. 51). 2, a little. See Bp. 1, 56; 46, 60; 48, 5; 60, 31. ಇನಿತುಮಂ (Bp. 5, 29; 53, 37. 48; 61, 40), ಇನಿತುವಂ (61, 56), ಇನಿತುವುಂ (2, 43; 24, 70; 28, 4). — ಇನಿತುವುಂ. -ಉಂ 1. = ಇನಿತುಂ (Jns. 42, 12). — ಇನಿಬರ್. (Šmd. 122. 123). So many persons (as these). ನಿಮ್ಮನಿಬರಂ (Bp. 57, 80). ಎಮ್ಮನಿಬರನು (Bh. 1, 8, 57). See Bp. 39, 59. 61; 44, 39; 50, 51; 51, 52; 57, 80. ಇನಿಬರುಂ (58, 42).

ಇನಿತುಟು initutu. = ಇನ್ತುಟು. (J. 13, 19).

ಇನಿತ್ತು inittu. = ಇನಿತು. (Kâvy. I, 4, 33-38).

ಇನಿಬರ್ inibar. See s. ಇನಿತು.

ಇನಿಸು inisu. = ಇನಿತು. (My.). ಬಗೆಪೊಡಮ್ ಇನಿಸು ಇರ ಅದೆ (Šmd. 73). ಮಡಿಸೊನ್ದಿದ ಪುಲಿಯನ್ ಅಗಳ್ ಇನಿಸಂ ಪೋಲ್ಗುಂ (288). ಮತ್ತಂ ಇನಿಸಾನುಂ ಬೇಗದೊಳ್ (Lîlv. 3, after 2). ಇನಿಸಾನುಂ ಬೇಗಮ್ ಇರ್ದು (Rśv. 13, after 96). ಬಿನ್ನನೆಯು ಬಿನ್ನಗೆಯುಮ್ etc. ಎನ್ದು, ಮೌನಕೆ ಇನ್ತು ಇನಿಸು ಪೆಸರ್ ಅಕ್ಕುಂ (Kk. 50). See Čh. v. 60; Kâvy. III, 3, 35; Grj. 3, 77; Šsv. 1, 18.

ಇನು inu. = ಇನ್ನು. (Bp. 18, 88).

ಇನೆ inĕ. 1. = ಇನಿ. — ಇನೆಯಂ. = ಇನಿಯಂ. (Bp. 11, 47; 24, 8; 35, 25. 26; 42, 38; 44, 54; 47, 7. 49-53; J. 3, 13; 11, 18. 19; see ದಾಸವೆಣ್ಣೆನೆಯ). — ಇನೆಯಳ್. = ಇನಿಯಳ್. (Bp. 24, 8; 27, 61; 44, 54; J. 8, 24; 11, 12).

ಇನೆ inĕ. 2. = ಇನ್ನೆ. — ಇನೆಗಂ. -ಗಂ. = ಇನಂ q. v., ಇನ್ನೆಗಂ. (ಅವಧಾರ್ಯ Kk. 69). See Šmd. 293. 294. 295; Abh. P. 13, 60; Rśv. 13, after 96.

ಇಙ್ಕಾರ್ inkâr. = ಇಂಕಾರ್. (My.).

ಇನ್ತ im4-ta2. 1. = ಇನ್ತಾ 1, ಇನ್ಥ, ಇನ್ತಂ, ಇನ್ತವು, ಇನ್ತೆ. ತಾಯಿಗಿನ್ತ ಹಿತವನ್ತರು ಇಲ್ಲ, ಸಕ್ಕರೆಗಿನ್ತ ಸವಿ ಇಲ್ಲ.—ಆಕಾಶಕ್ಕಿನ್ತ ಎತ್ತರವಿಲ್ಲ, ಭೂಮಿಗಿನ್ತ ಅಗಲವಿಲ್ಲ (Prvs.). ಕುದುರೆಗಳಿಗಿನ್ತ ಕತ್ತೆಗಳೇ ಬೇಕು (B. 3, 49). (ಸಿಂಹಲದ್ವೀಪದಲ್ಲಿ) ಮಳೆಗಾಲ ನಮ್ಮಲ್ಲಿಗಿನ್ತ ಹೆಚ್ಚು (B. 4, 205). ಅದಕ್ಕಿನ್ತಲೂ ದೇವಮಾನ ಎಂಟಪ್ಪು ಹೆಚ್ಚು (Si. 44). ಶತ್ರುವಿಗಿನ್ತಲೂ ತಾನು ಬೆಚ್ಚಿ ಇರುವಿಕೆ (263). ರಾತ್ರಿಕ್ಕಿನ್ತ (sic! S. Mhr.; B. 5, 253). *Cf.* ಅಕಿನ್ತ, ಅಕ್ಕಿನ್ತ, and see ಇಂ 4.

ಇನ್ತ inta. 2. = ಇನ್ಥ, etc. (B. 5, 53; My.). — ಇನ್ತವರು. -ಅವರು. Such people (B. 5, 10. 42. 95; My.).

ಇನ್ತಾ im4-tâ5. 1. = ಇನ್ತ 1, etc. ಇದಕ್ಕಿನ್ತಾ ಅದು ದೊಡ್ಡದು (My.). ಮುಂಚಿನಕ್ಕಿನ್ತಾ ಚನ್ನಾಗಿ (B. 5, 53). ಕೆಲಸದಕಿನ್ತಾ ಹೆಚ್ಚಿಗೆ (5, 283). See ಅಕಿನ್ತಾ, ಅಕ್ಕಿನ್ತಾ, & a Prv. s. ಕಡಿ & ತಾಯಿ.

ಇನ್ತಾ intâ. 2. = ಇನ್ತ 2, etc. (My.). ಕೂಡಿದನ್ತಾ ದಣ್ಡು (B. 5, 51). ಇನ್ತಾ ಹೆಂಗಸರು (5, 55). ಇನ್ತಾ ಅವಸ್ಥೆ (5, 57).

ಇನ್ತಿ inti. (= ಇನ್ತು). Thus (C. at the end of letters, also ಇನ್ತೀ). ಇನ್ತಿ ಬಿನ್ನಹ (B. 4, 109), ಇನ್ತಿ ಸಲಾಮು, etc. (*Cf.* Sk. ಇತಿ?).

ಇನ್ತು intu. This manner; in this manner, thus, so; (such). (ಪ್ರಕಾರ Šmd. 399; ಹೀಂಗೆ 61. 65. 164 Cm.; C.). ಅನ್ತು, ಇನ್ತು, ಉನ್ತು, ಎನ್ತು (398. 399). See 44. 112. 181. 234. 384. ಭದ್ರ ಮನ್ದ ಮೃಗ ಎನ್ದು, ಇನ್ತು ಆನೆಗಳ್ ಮೂಱು ತೆಱನ್ ಅಕ್ಕುಂ (Hlâ.). ಹಲಮಲ್ಲದೆ ಶಕಟಮುಂ ಪೊಡಿರ್ ಅಱಿಯದ, ಶಕಟಮಲ್ಲದೆ ಹಲಮುಂ ಪೊಡಿರ್ ಅಱಿಯದ ಎನ್ದು, ಇನ್ತು ಏಕಧುರಮ್ ಅಹ ಎತ್ತಿನೊಳು ಏಕಧುರೀಣ, ಏಕಧುರ ಎನಿಸುಗು (Nr.). ಇನ್ತೀ ಪ್ರಕಾರ (ಇತಿ, ಪ್ರಕಾರ Nn. 93). ಇನ್ತೆನ್ದು ಬರೆದು (Rśv. 14, after 52; J. 31, 29). ಗಾಳೀ ಸೊಡರ್, ಪರಿಯುತ್ತಿಪ್ಪ ಮರೀಚಿಕಾಜಲ, ಜಲಾವರ್ತಾಕ್ಷರಮ್ ಇನ್ತುವುಂ ಸಿರಿ ಪುಲ್ಲಗ್ರದ ತುನ್ತುರಿಯ್! (Sś.). ಫಲವ ಕಣ್ಣನು ಇನ್ತುವು (Jns. 22, 31). ಇನ್ತೆನ್ (Bp. 40, 51; 41, 5; 44, 42). ಇನ್ತುಂ (10, 10). ಇನ್ತೂ (ಇನ್ತಿಷ್ಟು, ಎಲ್ಲಾ G.). See Prv. s. ಅನ್ತೂಇನ್ತೂ. — ಇನ್ತಪ್ಪ. -ಅಪ್ಪ. Being of this kind or such as this; such (Bp. 39, 58; 43, 49). — ಇನ್ತಪ್ಪಂ. -ಅಪ್ಪಂ. A man who is of this kind, etc. (Šmd. 191. 192). — ಇನ್ತಹ. -ಅಹ. = ಇನ್ತಪ್ಪ, ಇನ್ಥ, etc. Being of this kind, etc. (Bp. 22, 62; 23, 31; 27, 21; 36, 16; 39, 58). — ಇನ್ತಹಂ. -ಅಹಂ. = ಇನ್ತಪ್ಪಂ, ಇನ್ಥಂ (Šmd. 192; ಇನ್ಥಂ Čt. II, 64). — ಇನ್ತಿನ್ತು. rep. (Grj. 5, 14). — ಇನ್ತಿಷ್ಟು. -ಇಷ್ಟು. So and so much, so and so many (C.). ಇನ್ತಿಷ್ಟು ತೋಟಗಳ ತಂಗಿಗಳನ್ನು ತನ್ದು ಕೊಟ್ಟವರು ಇನ್ತಿಷ್ಟು ಭೂಮಿಯನ್ನು ಸಾಗು ಮಾಡಿ ಕೊಳ್ಳಬೇಕು (B. 2, 19). 2, -ಉ 9, all (C.; ಎಲ್ಲಾ G.). ಇನ್ತಿಷ್ಟರು, all persons (C.). 3, very much or many (My.).

ಇನ್ತುಟು intutu. = ಇನಿತು, ಇನಿತುಟು, ಇಷ್ಟು, etc. This much, etc. ಇನ್ತುಟು ಅನೆ, ಇನ್ತುಟು ಕುದುರೆ (Šmd. 169). ಇನ್ತುಟುಕಾಗಿ, for so much, for such a trifle (Bp. 40, 72). See Rśv. 14, 51; *cf.* ಅನ್ತುಟು, etc. — ಇನ್ತುಟು. -ಉ 9. Although so much (Bp. 17, 9). 2, a little. ಮುಂಗನ ಕೃತಿಯನ್ ಇನ್ತುಟು ಉದ್ಧರಿಸಿ, ತಿರ್ದುಗೆ ಕೃಪೆಯೊಳು (Mr. 2). — ಇನ್ತುಟುಂ. -ಉಂ 1. A little (Bp. 49, 22).

ಇನ್ಥ intha. = ಇನ್ತ 2, ಇನ್ತಾ 2, ಇನ್ತಹ. ಇನ್ಥಾ. A corrupted common form of ಇನ್ತಹ, q. v. (s. ಇನ್ತು). ನಿನ್ನನ್ಥ ಗೆಳೆಯರು (B. 1, 8). — ಇನ್ಥವನು. Such a man (B. 5, 291). ಇನ್ಥವರು (2, 8; Si. 108). — ಇನ್ಥವಳು. Such a woman (B. 5, 291). — ಇನ್ಥಾತಂ. = ಇನ್ಥವನು. (Bp. 54, 57). — ಇನ್ಥಿನ್ಥ. rep. Such and such (B. 2, 19). ಇನ್ಥಿನ್ಥ ಹೊತ್ತಿಗೆ ಇಷ್ಟಿಷ್ಟು ಕೆಲಸಗಳನ್ನು ಮಾಡ ಬೇಕು (3, 88).

Digitized by Google

ಇನ್ಥಾ inthâ. = ಇನ್ಥ, etc. ಇನ್ಥಾ ಹಣ್ಣು ಹಮ್ಪಲಗಳು (B. 1, 8). ನೀನು ನನಗೆ ಇನ್ಥಾ ಮಾತು ಕಲಿಸ ಬೇಡ! (3, 78). ಇನ್ಥಾ ನಡತೆ (5, 83). ಇನ್ಥಾ ನೇಮಗಳು (5, 95).

ಇನ್ದ im⁴-da2. = ಇನ್ತ 1, etc. ಆ ಹೆಮ್ಮೆ ಬಹು ದಿವಸದಿನ್ದ ಇತ್ತು (B. 2, 12). See also 3, 77, ಮರನಿನ್ದ, etc. (s. ನ 2, No. 3), ಇಂ 4.

ಇನ್ದಂ im⁴-dam. (Šmd. 131). = ಇನ್ದ, etc. ಕಬು ತಾಯ ಬಟ್ಯನ್ ಉಬ್ಯದ ತೆಐದಿನ್ದಂ (194). ನಿನ್ನಿನ್ದವೆ (Bp. 2, 36). ಎಮ್ಮಿನ್ದಮ್ ಇಳೆಯೊಳು ನೀವು ಪೀನಮೆ! (40, 84). See ಇಂ 4.

ಇನ್ದಗಿ indagi. Indrajit (Abh. P. 13, after 11; 13, 16).

ಇನ್ದರ indara. = ಇನ್ದಿರ. Tbh. of ಇನ್ದ್ರ (Šmd. 336).

ಇನ್ದವು im⁴-davu. = ಇನ್ದಂ, etc. This form is very frequently used by the commentator on the Šmd. in a Mdb. MS., *e. g.* ಇಹುದಟನ್ದವು (123. 143), ಬಲ್ಲವರುಗಳಿನ್ದವು (176), ನಿಕ್ಷಯದಿನವು (182), ಏಕಲ್ಪದಿನ್ದವು (286).

ಇನ್ದಿನ್ದಿರ indindira. *The large black humble bee* (ಗುಂಗೀ ಹುಬ G.).

ಇನ್ದಿರ indira. = ಇನ್ದರ. Tbh. of ಇನ್ದ್ರ. (ಇನ್ದ್ರ Ċt. II, 49; ಸುರಪ Kk. 11 *a*; ಸುರಪತಿ Šm. 9; ಬಲವೈರಿ Kk. 10 *b*). — ಇನ್ದಿರವಿಲ್. -ಬಿಲ್. Indra's bow: the rainbow (ಶಕ್ರಚಾಪ Ss.; Rśv. 8, 118).

ಇನ್ದಿರಾಜ indirâ-ja. Indirâ's son: Kâma.

ಇನ್ದಿರಾಜಾಸ್ತ್ರ indirâja-astra. Kâma's weapon: a lotus (Bp. 5, 27).

ಇನ್ದಿರಾಪತಿ indirâ-pati. Vishṇu (Bp. 54, 31. 61).

ಇನ್ದಿರಾವರ indirâ-vara. Vishṇu. (Bp. 2, 26).

ಇನ್ದಿರೆ indirĕ. -ರಾ. *Lakshmî* (ಸಿರಿ, ಲಕುಮಿ, ಮಾಲಕುಮಿ, etc. Šm. 6; see Mr. s. ಶೋಭೆ). — ಇನ್ದಿರೆಯ ನಲ್ಲ. Vishṇu (Bp. 54, 44).

ಇನ್ದಿರೇಶ indirâ-îśa. Vishṇu. (My.).

ಇನ್ದೀವರ indîvara. *The blue lotus, the blue water-lily, Nymphaea stellata and cyanea* (ಉತ್ಪಲ, ನೆಯ್ದಲೆ Mr. 419; ಕನ್ನೆಯ್ದಿಲ್ Si. 95; ಕರೇ ಕಮಲ G).

ಇನ್ದೀವರಾಕ್ಷಿ indîvara-akshi. = ಇನ್ದೀವರೇಕ್ಷಣೆ. (J. 7, 27).

ಇನ್ದೀವರಿ indîvari. *The plant Asparagus racemosus* Willd.

ಇನ್ದೀವರೇಕ್ಷಣೆ indîvara-îkshaṇi. A blue lily-eyed woman (My.).

ಇನ್ದು indu. This time; to-day (ಕಾಲ Šmd. 398; C.; Tu. ಇನಿ, T. ಇನ್ರು, M. ಇನ್ನು). ಅನ್ದು, ಇನ್ದು, ಉನ್ದು, ಎನ್ದು (398); ಇನ್ದೆ (69). Declension: ಇನ್ದು, ಇನ್ದು, ಇನ್ದಿಂ, ಇನ್ದಿಗೆ, ಇನ್ದಿನತ್ತಣಿಂ, ಇನ್ದಿನ, ಇನ್ದು (147); ಇನ್ದಂಗೆ (Bp. 3, 15), ಇನ್ದಿನಿನ್ದ (B. 1, 20; 2, 36). ಇನ್ದಿಗೂ. even up to this day; even still now (3, 76; 4, 146). ಆ ನಡತೆಗಳು ಇನ್ದಿನವು ಅಲ್ಲ, ನಿನ್ನಿನವು ಅಲ್ಲ (4, 187). ಇನ್ದಿನ ತನಕ (3, 115; 5, 114). ಇನ್ದಿನ ದಿನದಲ್ಲಿ ಅದ್ಯ ಎನಿಸುಗು (Nr.). See Bp. 28, 21; 60, 17; Bh. 1, 8, 20; 1, 10, 39; 2, 13, 36; J. 30, 28. 49. — ಇನ್ದುತನಕ. Till the present time (Bp. 61, 57). — ಇನ್ದು ನಾಳೆ ಎನ್. To say to-day and to-morrow, to set bounds to time (Bp. 27, 10; 30, 7). — ಇನ್ದುಮುಟ್ಟ. = ಇನ್ದುವರೆಗೆ. (My.). — ಇನ್ದುಮೊದಲ್. From to-day (J. 15, 32). — ಇನ್ದುವರಂ. = ಇನ್ದುವರೆಗಂ. See s. ಬಕ್ಕಟಬಯಲ್. — ಇನ್ದುವರೆಗಂ. = ಇನ್ದುವರೆಗೆ. (Č. Bp. 47, 18). — ಇನ್ದುವರೆಗೆ. Till now or to-day (J. 18, 58; 31, 28).

ಇನ್ದು indu. *The moon.* 2, the number one (Bp. 61, 92). 3, N. of a metrical foot (Ċh.).

ಇನ್ದುಕಳೆ indu-kaḷĕ. A digit of the moon (Bp. 24, 73). 2 the brightness or shine of the moon (My.).

ಇನ್ದುಕಾನ್ತ indu-kânta. The moon-stone, the lunar gem (Grj. 1, 9; Śsv. 1, 70).

ಇನ್ದುಚೂಡ indu-čûḍa. Śiva (Bp. 33, 19; 53, 16).

ಇನ್ದುಜ indu-ja. Son of the moon: the planet Mercury (Mr. 38).

ಇನ್ದುಜನಕ indu-janaka. Father of the moon: the ocean. 2, Atri (My.).

ಇನ್ದುಜೂಟ indu-jûṭa. Śiva (Bp. 18, 90).

ಇನ್ದುಧರ indu-dhara. Śiva (Mr. 465). 2, sign for a metrically long letter (Ċh.).

ಇನ್ದುಮಣಿ indu-maṇi. = ಇನ್ದುಕಾನ್ತ. (Śsv. 1, 38).

ಇನ್ದುಮಣ್ಡಲ indu-maṇḍala. The orb or disk of the moon (ಬಟ್ಟು Kk. 45).

ಇನ್ದುಮುಖಿ indu-mukhi. A woman who has a face like the moon (Bp. 2, 49; 24, 30).

ಇನ್ದುಮೌಳಿ indu-mauli. Śiva (Bp. 2, 56; 9, 26).

ಇನ್ದುರೇಖೆ indu-rêkhĕ. A digit of the moon (My.).

ಇನ್ದುಲಾಂಛನ indu-lânchana. Śiva. (My.).

ಇನ್ದುಲೇಖಾಚೂಡ indulêkhâ-čûḍa. Śiva (Bp. 50, 38).

ಇನ್ದುಲೇಖೆ indu-lêkhĕ. -ಖಾ. = ಇನ್ದುರೇಖೆ. (My.).

ಇನ್ದುವಾರ indu-vâra. Monday (My.; Tĕ.).

ಇನ್ದುವ್ರತ indu-vrata. A religious observance depending on the age of the moon; diminishing the quantity of food by a certain portion daily, for a fortnight or a month, etc. (R.).

ಇನ್ದುಶೇಖರ indu-śêkhara. Śiva (Bp. 44, 18).

ಇನ್ದುಹಾಸ indu-hâsa. = ಚನ್ದ್ರಹಾಸ. (J. 29, 25; 31, 31).

ಇನ್ದೆ im⁴-dĕ. (Šmd. 131). = ಇನ್ತ 1, etc. ಈ ತಿವನ್ ಎಸು ದಿನದಿನ್ದೆ ಉಣ್ಣದೆ ಇರ್ದಹನೊ? (Bp. 18, 18). See ಇಂ 4.

ಇನ್ದ್ರ indra. = ಇನ್ದರ, ಇನ್ದಿರ. *Indra, the deity of svarga, and the regent of the East quarter.* 2, a prince, a master (ಒಡೆಯ Mr. 227). 3, best, excellent (ಶ್ರೇಷ್ಠ G.). 4, N. of a metrical foot (Ċh.).

ಇನ್ದ್ರಕೀಲ indra-kîla. N. of a mountain (Bp. 44, 3; J. 23, 34).

ಇನ್ದ್ರಕೋಶ indra-kôśa. *A platform, a scaffold;* a kind of balcony or terrace (ತವಗ Mr. 192).

ಇನ್ದ್ರಗೋಪ indra-gôpa. The insect cochineal of various kinds (ಕೆಮ್ಬುಬು, ಏಬ್ರಜ Ss.; ಏಬ್ರಜ Mr. 165; Tĕ.). 2, the firefly (My.; ಮಿಂಚುಹುಳು, ಹೊನ್ನಿಹುಳು G.). See Šmd. 142. 166; Grj. 9, after 58; J. 17, 4.

ಇನ್ದ್ರಚಾಪ indra-čâpa. A rainbow (ಬಿಮ್ಬು, ಇನ್ದ್ರನ ಬಿಲ್ಲು Nn. 69). — ಇನ್ದ್ರಚಾಪಮ್ಬೆಟ್. -ಪೆಟ್. To get a rainbow (Rśv. 13, after 77).

ಇನ್ದ್ರಜ indra-ja. Arjuna (ಫಲ್ಗುನ, etc. Mr. 264. 508).

ಇನ್ದ್ರಜವ indra-java. = ಇನ್ದ್ರಜವಿ. Tbh. of ಇನ್ದ್ರಯವ. (ಇನ್ದ್ರಜವಿ, ಕುರುಟಿಗನ ಬೀಜ G.).

ಇನ್ದ್ರಜವಿ indra-javi. = ಇನ್ದ್ರಜವ. (ಕಲಿಂಗ, ಭದ್ರಯವ G.). — ಇನ್ದ್ರಜವಿಯ ಗಿಡ. The plant Wrightia antidysenterica (ವತ್ಸಕ, ಶಕ್ರ, ಹೆಮ್ಮುಷ್ಟಿಗೇ ಗಿಡ G.).

Digitized by Google

ಇನ್ದ್ರಜಾಲ indra-jâla. Indra's net: deception, fraud, conjuring, jugglery, sorcery, trick in war, etc. (My.; ಮೋಸ, ಕಪಟ, ಕಾಪ್ಟುರಿ G.).

ಇನ್ದ್ರಜಿತ್ indra-jit. (= ಇನ್ದ್ರಾರಿ). Conqueror of Indra: N. of a son of Râvaṇa (Abh. P. 13, 15). ಇನ್ದ್ರಜಿತು (J. 18, 6).

ಇನ್ದ್ರತ್ವ indratva. The state of being Indra. See ದೇವೇನ್ದ್ರತ್ವ.

ಇನ್ದ್ರದ್ರು indra-dru. *The plant Terminalia arjuna.*

ಇನ್ದ್ರಧನು indra-dhanu. Tbh. of ಇನ್ದ್ರಧನುಸ್. (My.; ಮುಗಿಲಿಯ ಬಿಲ್ಲು G.).

ಇನ್ದ್ರಧನುಸ್ indra-dhanus. A rainbow.

ಇನ್ದ್ರನಿಲಯ indra-nilaya. Indra's dwelling: svarga. 2, N. of a of metrical foot (Ch.).

ಇನ್ದ್ರನೀಲ indra-nîla. A sapphire (Bp. 54, 60; J. 11, 8).

ಇನ್ದ್ರಪುರ indra-pura. Indra's town: svarga. 2, N. of a metrical foot (Ch.).

ಇನ್ದ್ರಪ್ರಹರಣ indra-praharaṇa. *Indra's thunderbolt.*

ಇನ್ದ್ರಮಣಿ indra-maṇi. = ಇನ್ದ್ರನೀಲ. (Śsv. 1, 54).

ಇನ್ದ್ರಯವ indra-yava. = ಇನ್ದ್ರಜವ. *The seed of the Wrightia antidysenterica.*

ಇನ್ದ್ರಲುಪ್ತ indra-lupta. *Morbid baldness of the head.*

ಇನ್ದ್ರಲುಪ್ತಕ indra-luptaka. = ಇನ್ದ್ರಲುಪ್ತ. (ಖಲತಿ, ಶಿಪಿವಿಷ್ಟ Mr. 383).

ಇನ್ದ್ರಲೋಕ indra-lôka. Indra's world: svarga (C.).

ಇನ್ದ್ರವಂಶ indra-vaṁśa. N. of a vṛitta (Ch.).

ಇನ್ದ್ರವಜ್ರ indra-vajra. N. of a vṛitta (Ch.).

ಇನ್ದ್ರವಾರುಣಿ indra-vâruṇi. *Colocynth, a wild bitter gourd, Cucumis colocynthis* Lin. (ಕಾಡ ಕವಡೇ ಕಾಯಿ, ಕಕ್ಕಾವಾಡೇ ಕಾಯಿ G.).

ಇನ್ದ್ರಸುರಸ indra-surasa. = ಇನ್ದ್ರಸುರಿಸ. *A shrub, the leaves of which are used in disculient applications, Vitex negundo* Lin. (ಲಕ್ಕೀ ಗಿಡ G.).

ಇನ್ದ್ರಸುರಿಸ indra-surisa. = ಇನ್ದ್ರಸುರಸ. (G.).

ಇನ್ದ್ರಸೇನ indra-sêna. N. of several men, see *e. g.* Bh. 2, 4, 9.

ಇನ್ದ್ರಾಣಿ indrâṇi. *Indra's wife* (ಶಚೀದೇವಿ, ಪುಲೋಮಜಾತೆ Nn. 28). 2, Kâma's wife (ರತಿದೇವಿ 28; ಆ ರತಿ Mr. 511). 3, Brahmâ's wife (ಭಾರತೀ, ಸರಸ್ವತೀ 28). 4, Śiva's wife, Durgâ (ಶರ್ವೆ, ಭೈರವಿ 28). 5, the five organs of sense or of action (ಪಂಚೇನ್ದ್ರಿಯ 28; ಅಯಿದು ಇನ್ದ್ರಿಯ 511). 6, a ray (ಕಿರಣ, ಗಭಸ್ತಿ 28). 7, the shrub Vitex negundo (ನಿರ್ಗುಣ್ಡಿ, ಲಕ್ಕಿ 28; 511, o. r. ಲಕ್ಕಿ).

ಇನ್ದ್ರಾಣಿಕೆ indrâṇikĕ. *The shrub Vitex negundo* Lin.

ಇನ್ದ್ರಾನುಜ indra-anuja. = ಇನ್ದ್ರಾವರಜ. (Bp. 54, 32).

ಇನ್ದ್ರಾಯುಧ indra-âyudha. Indra's thunderbolt (ಶಮ್ಬ, ವಜ್ರ, etc. Mr. 44). 2, *the rainbow.* 3, *a horse marked with black about the eyes* (ಕರೆಯ ಕಣ್ಣಾಗಲ್ ಇನ್ದ್ರಾಯುಧಂ Mr. 276).

ಇನ್ದ್ರಾರಿ indra-ari. An enemy of Indra, an asura or demon. ಇನ್ದ್ರಾರಿಯುಂ ಪವದವಳು ಏನತಿ ಅಕ್ಕು (Mr. 24).

ಇನ್ದ್ರಾವರಜ indra-avaraja. *Indra's younger brother, Vishṇu or Kṛishṇa.*

ಇನ್ದ್ರಿಯ indriya. Relating to Indra. 2, power, force; faculty. 3, *an organ of sense.* 4, *semen virile* (ಮಜ್ಜಾಸಾರ Nn. 125). See ಕರ್ಮೇನ್ದ್ರಿಯ, ಜ್ಞಾನೇನ್ದ್ರಿಯ, ಬುದ್ಧೀನ್ದ್ರಿಯ, ಪಂಚೇನ್ದ್ರಿಯ, ಪನ್ನೊನ್ದು-, ಷಡಿನ್ದ್ರಿಯ.

ಇನ್ದ್ರಿಯಗ್ರಾಮ indriya-grâma. *The senses or organs of sense collectively.*

ಇನ್ದ್ರಿಯದೃಢ indriya-dṛiḍha. Having firmly fastened the organs of sense, free from passions, calm (ಶಾನ್ತ, ಶ್ರಾನ್ತ Mr. 251).

ಇನ್ದ್ರಿಯನಿಗ್ರಹ indriya-nigraha. Restraint of the organs of sense. (My.).

ಇನ್ದ್ರಿಯನಿಗ್ರಹಿ indriya-nigrahi. A person who restrains the organs of sense (My.).

ಇನ್ದ್ರಿಯಾರ್ಥ indriya-artha. *An object of sense, as sound, smell, etc.*

ಇನ್ದ್ರೆ indrĕ. The wife of Indra. *Cf.* ಇನ್ದಿರೆ.

ಇನ್ದ್ರೇಭ indra-ibha. Airâvata, the elephant of Indra (ಪುಣ್ಡರೀಕ, ಅಯಿರಾವತ Nn. 18).

ಇನ್ದ್ರೇಶ್ವರ indra-îśvara. A form of Śiva (Bp. 54, 64).

ಇನ್ಧನ indhana. Kindling. 2, *fuel.*

ಇನ್ನಂ innaṁ. 1. = ಇನ್ತಹಂ. (Śmd. 191; Ct. II, 64). Such a man as this, such a one. ಮನಸಿಜನ್ ಎನ್ನನ್ ಇನ್ನನ್, ಅರುಣಪ್ರಿಯನನ್ದನನ್ ಎನ್ನನ್ ಇನ್ನನ್, ಆ ದಿನಕರನ್ ಎನ್ನನ್ ಇನ್ನಂ (Śmd. 192).

ಇನ್ನಂ innaṁ. 2. = ಇನಂ. (Abh. P. 13, 76, o. r. ಅನ್ನಂ).

ಇನ್ನು innu. = ಇನು. Further, yet, still; moreover; hence, hereafter; more;—the current time (T., M. ಇನಿ; Tĕ. ಇಂಕ; Tu. ನನ; T. ಇನ್ನಂ still, more, besides, moreover; *cf.* ಎನೆ 1?). See Śmd. 231; Bp. 21, 45; 28, 28; 32, 15; 38, 30; 42, 13; 44, 16. 20; 54, 4. 52; 50, 24; Kk. 48; Śm. 8. 9. 20. 67; Rśv. 13, 97; Bh. 1, 8, 7. 10. 57; 1, 10, 39; J. 3, 1; 29, 30; 31, 35. — ಇನ್ನಂ. -ಅಂ 5. = ಇನ್ನುಂ. Hence (Bp. 28, 10). — ಇನ್ನಷ್ಟು. -ಅಷ್ಟು. So much (or many) more (B. 3, 60). — ಇನ್ನಾರ್. -ಆರ್. Who else? (Śmd. 292). — ಇನ್ನಾವ. -ಆವ. What other? etc. (J. 18, 20). — ಇನ್ನಿಲ್ಲ. -ಇಲ್ಲ. = ಇನ್ನು ಇಲ್ಲ. No more, no longer (Bp. 1, 16). 2, not yet (with a verb or with reference to a verb). — ಇನ್ನುಂ. -ಉಂ 1. = ಇನ್ನಂ. Also hereafter; still more; still (Śmd. 84; Bp. 59, 1. 11; Rśv. 5, 125). — ಇನ್ನು ಇಲ್ಲ. = ಇನ್ನಿಲ್ಲ. Not yet (Bp. 28, 18), etc. — ಇನ್ನು ಮುನ್ದೆ. Henceforth, hereafter (B. 4, 1. 155);—that follows. — ಇನ್ನು ಮೇಲೆ. = ಇನ್ನು ಮುನ್ದೆ. (B. 1, 24; 3, 54). ಪೇಳ್ ಇನ್ನು ಮೇಲಣ ಬಟಿಕೆಯನು! (Bh. 1, 8, 61). — ಇನ್ನು ವರೆ. = ಇನ್ನೂ ವರೆಗೆ. Up to the current time (Bp. 18, 71; *cf.* ಇನ್ನೆವರೆಗಂ). ಇನ್ನುವರೆಗೂ (My.). — ಇನ್ನೂ. -ಊ 7. Still. ಇನ್ನೂ ಇಲ್ಲ (= ಇನ್ನಿಲ್ಲ), not yet (B. 3, 60). — ಇನ್ನೂವರೆಗೆ. = ಇನ್ನುವರೆ Up to the current time (My.; B. 4, 208; 5, 181. 267). — ಇನ್ನೆಲ್ಲಿ. -ಎಲ್ಲಿ. Where else? (C.). — ಇನ್ನೇನ್. -ನು. -ಏನ್. What more? what else? hence what? (Bp. 31, 15; Bh. 1, 8, 60; B. 3, 59; 5, 112). — ಇನ್ನೊನ್ದು. -ಒನ್ದು. An additional or other thing; another (C.; Bp. 25, 33; 58, 39; 61, 35; J. 10, 46; B. 4, 139. 157). — ಇನ್ನೊಬ್ಬ. -ಒಬ್ಬ. An additional man; another man; another (C.;

Digitized by Google

Bp. 43, 51). — ಇನ್ನೊಮ್ಮೆ. -ಒಮ್ಮೆ. Once more, again (C.; B.3, 23). — ಇನ್ನೊರ್ವ. -ಒರ್ವ. = ಇನ್ನೊಬ್ಬ. (J. 5, 27).

ಇನ್ನೆ innĕ. = ಇನೆ 2. (*Cf.* ಇನ್ನು, the current time). — ಇನ್ನೆಗಂ. (Śmd. 295). = ಇನೆಗಂ q. v., etc. (ಸೀವಮಾರ್ಥ Kk. 69; J. 9, 31; 10, 38). ಎಮ್ಮನ್ ಇನ್ನೆಗಂ ಮುದ್ದುಗೆಯ್ದ ಈ ವಸುಧೆ (J. 3, 31). — ಇನ್ನೆಬರ. = ಇನ್ನೆವರಂ. (Râm. 6, 53, 20). — ಇನ್ನೆವರಂ. Up to this time (Śmd. 295; ಸೀವಮಾರ್ಥ Kk. 69). ಇನ್ನೆವರಂ ಗುಬಿ' ಆದುದು ಇಲ್ಲ ಕಾಮಶರವಿಮುಕ್ತಬಾಣಹತಿಗೆ (Śmd. 296). — ಇನ್ನೆವರೆಗಂ. = ಇನ್ನೆವರಂ (Śmd. 295).

ಇಪ್ ip. = ಇರ್, etc. Two. — ಇಪ್ಪಣ. Two fanams, *i. e.* nine aṇas and four pays (My.). — ಇಪ್ಪತು. = ಇಪ್ಪತ್ತು, ಇರ್ಪತು, ಇರ್ಪತ್ತು. (Čh. v. 329; My.). — ಇಪ್ಪತ್ತನೆಯ. -ಅನೆಯ. Twentieth (C.). — ಇಪ್ಪತ್ತಯ್ದು. -ಅಯ್ದು. = ಇರ್ಪತ್ತಯ್ದು. Twenty-five. ಇಪ್ಪತ್ತಯ್ದು ಅಕ್ಷರಂಗಳ್ (Śmd. 44 Cm.). ಇಪ್ಪತ್ತಯ್ದು ತತ್ವಂಗಳ್ (Mr. 348). — ಇಪ್ಪತ್ತಾಱು. -ಆಱು. = ಇರ್ಪತ್ತಾಱು. Twenty-six. ಇಪ್ಪತ್ತಾಱು ಛನ್ದಂ (Mr. 362). — ಇಪ್ಪತ್ತು. = ಇರ್ಪತ್ತು. Twenty. ಇಪ್ಪತ್ತು ನಖಂಗಳ್ (Mr. 348). ಇಪ್ಪತ್ತು ಕಣ್ಣುಗ (Si. 329). — ಇಪ್ಪತ್ತು ನಾಲ್ಕು. = ಇರ್ಪತ್ತು ನಾಲ್ಕು. Twenty-four. ಇಪ್ಪತ್ತು ನಾಲ್ಕು ಅಕ್ಷರಂ (Bp. 3, 64). — ಇಪ್ಪತ್ತು ಮೂಱು. Twenty-three (Čh. v. 332). — ಇಪ್ಪತ್ತು ಲಕ್ಷ. Twenty lacs (B. 4, 205). — ಇಪ್ಪತ್ತು ಸಾವಿರ. Twenty thousand. ಇಪ್ಪತ್ತು ಸಾವಿರ ಜನಮುನಿಗಳ್ (Bp. 51, 1). — ಇಪ್ಪತ್ತೆಣ್ಟು. -ಎಣ್ಟು. = ಇರ್ಪತ್ತೆಣ್ಟು. Twenty-eight. ಇಪ್ಪತ್ತೆಣ್ಟು ಭಾಷೆಗಳು (B. 4, 128). — ಇಪ್ಪತ್ತೆರಡು. -ಎರಡು. Twenty-two. ಇಪ್ಪತ್ತೆರಡು ಸುತಿ (Bp. 19, 10). ಇಪ್ಪತ್ತೆರಡು ಶ್ರುತಿ (Mr. 78). ಆ ಶ್ರುತಿಯೊಳ್ ಇಪ್ಪತ್ತೆರಡು ಗಮಕಮ್ ಅಕ್ಕು (78). — ಇಪ್ಪತ್ತೇೞು. -ಏೞು. = ಇರ್ಪತ್ತೇೞು. Twenty-seven. ಇಪ್ಪತ್ತೇೞು ನಕ್ಷತ್ರಂಗಳ್ (Mr. 348). — ಇಪ್ಪತ್ತೊನ್ದನೆಯ. -ಅನೆಯ. Twenty-first. ಇಪ್ಪತ್ತೊನ್ದನೆಯ ಬೆರಳು, membrum virile (My.). — ಇಪ್ಪತ್ತೊನ್ದು. -ಒನ್ದು. Twenty-one. ಇಪ್ಪತ್ತೊನ್ದು ದಿನಂ (Bp. 25, 13). — ಇಪ್ಪತ್ತೊಮ್ಬತ್ತು. -ಒಮ್ಬತ್ತು. Twenty-nine (C.). — ಇಪ್ಪತ್ತೊಮ್ಬತ್ತು. = ಇಪ್ಪತ್ತೊಮ್ಬತ್ತು. (S. Mhr.). — ಇಪ್ಪತ್ನಾಲ್ಕು. = ಇಪ್ಪತ್ತು ನಾಲ್ಕು. ಇಪ್ಪತ್ನಾಲ್ಕು ಜನರ್ (Mr. 348). — ಇಪ್ಪಾನೆ. Two pānes (My.). See Prv. s. ಒಪ್ಪಾನೆ. — ಇಪ್ಪಾಲು. Two parts or portions (C.). — ಇಪ್ಪಿಪ್ಪತ್ತು. A kind of rep. Twenty and twenty (B. 4, 210).

ಇಪ್ಪ ippa. = ಇರುವ, ಇರ್ಪ, ಇಹ 1. Present relative participle of ಇರ್ 1. Being, etc. ಧನದನ್ ಇಪ್ಪ ಅಲಯಂ ಕೈಲಾಸಮ್ ಅಕ್ಕುಂ (Mr. 55). ಇಪ್ಪ ಪದ (ಸಂಸ್ಥೆ Nn. 137). ಕರ್ವುಗಳ ಸೋಗೆಗಳ ಪಸುರುವೊಗರ್ ಅಗಸಕೆ ಪರ್ವುತೆ ಇಪ್ಪ ಆ ನಾಡು (J. 3, 6). ತಪ್ಪ ಸಾಧಿಸುವನಲ್ಲಿ ಇಪ್ಪವನೆ ಕಡು ಹೆಡ್ಡ! (Sp.). ಇಪ್ಪನ್ತೆ (Bp. 51, 66). — ಇಪ್ಪುದು. (Bp. 53, 37; 60, 48; Nn. 137). ಇಪ್ಪೆ, thou art (Bp. 55, 13). ಇಪ್ಪಂ (60, 41). ಇಪ್ಪಳ್ (26, 54). ಇಪ್ಪರಿ (52, 31). ಇಪ್ಪರ್ (54, 63).

ಇಪ್ಪೆ ippĕ. 1. = ಹಿಪ್ಪೆ. The tree Bassia latifolia Roxb., all the parts of which are useful, arrack being distilled from the blossoms, oil extracted from the seeds, etc. (ಮಧೂಕ, ಲೋಧ್ರಪುಷ್ಪ, ಗುಡಪುಷ್ಪ Mr. 140; My.; Tu.; Tĕ.; T. ಇರುಪ್ಪೈ, ಇಲುಪ್ಪೈ; M. ಇರುಪ್ಪೆ, ಇಲಿಪ್ಪೆ). 2, a thorny shrub, common in S. Mhr., Capparis sepiaria L. (Z.). — See ಕಿಬಿ'ಯ ಇಪ್ಪೆ, ನೀರಿಪ್ಪೆ. — ಇಪ್ಪೆಯ ಗಿಡ. = ಇಪ್ಪೆ No. 1. (ಮಧು Si. 433). — ಇಪ್ಪೆಯ ಮರ. = ಇಪ್ಪೆ No. 1. (ಮಧೂಕ, ಗುಡಪುಷ್ಪ, ಮಧುದ್ರುಮ, ವಾನಪ್ರಸ್ಥ, ಮಧುಷ್ಠೀಲ Nr.). — ಇಪ್ಪೆಯ ಹಣ್. (Bp. 18, 16). — ಇಪ್ಪೆಯ ಹಿಣ್ಡಿ. The refuse of ippĕ seeds (My.). — ಇಪ್ಪೆಯ ಹುಳು. The lantern-fly (? C.). — ಇಪ್ಪೆಯ ಹೂ. The flower of Bassia latifolia, being full of saccharine matter. ಅಲಿ ಇಲ್ಲದ ಊರಿಗೆ ಇಪ್ಪೇ ಹೂವೇ ಸಕ್ಕರೆ (Prv.).

ಇಪ್ಪೆ ippĕ. 2. Chewing the cud (Tu.; see Prv. s. ಬಿಪ್ಪೆ).

ಇಬ್ ib. = ಇರ್, etc. Two. — ಇಬ್ಬಗೆ. 1. Two divisions or parts; the state of being split, separated, etc. (Bp. 32, 24; 61, 28; J. 19, 29). ಹೊನಲನ್ ಇಬ್ಬಗೆ ಮಾಡುವ ಕಡಲು (ಕೂಪಕ, ವಿದಾರಕ Nr.). — ಇಬ್ಬಗೆ. 2. Two opinions, two manners or ways (My.; ಎರಡು ತರ G.). — ಇಬ್ಬನ್ದಿ. Of a mixed breed, mongrel: of low descent (My.; Tĕ., T.). 2, being double-tongued (My.). — ಇಬ್ಬರ್. = ಇರ್ಬರ್, ಇರ್ವರ್. Two persons, two. ಭೇದ ಎನ್ದೊಡೆ ಹಗೆಯರ ಇಬ್ಬರೊಳಗೆ ವಿರೋಧವ ಹುಟ್ಟಿಸುವ (Nr.). — ಇಬ್ಬರು. Two persons, two (C.; Tĕ. ಇದ್ದರು). ಇಬ್ಬರ ನ್ಯಾಯ ಒಬ್ಬನಿಗೆ ಆಯ. — ಇಬ್ಬರಿದ್ದರೆ ಏಕಾನ್ತ, ಮೂವರಿದ್ದರೆ ಲೋಕಾನ್ತ (Prvs.). ಎಮಗಿಬ್ಬರಿಗೆ (Bp. 40, 15; 45, 5). 2, ಇಬ್ಬರ್ (ಇಬ್ಬರು 1) -ಉ 9. Both (Bp. 23, 35; C.). — ಇಬ್ಬರುಂ. ಇಬ್ಬರ್-ಉಂ 1. = ಇಬ್ಬರೂ. (Bp. 23, 28). — ಇಬ್ಬರೂ. ಇಬ್ಬರ್ (ಇಬ್ಬರು 1)-ಊ 7. Both. ಸಾಲವ ಕೊಡುವವನೂ ಸಾಲವ ಕೊಮ್ಬುವನೂ ಇಬ್ಬರೂ ಉತ್ತಮರ್ಣ ಎನ್ದು ಅಧಮರ್ಣ ಎನ್ದು ಎನಿಸುಗು (Nr.). ತನ್ದೆ ತಾಯಿಗಳಿಬ್ಬರೂ ಕೂಡಾ (Si. 194). — ಇಬ್ಬಳ. Two baḷas (ಒನ್ದು ವಾಹ Nr.; My.; see Si. 329; Bp. 29, 9). — ಇಬ್ಬಾಗ. = ಇರ್ಭಾಗ. Two parts; the state of being separated, split, etc. (B. 3, 10. 16; 5, 24; J. 7, 46). — ಇಬ್ಬಾಯಿ. Two mouths, (two edges). ಇಬ್ಬಾಯಿ ಇದ್ದವನ ಕುಬ್ಬಾಟ ಬಹಳ (Prv.). — ಇಬ್ಬಾಯಿಹಕ್ಕಿ. The hornbill, Meniceros bicornis (Bd.). — ಇಬ್ಬಿಬ್ಬರು. rep. Two and two persons (B. 5, 265).

ಇಬಡಿ ibaḍi. = ಇಬ್ಬಡಿ, ಬೀಟೆ 1. A kind of blackwood tree, Dalbergia latifolia Roxb. (Z.).

ಇಬತ್ತಿ ibatti. = ಈಬೂತಿ, ಊಬತ್ತಿ. Tbh. of ವಿಭೂತಿ (C.).

ಇಬ್ಬಡಿ ibbaḍi. = ಇಬಡಿ. (My.; Tĕ. ಇಬ್ಬಡೆ).

ಇಬ್ಬನಿ ibbani. = ಇಬ್ಬನ್ನಿ. Fog, mist, dew (My.; ಮಂಜು G.; fr. ಎೞ್ 3 and ಪನಿ 2?).

ಇಬ್ಬನ್ನಿ ibbanni. = ಇಬ್ಬನಿ. (S. Mhr.; B. 4, 207).

ಇಬ್ಬರ್ ibbar. See s. ಇಬ್.

ಇಬ್ಬುಡ್ಲು ibbuḍlu. (Tu.). — ಇಬ್ಬುಡ್ಲುಬಳ್ಳಿ. A climbing herb, the Melon plant, Cucumis melo Lin. (St. & Pl.).

ಇಭ **ibha.** *An elephant* (ಆನೆ Nn. 153). 2, a kind of viccitticitra (Kâvy. III, 2, B, 57. 60 seq.). 3, N. of an Asura.

ಇಭಗತಿ **ibha-gati.** A female with the dignified gait of an elephant (Čh. v. 147). 2, the gait of an elephant.

ಇಭಗಮನೆ **ibha-gamanĕ.** = ಇಭಗತಿ No. 1. See ಮದವದಿಭಗಮನೆ.

ಇಭದೈತ್ಯ **ibha-daitya.** = ಇಭಾಸುರ, ಗಜಾಸುರ. (Bp. 21, 43).

ಇಭನಗರ **ibha-nagara.** = ಇಭಪುರ (J. 24, 46; also ಇಭನಗರಿ, 2, 47).

ಇಭಪುರ **ibha-pura.** = ಇಭಪುರಿ. (Bh. 1, 7, 13; J. 13, 22).

ಇಭಪುರಿ **ibha-puri.** = ಹಸ್ತಿನಾಪುರ. (Bh. 1, 8, 3).

ಇಭಮುಖ **ibha-mukha.** Gaṇapati (J. 8, 11).

ಇಭವಕ್ತ್ರ **ibha-vaktra.** = ಇಭಮುಖ. (Śsv. 1, 7).

ಇಭವೈರಿ **ibha-vairi.** A lion (Bp. 52, 38). 2, Śiva.

ಇಭಹಸ್ತ **ibha-hasta.** An elephant's trunk (ಆನೆಯ ಕೆಯ್ Nn. 131).

Digitized by Google

ಇಭಾನ್ತಕ ibha-antaka. = ಇಭದ್ವೇಷಿ No. 1. (Rsv. 5, 119).

ಇಭಾಸುರ ibha-asura. = ಇಭದೈತ್ಯ. (Bp. 1, 45; 22, 13).

ಇಭಿ ibhi. *A female elephant.*

ಇಭ್ಯ ibhya. *Rich, wealthy.*

ಇಮ್ im. 1. = ಇರ್, etc. Two. — ಇಮ್ಮಗಲು. Two or both sides. ಇಮ್ಮಗಲುಚೀಲ, a double bag to put over a bullock's back (S. Mhr.). — ಇಮ್ಮಡಿ. = ಇರ್ಮಡಿ. Two folds; the state of being two-fold or double; twice as much (C.). ಮಧ್ಯಾಪ್ರಾಪ್ತವಿದ್ದ ಇಮ್ಮಡಿಯಾಗಿ ಮಾಡಿದ ದಣ್ಡವು (ದ್ವಿಪಾದ್ಯ Nr.). See Bp. 4, 60; 5, 64; 28, 10. 39; 47, 25; Bh. 2, 13, 17; Čh. v. 69; Grj. 6, 48; J. 15, 6. — ಇಮ್ಮಡಿಕೆ. = ಇಮ್ಮಡಿ (C.). — ಇಮ್ಮಡಿ ಮಾಡು. To make two folds, etc. (= ಇಮ್ಮಡಿಸು, C.). — ಇಮ್ಮಡಿಸು. = ಇರ್ಮಡಿಸು. To make two folds or two-fold; to do twice as much; to double (My.; Tĕ. ಇಬ್ಬಡಿಂಚು, ಇಮ್ಮಡಿಂಚು); —to become two-fold, etc. (My.). See Abh. P. 9, 40; Bp. 2, 39; 11, 37; 12, 7; 14, 6; 23, 37; 42, 19; 43, 71; 50, 28. 32; 52, 5; 56, 40; 57, 62; J. 4, 17; 22, 11; 31, 76; 32, 45; 33, 36. — ಇಮ್ಮನ. A double mind, two thoughts, mental uncertainty (C.). — ಇಮ್ಮಿಗಿಲ್. Twice as much (J. 12, 23). — ಇಮ್ಮೆಯ್. = ಇರ್ಮೆಯ್. Two bodies; two sides; both sides, especially of a cloth (S. Mhr.). — ಇಮ್ಮೆಯ್ಗಾಣಿಕೆ. -ಕಾಣಿಕೆ. Showing both sides of the body (Bh. 9, 2, 15). — ಇಮ್ಮೆಯ್ಜೋಡು. A double coat of mail (Bh. 8, 24, 6).

ಇಮ್ im. 2. = ಇಂ (ಇಞ್), etc. Sweetness, etc. — ಇಮ್ಬುಳಿ. -ಪುಳಿ. = ಈಮ್ಬುಳಿ, q. v. — ಇಮ್ಮಾವು. (Šmd. 213. 89; Ct. II, 68). A sweet mango, the tree and its fruit (ಸಿಹಿ ಮಾವು, ಮಾಕನ್ದ Šm. 26). ಕಮ್ಮಂಗಣೆಯಿನ್ದೆ ಎಚ್ಚವನ್ ಇಮ್ಮಾವಿನ ಪೊದರ್ಗಳ್ ಇರ್ದು (Šmd. 210). ಕಲ್ಲೆಲ್ಲಂ ಕುಸುಗಲ್, ಮರನೆಲ್ಲಂ ಮಾವಿಮ್ಮಾವು (84). ಇಮ್ಮಾವಿನ ಎಳೆದಳಿರ ಪೊಳೆವ ಪೂಗುಡಿ (Čpr. 7, after 92). — ಇಮ್ಮೊಟ್ಟ್. An entreaty in sweet, humble words (Abh. P. 15, 66).

ಇಮರಿಸು imarisu. To cause to evaporate, etc. (My.).

ಇಮರು imaru. = ಇಗರು 1, (ಇಂಗು 1), ಇಮಿರು, ಇಮುರು. To evaporate in boiling, to dry up (My.); to disappear, as a boil (My.);—to wane, to waste away (S. Mhr.).

ಇಮಾರತಿ imârati. ಇಮಾರತು. imâratu (My.). An edifice; a palace or mansion (B. 4, 146; 5, 212. 219; Mhr., H.; ಗೋಪುರ G.).

ಇಮಿರು imiru. = ಇಮರು, etc. (My.).

ಇಮುರು imuru. = ಇಮರು, etc. (My.).

ಇಮೆ imĕ. = ಎಮೆ, etc. The eyelid (T. ಇಮೈ, ಇಡರ್, ಎವು; M. ಇಮ, ಚಿಮ, eyelash; Tu. ಇಮೆ, eyelash; R.).

ಇಮ್ಪಿ impi. — ಇಮ್ಪಿಗಡ. The Chinese sugar-cane, Sorghum saccharatum Moench. (St. & Pl.).

ಇಮ್ಪು impu. = ಇಮ್ಬು 1, ಇಮ್ಮು, ಇಂಪು. Sweetness; agreeableness, pleasantness, charm (ಸವಿ Kk. 72; Šm. 65; My.; Tĕ., Tu.; see ಇಂ, ಇಞ್; Tĕ. ಇಂಪು, pleasure, satisfaction). ಇಮ್ಪಿನ (Rsv. 13, 104). ಇಮ್ಪಿನಿಂ (Šm. 76). ಇಮ್ಪು ಸಿಕ್ಕಿದರೆ ಸಮ್ಪು (Prv.). See Bp. 1, 7; 3, 4; 6, 5; 61, 19; J. 1, 12; 3, 3; 6, 21; 15, 17; 31, 23; 33, 8; Grj. 2, after 106. — ಇಮ್ಪುಡರ್. -ಅಡರ್. Agreeableness to arise (Bp. 25, 8; Rsv. 8, 23). — ಇಮ್ಪುಗು. -ಉಗು. To spread about or create pleasantness;— pleasantness to be created (Bp. 1, 48; 35, 3; 42, 15; 55, 51; 61, 41). — ಇಮ್ಪುವಡೆ. -ಪಡೆ. To obtain pleasantness, to become nice, etc. (J. 31, 7). — ಇಮ್ಪೆಸೆ. -ಎಸೆ. Pleasantness to appear (Bp. 46, 54).

ಇಮ್ಪುವತಿ (impu-vati). N. of a plant (ಸಮ್ಪು Mr. 116, o. r. ಸಮ್ಪೆ).

ಇಮ್ಬ imba. (= ಇಮ್ಬು 2). Expansion, width, breadth, magnitude (My.). ಹಾರುವರಿಗೆ ಎಲೆ (leaf-plate) ಇಮ್ಬ, ಒಕ್ಕಲಿಗರಿಗೆ ಕಣ ಇಮ್ಬ (Prv.).

ಇಮ್ಬನೆ imbanĕ. = ಇಮ್ಮನೆ. (Čh. v. 182).

ಇಮ್ಬು imbu. 1. = ಇಮ್ಪು. (Tĕ.). ಇಮ್ಬಿನ ಪದ್ಮಮುಖೀ! (Čh. v. 184). ಇಮ್ಬಿನಿಂ ಕಲ್ಲಾಯ್ತನ್ ಎನ್ದು ವಿದ್ಯಾತಿಕ್ಷಕಂ; ...ಇಳೆಗೆ ಇಮ್ಬಾದ ಪರಿಚಾರಕರ್ಗೆ ಅಕ್ಕಳಾಯ್ತರ್ (Kk. 36; also 9). See Sp. s. ಮಾಳಿಗೆ; J. 9, 28; Čh. v. 53; Rsv. 2, 49; Abh. P. 5, 10. — ಇಮ್ಬುವೆಟ್. -ಪೆಟ್. To become pleasant or beautiful (Rsv. 3, 29).

ಇಮ್ಬು imbu. 2. (= ಇಮ್ಬ). A halting or resting place; a home; a place; space, room (ನೆಲೆ, ಇಕ್ಕೆ, ಹಕ್ಕೆ, ತಾಣ, ಬೀಡು, etc., ಆಶ್ರಯ Šm. 58; Kk. 64; Tĕ. ಇಮ್ಮು). ಕಣ್ಗಳ ಇಮ್ಬಿಗೆ (J. 3, 17). See Prv. s. ಬಮ್ಬು; Grj. 10, after 77. — ಇಮ್ಬಾಗು. -ಆಗು. To become a resting place or shelter (Bp. 8, 18; 57, 54);—to be or become a place (54, 10). 2, to appear (? or to become extensive? Rsv. 11, 67; 13, 75; or is ಇಮ್ಬು 1 meant?). 3, to go aside, to give room (C.). — ಇಮ್ಬಿಡು. -ಇಡು. To deposit (Grj. 4, 104; J. 18, 63). — ಇಮ್ಬು ಕೆಯ್. To seize a place (? ಸ್ಥಾನಸಂಗ್ರಹ Šmd. Dh.). — ಇಮ್ಬು ಕೊಡು. = ಇಮ್ಬುಗೊಡು No. 1. (C.). ನಡೆಯಲ್ ಇಮ್ಬಂ ಕೊಡದ ಜಠಿಗಳ್ (Râghĕ. 17, 56). — ಇಮ್ಬುಗೆಯ್ಯು. To put (Šsv. 1, after 79). — ಇಮ್ಬುಗೊಡು. -ಕೊಡು. To give place, to make room (Bp. 4, 4). 2, to afford room or shelter (Grj. 2, after 106). 3, to deliver, to commit (J. 13, 59). — ಇಮ್ಬುಗೊಳ್. -ಕೊಳ್. To lay hold of place or room. 2, to lay hold of, to seize (Bp. 26, 22). 3, to be extended (59, 17); to be extensive (Rsv. 8, 2). 4, to betake one's self to, to have recourse to, to occupy (J. 8, 20; 11, 9; 26, 11). — ಇಮ್ಬುಗೊಳಿಸು. -ಕೊಳಿಸು. To place (Grj. 10, after 61). — ಇಮ್ಬುವಡೆ. -ಪಡೆ. To be extended, to become great (Grj. 6, after 56; Rsv. 6, 11). 2, to appear (? Grj. 10, after 77; Rsv. 2, after 8; 13, after 71). 3, to settle or be in a place (Rsv. 2, after 8).

ಇಮ್ಬು imbu. 3. = ಎಮ್ಬು 2. A saying, a word (? Tu. ಇನ್, to say, etc.). — ಇಮ್ಬು ಕೆಯ್. = ಎಮ್ಬು ಕೆಯ್. To do what was said, to assent. ಇಮ್ಬು ಕೆಯ್ದನ್ ಎನ್ದು, ಎನ್ದು ದಂ ಮಾಡಿದಂ (Šmd. II; Kk. 87; Abh. P. 14, 193; Tĕ. ಇಮ್ಮು ಕೊನು, to consent; see T. s. ಇಡಿ 1).

ಇಮ್ಮನೆ immanĕ. = ಇಮ್ಬನೆ. (Šmd. 109. 389). In a sweet, pleasant, agreeable or proper manner.

ಇಮ್ಮಿದಳ್ immidaḷ. (Šmd. 245). A sweet or lovely female.

ಇಮ್ಮು immu. = ಇಮ್ಪು, etc. Sweetness, etc.; ambrosia (ಅಮೃತ Čt. I, 82; Tĕ. ಇಮ್ಮು, suitableness).

ಇಮ್ಮೆ immĕ. = ಇರ್ಮೆ 1. Twice. ಇಮ್ಮೆ ಮದುವೆಯಾದವಳು (ಪುನರ್ಭೂ Nr.).

ಇಯತ್ iyat. So large; so much.

Digitized by Google

ಇಯತ್ತೆ iyat-tĕ. *Quantity.*

ಇರ್ ir. 1. = ಇರು 1, ಇಳಿ 1. To be; to exist; to rest, to remain, to stay; to hesitate; to linger, to delay (ಸ್ಥಾಯೀಭಾವ Šmd. Dh.; ನಿಲ್ Šmd. 101. 142. 381. 390 Cm.; T., M. ಇರು). Participle negative ಇರ ಅದೆ (Šmd. 73) or ಇರದೆ (79. 101. 142, etc.);—imperative ಇರು (270. 272. 115; Bp. 28, 10; 41, 29), ಇರ್ (Rsv. 13, 8; J. 28, 45); ಇರಲಿಂ (Šmd. 68), ಇರಲಿ (Bh. 1, 8, 57; 2, 13, 37; Bp. 39, 47; B. 4, 91; 5, 110); (ಇರಿಂ), ಇರಿ (My.; Bp. 1, 44; 3, 78; 4, 4; 12, 44; 22, 48; 37, 39; 51, 26; 53, 19; 54, 8; 55, 38; 56, 15. 16. 19; 58, 39; Bh. 1, 10, 80), ಇರ್ರಿ (S. Mhr.; B. 2, 14; 3, 15; 4, 17; My. occasionally); ಇರೆ (Šmd. 269; Grj. 4, 50; 6, 33);—present ಇರ್ದಪಂ (J. 29, 23; 31, 28), ಇರ್ದಪರ್ (3, 31), ಇರ್ದಹಂ (Bp. 4, 48; 16, 2. 28), ಇದ್ದಾನೆ, ಇಪ್ಪಾನೆ q. v.;—present and future ಇರ್ಪ (Šmd. 75), ಇರ್ಪುದು (264. 280), ಇರ್ಪುವು (59), ಇರ್ಪಂ (275), ಇರ್ಪರ್ (22), ಇರ್ಪಿರ್ (112), ಇರ್ಪಿರಿ (Bp. 55, 41), (ಇರುವ C.), ಇಪ್ಪ q. v., ಇಹ q. v., ಇರ್ಕುಂ (Šmd. 23. 46. 76), ಇರ್ಕು (Bp. 5, 29), ಇರ್ಕ್ಕು q. v.;—P. p. ಇರ್ದು (Šmd.; J. 3, 25), (ಇದ್ದು q. v.), ಇರ್ದ (relative P. p.; Šmd. 64. 128), ಇರ್ದಂ (64. 157. 167. 280), ಇರ್ದತ್ತು (266), ಇರ್ದುದು (J. 25, 3), (ಇತ್ತು q. v.).—ಇರ್ದುದಂ (Šmd. 195); ಇರ್ದುದಱಿಂ (60). ಇರ್ಪುದು (ಅಸ್ತಿ, ಆಸನೆ, ಸ್ಥಿತಿ Nr.). ಬತ್ತಲೆ ಇರ್ದವಳು (ನಗ್ನಿಕೆ Nr.). See *e. g.* Bp. 21, 41; 29, 29; 55, 4; 57, 49; 58, 64; J. 2, 65; 3, 36. 37; 17, 20; 28, 26. ಒಬ್ಬರಿಗೊಬ್ಬರು ಪ್ರೀತಿಯಿನ್ದ ಇರ ಬೇಕು; ತಮ್ಮ ತಮ್ಮೊಳಗೆ ಪ್ರೀತಿಯಿನ್ದ ಇದ್ದರೆ; ಅವರೆಲ್ಲರು ಪ್ರೀತಿಯಿನ ಇರುವದಱಿನ್ದ (B. 2, 41). ಆನನ್ದದಿನ್ದ ಇರ್ (see s. ಆನನ್ದ); ಸುಖದಿನ್ದೆ ಇರ್ಪೆಂ (Rsv. 4, 117).—See about the use of ಇರ್ and ಇರು in connexion with ಆಗಿ s. ಆಗು 1, and also the instances s. ಇದ್ದು.—ಇರಗೊಡು. -ಕೊಡು. To allow to be or to remain (B. 4, 25).—ಇರವೇಡ. -ಬೇಡ. Do not be! (Bp. 45, 35; 52, 21; 58, 34).—ಇರವೇಟ್ಕು. -ಂ. -ಬೇಟ್ಕು, -ಂ. Do be! (Bp. 37, 5; 53, 17).—ಇರಿರ್. rep. ಇರ್ದಿರ್ದು (Bp. 57, 12).—ಇರಲ್. -ಲು. Being, remaining. ಕಟ್ಟೆ ತುಪ್ಪಿದ ಮೇಲೆ ಚಣಮಾತ್ರಮ್ ಇರಲಿಲ್ಲ (Dp. 4).—ಇರಲ್ಪಡು. = ಇರ್. (Šmd. 299. 300).—ಇರ್ದನ್ತಿರ್. ಇರ್ದ-ಅನ್ತೆ-ಇರ್. To be as he, she, it, etc. used to be. ಮನೆಯೊಳ್ ಇರ್ದನ್ತಿರ್ದು ಜೀವಂ ತನುವನ್ ಅಗಲಿದ ಚಿಕ್ಕ ಮೂದಣ್ಣಂ (Bp. 47, sum.). ಇರ್ದನ್ತಿರ್ದು may occasionally be translated by "without an apparent cause, all at once, suddenly", *e. g.* ಈ ಬಲುಗುತ್ತಮ್ ಇರ್ದನ್ತಿರ್ದು ನಿನಗೆ ಎನ್ತಾಯಿತು, ಎಲೆ, ಕನ್ದ? (Bp. 15, 19).—ಇರ್ದಹಗೆ. -ಅಹಗೆ. Just as he, she, it was, just as they were (Bp. 61, 38).—*Cf.* ಇಱು.

ಇರ್ ir. 2. Affix for the formation of the plural (*cf.* ದಿರ್, ವಿರ್), *e. g.* ಹೆಣ್ಡಿರ್, ತೊಟ್ಟಿರ್ (Šmd. 120). ಸಾಯಿರ ಪೆಣ್ಡಿರ್ (111). ಸುರಸಾಲಯಂಗಳಿರ್, ದೆಸೆಗಳಿರ್, ದೇವಿಯರಿರ್, etc. (see s. ಇರ 1).

ಇರ್ ir. 3. = ಇರಿ 1. Affix for the formation of the second person plural, *e. g.* ಪೊರ್ದುಪಿರ್, ತಿರ್ದುಪಿರ್ (Šmd. 255), ನುಡಿದಿರ್ (61), ಬೇಡಿದಿರ್ (91), ಏಱಿಪಿರ್ (153), ಒಲ್ಲಿದಿರ್, ಒಳ್ಳಿದವಿರ್, ಪೆಱಿರ್, ಪೆಱದರಿರ್, etc. (257), ಕೂರಿದಿರ್, ಕೂರಿದರಿರ್ (258), ಅನ್ತರಿರ್, etc. (258), ಪೇಟ್ದಿರ್, ಬನ್ದಿರ್ (263). ಆಱುಯಿರೆ? (153). ಕೇಳಿರೆ? (153. 163).

ಇರ ir2-a14. 1. = ಇರಾ. (Šmd. 153). ಸುರಸಾಲಯಂಗಳಿರ! ದೇವಿಯರಿರ! (112). ದೆಸೆಗಳಿರ, ಮುಗಿಲ್ಗಳಿರ! (153). ಮುನಿಗಳಿರ! (Bp. 1, 44). ಶಿವಭಕ್ತಿಹೀನರಿರ! (3, 82). ಗನ್ಧರ್ವರಿರ! (34, 9). ಮರಗಳಿರ! (45, 42). ದುರುಳರಿರ! (50, 49).—ಇರಾಗಮ. -ಆಗಮ. The augment ಇರ (Šmd. 152).

ಇರ ira. 2. = ಇರು 2, etc. Two.—ಇರವನ್ತಿ. -ವನ್ತಿ. = ಇರವನ್ತಿಗೆ q. v., ಇರುವನ್ತಿಗೆ, ಇರುವನ್ತಿಗೆ, ಇರುವಯ್ತಿ, ಇರ್ವನ್ತಿಗೆ. (A plant of) a set or collection of five and two, or of seven (this name being an imitation of ಸಪ್ತಲೆ; ನವಮಾಲಿಕೆ Mr. 126; ಅಜ್ಜಗೆ Šm. 27). See ಕಾಡ ಇರವನ್ತಿ; Grj. 5, 71. 72.—ಇರವನ್ತಿಗೆ. -ವನ್ತಿಗೆ. = ಇರವನ್ತಿ, etc. The many flowered Nykthanthes, double jasmine, Jasminum sambac (ಸಪ್ತಲೆ, ನವಮಾಲಿಕೆ Nr.; ಅಜ್ಜಗೆ Šs.; ಹೆಜ್ಜಾಜಿ Si. 139). See ಕಾಡಿರವನ್ತಿಗೆ.—ಇರವಾರ. = ಇರುವಾರ q. v. ಇರವಾರ ಕೆಟ್ಟು, ಪುರವಾರ ಸೇರಿದ (Prv.).

ಇರಚು iraču. = ಇರಸು, etc. (My.).

ಇರಟು iraṭu. = ಇರಳು, etc. (T. ಇರಟ್ಟು, ಇರುಟ್ಟು; R.).

ಇರಣ iraṇa. = ಇರಿಣ. (G.).

ಇರಪು irapu. = ಇರವು. (Mr. 82).

ಇರಮ್ಮದ iram-mada. = ರಮ್ಮದ. *A flash of lightning.*

ಇರವನ್ತಿ iravanti. ಇರವನ್ತಿಗೆ. See s. ಇರ 2.

ಇರವು ir-a-vu. (Šmd. 247). = ಇರಪು. Being; staying, resting; support; state, condition, system (ಸ್ಥಿತಿ, ಅಧಿಷ್ಠಾನ Nr.; ಆಶ್ರಯ Nr.; ಸ್ಥಿತಿ Nn. 154). ತನ್ನಿರವು (ಸ್ಥಿತಿ, ವ್ಯವಸ್ಥೆ Mr. 486). ಸಮೀಪದ ಇರವಿನಲ್ಲಿ ಉಪಘ್ನ ಎನಿಸುಗು (Nr.). ಕರಡೆಯ ಗಿರ್ಗಟದ ಧ್ವನಿಯನ್ತೆ ಇರವು (Šmd. 76). ಆಯಿರ್ದ (-ಇರ್ದ) ಮೂಟ್ಕಿಯೊಳೆ ಪರಮಾಯುಷ್ಯಾನ್ತಮ್ಬರಂ ನಿರಾಕುಲಮಾಗಿ ಇರ್ಪ ಆಯಿರವಿನ ಜೈನಾಭಿಪ್ರಾಯಂ ಪ್ರಾಯೋಪಗಮನಮಂ ನೋಡಿಸಿದಂ 64. 128). ಸನ್ಯಾಸ ತನಗೆಮ್ಬುವನ್ಯಾಯನುಡಿ ಯಾಕೆ? ಉನ್ನತದೇವರಿರವಱಯ! ತನ್ನೊಡಲದನ್ಯಾಯದಿರವು! (Sp.). See Grj. 4, 41; Bp. 2, 40. 45; 3, 28. 39. 53; 19, 82; 20, 15; 22, 55; 23, 42; 29, 29; 30, 24; 35, 42; 38, 43 *b.*; 40, 58. 60; 43, 2; 51, 24; 57, 15; 61, 72; Rsv. 4, 79; 5, 132; 8, 109; 11, 7; Bh. 1, 8, 5. 64. 70; J. 2, 15; 5, 32; 18, 27; 24, 52. 59; 32, 26).

ಇರಸಾಲು irasâlu. A remittance to the treasury (C.; Br. ಇರುಸಾಲು, ಇರ್ಸಾಲು; Mhr. ಇರಸಾಲ).

ಇರಸು irasu. (ಇಱಸು?). = ಇರಚು, ಇರಿಚು, ಇರುಚು, ಇರ್ಚೆ, ಇಚ್ಚು. An iron axle-tree (S. Mhr.; Tĕ. ಇರುಸು; T. ಇರುಚು).

ಇರಳು iraḷu. = ಇರಟು, ಇರುಳ್ q. v., ಇರುಳು, ಇರ್ಳು. Night (C.; *cf.* T. ಇರವು, ಇರಾ, ಇರಾತ್ರಿ = ರಾತ್ರಿ).—ಇರಳುಗಣ್ಣು. -ಕಣ್ಣು. An eye that is blind at night (C.).—ಇರಳುಗೆಲಸ. -ಕೆಲಸ. Night work (C.).—ಇರಳು ಹಗಲುಂ. Night and day (Bp. 47, 4).

ಇರಾ ir2-â5. = ಇರ 1. ದೇವಿಯರಿರಾ! (Šmd. 112). ಜಡರುಗಳಿರಾ! (Bp. 21, 10). ಪಾಹಕರಿರಾ! (59, 40).

ಇರಾದಾ irâdâ. Purpose, design, intention: will, accord (My.; Br.; Mhr., H.).

ಇರಾದೆ irâdĕ. = ಇರಾದಾ. (My.).

ಓತಿ ôti. A kind of lizard or chameleon; the lizard commonly called a blood-sucker, Lacerta cristata (ಸರಟ, ಕೃಕಲಾಸ Hlâ., Nr., Mr. 154; ದ್ವಿಜ, ಸರಟ Nn. 36; My.; Tu. ಓನ್ತಿ; T. ಓತ್ತಿ, ಓದಿ, ಓನ್ದಿ; M. ಓನ್ತು). See Prv. s. ನಾನು 1. — ಓತಿಕಾಟ. = ಓತಿ. (C.). ಓತಿ ಕಾಟಕ್ಕೆ ಬೇಲಿ ಸಾಕ್ಷಿ (Prv.). — ಓತಿಕೇತ. = ಓತಿ. (My.). — ಓತಿಕ್ಯಾಟ. = ಓತಿ. (My.; Si. 170). — ಓತಿಕ್ಯಾತ. = ಓತಿ. (My.).

ಓತು ôtu. 1. = ಓತ 1, etc. Reading; that has been read or studied: the vêda (ಪಡಿವಾತು, ಸುತಿ, ವೇದ Šs.; T., M. ಓತ್ತು).

ಓತು ôtu. 2. P. p. of ಓ 4.

ಓತು ôtu. 3. = ಅವಿತು, etc. (Bp. 18, 79).

ಓತು ôtu. *A cat.*

ಓತ್ವ ôtva. The letter ಓ (Šmd. 65. 132. 188. 250. 355; Kâvy. I, 3, 104-108).

ಓದ ôda. = ವಾದ 1, q. v. (My. occasionally).

ಓದನ ôdana. *Boiled rice* (ಓಗರ Mr. 214; ಬ್ರಹ್ಮ, ಅಶನ Nn. 79).

ಓದಾಳಿ ôdu2-âḷi. (Šmd. 299. 111). A person fond of reading (My.); a reader; a learned man (ಬಟ್ಟ Čt. I, 17; ಪಾಠಕ II, 39). See s. ನೇದಿ.

ಓದಿಕೆ ôdikĕ. Reading (C.).

ಓದಿಸು ôdisu. To cause to read; to instruct in the šâstras (ಶಾಸ್ತ್ರಶಿಕ್ಷೆ Šmd. Dh.). ಓದಿಸುವಾತ (ಅಧ್ಯಾಪಕ, ಉಪಾಧ್ಯಾಯ Hlâ.). ವೇದವನ್ನು ಓದಿಸುವವನು (ಅಧ್ಯಾಪಕ Si. 233). See Bp. 31, 28; 42, 5; 47, 32; 55, 45. 53. 54; J. 10, 15.

ಓದು ôdu. 1. To utter; to read; to recite; to study; to say (ಪಠನ Šmd. Dh.; ಉಚ್ಚರಿಸು Šmd. Cm. 38. 41. 140. 189; ಪೇಳ್ Šmd. 173; C.; T., M., Tu.; Tĕ. ಚದುವು; *cf.* Sk. base ವೋಚ್ of ವಚ್?). ಓದುವ ಅನುಕ್ರಮಂ (ಪಾಠಕ್ರಮಂ Šmd. 11). ಪೂರಯ್ಸಿ ವೇದವೋದಿದವಂ (ಅನೂಚಾನ Mr. 250); ಓದೆನ್ದು ಪೇಳುವನು (ಉಪಾಧ್ಯಾಯ 251); ಮಿಗೆ ಓದಿದವಂ (ಪಾರಾಯಣ 252); ಓದುವ ಗೃಹ (ಶಿಕ್ಷಾಲಯ 197). ಓದುವ ಮಠ (ಮಠ, etc.); ವೇದವನ್ ಓದಿವಾತನು (ಛಾನ್ದಸ Nr.). ಎಲ್ಲಾ ವೇದವನ್ ಓದಿದಾತನು ಅನೂಚಾನನ್ ಎಮ್ಬುದು; ಶ್ರೋತ್ರಿಯನು ಛಾನ್ದಸನ್ ಎಮ್ಬುದು (Hlâ.). ವೇದವನ್ ಓದುವಲ್ಲಿ ಚಿಮ್ಮಿದ ಉಗುಳುಗಳು (ಬ್ರಹ್ಮಬಿನ್ದು); ವೇದದ ಮೊದಲನ್ ಓದ ತೊಡಗಿದವನು (ಶೈಕ್ಷ, etc. Nr.). ಕಡೆ ಮುಟ್ಟಲ್ ಓದುವುದು (ಪಾರಾಯಣ, etc. Hlâ.). ಓದಿ, ಬೂದಿಯ ಪೂಸಿ, ತೇದು ಕಾವಿಯ ಹೊದೆದು ಹೋದಾತ ಯೋಗಿ ಎನ ಬೇಡ! ಇನ್ದ್ರಿಯವ ಕಾದಾತ ಯೋಗಿ! (Sp.). (ದುಷ್ಕವಿಗಳ ಕೃತಿಯನ್) ಓದಿದೊಡೆ ಕಲ್ಲ ಮಾಲೆಯ ನಾದಂ (Grj. 1, 21). ಕರ್ಪೂರದ ಕರಡಿಗೆಯ ಬಾಯ್ ತಪ್ಪದೆ ಓದುವನ ಬಾಯ್ (Sp.). ಓದಿದವನು ಛೇದಾ ತಿಳಿವಾನು. — ಓದೋದು ಶಾಸ್ತ್ರ, ಇಕ್ಕೋದು ಗಾಳ (Prvs.). See Šmd. 287; Grj. 2, after 106; Bp. 24, 33; 57, 21; Prll. 3, 5; Rsv. 4, 76; Šsv. 1, after 79; J. 8, 24; 30, 24. 50; Šm. 107; Dp. 87. — ಓದಗಲಿಸು. -ಕಲಿಸು. To teach to read (C.). — ಓದಾಟ. -ಆಟ. Reading (My.). ಒಕ್ಕಲಿಗನ ಓದಾಟ ನಾಯ್ಕ ಒಡನಾಟ (Prv.). — ಓದು ಓದು. rep. (Šmd. 230). ಓದಿಯೋದಿ ಮರುಳಾದ ಕೋಚು ಭಟ್ಟ (Prv.).

ಓದು ôdu. 2. = ಓತ 1, etc. Reading, etc. (C.). ಓದಿಂಗೆ ಓತಂ (Šmd. 246). ಏನೇನೋ! ಓದಿನ ಪರಿ ಲೇಸು, ಲೇಸು! (69). ನಿನ್ನತಂ ನೆರವಿನ ಓದಿನ ಕಬ್ಬಮನ್ ಓದದಿರ್ ಸುಧಾನಿಲಯದ ಮುನ್ದೆ, ಸತ್ಕೃತಿಯ ಮುನ್ದೆ (Grj. 1, 26). ಆಚಾರದ ಓದಿನ ನೆಡುವಣಿಗೆ (ಬ್ರಹ್ಮವರ್ಚಸ Hlâ.). ಓದಿಲ್ಲದಂ (ಅನಧ್ಯಾಯ, ನಿರಾಕೃತಿ Mr. 253). ಸಾಲಿಗೆ ಹೋಗಿ ಓದು ಕಲಿಯುವದಿಲ್ಲ (B. 1, 18). ಒಕ್ಕಲಿಗನ ಓದಲ್ಲ (*i. e.* ಅಲ್ಲದದು), ಬೆಕ್ಕು ಹೆಬ್ಬುಲಿಯಲ್ಲ, ಎಕ್ಕೆಯ ಗಿಡವು ಬನವಲ್ಲ; ಇವು ಮೂರು ಲೆಕ್ಕದೊಳಗಲ್ಲ (Sp.). See Bp. 9, 18; 57, 74; Sp. s. ಅಕ್ಕರ. — ಓದು ಗೀದು. reit. (Bp. 53, 61; My.). — ಓದುಳ್ಳಂ. -ಉಳ್ಳಂ. (Šmd. 242). A man of extensive reading.

ಓದುಗಾಱ ôdu-gâṟa. = ಓದುಂಗಾಱ. (My.).

ಓದುಂಗಾಱ ôdu-ṅ-gâṟa. (Šmd. 236). A reader; a student; a clever reader.

ಓದುವಿಕೆ ôduvikĕ. Reading, etc. (ನಿಪಾಠ, ಪಾಠ Si. 397; see also 251).

ಓನ ôna. 1. A contraction of ಉವನ in the genitive masculine (My.), *e. g.* ಬಡಿಯೋನ (*i. e.* ಬಡಿಯುವನ = ಬಡಿಯುವವನ) ಹತ್ತರ ಬಡತನ ಹೋದೀತೇ? (Prv.).

ಓನ ôna. 2. = ಓಣ. A contraction of ಉವನ, *e. g.* in ಹೋಗೋನ! (My.).

ಓನಾಮ ô-nâma. = ಓನಮಾನ. The name or mantra that begins with ಓ, *i. e.* ಓ ನಮಃ ಶಿವಾಯ (C.). 2, a name of the alphabet of which formerly the letter ಓ (as a salutation) was first taught to write (C.; Tĕ.).

ಓಪ ôpa. = ಓವ 1. The present relative participle of ಓ 4, q. v.

ಓಪಾದಿ ôpâdi. (fr. ಓಲ್ 1). Likeness, similarity (C.; Tĕ.; Tĕ. ಓಪು, to fit, to suit; ಒಲುಪು, ಪೋಲುಪು, to compare). ಕಣ್ಣ ಕಸವಿನ ಓಪಾದಿಯವನು (ದ್ವೇಷ್ಯ, ಅಕ್ಷಿಗತ Nr.). ತಾಯಿಯ ಓಪಾದಿಯಲಿ (Bp. 15 sum.). ತಾಯೋಪಾದಿಯಲಿ (25, 7). ಕಡಲಿನೊಳು ದ್ವೀಪದ ಓಪಾದಿಯಾಗಿ ಇರುವ ಮೀನು (Si. 88).

Digitized by Google

ಒನ್ದು ಮನೆಯೋಪಾದಿಯುಲ್ಲಿ (B. 4, 59). ಗುಡುಗಿನೋಪಾದಿಯಲ್ಲಿ (4, 91). See Si. 114. 117. 204.

ಓಬಿಕಾಲ ôbi-kâla. A long time past (My.; H.).

ಓಮ್ ôm. The syllable ôm. 2, *yes*.

ಓಮ ôma. = ಓಮು, ಓವ 2, ಓವು 1, (ವಾದಕ್ಕಿ), ವಾಮ, ವೋಮ, ಹೋಮ. Bishop's weed, Ligusticum (or Ptychotis) ajwaen Roxb. (My.; ಖರಾಶ್ವಿ, ಕಾರವಿ, ದೀಪ್ಯ, ಮಯೂರ, ಲೋಚಮಸ್ತಕ Si. 149; Tu., T., M.; Tĕ. ಓಮ, ವಾಮ; Mhr. ಓಂವಾ). ಓಮ ತಿನ್ದ ಕತ್ತೇ ಹಾಗೆ.—ಓಮ ತಿನ್ದರೆ ಕ್ಷಾಮ ಹೋದೀತೇ? (Prvs.).

ಓಮ ôma. 1. Favour, kindness; assistance (Bp. 43, 86; Sk. ಓಮನ್; *cf.* ಓ 4).

ಓಮ ôma. 2. Tbh. of ಹೋಮ. (My.).

ಓಮಾನ ômâna. A vulgar Tbh. of ಒನಾಮ (S. Mhr.).

ಓಮು ômu. = ಓಮ, etc. — ಓಮುಕಾಳು. The seed of Bishop's weed (ಅಜಮೋದೆ, ಉಗ್ರಗನ್ಧೆ, ಬ್ರಹ್ಮದರ್ಭೆ, ಯವಾನಿಕೆ, ಅಜಾಮೋದ Si. 158; ದೀಪಕ 406).

ಓಯಿ ôyi. An interjection used in calling: O! oh! ho! hallo! (ಸಮ್ಬೋಧಿಸಿ ಕರೆಯುವದು Si. 472; C.; Tĕ., Tu.; T. ಓಯ್).

ಓರ್ ôr. 1. = ಒರ್, when meeting with a vowel (Šmd. 213). One, etc. (T., Tĕ.). — ಓರಡಿ. -ಅಡಿ. One foot (Č. Bp. 19, 34). — ಓರನ್ತೆ. -ಅನ್ತೆ. Just like the one; in the same manner; just as before; always alike; habitually; fitly (ಒನ್ದೆ ತೆರದಿಂ Čt. II, 73). ಅಡಗನ್ ಓರನ್ತೆ ತಿಮ್ಬುವಂ (ಶಾಷ್ಕುಲ Mr. 231). See Ch. v. 224; Bp. 6, 22; 13, 12; 14, 19; 18, 12; 26, 40; 39, 4; 40, 7. 34; 41, 15; 46, 49; 47, 32; 50, 53; Mr. 99. 157. 197. 472; Šm. 106. 116. 119; Grj. 9, 1; Rsv. 5, 29. 130; 13, 70; 14, 53; J. 32, 32. — ಓರನ್ನ. -ಅನ್ನ 1. Being of one and the same kind (adj., Abh. P. 2, 9); similarity (Abh. P. 15, after 45; Grj. 10, after 45). — ಓರೆಂಜಲ್. -ಎಂಜಲ್. (Šmd. 214). One, or an, impure remnant of food. — ಓರೆಲೆದಾವರೆ. -ಎಲೆ-ತಾವರೆ. A perennial herb, Ionidium suffruticosum Ging. (St. & Pl.). — ಓರೊನ್ದು. -ಒನ್ದು. = ಒನ್ದೊನ್ದು. (Šmd. Cm. 368; see Šmd. 219). — ಓರೊರ್ಮೆ. -ಒರ್ಮೆ. = ಒಮ್ಮೊಮ್ಮೆ. (Rsv. 4, 121). — ಓರೊರ್ವ. -ಒರ್ವ. = ಒಬ್ಬೊಬ್ಬ. (Bp. 9, 29; Č. Bp. 47, 14).

ಓರ್ ôr. 2. ಓರು. = ಪೋರ್ 3. A hole (My.).

ಓರ ôra. = ಓರೆ, ವಾರ 1, q. v. Declivity, sloping; sideways, etc. (My. in compounds; T., M. ಓರ, ವಾರ; Tĕ. ಓರ, ವಾರೆ); side, edge, margin, brim (My.; T., M., Tĕ.). — ಓರಪಾಕೆ. = ಒಪ್ಪಾರು. (My.; Tĕ.). 2, a verandah (My.; Tĕ.). — ಓರಪಾಕು. = ಓರಪಾಕೆ. (My.).

ಓರಗಿತ್ತಿ (ôragĕ-itti). = ವಾರಗಿತ್ತಿ. A husband's brother's wife (My.; T. ಓರಗತ್ತಿ, ಓರಾತ್ತಾಳ್, ಓಯ್ಪಡಿಯಾಳ್). ಓರಗಿತ್ತಿಯರು (ಯಾತೃಗಳು Si. 191).

ಓರಗೆ ôragĕ. (fr. ಓರ್ 1). (Šmd. 16, o. r. ಓರಿಗೆ). = ಓರಿಗೆ, ವಾರಿಗೆ. Equality (of age, etc.); similarity; a match (Rsv. 5, 126; My.). ಐರಾವತಕ್ಕೆ ಸುಪ್ರತೀಕಮ್ ಓರಗೆ (Šmd. 159). ಓರಗೆಯ ಗೆಳೆಯ (ಸ್ನಿಗ್ಧ G.). — ಓರಗೆಗೊಳ್. -ಕೊಳ್. To be on a par with, etc. (Rsv. 4, 76). — ಓರಗೆಯವ. -ಅವ. A man of the same age (My.; ಸವಯ, ಸವಯಸ್ಸು G.).

ಓರಡಿ ôradi. = ವಾರಡಿ. Sloping, declivity (My.). 2, variance, difference or unevenness in scales (My.; Tĕ. ವಾರೆ). — ಓರಡಿ ಕಟ್ಟು. = ಪೇರು ಕಟ್ಟು. (My.).

ಓರಣ ôraṇa. (fr. ಓರ್ 1). A line, a row (Bh. 1, 12, 8; 2, 13, 17; Č. Bp. 5, 5; J. 8, 17; 12, 44; 30, 2). — ಓರಣಂಗೊಳ್. -ಂ-ಕೊಳ್. To form or take the shape of a line (Ssv. 1, after 79). — ಓರಣವ್ಹಿಡಿ. -ಂ-ಪಿಡಿ. = ಓರಣಂಗೊಳ್. Ssv. 1, after 79).

ಓರಣಿಸು ôraṇisu. To form, or be in, a row (Bh. 8, 23, 43); — to put in a row (Bh. 1, 10, 25).

ಓರಿಗೆ ôrigĕ. = ಓರಗೆ, q. v. (My.). ಈ ರಾಜಪುತ್ರರು ಚಕ್ರವರ್ತಿಯ ಓರಿಗೆಯವರು (B. 4, 5). ನಿನ್ನ ಸಂಗಡದ ಓರಿಗೆಯ ಮಕ್ಕಳಿಗೆ ಕೊಟ್ಟೆಯೊ? (Bp. 14, 26). ನಿಮ್ಬಿಯಕ್ಕನ ಮಗನ ಓರಿಗೆಯೊ? (47, 37).

ಓರು ôru. 1. = ಹೋರು. To fight (My.).

ಓರು ôru. 2. (= ಒಱೆ). To think, to ponder, to consider, to inquire (M. ಓರ್, T. ಓರು; R.).

ಓರೆ ôrĕ. (fr. ಓಲು 3; or fr. ಓರ್ 1: one-sidedness?). = ಓರ, etc. The state of being aslant, leaning, oblique, sloping, bending, going sideways; declivity (My.; Te.); crookedness (My.); wrongness (My.); variance (Bp. 54, 11). See Bp. 6, 2; 25, 26; 28, 49; 40, 58; 43, 85; 52, 44; 54, 11; Šm. 29; Râm. 6, 14, 23; Bh. 2, 4, 10; 2, 13, 41; Si. 288. ತಲೆಯನ್ನು ಓರೆ ಮಾಡಿ (B. 3, 11; 5, 25). See Prv. s. ಕುಣಿ 3. — ಓರೆಕಿವಿ. A bent, crooked ear (C.). — ಓರೆಕೈ. A bent, crippled hand (C.). — ಓರೆ ಕೋರೆ. reit. (My.). — ಓರೆಗಟ್ಟು. -ಕಟ್ಟು. A tie bending to one side: a way of tying the turban sideways to cook with it (C.). — ಓರೆಗಣ್ಣು. -ಕಣ್ಣು. An eye that looks obliquely, a squint-eye (C.); — a look of disfavour (My.). — ಓರೆಚಪ್ಪರ. A roof that deflects to one side (C.). 2, a pent-roof (My.). — ಓರೆದುರುಬು. -ತುರುಬು. A turubu that stands to one side (J. 26, 9; C.). — ಓರೆ ಪೋರೆ. reit. (J. 26, 62; My.). — ಓರೆಮೂಗು. A crooked nose (My.). — ಓರೆಮೋರೆ. A wry face (C.). — ಓರೆಯಾಗು. -ಆಗು. To become crooked, to be bent (C.); — to go or step to one side or aside (C.). — ಓರೆವೋಗು. -ಪೋಗು. To bend to one side (Abh. P. 13, 69).

ಓಱೆ ôṟĕ. (Tĕ. ಓರು, the red painting upon the lower part of a house used as a decoration).

ಓಱೆಗಾಱ ôṟĕ-gâṟa. A painter (ರಂಗಜೀವ, ಚಿತ್ರಕೃತ್ Hlâ., MS. ವ್ಯಾಲಿಗಾಱ).

ಓಲ್ ôl. 1. = ಒಲ್ 2, etc. (Tĕ. ಓಲು, ಪೋಲು, to resemble; see ಪೋಲ್ 1 & 2). ಮಿಕ್ಕರೋಲ್ (Mr. 7). ರಾಜ್ಯ ಜೇಂಕೊಡನೋಲ್ ತುಮ್ಬಿ ತುಳುಂಕೆ (Sš. 96). See Grj. 4, 95; J. 28, 1. 28.

ಓಲ್ ôl. 2. ಓಲು. (= ಒವಲ್ fr. ಓ 4). (Tĕ. ಓಲಿಮಿಕೆ, friendship). — ಓಲಾಟ. -ಆಟ. Affection, friendship (My.). — ಓಲಾಡು. -ಆಡು. To have affection for, to love (My.).

ಓಲ್ ôl. 3. ಓಲು. (Tĕ. ಓಲೆ, bathing, playing in water; ಓಲಲಾಡು, ಓಲಾಡು, ಓಲ್ಲಾಡು, ಓಲ್ಲಲಾಡು, to gambol, to revel; to gambol in water; to bathe; *cf.* the terms s. ಒಸೆ?). — ಓಲಾಡಿಸು. -ಆಡಿಸು. To cause to play in water or to bathe, to cause to revel, etc. See Bp. 8, 59; 13, 27; 20, 7; 22,

Digitized by Google

63; 36, 50; 41, 18; 46, 74; 47, 8; 55, 47. — ಓಲಾಡು. -ಆಡು. To move to and fro, or sport, in water; to swim, to bathe; to revel (ಜಲಕೇಲಿ Šmd. Dh.). See Abh. P. 3, 132; Bp. 3, 9; 5, 11. 43; 6, 25; 31, 30; 43, 77; 55, 2; J. 5, 14; 28, 54. — ಓಲಾಡು ಓಲಾಡು. rep. (Bp. 53, 3).

ಓಲ್ ôl. 4. (= ಓಲು 3). — ಓಲಾಟ. -ಆಟ. Swinging or dangling about (ತೂಗು Čt. I, 71, o. r. ಅಲ್ಲಾಟ; *cf.* ಒಲೆ 2, ಓಲು 3).

ಓಲಗ ôlaga. 1. = ವಾಲಗ 1. Service, homage; an assembly; a levee; an audience; a durbar (My.; Tĕ., Tu.; T. ಓಲಕ್ಕ; M. ಓಲಕ್ಕ, splendour, majesty). ಓಲಗದ ವಿನಿಯೋಗಭೇದ ಕರಣ, ಸಭಾಭೇದ Nn. 108). See Šmd. 13. 63. 157; Grj. 2, after 106; Bp. 5, 43. 71; 10, 1; 24, 50; 37, 52; 47, 9. 41; 53, 12. 33. 34; 61, 31; Č. Bp. 47, 14; Râm. 6, 13, 4. 5; Bh. 1, 8, 34. 48; 2, 13, 31; J. 2, 51; 3, 32; 16, 23; B. 4, 126. See ಒಡ್ಡೋಲಗ, ಪೇರೋಲಗ. — ಓಲಗ ಈ. To hold a public levee or council; to pay homage, to be in attendance; to form an assembly, to meet together. See Bp. 26, 23; 51, 79; 52, 37; 53, 32. — ಓಲಗಂಗೊಡು. -ಂ-ಕೊಡು. = ಓಲಗ ಈ. See Bp. 10, 33; 36, 50; 37, 2; 55, 10; Rsv. 13, after 61; Č. Bp. 3, 6; 47, 13. See ಪೇರ್-. — ಓಲಗಂ ಪರಿ. A court, levee, etc. to disperse (Bp. 54, 83). — ಓಲಗವೆರಸು. -ವೆರಸು. To join, or be in company with, an assemblage (Bp. 5, 19; 50, 18). — ಓಲಗಶಾಲೆ. A royal court; a hall of audience; a levee room (Rsv. 12, 41; Šiv. 1, 69; Č. Bp. 5, 49).

ಓಲಗ ôlaga. 2. = ವಾಲಗ 2. A hautboy (My.).

ಓಲಗಾರ್ತ ôlaga-ârta. Desire of paying homage (Râm. 6, 53, 75).

ಓಲಗಿಕಾರ ôlagi-kâṛa. A servant; a follower (ಅನುಜೀವಿ, ಸಹಾಯ, ಸೇವಕ, ಅನುಚರ, ಅನುಗ Hlâ.).

ಓಲಗಿಸು ôlagisu. = ಓಲಯ್ಸು, ಓಲವಿಸು. To serve; to pay homage to; —to assemble, to bring together (Abh. P. 10, after 36). ಓಲಗಿಸುವವನು (ಸೇವಕ, ಅರ್ಥಿನ, ಅನುಜೀವಿ Nr.). ಕಿವಿಗೆ ಓಲಗಿಸಿತ್ತು ಮತ್ತೆ ಕೋಕಿಲರವದೆ ಒರ್ಮೆ, ಶುಕಸ್ವರದೆ ಒರ್ಮೆ ಮಾಮರಂ (Čpr. 7, 48). ಮಾರಹರನಂ ಬಹುಯುಗಂಗಳೊಳ್ ಓಲಗಿಸಿದಂ (Bp. 54, 41). See Abh. P. 6, 153; Bp. 1, 41. 42. 43. 52; 10, 31; 51, 1. 11; Bh. 1, 8, 7. 35; 2, 13, 15; Šiv. 1, after 79.

ಓಲಯ್ಸು ôlaysu. = ಓಲಗಿಸು, etc., (ಅಲಯ್ಸು 2). (ಅರಸನ) ಚಿತ್ತವೃತ್ತಿಯನ್ ಅರ್ದು, ಹತ್ತಿಏಡದು, ಓಲಯ್ಸು! (Sp.). ಅನವರತಮ್ ಅಗಲದಲೆ ಜನಪತಿಯನ್ ಓಲಯ್ಸು! (Sp.). See Grj 10, 40; Bh. 1, 8, 60; J. 4, 60; 6, 47; 24, 6; Bp. 5, 11; 10, 26. 30; 43, 42; 54, 68; 61, 30. 57. 2, to assemble (v. i., Č. Bp. 47, 38). 2, to be surrounded or accompanied (Č. Bp. 5, 8).

ಓಲವಿಸು ôlavisu. = ಓಲಗಿಸು. See Bp. 21, 7; 29, 31; 51, 63; 52, 49.

ಓಲಿಸು ôlisu. = ಹೋಲಿಸು, etc. (My.).

ಓಲು ôlu. 1. = ಹೋಲ್ 1, etc. To resemble (My.; see ಓಲ್ 1.).

ಓಲು ôlu. 2. = ಒಲ್ 2, etc. Also: a bail, a security, a surety, a pledge; a hostage (My.; *cf.* ಹೊಣೆ). — ಓಲಾಗು. -ಆಗು. To become bail or surity; to become a hostage (My.). — ಓಲಿಡು. -ಇಡು. To give as a pledge or security; to give a hostage (My.). — ಓಲು ಕೊಡು. = ಓಲಿಡು. (My.).

ಓಲು ôlu. 3. = ವಾಲು 1, etc. To bend (v. i., My.; Tĕ. ವಾಲು, ವ್ರಾಲು); to slope, to slant (My.; Tĕ.); to hang, to dangle (Tĕ. ವೇಲು, ವ್ರೇಲು; see ಓಲ್ 4).

ಓಲುಗಾರ ôlu-gâṛa. A male bail, security or bondsman; a male hostage (My.).

ಓಲುಗಾರ್ತಿ ôlu-gârti. A female bail, etc. (My.).

ಓಲೆ ôlĕ. = ವಾಲೆ. A leaf of a palmyra-tree, especially one of the talipot or fan-palm, Corypha umbraculifera Lin., a cadjan leaf used to write on with an iron style (ಪತ್ರ Mr. 359; C.; M., Tu.; T. ಓಲೈ). **2,** a coil of palmyra leaf occasionally worn as an ornament in the lobe of a female's ear (Tu.; My. as ಬಿಚ್ಚೋಲೆ). **3,** an ear-ring of gold, etc. worn in the lobe of the ear of a female whose husband is alive (C.). **4,** an umbrella-shaped awning over a cart (S. Mhr.). ಕಿವಿಯ ಓಲೆ (ತಾಡಕ, ತಾಲಕ, ತಾಲಪತ್ರ, ಕರ್ಣಿಕೆ Hlâ., Nr.). ಕರ್ಣದ ಓಲೆ (ತಾಲಕ, ತಾಲಪತ್ರ Mr. 337). ಕಿವಿಗೆ ಇಟ್ಟು ಕೊಳ್ಳುವ ಓಲೆ (ಕರ್ಣಿಕೆ Sl. 218). ಓಲೆಗಳ ಮಾಡ್ಪವಂ (ಪತ್ರಿಕ Mr. 377). ಬರೆಯದ ಓಲೆ (ಅಲೇಖ Nn. 96). ತಾಳೇ ಓಲೇ ಮರ, the palm Borassus flabelliformis Lin. (ತಾಲ Sl. 166). ಭೀತಿಯಿಂ ನಿಶಾಸ್ತ್ರೀರಿಣಿ ಹೋಗೆ ಬಿದ್ದ ಕಿವಿಯ ಓಲೆಯ ಮಾತ್ರಿಕಪತ್ರಮೋ? (Lilv. 3, 4). ಯಾವರಸವನ್ ಊಡಿದ ಸಿಗ್ಗವದ ಬಳೆಗಳ, ಓಲೆಗಳ ಮಣ್ಣಿವೆಣ್ಡಿರಿಯರ್ (Râghč. 17, 65). ಮೂರು ದಿನದ ಬಾಳ್ವೆಗೆ ಆರು ಜೋಡು ಓಲೆ (Prv.). See ಬಿಚ್ಚೋಲೆ, ಸುತ್ತೋಲೆ, etc.; Grj. 10, 40; Bp. 5, 52; 11, 43; 14, 4; 50, 36; 53, 16. 17; Rsv. 5, 110; Prv. s. ಮುಣ್ಡೆ. — ಓಲೆಚಿಂಡ್ಡಿ ಕೆ. A coil of written palm leaf (My.).—ಓಲೆಚಳತುಮ್ಬು. A ôlĕ ear-ring to which a čalatumbu is attached (C.). — ಓಲೆಜಿಮಿಕಿ. = ಓಲೆಚಳತುಮ್ಬು. (My.). — ಓಲೆತಿರಗಣಿ. The screw of an ear-ring (C.). — ಓಲೆತಿರುಪು. = ಓಲೆತಿರಗಣಿ. (My.). — ಓಲೆಪುಸ್ತಕ. A book of cadjan leaves (C.). — ಓಲೆಯ ಗಿಡ. The palmyra tree, Borassus flabelliformis Lin. (ತಾಲಿ Sl. 166), the leaves of which are at present also used for making writing-leaves (My.). — ಓಲೆಭಾಗ್ಯ. The good fortune of a female to wear an ôlĕ as a sign of her husband being still alive (My.). — ಓಲೆಯ ಮರ. (Č. Bp. 47, 45). The talipot palm; the palmyra tree (My.). — ಓಲೆಸರಪಣಿ. An ear-ring to which a small ornamental chain is attached (My.).

ಓಲೆಕಾರ ôlĕ-kâṛa. = ವಾಲೆಕಾರ. A servant in the employ of government (or private persons) who carries letters, etc. (ಸೇವಕ, ಅನುಗ, etc. Mr. 441; C.; *cf.* ಓಲಗಿಕಾರ). ನೀಲ ದಾಲಕಗೆ ಚನ್ದ, ಕೋಲು ಓಲೆಕಾರಗೆ ಚನ್ದ (Prv.).

ಓವ ôva. 1. = ಓಪ. (Bp. 48, 23).

ಓವ ôva. 2. = ಓಮು, etc. (ಖುರಾಶ್ವಿ, ಕಾರವಿ, etc. Nr.).

ಓವರಿ ôvari. (Tbh. of ಉಪಗೃಹ). An inner apartment or chamber (ಅಪವರಕ, ಗರ್ಭಗೃಹ Hlâ.; ಉಪಗೃಹ, ಗರ್ಭಗೃಹ Mr. 195; ಕೋಣೆ Kk. 71, Šm. 60; ಗಳಸ್ತಿಗೆ, ಕೋಣೆ Šs., MS. ಗೋವರಿ; Abh. P. 10, 8. 9; Tĕ.; Mhr. ಓವರೀ, a term for the several apartments under the arcade which is erected

Digitized by Google

along the course of the enclosing wall of a temple). ಅರಲ್ದ ತಾವರೆಯೆಲೆಯ ಪಲಗೆಗಟ್ಟಿನ ಓವರಿಗಳ್ (Čpr. 7, after 92).

ಓವು ôvu. 1. = ಓವ 2, etc. (My.). — ಓವುಕಾಯಿ. = ಓಮುಕಾಯಿ. (Si. 149).

ಓವು ôvu. 2. To take care of, to guard, to protect, to cherish, etc. (ಪಾಲನ Šmd. Dh.; Tě. ಓಮು; T., M. ಓಮ್ಬು; *cf.* ಓ 4). See Grj. 2, 60; 10, 98; Bp. 1, 15. 60; 10, 5; 22, 53; 37, 5; 43, 81; 46, 47; 49, 38; 50, 4; 55, 14; 57, 63; Mr. 340; Rśv. 1, after 135; J. 2, 3; 29, 23.

ಓಷ ôsha. *Burning, combustion.* See ತ್ರಿಕಟುಕ.

ಓಷಧಿ ôshadhi. A plant, a herb. 2, *an annual plant,* one that dies after becoming ripe.

ಓಷಧಿಪ್ರಸ್ಥಪುರ ôshadhi-prastha-pura. N. of a mythic town, the town of Himavat (Grj. 2, 102).

ಓಷಧೀಶ ôshadhi-íśa. Who presides over the plants: *the moon.*

ಓಷಧೀಶ್ವರ ôshadhi-íśvara. = ಓಷಧೀಶ. (Rśv. 12, 13).

ಓಷ್ಟ ôshṭa. N. of a plant (ಬಿದಿರ್ Mr. 121). 2, = ಓಷ್ಟ್ರ, q. v. (ಬಿಮ್ಬ, ತುಣ್ಡಿಕೆ, ತೊಣ್ಡೆ Mr. 127, two MSS. ಓಷ್ಟ್ರ).

ಓಷ್ಟ್ರ ôshṭrĕ. (= ಉಷ್ಟ್ರ). A camel (ಶೀಘ್ರಗಾಮಿ, ವಾರಣ Nn. 99; My. ಓಷ್ಟ್ರ).

ಓಷ್ಠ ôshṭha. The upper lip; *a lip in general* (ಸಣ್ಣು ಮು, ತುಟಿ Nn. 63).

ಓಷ್ಠಪಾನ ôshṭha-pâna. A kiss (ಚುಮ್ಬನ, ವದನಕೂಟ, ಮುದ್ದು Mr. 330).

ಓಷ್ಠಿ ôshṭhi. = ಓಷ್ಟ No. 2, q. v. *A plant bearing a bright-red gourd, Momordica monadelpha* Roxb.

ಓಷ್ಠ್ಯ ôshṭhya. Labial.

ಓಷ್ಠ್ಯಸ್ವರ ôshṭhya-svara. The vowels u, û, ô, au (Šmd. Cm. 66).

ಓಸರ ôsara. = ವಾಸರ, ವಾಸರು, ವಾಸರೆ. Going or bending to one side, sloping, slanting (as a wall), being unsatisfactorily counterpoised, as the burdens on an ox's back, etc. (My.); — an unsatisfactorily balanced burden (Č. Bp. 47, 46).

ಓಸರಿಕೆ ôsarikĕ. The state of bending to one side, etc. (Râm. 6, 10, 5).

ಓಸರಿಸು ôsarisu. To go to one side, side-ways, aside, or out of the way; to turn aside, to draw back, to retreat, to withdraw; to give way, to yield; to go away; to be removed; to keep aloof; to hesitate; to stop (ಅಪಸರಣ Šs.; Tě. ಓಸರಿಂಚು, ಓಸರಿಲ್ಲು, ಓಹಟಿಂಚು, ಓಹರಿಂಚು, ಓಸಿಲು = ಓಡು, ತೊಲಗು; T. ಒಂಜರಿ; *cf.* T. ಒದುಂಗು, ಒಡುಂಗು, & ಉಡುಗು 1, ಒದಗು 1). ಓಸರಿಸಿ ನಡೆಯದಿರೆ (ಅನಿಲಂ) ತೂಣ್ಕಮುಕ್ಕುಂ (Mr. 53). ಓಸರಿಸಿದ ಜವನಿಕೆಯೊಡನೆ ಓಸರಿಸಿದನ್ ಅಲ್ತೆ ಕನ್ತು? (Šmd. 16). ಕುತ್ತಮ್ ಓಸರಿಸಿದಂ (ಎಡ್ಡಿತ್ತಂ Šmd. I). See Bp. 1, 21; 8, 8; 9, 20; 17, 16; 27, 9; 28, 52; 40, 33. 47; 42, 9; 48, 29; 49, 10; 50, 37; 51, 50; 52, 16; 53, 19; 55, 4. 30; 59, 15; Râm. 6, 12, 34; Bh. 2, 13, 39; J. 5, 34; 30, 51. 2, to put to one side or aside; to remove; to quit, to abandon (ಅಪಾದಾನ Šmd. Dh.; Tě.). ಮೇಲುದದ ಸೆಱಗನ್ ಓಸರಿಸುವನ್ನರೆ (Šmd. 135). See Grj. 10, 89; Bp. 2, 12; 4, 67; 18, 7; 20, 20; 36, 51; 42, 32; Rśv. 10, 6; Šśv. 1, 40; J. 5, 60; 11, 19; 13, 24; Râm. 28, 8.

ಓಸು ôsu. = ಓಟು, ಅನಿತು, ಅಷ್ಟು, etc. (My.). See ರವೋಸು.

ಓಸುಗ ôsuga. = ಓಸುಗರ, ಓಸ್ಕರ. Cause, reason, sake; (on account of; T. ಓಜ, ಓಜರ, cause, reason, sake; see ಒಯ್ಯಕನೆ). ಪಾದಪ್ರಕ್ಷಾಲನೆಗೋಸುಗ ತನ್ನ ಉದಕ (ಪಾದ್ಯ Nr.). ಭಕ್ತಿಗೋಸುಗ (Bp. 43, 54). ಕರದ ಇಷ್ಟಲಿಂಗದ ಹದನನ್ ಅಱುವರ್ ಓಸುಗ (Č. Bp. 57, 88). See Bh. 2, 13, 38; 4, 6, 26; J. 4, 60; 18, 55; 23, 11. 42; Dp. 151, 3. *Cf.* ಕೋಸಕ, etc.

ಓಸುಗರ ôsugara. = ಓಸುಗ, etc. ಅದಕ್ಕೋಸುಗರ (ತಾದರ್ಥ್ಯ, ಅನ್ತರ Nr.).

ಓಸ್ಕರ ôskara. = ಓಸುಗರ, etc. (My.). ಅತಿಥಿಗೋಸ್ಕರ ಇರ್ದ ಒಡವೆಯಲ್ಲಿಯುಮ್ ಅತಂಗೆ ತಕ್ಕ ಒಡವೆಯಲ್ಲಿಯುಮ್ ಅತಿಥ್ಯ ಎನಿಸುಗು; ಕಾಳಗಕ್ಕೋಸ್ಕರಮ್ ಅಲ್ಲದೆ ವಿನೋದಾರ್ಥಮ್ ಆಗಿ ಏಱುವ ರಥವು (ಪುಷ್ಪರಥ); ಆನೆ ಹಿಡಿಯಲ್ ಓಸ್ಕರ ಮಾಡಿದ ಕಷ್ಟ ಗುಡಿ' (ವಾರಿ Nr.). ಕಟ್ಟುವದಕ್ಕೋಸ್ಕರ (Si. 112). See Si. 55. 243. 274. 294. 453; B. 3, 34. 93.

ಓಹಿಲ ôhila. = ಓಹಿಳ. N. of a man (Sk. ಓಹಲ). See Bp. 9, 37; 43 sum.; 43, 16. 18. 22; 44 sum.; 44, 15. 35.

ಓಹಿಳ ôhiḷa. = ಓಹಿಲ. See Bp. 43, 35. 37. 67; 44, 8. 12. 16-29. 30. 31. 37. 50. 53; 54, 71. — ಓಹಿಳಯ್ಯ. -ಅಯ್ಯ. (Bp. 43, 46; 44, 41. 42. 56. 68).

ಓಹೊ ô-hô. = ಓಹೋ. (Bp. 10, 2; My.).

ಓಹೋ ô-hô. Ho! stop! oho! (ನಿವಾರಣ Šmd. 393; Tě.). See Šmd. 68; Bp. 14, 32; 25, 41; 32, 15; 59, 2; J. 2, 59; B. 3, 34. 77. 82. In My., S. Mhr., and Mhr. the term expresses wonder, admiration, or sudden delight. — ಓಹೋಹೋ. rep. (My.).

ಓಳ್ ôḷ. To have sexual intercourse (ಮಿಥುನ Šmd. Dh.; T. ಓಡ್).

ಓಳಿ ôḷi. = ಓಣಿ. A continuous line, a row: a multitude, a number, a mass; succession (ಆವಳಿಗೆ, ಸಮೂಹ Kk. 72; ಮೊತ್ತ Bhn. 6; T.; Tě. ಓಲಿ; Mhr. ಓಳ, *cf.* ಓರಣ). ತಣ್ಣದಿರ ಓಳಿಗಳ್ (Lîlv. 3, 2). See Bp. 12, 2; 18, 60. 109; 27, 1; 28, 19; 38, 11. 14; 44, 58; 51, 1. 73; 54, 77; 61, 27; Bh. 1, 12, 12; J. 3, 8; 15, 9; 33, 19; Kk. 90. — ಓಳಿಗೊಳ್. -ಕೊಳ್. = ಓಳಿವಿಡು. (Bp. 58, 55). — ಓಳಿವಿಡು. -ಪಿಡು. To form a line or be in a line; to form a mass or considerable body (Čh. v. 92; Bp. 50, 46).

ಓಳಿಗೆ ôḷigĕ. Tbh. of an ಓಲಿಕೆ (Šmd. 338; Mdb. MS. ಬಳಿಗೆ = ಬಲಿಕೆ).

ಓಳು ôḷu. 1. = ಏೞ್ 4, etc. Seven (S. Mhr., pronounced ಯೋಳು).

ಓಳು ôḷu. 2. = ಕೋೞ್ 2, etc. (My.). See ಕೆಚ್ಚೋಳಿವಿಕೆ, ಕೆಚ್ಚೋ.

Digitized by Google

ಔ AU

ಔ au. The sixteenth letter of the Alphabet (Šmd. 12. 14). In Kannaḍa words it is another form of ಅವು (Šmd. 189), or of ಅವ (*e. g.* ತವರ್ = ತೌರ್). *For all Kannaḍa and Tadbhava words with initial ಔ see under initial* ಅವ *and* ಅವು, *e. g.* ಔಚು see as ಅವಚು, ಅವುಚು; ಔಡಲ as ಅವುಡಲ.—In Sk. terms ಔ occasionally occurs instead of ಅಂ, *e. g.* ಸೌಸ್ಥೆ = ಸಂಸ್ಥೆ (Nn. 162).

ಔಕಾರ au-kâra. The letter ಔ (Šmd. 11).

ಔಕ್ಷಕ aukshaka. (fr. ಉಕ್ಷನ್). *A multitude of oxen.*

ಔಘ augha. A mass, a multitude (ಸ್ತೋಮ Mr. 423). ತ್ರ ತ್ಯೌಘ (ವೇದಂಗಳ್ Nn. 141). 2, a flood.

ಔಚಿತಿ auciti. (fr. ಉಚಿತ). *Fitness, propriety.*

ಔಚಿತ್ಯ aucitya. *Fitness, propriety;* pleasure, delight (Šmd. 116. 209 Cm.); one in whom one takes pleasure (J. 2, 65).

ಔಜಸ aujasa. (fr. ಓಜಸ್). Lustre, shine (My.); gold (Sk.).

ಔತಪ autapa. A vow of silence with the Jainas (ಜೈನರ ಮೌನಂ Mr. 222).

ಔತ್ತರೇಯ auttarêya. (fr. ಉತ್ತರ). Belonging to the north (My.; G.). 2, N. of a son of Uttarâ, Janamêjaya's father Parikshit (My.).

ಔತ್ತಾನಪಾದಿ auttânapâdi. (fr. ಉತ್ತಾನಪಾದ). N. of Dhruva, grandson of the first Manu. 2, *the polar star.*

ಔತ್ವ autva. The letter ಔ (Šmd. 65. 132. 188. 355; Kâvy. I, 3, 104-108).

ಔತ್ಸುಕ್ಯ autsukya. (fr. ಉತ್ಸುಕ). Anxiety, uneasiness, regret; —ardent desire, longing, eagerness, zeal (ಉತ್ಸುಕ Čt. II, 114; My.). See ಕಡಂಗು; B. 5, 180.

ಔದನಿಕ audanika. (fr. ಓದನ). *A cook.*

ಔದರಿಕ audarika. (fr. ಉದರ). *Voracious.*

ಔದಾರ್ಯ audârya. (fr. ಉದಾರ). Generosity, nobility, magnanimity, greatness. (My.; B. 5, 162).

ಔದಾಸೀನ audâsîna. = ಅವುದಾಸೀನ, ಔದಾಸೀನ್ಯ.

ಔದಾಸೀನ್ಯ audâsînya. (fr. ಉದಾಸೀನ). Indifference; apathy. (My.).

ಔದುಮ್ಬರ audumbara. (fr. ಉದುಮ್ಬರ). Coming from the udumbara tree. 2, the udumbara tree itself (ದುಗ್ಧತರು, ಅತ್ತಿ Mr. 115).

ಔದ್ಧತ್ಯ auddhatya. (fr. ಉದ್ಧತ). The state of being raised or puffed up; arrogance; overbearing manner. See ಉಕ್ರ್ಕ, ಮಲೆ; Râv. 5, after 131.

ಔದ್ವಾಹಿಕ audvâhika. (fr. ಉದ್ವಾಹ). Relating to marriage. (My.). 2, a gift made to a woman at her marriage.

ಔನ್ನತ್ಯ aunnatya. (fr. ಉನ್ನತ). Height; greatness (ಬುಧ್ನ, ದೊಡ್ಡಿತ್ತಾದಸ್ಥಾದು Nn. 136; My.); haughtiness (My.; Si. 68). See ಮಹೌನ್ನತ್ಯ.

ಔಪಗವ aupagava. (fr. ಉಪಗು). Belonging to Upagu.

ಔಪಗವಕ aupagavaka. *An assemblage of Aupagavas or descendants of Upagu.*

ಔಪಚ್ಛನ್ದಸಿಕ aupačchandasika. (fr. ಉಪಚ್ಛನ್ದಸ್). A kind of metre (Čh.).

ಔಪಮ್ಯ aupamya. (fr. ಉಪಮಾ). Condition of resemblance or equality, similitude, comparison. See Kâvy. III, 3, B, 116 seq.

ಔಪಯಿಕ aupayika. (fr. ಉಪಾಯ). *Answering a purpose, fit, proper.*

ಔಪಲ aupala. (fr. ಉಪಲ). Belonging to a stone or stones; stony; of stone. (R.).

ಔಪವಾಹ್ಯ aupavâhya. (fr. ಉಪವಾಹ). *A royal elephant* (ನೃಪರಂ ನೆಗಪಿ ತಾಳ್ದ ಆನೆ Mr. 156).

ಔಪಾಸನ aupâsana. (fr. ಉಪಾಸನ). The fire used for domestic worship. 2, a kind of adoration of Agni (My.). 3, a small cake offered to the manes. 4, connected with worship, devotional.

ಔಮೀನ aumîna. (fr. ಉಮಾ). *A field of flax.*

ಔರಭ್ರ aurabhra. (fr. ಉರಭ್ರ). *A coarse woollen blanket.*

ಔರಭ್ರಕ aurabhraka. *A flock of sheep.*

ಔರಸ aurasa. (fr. ಉರಸ್). Belonging to or produced from the breast (or by one's self); *legitimate* (J. 28, 57; My.); *a legitimate son.* ಔರಸಸನ್ತತಿ (B. 4, 217; My.).

ಔರ್ಧ್ವದೇಹಿಕ aurddhvadêhika. (fr. ಊರ್ಧ್ವದೇಹ). Referring to the state after death; funereal; *the obsequies of a deceased person; whatever is given or performed on a person's decease.*

ಔರ್ವ aurva. (fr. ಉರ್ವ). Relating to Urva. 2, belonging to or being produced from the thigh (ûru): a descendant of Bhṛigu and preceptor to Sagara. 3, N. of a son of Vasishṭha. 4, *submarine fire.*

ಔಲೂಕ್ಯ aulûkya. (fr. ಉಲೂಕ). Owl-like; a follower of the Vaiśêshika doctrine; Kaṇâda ṛishi (G.).

ಔಶೀರ auśîra. (fr. ಉಶೀರ). *A couch, serving also the purposes of a seat; a seat, a chair.* 2, *the handle to the cow's tail or čâmara.*

ಔಷಧ aushadha. (fr. ಓಷಧಿ). = ಅಗಸಿದ್ದೆ, ಔಸದ. A herb; *any medicament or drug.*—ಔಷಧ ಮಾಡು, to prepare medicine; to apply remedies (C.; B. 5, 278).

ಔಷಧಾಚಾರ್ಯ aushadha-âčârya. The physician of the gods (ಧನ್ವನ್ತರಿ Mr. 390).

ಔಷಧಿ aushadhi. = ಅವುಸ್ತಿ. = ಔಷಧ (ಭೇಷಜ, etc. Mr. 390). ಬೋಡಿಮ್ ಎನ್ದು, ಒನ್ದು ಔಷಧಿಯುಮ್ ಅಕ್ಕುಂ (Šmd. I).

ಔಷ್ಟ್ರಕ aushṭraka. (fr. ಉಷ್ಟ್ರ). *A herd of camels.*

ಔಸದ ausada. Tbh. of ಔಷಧ. (Šmd. 335. 339; My.).

Digitized by Google

ಂ Ṁ

ಂ ṁ. 1. The seventeenth letter of the Alphabet. It is an *avargîya* letter, and has been called the neutral or unmodified nasal. In the Šmd. its names are: bindu, anusvâra, sŏnnĕ or śûnya (19. 20). It belongs to the yôgavâhas (25. 26. 43. 44). The *unmodified nasal* always precedes the avargîya letters ಯ್, ರ್, ಲ್, ವ್, ಶ್, ಷ್, ಸ್, ಹ್ in the body of a word or in composition, *e. g.* ಅಂಶ, ಅಂಸ, ಅಂಹತಿ, ಸಂಯುತ, ಸಂರಕ್ಷಣ, ಸಂಲಾಪ, ಸಂವಿತ್ತಿ, ಸಂಶಯ, ದಂಷ್ಟ್ರ, ಸಂಸರ್ಗ, ಸಂಹತಿ. Remark: The five *vargîya* letters ಙ್, ಞ್, ಣ್, ನ್ and ಮ್, that express the nasal sound as *modified* by guttural, palatal, lingual, dental, and labial pronunciation (Šmd. 24), are often, *for the sake of more expeditious writing,* replaced by the sign of the unmodified sŏnnĕ. With regard to ಙ್ and ಞ್ this convenient mode of writing has been adopted also for this Dictionary; *but the alphabetical places of the two letters have been retained,* so that, *e. g.*, ಅಂಘ follows ಅಘ್ನ್ಯ, and ಅಂಜ follows ಅಜ್ಞಾನ. When in Kannaḍa *final* ಂ is followed by a vowel, it changes into ನ್, ಮ್, or ವ್ (Šmd. 127. 128; *cf.* 192. 193).

ಂ ṁ. 2. = ಅಂ (aṁ) 3 q. v., of which it is the *grammatical* form (Šmd. 114. 115).

ಃ Ḥ

ಃ ḥ. The eighteenth letter of the Alphabet, (called visarga, Šmd. 19. 20. 44. 45). It is an unmodified (avargîya) sibilant, and one of the four yôgavâhas (26. 44).

ೱ ೱ H̤

ೱ h̤. The nineteenth letter of the Alphabet. It is a guttural sibilant, used before ಕ್ (Šmd. 25. 26), and one of the four yôgavâhas (26. 44. 45). It is called jihvâmûlîya (26), the tongue-root sibilant, and according to its sign which has the shape of the thunderbolt, vajrâkṛiti. See ಅರ್ಧವಿಸರ್ಗ.

ೲ ṚH̤

ೲ ṛh̤. or ೞ (*i. e.* the K. consonant ೞ, in Hlâ. and Abh. P. MSS.). or [illegible] (in Vôpadêva's grammar). The twentieth letter of the Alphabet. It is a kind of sibilant, used before ಪ್ (Šmd. 25. 26), and one of the four yôgavâhas (26. 44. 45). It is called upadhmânîya (26), the to-be-breathed one, and according to its sign which has the shape (of a female's breast 26, or that) of an elephant's two frontal bones, gajakumbhâkṛiti. See ತೇಜೲಪಿಂಡ, ನಿೲಪ್ರವರ, ಪುೲಪ, ಪುೲಪಕ, ಪುೲಪಚಾಪ, ಪುೲಪದನ್ತ, ಪುೲಪಧನ್ವ, ಪುೲಪಪತ್ರ, ಪುೲಪರಸ, ಪುೲಪಲಿಹ್, ಪುೲಪವತಿ, ಪುೲಪವಾಟ, ಪುೲಪಹೀನೆ, ಪೌೲಪ, ಬಹಿೲಪುರ, ಬಾೲಪ, ಬಾೲಪಬಿನ್ದು, ಯಶೲಪಟಹ, ರುದ್ರಪುೲಪ, ವರ್ಣಪುೲಪ.—In Hlâ. 2, 28 the MS. has: ಕರಹಾಟಂ ಭವೇತ್ ಕನ್ದೲ ಪಾದೋಽ ಮೂಲಂ, etc. (instead of ಕನ್ದಃ ಪಾದೋಽ). See ಅರ್ಧವಿಸರ್ಗ.

Digitized by Google

ಕ್ K

ಕ್ **k.** The twenty-first letter of the Alphabet (Śmd. 12. 21). When the initial of the second word of a compound, it sometimes remains unchanged (Śmd. 78. 79. 80. 198. 199. 207. 208. 209. 210. 217. 222. 225. 386), but often changes into ಗ್ (77. 78. 195. 197. 198. 199. 200. 202. 203. 205. 206. 207. 210-216. 218. 221-224. 381. 386. 387). Once it takes the form of ಚ್ (215).

ಕ **k-a. 1.** The letter ಕ್ when pronounced with the short a, as is generally done at school. — ಕಒತ್ತು. -ಒತ್ತು. The under-letter ್ಕ (C.).

ಕ **ka. 2.** = ಕೆ 1, etc., in ಅಕ, ಆನಕ, ತನಕ.

ಕ ka. 1. (= ಗ 1). An affix for forming masculine nouns (Śmd. 241), probably taken from Sk. 2, an affix for the formation of neuter nouns. ಭಾವದೊಳು ಕಪ್ರತ್ಯಯಮ್ ಉಣ್ಬು, ಉಡುಕಂ, ನಡುಕಮ್ ಎಮ್ಬನ್ತೆ (249 Mdb. MS.; *cf.* ಕಟುಕ).

ಕ ka. 2. *The god Brahmâ.* 2, *the soul.* 3, *the sun.* 4, *wind.* 5, *the head.* 6, *water.* 7, *pleasure.* 8, the number one (Mr. 349). *Cf.* ಕಂ & ಕಮ್.

ಕಂ kam. = ಕಮ್. The god Brahmâ (ಸರೋಜಸಮ್ಭವ, ಬ್ರಹ್ಮನು Nn. 7; ಬ್ರಹ್ಮನ್ Mr. 493). 2, the soul (ಆತ್ಮನು Nn. 7). 3, the body considered as the field of the indwelling and working of the soul (ಕ್ಷೇತ್ರ Mr. 506). 4, the sun (ಸೂರ್ಯ Nn. 7). 5, wind (ಪವನ, ವಾಯು 7; ಮಾರುತ Mr. 493). 6, the head (ಶಿರ, ಮಣ್ಡೆ 7; ಶಿರ 493). 7, water (ಉದಕ 7; ವಾರಿ 493). 8, heaven (ಸ್ವರ್ಗ 7; Mr. 506). 9, fire (ಅಗ್ನಿ 7; ಅಗಿ? o. r. ಅತಿ? 506). 10, an organ of sense (ಇನ್ದ್ರಿಯ 7; 506). 11, the sky (ವ್ಯೋಮ 506). 12, an ascetic (ಯತೀಶ 506). 13, a parrot (ಕೀರ, ಗಿಳಿ 7). 14, a peacock (ನವಿಲ್ 7). 15, pleasure (ಸುಖಾನ್ತ 493). 16, a zero (ಶೂನ್ಯ 506).

ಕಂಯಿ **kamyi.** = ಕಯ್ 6, etc. Bitterness (ಕಟು Čb.; C.).

ಕಂಸ kamsa. 1. (= ಕಂಚು). Brass, bell-metal. 2, *a vessel made of metal, a drinking vessel, a goblet.* 3, a king of Mathurâ, the uncle and enemy of Kṛishṇa (Śmd. 183).

ಕಂಸ kamsa. 2. A segment of a circle as a parenthesis: a bracket (Mhr.; S. Mhr.);—an arc (Mhr.).

ಕಂಸಜಿತ್ kamsa-jit. The conqueror of Kamsa: *Kṛishṇa.*

ಕಂಸತಾಲ kamsa-tâla. A cymbal of bell-metal or brass (Bp. 12, 34).

ಕಂಸಹರ kamsa-hara. The destroyer of Kamsa: Kṛishṇa (Mr. 18).

ಕಂಸಾನ್ತಕ kamsa-antaka. = ಕಂಸಹರ. (J. 14, 26).

ಕಂಸಾರಾತಿ kamsa-arâti. The enemy of Kamsa: *Kṛishṇa.*

ಕಂಸಾರಿ kamsa-ari. = ಕಂಸಾರಾತಿ. (J. 10, 49; 13 sum.). 2, a kind of metrical foot (Čh.).

ಕಂಸಾಳ kamsâḷa. Tbh. of ಕಾಂಸ್ಯತಾಲ (Śmd. 381). A kind of cymbal; a gong (ಜಗಳೆ Śm. 64; ಕಂಜಳ್, ಜಗಳೆ Kk. 67, o. rs. of ಕಂಜಳ್: ಜಳಕ, ಬಳಕ); a triangle (My.). See Bp. 12, 44; Č. Bp. 5, 7.

ಕಂಸಾಳಕ kamsâḷaka. A male gold- or silver-smith (My.; Tĕ. ಕಂಸಾಲವಾಡು).

ಕಂಸಾಳಗಿತ್ತಿ kamsâḷa-gitti. A female cymbal-beater (Bp. 5, 43). 2, a female of the kamsâḷakas (My.).

ಕಕ್ **kak.** = ಕಾ 2, etc. — ಕಕ್ಕಾವಾಡೇ ಕಾಯಿ. The Colocynth (ಕಾಡ ಕವಡೇ ಕಾಯಿ, ಇನ್ದ್ರವಾರುಣಿ G.; My.).

ಕಕಲಾತೆ **kakalâtĕ.** = ಕಕುಲತೆ, etc. Love (C.).

ಕಕಾರ ka-kâra. The letter ಕ (Śmd. 11).

ಕಕುತ್ಸ್ಥ kakud-stha. N. of a grandson of Ikshvâku. (Râm. 3, 8, 13; My.).

ಕಕುತ್ಸ್ಥಜ kakutstha-ja. Râma (Râm. 4, 1, 21).

ಕಕುದ್ kakud. = ಕಕುದ. *A peak or summit, etc.*

ಕಕುದ kakuda. = ಕಕುದ್. *A peak or summit* (ಅದ್ರಿತಟ, ಬೆಟ್ಟದ ತಪ್ಪಲು Nn. 143). 2, *a bull's hump* (ಗೂಳಿಯ ಬೆನ್ನ ಹಿಣಿಲು 143, o. r. ಹಿಳಿಲು). 3, a horn (ಗೂಳಿಯ ಕೊಮ್ಬು 143, o. r. ಕೋಡು). 4, the snout of a bull (ಮುಸುಳಿ 143, in one MS.). 5, a bull (ಪುಂಗವ, ಗೂಳಿ 143). 6, *pre-eminent, chief; eminence, superiority* (ಪ್ರಧಾನ, ಮುಖ್ಯ 143). 7, an ensign or symbol of royalty. 8, a sword (ಕೃಪಾಣ, ಖಡ್ಗ 143). 9, the sky (ರೋದೋಂಗಣ, ಆಕಾಶ 143).

ಕಕುದ್ಮ kakudma. Tbh. of ಕಕುದ್ಮತ್. (ಎತ್ತು Mr. 178).

ಕಕುದ್ಮತ್ kakud-mat. *A bull;* an ox.

ಕಕುದ್ಮತಿ kakud-mati. *The hip and loins* (ಜಘನ Hlâ.; ಕುಣ್ಡೆಗಳ ತಟದ ಕುಟಿ Mr. 331, o. r. ಕುಣಿ).

ಕಕುಫ kakupha. = ಕಕ್ಕೋಳ, etc. (Mg.).

ಕಕುಭ್ kakubh. = ಕಕುಭ. A summit. 2, *a region, a quarter.*

ಕಕುಭ kakubha. = ಕಕುಭ್ (Śmd. 106). A region, a quarter (ದಿಶೋತ್ಕರ, ದಿಕ್ಕುಗಳ್ Nn. 128; ದಿಕ್ಕು Mr. 57). 2, pre-eminent, chief (ಮುಖ್ಯ 128). 3, *a wooden vessel covered with leather, placed under the neck of a lute, to render the sound deeper* (ವೀಣೆಯ ಕುಮ್ಬಳಕಾಯಿ G.). 4, *the tree Terminalia arjuna* W. & A. (ತೊಟಿಮತ್ತಿ 128; ಅರ್ಜುನ, ಮತ್ತಿ Mr. 113). 5, one of the râgas or personified musical modes (ಗೀತ, ಗೀತವಿಧ 128).

ಕಕುಲತೆ **kakulatĕ.** = ಕಕಲಾತೆ, ಕಕುಲಾತೆ, ಕಕುಳತೆ, ಕಕ್ಕಲಾತೆ, ಕಕ್ಕುಲತೆ, ಕಕ್ಕುಲಿತೆ. Love (My.; ಪ್ರೀತಿ G.); compassion (My.; T. ಕಕ್ಕೆ, to pity); desire, especially vain desire (see ಕಕ್ಕುಲಿತೆ; Tĕ. ಕಕ್ಕುರಿತಿ, ಕಕ್ಕುರ್ತಿ).

ಕಕುಲಾತೆ **kakulâtĕ.** = ಕಕುಲತೆ. Love; compassion (C.).

ಕಕುಳತೆ **kakuḷatĕ.** = ಕಕುಲಾತೆ. (My.).

ಕಕೂಟ kakûṭa. A kind of bird (ಶರವೈರಿ Mr. 172).

ಕಕೋಕ kakôka. = ಕಕ್ಕೋಳ. (C.).

ಕಕ್ಕ **kakka.** = ಕಕ್ಕರಿ. — ಕಕ್ಕ ಬಿಕ್ಕರಿ. reit. = ಕಕ್ಕರಿ ಬಿಕ್ಕರಿ, q. v. (My.).

ಕಕ್ಕ kakka. = ಕಾಕಾ. A father's younger brother (C.; Tĕ. ಕಕ್ಕೆ, papa, daddy). — ಕಕ್ಕಯ. -ಅಯ. = ಕಕ್ಕಯ್ಯ. (Bp. 61,

9). — ಕಕ್ಕಯ್ಯ. -ಅಯ್ಯ. N. (Bp. 3, 82; 9, 46; 37, 6; 47, 34; 57, 21. 29; My. = ಕಕ್ಕ). See ಡೋಱರ—.

ಕಕ್ಕಡ kakkaḍa. A piece of twisted cloth dipped in oil, lighted, and carried about in the hand as a temporary light (C.; Tĕ. ಕಾಗಡ; Mhr. ಕಾಕಡಾ, ಕಾಣ್ಕಡಾ). ಒನ್ದು ಕಕ್ಕಡಾ ಹಚ್ಚಿ ಕೊಂಡು, ಹೋಗು! (B. 4, 62).

ಕಕ್ಕಡೆ kakkaḍĕ. 1. (fr. ಕಡಿ 4?) (= ಕರ್ಕಡೆ). A weapon so called (M. ಕಕ್ಕಡ, a dagger; Sk. ಕರ್ಕಶ, a sword; Mhr., H. ಖಂಜೀರ, a sort of dagger). See Rsv. 6, after 11; Bh. 1, 7, 21. — ಕಕ್ಕಡೆವಲೆ. -ಬಲೆ. A kind of net (Śsv. 3, 24).

ಕಕ್ಕಡೆ kakkaḍĕ. 2. = ಕಟ್ಟಕಡೆ s. ಕಟ್ಟ 2. (My.).

ಕಕ್ಕರ kakkara. = ಕಕ್ರ. Tbh. of ಕೃಕರ. — ಕಕ್ಕರವಕ್ಕಿ. -ಹಕ್ಕಿ. (ಕೃಕರ Si. 173).

ಕಕ್ಕರಿ kakkari. = ಕಕ್ಕ, ಕೊಕ್ಕರಿ, (ಕುಡು 3), ಕೊಗ್ಗ, ಕೊಂಗ, ಕೊಂಗು 2, ಕೊಂಗರಿ, etc. — ಕಕ್ಕರಿ ಬಿಕ್ಕರಿ. reit. Crookedness (My.).

ಕಕ್ಕಲಾತೆ kakkalâtĕ. = ಕಕುಲತೆ. Love; compassion (My.).

ಕಕ್ಕಸ kakkasa. Trouble (heavy breathing, etc.) arising from an overloaded stomach, from running very fast, etc. (S. Mhr.; T. ಕಱಿ, to be sick in the stomach). — ಕಕ್ಕಸಪ್ಪಡು. -ಪಡು. To suffer anguish (Śsv. 2, 15).

ಕಕ್ಕಸ kakkasa. Tbh. of ಕರ್ಕಶ (Śmd. 345; 49). (ಪರಿಗೆ Ĉt. I, 86). ಕಕ್ಕಸನ ದೂತರ್ ಬನ್ದು, ಲೆಕ್ಕವಾಯಿತು! ಹೊಱಡೆನ್ದರೆ ನಕ್ಕೋರೆಲ್ಲ; ಬಿಡಿಸೋರೇನೋ, ಮನುಜ? (Dp. 28, 2). See Ĉ. Bp. 45, 29; J. 2, 62; 7, 31; 14, 6; 21, 35; 26, 11; ಕಡುಗಕ್ಕಸ.

ಕಕ್ಕಸಗಾಱ kakkasa-gâṟa. A severe, cruel man (My.). Feminine: ಕಕ್ಕಸಗಾತಿ (My.).

ಕಕ್ಕಸಜವ್ವನ kakkasa-javvana. Tbh. of ಕರ್ಕಶಯೌವನ (Śmd. 376).

ಕಕ್ಕಸತೆ kakkasatĕ. = ಕರ್ಕಶತೆ, q. v.

ಕಕ್ಕಸು kakkasu. = ಕಕ್ಕೋಸು. A cac-hus: a privy (My.; M. ಕಕ್ಕೂಸ್; fr. the Danes or Dutch).

ಕಕ್ಕಾ kakkâ. (fr. ಕಲಕು 2?). = ಕಕ್ಕು 2. — ಕಕ್ಕಾ ಬಿಕ್ಕ. reit. An affrighted or timid man (My.). — ಕಕ್ಕಾ ಬಿಕ್ಕರಿ. reit. Fear, fright, alarm (My.). — ಕಕ್ಕಾ ಬಿಕ್ಕಿ. reit. = ಕಕ್ಕಾ ಬಿಕ್ಕರಿ. (My.). — ಕಕ್ಕಾ ಬಿಕ್ಕು. reit. = ಕಕ್ಕಾ ಬಿಕ್ಕಿ. (My.).

ಕಕ್ಕಿ kakki. = ಕಕ್ಕೆ. — ಕಕ್ಕೀ ಗಿಡ. The tree Cassia fistula (ವ್ಯಾಧಿಘಾತ G.; S. Mhr.).

ಕಕ್ಕಿ kakki. (fr. ಕಕ್ಕ). A mother's younger sister; an uncle's wife (My.); a step-mother (My.).

ಕಕ್ಕಿಸು kakkisu. To cause to vomit (C.). **2,** to make one discharge from the stomach; to make one give up, as what he has wrongfully seized and appropriated, to make him restore or refund (My.; Tĕ. ಕಕ್ಕಿಂಚು, ಕಕ್ಕಿಸಿಲ್ಲು; T. ಕಕ್ಕ ವೈ).

ಕಕ್ಕು kakku. 1. = ಕಡಿಕು 1, ಕಡುಕು 1, ಕಱುಕು, ಕರ್ಚು 1, ಗರಕು. A jag, a notch, a dent; the rough part of a millstone or of a saw, the toothed part of a file or saw, of a horse's bit, etc.; jaggedness, irregular surface, roughness; sharpness (Tĕ.; Tĕ. also ಕಱಕು, ಕಱುಕು; T., M. ಕರುಕ್ಕು; T. also: the edge of a knife or sword). (ಕುದುರೆಗೆ) ತಳ್ಳಿತ್ತು ಕೆಮ್ಮ ಸಿದು ಎನಿಪ್ಪ ನಾಲಗೆ ಲೇಸು, ಕಕ್ಕು ಕವಲಾಗೆ ಹೊಲ್ಲಂ (Mr. 277). — ಕಕ್ಕುದಱ. -ತಱ 3. = ಕಕ್ಕುನ್ದಱ (Śs.), ಕಡುಕುನ್ದಱ. A toothed, or sharp, sword. — ಕಕ್ಕುನ್ದಱ. -ಂ-ತಱ. = ಕಕ್ಕುದಱ. (Śs.).

ಕಕ್ಕು kakku. 2. = ಕಕ್ಕಾ. — ಕಕ್ಕು ಬಿಕ್ಕು. = ಕಕ್ಕಾ ಬಿಕ್ಕು. (C.).

ಕಕ್ಕು kakku. 3. (fr. ಕಡಿ 4?). A shiver, a splinter (ಸಿಗುಬು Śm. 79; *cf.* ಕೆಲ್ಲಿ, ಚಕ್ಕೆ?).

ಕಕ್ಕು kakku. 4. (fr. ಕಱ 1). = ಕಱು. To vomit (My.; in S. Mhr. especially used in regard to children; ಉದ್ಗಾರ Śm. 79; T., Tĕ., Tu.; T. ಕಕ್ಕ, to retch, to hawk; *cf.* ಕಕ್ಕಸ?). ಬಿಕ್ಕು ಕಱಕೆಯ ತಿನ್ದು ಕಕ್ಕುತ್ತವೆ (B. 5, 32). ಕಕ್ಕಿ ಕೊಣ್ಡ ಅನ್ನ (ಸಮುದ್ಧರಣ Si. 420).

ಕಕ್ಕು kakku. 5. Vomiting; the thing vomited (S. Mhr.; Tĕ.). — ಕಕ್ಕುರೋಗ. Vomiting, sickness (ಪ್ರಚ್ಛರ್ದಿಕೆ, ವಮಿ Si. 201).

ಕಕ್ಕುಲತೆ kakkulatĕ. = ಕಕುಲತೆ, etc. Love; compassion (My.). ಒಕ್ಕಲ ಮನೆ ಸುಟ್ಟು ಹೋದ ಮೇಲೆ ಕಕ್ಕುಲತೆ ಪಟ್ಟು ಪ್ರಯೋಜನವೇನು? (Prv.).

ಕಕ್ಕುಲಿತೆ kakkulitĕ. Love, compassion (My.; Bh. 1, 6, 33; Râm. 5, 8, 68; J. 6, 35); excessive desire, vain desire (Bp. 40, 33; J. 13, 7; 26, 35). ಬಹುಸಂಸಾರ ಮಾಯೆಯ ಕಕ್ಕುಲಿತೆಯೊಳು ಬಿದ್ದೆನು (Dp. 6, 3). See Dp. 36, 2; 40, 1. — ಕಕ್ಕುಲಿತೆಗೊಳ್ಳು. -ಕೊಳ್ಳು. To feel vain desire (Dp. 53, 5).

ಕಕ್ಕುಲಿತೆಕಾಱ kakkulitĕ-kâṟa. A man who loves (Bh. 7, 15, 50).

ಕಕ್ಕೆ kakkĕ. = ಕಕ್ಕಿ. A tree with clusters of yellow flowers and long round legumes, the pudding-pipe tree, Cassia fistula L. (ಆರಗ್ವಧ, ಆರೇವತ, ಶಮ್ಯಾಕ, ವ್ಯಾಧಿಘಾತ, ಚತುರಂಗುಲ, ಕೃತಮಾಲ, ಸುವರ್ಣಕ, etc. Nr.; ಆರಗ್ವಧ, ಸ್ವರ್ಣಪುಷ್ಪ, ರಾಜತರು, etc. Mr. 114; My.; Tu.; T. ಕಡುಕ್ಕೈ, ಕೊನ್ಡೈ; M. ಕೊನ್ನ). — ಕಕ್ಕೆಯ ಕಾಯಿ. (Si. 126). — ಕಕ್ಕೆಯ ಗಿಡ. (Si. 126). — ಕಕ್ಕೆಯ ಮರ. (Nr.).

ಕಕ್ಕೋಕ kakkôka. = ಕಕುಫ, ಕಕೋಕ, ಕೋಕ. N. of a Paṇḍita (My.; T. ಕೊಕ್ಕೋಗ, a treatise on women, their behaviour, etc. of a very lewd character; the book was written by ಕೊಕ್ಕೋಗವರುಡ in Sk., and translated into Tamil by ಅದಿವೀರ ರಾಮಪಾಣ್ಡ್ಯ, Rottler s. v. & s. ಕರಣ). — ಕಕ್ಕೋಕಶಾಸ್ತ್ರ. = ಕೋಕಶಾಸ್ತ್ರ and the T. ಕೊಕ್ಕೋಗ (My.; occasionally in S. Mhr., where it is also called ಅನಂಗರಂಗಶಾಸ್ತ್ರ or ಕೋಕಮುನಿಶಾಸ್ತ್ರ).

ಕಕ್ಕೋಲ kakkôla. = ಕಕೋಲ. *N. of a plant bearing a berry, the inner part of which is a waxy and aromatic substance; a perfume prepared from the berries of this plant.*

ಕಕ್ಕೋಲಕ kakkôlaka. = ಕಕ್ಕೋಲ, ಕಕೋಲಕ. *A perfume prepared from the berries of the* ಕಕ್ಕೋಲ (ಗವಲಕಹೂರ G.).

ಕಕ್ಕೋಸು kakkôsu. = ಕಕ್ಕಸು. (My.).

ಕಕ್ಖಟ kakkhaṭa. *Hard.*

ಕಕ್ರ kakra. Tbh. of ಕೃಕರ. The printed partridge or southern Francolin, Francolinus pictus (Bd.);—the eyed

Digitized by Google

partridge, Perdix oculea (Bḍ.);—the red-billed quail, Coturnix erythrohyncha (Bḍ.).

ಕಕ್ಷ kaksha. = ಕಚ್ಚೆ 1, ಕಚ್ಚೆ. *The hem of a garment tucked into the waist-band* (ಕಚ್ಚೆ Mr. 491). 2, *a piece of cloth worn over the privities* (ಕೌಪು Nn. 117). 3, *a girdle,* a string or zone for fastening a cloth round the waist (ಉಡುನೂಲ್, ಉಡಿದಾರ 117; ಕಾಂಚಿ 491). 4, *grass.* 5, *a climbing plant.* 6, *a court in a palace, etc.* (ಪ್ರಾಂಗಣ, ಅಂಗಣ 117; ಮನ್ದಿರದ ಮುಮ್ಭಾಗ 491). 7, *the armpit* (ಕಂಕುಳ 117; ಕಂಕುಳ್ Mr. 321. 486, o. r. ಕೊಂಕುಳ್). 8, a forest, a wild (ಕಾನ್ತಾರ, ಅಡವಿ 117; ಅಟವಿ, ವಿಪಿನ, etc. Mr. 151). 9, an objection or reply in argument. 10, the side or flank. See Prv. s. ಪ್ರಸ್ತ.

ಕಕ್ಷಪಾಲ kaksha-pâla. A bag carried under the armpit (My., also ಕಕ್ಷವಾಳ).

ಕಕ್ಷಪಾಲಿಕೆ kaksha-pâlikĕ. = ಕಕ್ಷಪಾಲ. (Rŝv. 5, after 25; V. 14, 31; My.).

ಕಕ್ಷಪುಟ kaksha-puṭa. = ಕಕ್ಷಪಾಲ. (Grj. 2, after 106).

ಕಕ್ಷಮೂಲ kaksha-mûla. The armpit. See ಕವುಂಕುಳ್.

ಕಕ್ಷಾನ್ತರ kaksha-antara. *An inner court of a palace, etc.; an open space surrounded by buildings* (ಪ್ರಕೋಷ್ಠ, ಮನೆಯ ನಿಲವು Mr. 201).

ಕಕ್ಷಾಪಟ kakshâ-paṭa. = ಕಚ್ಚಟ, ಕಚ್ಚುಟ. *A cloth passed between the legs to cover the privities.*

ಕಕ್ಷಿ kakshi. One party as opposed to another; objection, contention (My.).

ಕಕ್ಷಿಗಾಱ kakshi-gâṟa. A party (in a civil or criminal case); one who maintains or defends a claim or wrong at issue (My.).

ಕಕ್ಷೆ kakshĕ. = ಕಕ್ಷ Nos. 3. 6. 9. 2, the orbit of a planet (Mhr.; My.; B. 5, 182).

ಕಕ್ಷೇಸು kakshêsu. A kind of arrow (ಕವಡಿಕೆಯಮ್ಬು Mr. 296).

ಕಕ್ಷ್ಯೆ kakshyĕ. *An elephant's girth;* a girdle or zone. 2, *enclosure of an edifice; an open space surrounded by buildings, the square left unroofed in the centre of a house* (see ನಡುತೊಟ್ಟಿ).

ಕಗ್ kag. (= ಕಡು 1, q. v., ಕಸ 1, etc.). Hardness; strength; etc. — ಕಗ್ಗಣ್ಟು. = ಕಡಿಗಣ್ಟು, ಕಡುಗಣ್ಟು. A fast knot that cannot be easily untied (C.);—a hard knot in wood (My.). — ಕಗ್ಗತ್ತಲೆ. -ಕತ್ತಲೆ. = ಕಡುಗತ್ತಲೆ. Thick darkness (J. 26, 6; C.; B. 3, 125). — ಕಗ್ಗಲಿ. -ಕಲಿ. The tree Mimosa sundra Roxb. (Acacia sundra Dec., St. & Pl.). 2, the tree Acacia catechu Willd. (Mimosa catechu Lin.; M. ಕರಿಜ್ವಾಲಿ; ಗಾಯತ್ರಿ, ಬಾಲತನಯ, ಖದಿರ, ದನ್ತಧಾವನ, ತಱಿಯದ ಮರ Si. 314). ಬಿಳೀ ಕಗ್ಗಲೀ ಮರ (ಕದರ, ಸಿತಖದಿರ, ಸೋಮವಲ್ಕ 134). ದುರ್ಗನ್ಧವುಳ್ಳ ಕಗ್ಗಲೀ ಗಿಡ (ಅರಿಮೇದ, ವಿಟ್ಖದಿರ, ಹುಚ್ಚುಕಗ್ಗಲೀ ಮರ 134). 3, = ಕಾರೇ ಗಿಡ (My.). 4, a man of distinguished valor (My.). — ಕಗ್ಗಲ್ಲು. -ಕಲ್ಲು. = ಕಡುಗಲ್. A very hard stone (My.). — ಕಗ್ಗಾಡು. -ಕಾಡು. A thick-set, impervious jungle (My.). — ಕಗ್ಗಾಯಿ. -ಕಾಯಿ. = ಕಡುಗಾಯಿ. A hard, or an unripe, fruit (C.). — ಕಗ್ಗಾಱು. -ಕಾಱು. Excess of rain (My.). — ಕಗ್ಗಾಬು. Great dryness, drought (My.). — ಕಗ್ಗಾಲ. -ಕಾಲ. A trying time, famine (My.). — ಕಗ್ಗುಮ್ಬಳ. -ಕುಮ್ಬಳ. A hard gourd (My.). — ಕಗ್ಗೊಬಲೆ. -ಕೊಬಲೆ. A kind of Basilicum, Ocymum sanctum Lin. (ಕುಠೇರಕ, ಕಠಿಂಜರ, ಪರ್ಣಾಸ Nr.; ದಾಬರಿ, ಕ್ಷುತ್ರಪತ್ರ Mr. 129, o. rs. ದಾರಿಷ್ಟ, ದಾಸದಾ, ಚಿತ್ರಪತ್ರ). ಬಿಳಿಯ ಕಗ್ಗೊಬಲೆ, Ocymum gratissimum Lin. (ಅರ್ಜಕ Nr.). — ಕಗ್ಗೊರ್ಲೆ. -ಕೊರ್ಲೆ. = ಕಗ್ಗೊಬಲೆ. (ಪರ್ಣಾಸ, etc., ಕಾಮಕಸ್ತೂರೀ ಗಿಡ, ಕಮ್ಮಗಗ್ರೇ ಗಿಡ Si. 141). ಬಿಳೀ ಕಗ್ಗೊರ್ಲೆ (ಅರ್ಜಕ, ಬಿಳೀ ಗಗ್ರೇ ಗಿಡ 141). ಕಗ್ಗೊಲೆ. -ಕೊಲೆ. A fell murder (Râm. 3, 4, 17; 3, 8, 10; Bh. 4, 3, 53).

ಕಗ್ಗ kagga. A long, tedious speech or literary composition (My.). — ಕಗ್ಗದವ. -ಅವ. A man of long, tedious speech (My.).

ಕಗ್ಗನೆ kagganĕ. = ಕಂಗನೆ. (Abh. P. 13, 21).

ಕಗ್ಗು kaggu. = ಕಂಗು 3, ಕನಗು, ಕನರು No. 1, etc., ಗಗ್ಗು. (Pungency), disagreeableness, especially said of the smell of burning oil (S. Mhr.).

ಕಂ kaṅ. = ಕಣ್ 1, etc. The eye. Dat. ಕಂಗೆ (Bp. 11, 34). Nom. pl. ಕಂಗಳ್ (Bp. 1, 49; 29, 24; 31, 15; 51, 81; 54, 71; 57, 44; Nn. 34; J. 3, 17). — ಕಂಕಣ. An eye-drop, a tear (ಕಣ್ಣ ನೀರು Nn. 45; Bp. 18, 77; 20, 25). — ಕಂಗಡೆ. -ಕಡೆ. = ಕಣ್ಗಡೆ. A side-glance, a leer (sic! J. 3, 10). — ಕಂಗಾಣು. -ಕಾಣು. = ಕಣ್ಗಾಣ್, ಕಣುಗಾಣ್. To perceive with the eyes (in opposition to *mentally,* S. Mhr.). — ಕಂಗಾಣಿಸು. -ಕಾಣಿಸು. = ಕಣ್ಗಾಣಿಸು. To cause to perceive with the eyes (S. Mhr.). — ಕಂಗುಱುಹು. -ಕುಱುಹು. = ಕಣುಗುಱುಹು. A mark for the eye; the place at which the eye is to be (Bp. 18, 74). — ಕಂಗೆಡಿಸು. -ಕೆಡಿಸು. = ಕಣ್ಗೆಡಿಸು. To destroy the eye, etc.; to blind, to confuse, etc. (C.; J. 4, 23; 26, 4). — ಕಂಗೆಡು. -ಕೆಡು. = ಕಣ್ಗೆಡು. The eye or sight to be destroyed; to be blinded, confused or bewildered; to be vexed or irritated; to become afraid (C.; Bp. 56, 40; J. 4, 9; 8, 37. 40; 14, 25; 19, 31; 24, 35; B. 5, 258). — ಕಂಗೊಳಿಸು. -ಕೊಳಿಸು. = ಕಣ್ಗೊಳಿಸು, q. v. (Šŝv. 1,69; 1, after 71 & 79; 1, 85; J. 5, 11; 15, 11; 31, 10). ಕಂಗೊಳಿಸು (Šm. 17).

ಕಂಕ kaṅka. *A heron.* 2, Yama. 3, a false or pretended Brâhmaṇa. 4, a title of Yudhishṭhira, from his assuming the disguise of a Brâhmaṇa before king Virâṭ (Bh. 4, 1, 6). 5, a kind of mango. — ಕಂಕವಕ್ಕಿ. -ಹಕ್ಕಿ. A heron (ಕಂಕ, ಲೋಹಪೃಷ್ಠ Nr.).

ಕಂಕಟ kaṅkaṭa. *Armour, mail;* an iron hook to goad an elephant.

ಕಂಕಟಕ kaṅkaṭaka. *Armour, mail* (ಟವುಳಿ Mr. 292, o. r. ತವುಳಿ).

ಕಂಕಡಿ kaṅkaḍi. Tbh. of ಕರ್ಕಟಿ. (My.; H.).

ಕಂಕಣ kaṅkaṇa. (Šmd. 384; Kk. 95; Šm. 77). = ಕಂಕಳ. *An ornament of the wrist, a bracelet* (ಹಸ್ತಭೂಷಣ Nn. 45); a string or ribbon tied round the wrist. 2, a waist-tie (ಉಡಿದಾರ, ಮೇಖಲೆ 45). 3, an ornament of the breast (ಕೌಸ್ತುಭ, ಪದಕ 45). 4, any ornament or trinket. 5, turning round (ಭ್ರಮಣ, ತಿರುಗುವುದು 45). 6, a crest. 7, a water-drop (J. 30, 7).

ಕಂಕಣಕಾರ kaṅkaṇa-kâra. = ಟಂಕಣಕಾರ. (My.).

ಕಂಕಣಗ್ರಹಣ kaṅkaṇa-grahaṇa. A partial, or annual, eclipse (C.).

ಕಂಕಣಬದ್ಧ kaṅkaṇa-baddha. A man who has a kaṅkaṇa tied round his wrist for any good, favourable or happy rites (My.). 2, one who devotes himself to the accomplishment of any good or bad object (My.).

ಕಂಕಣೀಕೆ kaṅkaṇîkĕ. = ಕಂಕರಿಕೆ. A wrist-ornament furnished with bells.

Digitized by Google

ಕಂಕತ kaṅkata. *A comb* (ಕೇಶಮಾರ್ಜನಿ, ಹಣಿಗೆ Mr. 208).

ಕಂಕತಿಕೆ kaṅkatikĕ. *A comb.*

ಕಂಕಪತ್ರ kaṅka-patra. Furnished with the feathers of a heron: *an arrow.*

ಕಂಕಭಟ್ಟ kaṅka-bhaṭṭa. = ಕಂಕ No. 4. (C.).

ಕಂಕಮಾಲೆ kaṅka-mâlĕ. A kind of musical instrument; beating time by clapping the hands. (R.).

ಕಂಕಮುಖ kaṅka-mukha. A pair of tongs. (R.).

ಕಂಕರ kaṅkara. Vile, bad. (R.).

ಕಂಕರಿ kaṅkari. Tbh. of ಖಂಕರಿ (Šmd. 338. 357). — ಕಂಕರಿ ಗೋಲ್. -ಕೋಲ್. A large whip (ಬಲ್ಲಾಟ Čt. I, 79).

ಕಂಕರಿಕೆ kaṅkarikĕ. (Tbh. of ಕಂಕಣೀಕೆ). — ಮೆಯ್ಯ ಮಸಿಕೊರಲ ಬಕ್ಕಳ ಪುಡ್ಯೆ ಘರಿಲ್ಗರಿವ ಕೆಯ್ಯ ಕಂಕರಿಕೆ (Šmd. 84 Mdb.).

ಕಂಕರೆ kaṅkarĕ. Gravel: a single pebble or particle (Mhr., H. ಕಂಕರ, Br.; R.).

ಕಂಕಳ kaṅkaḷa. = ಕಂಕಣ. — ಕಂಕಳವರಲ್. -ವರಲ್. A bracelet-gem; an excellent man: a man very familiar with proverbs (ನಲ್ಲಾದಿಗಾಣಿ Čt. I, 43).

ಕಂಕಱ್ kaṅkaḻ. ಕಂಕೞು. = ಕಂಕುೞ್ q. v., etc. (ಕಕ್ಷ, ಬಾಹುಮೂಲ Si. 210. 461; My.). ಕಂಕಱ ಎಲುವಿನ ಸನ್ಧಿ (ಜತ್ರು Si. 209). ಮೊದಿಕೆಯ್ಗಿನ್ತಲೂ ಮೇಲೆ ಕಂಕಱ ವರಿಗೂ ಮೇಲುತೋಳು (ಪ್ರಗಣ್ಡ 210). ಕಂಕಱ ಕೆಳಗಡೇ ಪಕ್ಕ (ಪಾರ್ಶ್ವ 210).

ಕಂಕಾಲ kaṅkâla. *A skeleton* (ಅಸ್ಥಿಪಂಜರ, ಒಡಲ ಎಲು Mr. 397). 2, N. of a Dânava.

ಕಂಕಾಲಧರ kaṅkâla-dhara. Who carries the backbone of Vishṇu: Šiva (C.).

ಕಂಕಾಲಮಾಲಿ kaṅkâla-mâli. Whose necklace is formed of bones: Šiva. (My.).

ಕಂಕಾಲಾಂಕಪಾಣಿ kaṅkâla-aṅka-pâṇi. = ಕಂಕಾಲಧರ. (Bp. 54, 23).

ಕಂಕಾಲಿ kaṅkâli. Šiva (My.). 2, N. of a servant of Šiva (Šsv. 1, after 79).

ಕಂಕಿ kaṅki. = ಕಂಕು. An ear of jôḷa or sĕjjĕ (also of some other corn, My.) the grains of which have been removed (C.; Tĕ.; *cf.* ಕಣಿಕೆ?). ಸುಂಕಿಗನು, ಹುರಿಹಲು, ಬಿಂಕಿನ ಬೆಲೆವೆಣ್ಣು, ಕಂಕಿಯು, ಸುಂಕ, ನಸುಗುನ್ನಿ ಈ ಆಱು ಸೋಂಕಿದರೆ ಬಿಡವು (Sp.).

ಕಂಕು kaṅku. = ಕಂಕಿ. (My.).

ಕಂಕುೞ್ kaṅkuḻ. = ಕಂಕೞ್, ಕಂಕುೞು, ಕಂಕುಳು, ಕವುಂಕುೞ್, ಕೊಂಕೞ್, ಕೊಂಕೞು, ಕೊಂಕಳು, ಕೊಂಕುೞ್. The arm-pit (ಕಕ್ಷ Mr. 486; My.; T. ಚಂಕ, ಕೈಕ್ಕುೞ್; Tĕ. ಚಂಕ, ಚಂಕಿಲಿ; Tu. ಕಂಕುಳ). ಉರದ ಸಜ್ಜೆಯನು ಒಡನೆ ಕಂಕುೞಲಿ ಅವಚಿಕೊಳುತಂ (Bp. 47, 46).

ಕಂಕುೞ kaṅkuḻa. = ಕಂಕುೞ್, etc. (ಕಕ್ಷ Nn. 117; C.; B. 3, 124).

ಕಂಕುೞು kaṅkuḻu. = ಕಂಕುೞ್, etc. (My.). ತೋಳ ಮೊದಲುಗಳ್ ಎರಡೂ, ಕಂಕುೞು (ಕಕ್ಷಗಳು Nr.). ಕಂಕುೞುನಿನ್ದಲೆ (Bp. 15, 21). ಕಂಕುೞನಲಿ (43, 27). ಕಂಕುೞಲ್ಲಿ ದೊಣ್ಣೆ, ಕೆಯ್ಯಲ್ಲಿ ಶರಣಾರ್ಥ (Prv.; other form — ಸಲಾಮು).

ಕಂಕೇಲ್ಲಿ kaṅkĕlli. = ಕಂಕಲಿ. *The Ašôka tree, Jonesia ašôka* Roxb.

ಕಂಕೋಷ್ಠ kaṅkôshṭha. N. of a plant (ಪಟುಪರ್ಣ, ಹೈಮವತಿ, ಸ್ವರ್ಣಕ್ಷೀರಿ, ಹಿಮಾವತಿ, ಘಣ್ಟಾಮಣೀ ಸೊಪ್ಪು Si. 156).

ಕಂಕೋಷ್ಠಿ kaṅkôshṭhi. A kind of leguminous shrub, Glycine debilis (ಕಾಡುದ್ದು Nr.).

ಕಂಗನೆ kaṅganĕ. = ಕಗ್ಗನೆ. Greatly, excessively (Abh. P. 13, 49; Grj. 2, after 106).

ಕಂಗಳ kaṅgaḷa. (= ಕಂಗಾಳ). A blind man (C.; T. ಕಂಗು, blackness; ಕಂಗುಲ್, darkness; could it be ಕಣ್-ಕಳ, one who has lost his eyes?).

ಕಂಗಾರು kaṅgâru. = ಕಂಗಾಲು, ಕಂಗು 2. Displeasure, anger (My.).

ಕಂಗಾಲ್ kaṅgâl. Poor; poverty-stricken; wretched; weak; barren, as soil (C.; Mhr., H.). — ಕಂಗಾಲು. -ಅ 3. A pauper, a miserable wretch, a weak man (My.).

ಕಂಗಾಲತನ kaṅgâlatana. Pauperism, wretchedness (My.).

ಕಂಗಾಲಿ kaṅgâli. Wretchedness (Mhr.). 2, a pauper, a beggar (My., Tĕ. as ಕಂಗಾಳಿ).

ಕಂಗಾಲು kaṅgâlu. = ಕಂಗಾರು, etc. (S. Mhr., only in ಕಂಗಾಲ ಮನುಷ್ಯ, a disagreeable, angry man).

ಕಂಗಾಳ kaṅgâḷa. (ಕಣ್-ಕಾಣ?). = ಕಂಗಳ. (My.).

ಕಂಗಾಳಿ kaṅgâḷi. = ಕಂಗಾಲಿ, q. v.

ಕಂಗು kaṅgu. 1. Great surprise (ಬಲುಚೋದ್ಯ Čt. I, 73).

ಕಂಗು kaṅgu. 2. = ಕಂಗಾರು, etc., (ಕೊಂಗು 2?). Displeasure, anger (S. Mhr.; *cf.* ಕವಗು 1?). — ಕಂಗಾಗು. -ಆಗು. To become angry, to be displeased, irritated, loathed, or annoyed (S. Mhr.).

ಕಂಗು kaṅgu. 3. = ಕಗ್ಗು, etc. (My.).

ಕಂಗು kaṅgu. 4. = ಕಂಗುಂಗೆ, ಕಂಗೊಂಗೆ, ಕಂಗೊನ್ದಿ. The heart-pea, Cardiospermum halicacabum Lin. (ಜ್ವಲನಿ, ಜ್ಯೋತಿಷ್ಮತಿ Mr. 146, one MS. ಕಾಂಗು).

ಕಂಗು kaṅgu. *The Indian millet, Panicum italicum* Lin. (ನವಣೆ Mr. 373). See ಪ್ರಿಯಂಗು.

ಕಂಗುಂಗೆ kaṅguṅgĕ. = ಕಂಗು 4. (ಪಾರಾವತಾಂಘ್ರಿ, ಕಟಭಿ, ಪಿಣ್ಯ, ಪಣ್ಯ, ಜ್ಯೋತಿಷ್ಮತಿ Nr.).

ಕಂಗೊಂಗೆ kaṅgôṅgĕ. = ಕಂಗುಂಗೆ. (Si. 159).

ಕಂಗೊನ್ದಿ kaṅgŏndi. = ಕಂಗೊಂಗೆ. (Si. 159).

ಕಂಗೋರೆ kaṅgôrĕ. An ornamental cordon, groove, etc.; spiral lines (Mhr.; R.; Br.).

ಕಚ್ kač. = ಕಚಿ. An imitative sound. (*Cf.* Mhr. ಕಚಕಚ). — ಕಚ್ಚಚ್ ತಿನ್ನು. To eat in a craunching manner (C.). — ಕಚ್ಚೆನ್ದು ಬೀೞು. To sound as a stone falling into mud (C.). — ಕಚ್ಚಚ್ ತುೞಿ. To tread sticky mud and clay so that the peculiar, well-known sound is produced (C.).

ಕಚ kača. = ಕಸ 5, ಕಸರ, ಗಜಿ. — ಕಚಪಿಚ. reit. The sound of mixing miscellaneous boiled things (as rice, vegetables, etc.) with the hand: confusion. — ಕಚಪಿಚ ಕಲಸು, to mingle boiled things in a confused manner (C.). — ಕಚಪಿಚಕೆಲಸ. Confused work (My.).

ಕಚ kača. *The hair of the head* (ಮಣ್ಡೆಯ ಕೂದಲ್ Nn. 48). 2, matted and twisted hair (ಜಟೆ 100). 3, a bundle of hair at the back of the head (ತುಱುಬು 51). 4, a cicatrix. 5, a cloud. 6, a binding, a band. 7, the hem of a garment.

ಕಚಕ್ kačak. = ಕಚಿಕ್, ಕಚುಂಕ್. The sound produced when a stone falls into mud (My.).

ಕಚಕ್ಕನೆ kačakkanĕ. = ಕಚ್ಚನೆ. Smartly, forcibly,

Digitized by Google

suddenly, as ಕಚಕ್ಕನೆ ಮುಳ್ಳು ನೆಟ್ಟಿತು (C.; Tĕ. ಖಚಿಕ್ಕನೆ, slapdash, at one smack). **2,** with the sound produced when a stone falls into mud, or the feet tread wet or sticky clay (My.).

ಕಚಪ kača-pa. Cloud-drinker: grass; a leaf. (R.).

ಕಚಪಕ್ಷ kača-paksha. *A quantity of hair, much hair;* thick or ornamented hair.

ಕಚಪಾಶ kača-pâśa. = ಕಚಪಕ್ಷ. *A quantity of hair, etc.*

ಕಚಪು kačapu. A dish of boiled vegetables or fruits seasoned with salt, pepper, etc. (My.; Tu. ಕಚಪ್ಪು, ಕಚಪು; *cf.* ಕತಿಪು).

ಕಚಬನ್ಧ kača-bandha. A braid of hair (ಹಿಣಿಲ್ Čt. I, 74).

ಕಚಭರ kača-bhara. = ಕಚಪಕ್ಷ. A mass of hair, etc. (Grj. 10, 16; Bp. 40, 19; 42, 24; J. 5, 15).

ಕಚಮಾಲ kača-mâla. Smoke. (R.).

ಕಚರಾ kačarâ. Rubbish, dirt, straw, fragments (Mhr.; My.). — ಕಚರಾಕೆಲಸ. The work of removing rubbish (My.). 2, worthless business (My.). — ಕಚರಾತೆರಿಗೆ. Municipal tax (My.). — ಕಚರಾದುಪ್ಪಟಿ. A dirty duppaṭi (My.; ವರಾತಿ, ಸ್ಥೂಲಶಾಟಕ Si. 223).

ಕಚವಾಯಿಸು kačavâyisu. To become weary, to be tired or exhausted (S. Mhr.; Mhr. ಖಚಣೇಂ).

ಕಚಾಕಚಿ kačâkači. An imitative sound: a brawl, a squabble (Mhr.; R., Tĕ.).

ಕಚಾಯಿಸು kačâyisu. To be smart, prompt, careful, or clever in doing a business (My.; *cf.* Mhr. ಕಚಕ್ಯಾ).

ಕಚಿ kači. = ಕಚ್. — ಕಚಿಕಚಿ ನಮಲು. = ಕಚ್ಚುಕಚ್ ತಿನ್ನು. (My.). — ಕಚಪಿಚ ತಿನ್ನು. = ಕಚ್ಚುಕಚ್ ತಿನ್ನು. (C.).

ಕಚಿಕ್ kačik. = ಕಚಕ್, etc. (My.).

ಕಚು kaču. An esculent root, Arum colocasia and other kinds. 2, a garden plant, the long Zedoary, Curcuma zerumbet Roxb. (St. & Pl.).

ಕಚುಂಕ್ kačuṅk. = ಕಚಿಕ್, etc. (My.).

ಕಚೂರ kačûra. = ಕಚೋರ. (C.). See ಗವಲು.

ಕಚೇರಿ kačêri. = ಕಚ್ಚೇರಿ. A hall of audience; a town-hall; a court for administration of public business; an office: it is applied to the people assembled, and to the business proceeding (C.; H., Mhr.). — ಕಚೇರಿ ಮಾಡು, to open a court or office for business; to carry on business in an office (C.; see Si. 109; B. 4, 146; 5, 265).

ಕಚೋರ kačôra. = ಕಚೂರ, (ಕಚ್ಚೂರ), ಕಚ್ಚುರ, ಕಚಿಕ್ಖೇರ, ಕರ್ಚೂರ. The long Zedoary, Curcuma zerumbet Roxb., and its root (ಕರ್ಚೂರಕ, ದ್ರಾವಿಡಕ, etc. Nr.; My.). ಗನ್ಧಕಚೋರ (ಕರ್ಚೂರಕ, ದ್ರಾವಿಡಕ, etc. Si. 155). 2, a kind of yellow orpiment (ಅಂಗುಲಿ, ಅರಿದಾಳ Mr. 102). — See ಅರುಗಣ್ಣುನುಳ್ಳು-, ಕರಿ-, ಗಣ್ಣ-.

ಕಚ್ಚ kačča. 1. Tbh. of ಕಕ್ಷ (Šmd. 346). *Cf.* ಕಚ್ಚೆ.

ಕಚ್ಚ kačča. 2. = ಕಚ್ಚಾ. Unripe, green; — uncooked, raw; — rude, rough, unfinished; — young, tender (as understanding); — minor, less (as a measure or weight, My.; Mhr., H. ಕಚ್ಚಾ).

ಕಚ್ಚಟ kaččaṭa. = ಕಚ್ಚುಟ, ಕಂಚಟ. (Tbh. of ಕಕ್ಷಾಪಟ). A cloth passed between the legs to cover the privities (Tĕ. ಕಚ್ಚಡ, a tuck, truss, etc.). ಕಟ್ಟುವ ಕಚ್ಚಟ (ಕೌಪೀನ Mr. 256).

ಕಚ್ಚಡ kaččaḍa. = ಕಚ್ಚರ. Filth, rubbish (My.).

ಕಚ್ಚಡಿ kaččaḍi. A kind of vegetable dish (My.; J. 6, 44).

ಕಚ್ಚನೆ kaččanĕ. = ಕಚಕ್ಕನೆ No. 1. Smartly, etc. ಕಚ್ಚನೆ ಮುಳ್ಳು ನೆಟ್ಟಿತು (S. Mhr.).

ಕಚ್ಚರ kaččara. (= ಕಚ್ಚಡ). *Dirty, foul;* spoiled; vile, wicked.

ಕಚ್ಚರಿ kaččari. A kind of sauce (?). ತುರಿದ ಕಚ್ಚರಿ (ಎಜುಲಿ Mr. 219).

ಕಚ್ಚಳಿ kaččaḷi. An honorary arm-ring (ಬಿರುದಿನ ಬಳೆ Šmd. II, Šm. 40; ಬಿರಿದಿನ ಬಳೆ Kk. 75; ಕಮ್ಮರೆ Čt. I, 21, o. r. ಕಮ್ಮರ). ತೋಳ ಕಚ್ಚಳಿಯ .... ವಲ ಬಿರುದುಗಳ್ (Rśv. 6, after 11).

ಕಚ್ಚಾ kaččâ. = ಕಚ್ಚ. (My.). — ಕಚ್ಚಾಸೇರು. A seer of only 20 or 24 rupees' weight (C.).

ಕಚ್ಚಿಕೆ kaččikĕ. Biting, etc. (My.).

ಕಚ್ಚಿದ್ kad-čid. ಕಚ್ಚಿತ್. *A particle introducing a direct question with expected positive answer, and a kind of inquiry.*

ಕಚ್ಚಿಱಿ kaččiṟi. To join two things, to unite (ಯುಗಲಸನ್ಧಾನ Šmd. Dh.). *Cf.* ಇಱಿ 4.

ಕಚ್ಚಿಸು kaččisu. 1. To cause to bite (C.).

ಕಚ್ಚಿಸು kaččisu. 2. To cause to join, to unite (My.).

ಕಚ್ಚು kačču. 1. = ಕರ್ಚು 1. To bite; to sting (C.). **2,** to smart, to gripe, to ache, as the stomach; to bite, as pepper, etc. (C.). ಕೆಡಕುಹುಳು ಕಚ್ಚಿತ್ತು ಮಗನಂ (Bp. 48, 8). ಅವುಡಂ ಕಚ್ಚಿ ಕೊಳುತ (31, 13). ಕಚ್ಚುವ ಜೇರುಜಮ್ಮು (Si. 176). ಹೊಟ್ಟೆ ಕಚ್ಚಿ ಭೇದಿಗಳು ಆಗುವಿಕೆ (201). ಕಚ್ಚಿದರೆ ಕಚ್ಚುವದು; ಕಿಚ್ಚಿಲ್ಲ, ಜೇಡಿಲ್ಲ (*i. e.* pepper, Sp.). ಹಾವು ಕಚ್ಚಿದುದು (ದಷ್ಟ Mr. 391). ಒನ್ದು ನಾಯಿ ಮಾಂಸದ ಕರಣೆಯನ್ನು ಕಚ್ಚಿ ಕೊಣ್ಡು (B. 2, 4). ಆ ಹಾವನ್ನು ಕಚ್ಚಿ ಕೊಣ್ಡು ಹೋಯಿತು (2, 28). ಕಚ್ಚೋ ನಾಯಿ ಬೊಗಳದು, ಬೊಗಳೋ ನಾಯಿ ಕಚ್ಚದು. — ಕಚ್ಚೋ ನಾಯಿಯ ಮುನ್ದೆ ಕಣ್ಣುಗ ಹಾಕಿದ (Prvs.). See Bp. 46, 22; J. 13, 18; 24, 10. 11; B. 2, 47; Prvs. s. ಕನ್ನಮ್ಮಾಡಿ. — ಕಚ್ಚಾಟ. -ಆಟ. Mutual biting (C.). 2, quarrel (C.). See Prv. s. ಮಚ್ಚಿನಾಲಿಗೆ. — ಕಚ್ಚಾಡು. -ಆಡು. To bite one another, as dogs (C.). 2, to quarrel (C.). See B. 5, 32.

ಕಚ್ಚು kačču. 2. = ಕರ್ಚು 2. Biting; a bite; an incision; a notch, a nick; a wound. (*Cf.* ಕಕ್ಕು 1). ಗಿಡಕ್ಕೆ ಚೂರಿಯಿನ್ದ ಕಚ್ಚು ಹಾಕಿದರೆ (B. 2, 32). ತುಬಾಕಿಯ ಬಾಯಿ ತಗಲಿ ಆ ಗಿಡಕ್ಕೆ ಕಚ್ಚು ಬಿದ್ದದೆ (3, 45). ಮೇಲ್ದೋಟಿಗೆ ಚೂರಿಯಿನ್ದ ಕಚ್ಚು ಹಾಕುವರು (4, 40). ಗಿಡದ ಬೊಡ್ಡಿಗೆ ಕೊಡ್ಲಿಯಿನ್ದ ಕಚ್ಚು ಹಾಕಿದರೆ (4, 70). ಕೆಯ್ಗೆ ಉಳಿಯಿನ್ದ ಕಚ್ಚಾಯಿತು (C.). **2,** a bit, a fragment, a piece (My.).

ಕಚ್ಚು kačču. 3. = ಕರ್ಚು 4. Washing; water in which raw rice has been washed (C.; ಯೂಷ G.; Tĕ. ಕಚ್ಚು, ಕಡುಗು, ಕಲಿ; T. ಕಡಿ). See ಅಕ್ಕಿಗಚ್ಚು, ಕಲಗಚ್ಚು.

ಕಚ್ಚು kačču. 4. To join (v. i., My.; see ಕದೆ).

ಕಚ್ಚುಟ kaččuṭa. = ಕಚ್ಚಟ, q. v. (ಕಕ್ಷಾಪಟ, ಕೌಪೀನ Hlâ.; ಗುಹ್ಯ, ಕೌಪೀನ Nn. 70). See Bp. 12, 54; 27, 43.

Digitized by Google

ಕಚ್ಚೂರ kaččûra. A leafless plant, wild and cultivated, Kaempferia galanga Lin. (St. & Pl.).

ಕಚ್ಚೆ kaččĕ. ಕಚ್ಚೆ. The organ of generation (yôni) of cows and buffaloes (S. Mhr.; Tĕ., also ಕಱಿ).

ಚೆಮ್ čem. = ಚೆನ್ 1, etc. Redness. — ಚೆಮ್ಬಿಸಿಲ್. = ಕೆಮ್ಬಿಸಿಲ್. Purple sunshine (Rśv. 9, 36; Śśv. 1, 77). — ಚೆಮ್ಪೂ. -ಪೂ. A red flower (Čpr. 3, 96). — ಚೆಮ್ಪೊನ್. -ಪೊನ್. (Śmd. 216). The red metal: gold (ಕನಕ, ಸೊನ್ನೆ, ಕನಕ, ಮಿಸುನಿ Śm. 68; ಕನಕ, ಸೊನ್ನೆ, ಸುವರ್ಣ Kk. 47; Abh. P. 3, 37; 3, after 83 and 130; Rśv. 5, after 19; J. 18, 63; T.: fine or pure gold). — ಚೆಮ್ಬೋತ. -ಪೋತ. (Śmd. 216). = ಕೆಮ್ಬೋತ, etc. The crow-pheasant (ಧೂಮ್ರಚ್ಛದ Mr. 177; M., T. ಚೆಮ್ಬೋತ್ತು; Bh. 1, 20, 53; Śśv. 3, 33).

ಚೆಮ್ಬಿಗೆ čembigě. = (ಚಮ್ಬು), ತಮ್ಬಿಗೆ. A globular copper or brass vessel, used for drinking water, etc. (S. Mhr.; Mhr. ತಾಮ್ಬ್ಯಾ; Mhr. ತಾಮ್ಬೇಂ, copper; *cf.* ತಾಮ್ರ).

ಚೆಮ್ಬು čembu. = ಚಮ್ಬು, etc. (M. ಚೆಮ್ಬ, ಚೆಮ್ಬು; Tě. also ಚೊಮ್ಬು). — ಚೆಮ್ಬುಕುಟಿಗ. = ಚಮ್ಬುಕುಟ್ಟಿಗ. A copper-smith (ತಾಮ್ರಕುಟ್ಟಕ Nr.).

ಚೆಯ್ čey. (ಚೆಯ್ಯ). 1. = ಚಯ್ (ಚಯ್ಯ), etc. — ಚೆಯ್ಗುಡು. -ಕುಡು. To give or cause fun (V. 2, 33, 32, 34). — ಚೆಯ್ಯಾಟ. = ಚಯ್ಯಾಟ, q. v.

ಚೆಯ್ čey. 2. = ಸಯ್, ಸೆಯ್. Straightness, etc.; niceness; beautifully, charmingly (see ಚನ್ 2). ಚೆಯ್ ಮುಕ್ಕಾಡಿ, ಮುನ್ದಲೆವಿಡಿದು (Prll. 3, 29).

ಚೆರಗ čeraga. = ಚರಗ, etc. (S. Mhr.).

ಚೆರಿಗೆ čerigě. = ಚರಿಗೆ. (C.).

ಚೆರುಕು čěruku. (= ಕಬ್ಬು). The sugar-cane (Tě.). See ಚನ್ನ-.

ಚೆರ್ಚೆ čerčě. = ಚರ್ಚೆ q. v. Ridicule, etc. (S. Mhr.). 2, a quarrel, etc. (R.).

ಚೆರ್ಬಿ čerbi. = ಚರಬಿ. (My.; S. Mhr.; T. ಚೇರ್ವೆ).

ಚೆಲ್ čel. = ಚೆಲ್ಲು, etc. To throw, as water (J. 30, 7).

ಚೆಲಂಕು čelaṅku. = ಚಲಕು, etc. To scatter, etc. (ಅಸಿ, ಈಡಾಡು Śmd. II; Tě. ಚಲುಕು, to sprinkle).

ಚೆಲಂಗು čelaṅgu. = ಚಲಂಗು, etc. To let go from the hand, etc. (ಕರಮುಕ್ತ Śmd. Dh., o. r. ಚಲಂಗು).

ಚೆಲ čela. Abbrevation of ಚೆಲ್ವ, of beauty. — ಚೆಲ ಪಿಲೆ. = ಚಳಪಿಲೆ. A beautiful boy (T. ಚೆಲ್ವ ಪಿಳ್ಳೈ). — ಚೆಲ ಪಿಲೆರಾಯ. N. of an idol of Kṛishṇa at Mêlkôṭě in Mysore (My.).

ಚೆಲುವ čeluva. = ಚಲುವ, No. 2. See s. ಚೆಲುವು.

ಚೆಲುವಿಕೆ čeluvikě. = ಚಲುವಿಕೆ, etc. (C.; ಅಭಿಖ್ಯೆ, ಶೋಭ Nr.; ಏವಕ್ಷತ, ಸೌಮ್ಯ Nn. 103). See B. 5, 12. 289.

ಚೆಲುವು čeluvu. = ಚಲುವು, etc. (ರಾಮ Mr. 504, o. r. ಚಲುವು; ಕೋಟ, ಸೌನ್ದರ Nn. 43; ರೂಪು 70; ರೂಪಕ, ಸರೂಪ 135; C.; B. 5, 12; J. 30, 15). Gen. ಚೆಲುವ (Bp. 42, 24; Prll. 3, 2; B. 2, 15); Acc. ಚೆಲುವನು (Prll. 3, 31); Loc. ಚೆಲುವಿನಲ್ಲಿ in Nn. 43, etc. — ಚೆಲುವ. = ಚಲುವ, etc. A handsome man (ಸುರೂಪ Nr.; ಸೌಮ್ಯ Nn. 74; C.; B. 2, 14).

ಚೆಲೋ čělô. = ಚಲೋ, etc. (C.; B. 2, 28; 5, 47. 85. 217. 262. 278. 289). ಚೆಲೋದು, ಚೆಲೋವು, *e. g.* 5, 124. 132. 209. 213. — ಚೆಲೋ ಚೆಲೋ. rep. (B. 5, 85. 146).

ಚೆಲ್ಲ čělla. = ಚಲ್ಲ 1. (Rśv. 11, 83). — ಚೆಲ್ಲಾಟ. = ಚಲ್ಲಾಟ. ಕೊತ್ತಿಗೆ ಚೆಲ್ಲಾಟ, ಇಲಿಗೆ ಪ್ರಾಣಸಂಕಟ (Prv.).

ಚೆಲ್ಲವೊತ್ತ čělla-vŏtta. = ಚಲ್ಲವೊತ್ತ. See s. ಚಲ್ಲವರ್.

ಚೆಲ್ಲಾ čěllā. = ಚಲ್ಲಾ. etc. — ಚೆಲ್ಲಾ ಪಿಲ್ಲಿ. = ಚಲ್ಲಾ-. (S. Mhr.).

ಚೆಲ್ಲಾಟ čěllāṭa. = ಚಲ್ಲಾಟ. See s. ಚೆಲ್ಲ and ಚೆಲ್ಲು.

ಚೆಲ್ಲಿಸು čěllisu. = ಚಲ್ಲಿಸು. To cause to pour, as brandy on the ground (B. 5, 54), to cause to throw or put down, as a tree (5, 135), to cause to throw about or spread, as grass (5, 295), etc. (C.).

Digitized by Google

ಚೆಲ್ಲು čellu. = ಚಲ್ಲು 1, ಚೆಲ್. To scatter about or strew (ಸೀಱು, ಸಿಡೆಯರ್ Šmd. Dh. Cm.; C.), as lotus-flowers (Ršv. 6, 7), as seed (11, 68), to spend lavishly or profusely, as wealth (J. 34, 36), to spill, as ink (B. 2, 1), to shed, as blood (J. 4, 32), to throw away, as some jaggory (B. 2, 16), as a carcass (2, 34), as scum (3, 46), to throw or put, as a bundle of grass (2, 19), as salt (3, 59), to throw, as dust (J. 6, 39), as arrows (29, 11), etc., etc. See B. 3, 106. 123; 4, 157; 5, 154. 211. ಎಣ್ಣೇ ಚೆಲ್ಲಿದವನೂ ಅತ್ತ, ಕಾಯಿ ಚೆಲ್ಲಿದವನೂ ಅತ್ತ.— ಕೂಜ ಚೆಲ್ಲಿದ ಕಡೆ ಸಾವಿರ ಕಾಗೆ (Prvs.). 2, to disperse (v. i., J. 7, 32). — ಚೆಲ್ಲಾಟ = ಚಲ್ಲಾಟ. (C.). — ಚೆಲ್ಲಾಡು. = ಚಲ್ಲಾಡು. (My.). ಅಷ್ಟಲರ ಧೂಳಿಗಳ ಚೆಲ್ಲಾಡಿ (J. 3, 24). — ಚೆಲ್ಲಾಳ್ಡು. = ಚೆಲ್ಲಾಡು. (My.).

ಚೆಲ್ಲೆ čellĕ. = ಚಲ್ಲೆ. Length (ನಿಡಿದು Šm. 49; Kk. 51, o. r. ಚಲ್ಲೆ). — ಚೆಲ್ಲಿಗಣ್. -ಕಣ್. A long, extended eye (Šm. 118, o. r. ಚಲ್ಲೆ-; Bp. 40, 14; J. 6, 18; 31, 10).

ಚೆಲ್ವ čelva. = ಚಲ್ವ No. 1, etc. Beauty (ಪುಣ್ಯ, ರೂಪು Nn. 63). 2, = ಚಲ್ವ No. 2, ಚೆಲುವ, etc. See s. ಚೆಲ್ವು.

ಚೆಲ್ವಿ čelvi. = ಚಲುವಿ, etc. (C.).

ಚೆಲ್ವಿಕೆ čelvikĕ. = ಚಲ್ವಿಕೆ, etc. (C.; B. 3, 18).

ಚೆಲ್ವು čelvu. = ಚಲ್ವು, etc. (C.; ಸುರಭಿ Mr. 509, o. r. ಚಲುವು; ಅಸ್ತ Kk. 32; Čpr. 1, 77. 132; Grj. 10, 45. 47; J. 30, 7). ಚೆಲ್ವ ಶಿಸು (J. 28, 20). ಚೆಲ್ವಂ ಬೀಱು (Ršv. 13, 69. 70). ಚೆಲ್ವಿನ ಕಣಿ (13, 104). ಚೆಲ್ವಿನ್ದ (Šmd. 216). ಇದು ದೇಶಿಯೊಳ್ ಚೆಲ್ವು (191). — ಚೆಲ್ವ. = ಚಲುವ, etc. A handsome man (Čpr. 1, 108). See ಕಡು-. — ಚೆಲ್ವನ್ ಆನ್. To get (or possess) beauty, etc. (Kk. 18. 26; J. 3, 17). — ಚೆಲ್ವಾಗು. -ಆಗು. To become or be beautiful, etc. (Šmd. 174; Čpr. 1, 80; Ršv. 5, 51; Ššv. 5, 54; J. 17, 4). — ಚೆಲ್ವಿಡಿ. -ಇಡಿ. To abound in beauty (Grj. 10, 92). — ಚೆಲ್ವುವೆಱು. -ವೆಱು. = ಚೆಲ್ವನ್ ಆನ್. (Čh. v. 181. 206; Čpr. 3, 38). — ಚೆಲ್ವೆನ್. -ಎನ್. To say "it is a beauty", or "it is beautiful". ಪರಿಕೋಭಿಸಿತು... ಪದ್ಮಾಕರಂ ಚೆಲ್ವೆನೆ (J. 15, 8). — ಚೆಲ್ವೆಸೆ. -ಎಸೆ. To beam beautifully. ಅಯ್ದೆ ತೊಳಪ ಕನ್ನವುರಂ ಚೆಲ್ವೆಸೆದಿರೆ (Šmd. 75). — ಚೆಲ್ವೊಗೆ. -ಒಗೆ. Beauty to arise or appear (Kk. 28). — ಚೆಲ್ವೊಡರಿಸು. -ಒಡರಿಸು. To produce beauty (Grj. 10, 103).

ಚೆಲ್ವೆ čelvĕ. = ಚೆಲ್ವಿ, etc. (My.). ಗೌಡನ ಹೆಣ್ಡತಿ ಕಡುಚೆಲ್ವೆಯಾದರೆ ಕಸದ ಮಂಕ್ರಿ ಹೊತ್ತು ತನ್ದಾಗ ಕಣ್ಡೀತು (Prv.).

ಚೆಳು čeḷu. = ಚಳ್ಳು, etc. — ಚೆಳಾವರಿ. -ಅವರಿ. = ಚಳ್ಳವರಿ. (St. & Pl.).

ಚೆಳ್ಳ čeḷḷa. = ಚಳ್ಳೆ, etc. — ಚೆಳ್ಳದ ಮರ. (ಶೇಲು, etc. Nr.).

ಚೆಳ್ಳು čeḷḷu. = ಚಳ್ಳು. etc. — ಚೆಳ್ಳುಗುರ್. -ಉ. = ಉ-. (J. 8, 21; S. Mhr.).

ಚೆಳ್ಳು čeḷḷu. = ಚಳ್ಳು, etc. (ಜಾತಿ, ಶ್ಲೇಷ್ಮಾತಕ Mr. 124).

ಚೆಳ್ಳೆ čeḷḷĕ. = ಚಳ್ಳು, etc. (My.).

ಚೇಕಿತಾನ čêkitâna. N. of a prince and ally of the Pâṇḍus. (Bh. 6, gîtârtha 1, 4).

ಚೇಗ čêga. = ಚಾಗ 2, (ಚೆಗರ್), ಚೇಗಿ, ಜೇಗ, ಜಿಗ್ಗ, ಜೇಗಿ. Quickness; quickly (ಚಿಚ್ಚರ, ಬಿಚ್ಚರ, ಚಿಕ್ಕನೆ, etc., ಶೀಘ್ರ Šm. 61, o. r. ಜೆಗ್ಗ; Kk. 50, o. rs. ಚಿಗಿರ್, ಚೇಗಿ, ಜೀಗ, ಜೇಗಿ). — ಚೇಗ ಚೇಗ. rep. = ಚಾಗ ಚಾಗ. (Mr. 90, o. r. ಚಾಗ ಚಾಗ).

ಚೇಗಿ čêgi. = ಚೇಗ, q. v.

ಚೇಗು čêgu. = (ಕೆಚ್ಚು 4), ಚೇಗೆ. The heart, or core, of a tree; essence; strength (ಬಲಿತಿರುವಿಕೆ, ಗಟ್ಟಿಯಾಗಿರುವಿಕೆ Si. 122; My.; T.; Tĕ. ಚೇಗೆ, ಚೇವ). ಗಿಡದಲ್ಲಿರುವ ಚೇಗು (ಸಾರ, ಮಜ್ಜನ್ Si. 122).

ಚೇಗೆ čêgĕ. = ಚೇಗು. (Bp. 24, 25).

ಚೇಚೇ čê-čê. Fie! shame! (My.; Mhr. ಛೀಛೀ; *cf.* ಚೀ). 2, not so! (My.).

ಚೇಟ čêṭa. *A servant;* a slave.

ಚೇಟಕ čêṭaka. *A servant;* a slave. *Cf.* ತೆತ್ತಿಗ?

ಚೇಟಿ čêṭi. *A female servant;* a female slave. (Bp. 6, 10; J. 6, 37; 7, 6).

ಚೇಡೆ čêḍĕ. A goblin of that class which can be summoned to harass people (Mhr. ಚೇಡಾ). — ಚೇಡೆ ಮಾಡು, to practise black-art in order to ruin somebody (S. Mhr.).

ಚೇಣ čêṇa. = ಚಾನ, etc. (ಪ್ರಶ್ನನ, ಪತ್ರಪರಶು Nr.).

ಚೇತ čêta. Tbh. of ಚೇತಸ್. See ದುಶ್ಚೇತ; Čpr. 5, 121.

ಚೇತಕಿ čêtaki. *The yellow myrobalan, Terminalia chebula.*

ಚೇತನ čêtana. (fr. ಚಿತ್). Conscious; sentient; intelligent; alive, living; feeling; conspicuous, distinguished, excellent. 2, the thinking principle, the mind; the soul (ಕ್ಷೇತ್ರಜ್ಞ, ಆತ್ಮ Mr. 29). 3, *a living and sentient being.* 4, = ಚೇತನೆ (ಸಂಜ್ಞಾ, ಚೈತನ್ಯ Nn. 99). 5, power, strength (C.; not Sk.).

ಚೇತನಕರಣ čêtana-karaṇa. The act of making conscious, etc. See ಎಚ್ಚರು, ತಪ್ಪಱು.

ಚೇತನಧರ್ಮ čêtana-dharma. The nature of consciousness, etc. (Kâvy. V, 939).

ಚೇತನಭಾವ čêtana-bhâva. The state of being conspicuous or distinguished, conspicuous nature (Šmd. 247; Kâvy. I, 4, 22-26); the state of being conscious, etc.

ಚೇತನಾಚೇತನ čêtana-ačêtana. Animate and inanimate (Šmd. 113).

ಚೇತನೆ čêtanĕ. Consciousness; *understanding, intelligence, reflection.* — ಚೇತನೆವಡೆ. -ಪಡೆ. To recover consciousness (Čpr. 5, 6).

ಚೇತನ್ಯ čêtanya. Tbh. of ಚೈತನ್ಯ. Power (vulgar S. Mhr.).

ಚೇತರಣೆ čêtaraṇĕ. Consciousness, strength (Čpr. 8, 71).

ಚೇತರಿಸು čêtarisu. (*i. e.* ಚೇತನಿಸು). To recover consciousness, or strength (My.; ತಪ್ಪಱು, ಮಲರ್ಚು, etc. G.). See Abh. P. 9, 44; 14, 103; Grj. 4, 66; J. 4, 47. 50; B. 5, 130. 132.

ಚೇತಸ್ čêtas. = ಚೇತ, ಚೇತಸ್ಸು. Consciousness; intelligence; the soul; *the mind, intellect.*

ಚೇತಸ čêtasa. Having such and such a mind (at the end of a compound). ಚೇತಸೆ, a female having such and such a mind (Bp. 41, 4).

ಚೇತಸ್ಸು čêtassu. Tbh. of ಚೇತಸ್. (My.).

ಚೇತೋಜಾತ čêtas-jâta. Kâma.

ಚೇತೋಜಾತವೈರಿ čêtôjâta-vairi. Šiva (Bp. 54, 47).

ಚೇತೋಜಾತಹರ čêtôjâta-hara. Šiva. 2, a long syllable (Čh. v. 102. 127).

ಚೇದಿ čêdi. N. of a country and of its people. (R.).

Digitized by Google

ಚೇದು čêdu. Bitterness (Tĕ.; see ಕಯ್ 6). — ಚೇದು ಬೀರ. (ಧಾಮಾರ್ಗವ, ಘೋಷಕ, ಕಯ್ಪೀರೆ, etc. Si. 151; Tĕ.).

ಚೇಪು čêpu. (= ಸೇಬು?). A gush or spirt, as of milk (Tĕ.; Tĕ. ಚೇಪು, to moisten, or let the milk, to give forth, emit, as a breast does milk; T. ಚೇಕ್ಕು, woman's milk). — ಚೇಪಿನ ಗಿಡ. A tree the leaves of which are given to cows to increase the milk (Sd.).

ಚೇಮ čêma. Tbh. of ಕ್ಷೇಮ. (My.).

ಚೇರ čêra. (also Sk.). The Cêra or Kŏngu country (including also Kêrala or Malabar). 2, the name of a certain horse (Bp. 59, 40; ಅರುಣಂ ಮಾಸೆ ಚೇರನಕ್ಕಂ Mr. 275). — ಚೇರಘಟ್ಟ. The strong Čêra (king? Čpr. 1, 134).

ಚೇರಣಿಗ čêraṇiga. A Malabâr man (see Mr. s. ಕೇರಲ).

ಚೇರು čêru. Testicles swollen from venereal disease (S. Mhr.; Tĕ. ಚೇರು, a string, cord; roe or a string of spawn in fish; veretrum tauri vel equi). — ಚೇರು ಇಳಿ. The testicles to enlarge and hang down on account of venereal disease (S. Mhr.).

ಚೇಲ čêla. = ಶಲ್ಯ 2, ಶಲ್ಲಿ, ಪಾಲೆ 2, ಶೆಲ್ಲೆ, ಶೇಲೆ, ಸೇಲೆ. *Cloth; clothes;* a garment. 2, (at the end of compounds) low, vile, bad.

ಚೇಲಾಂಚಲ čêla-ančala. The border or end of a garment (folded into a pouch, ಮಡಿಲ್ Šs.).

ಚೇಲಿ čêli. 1. Circumcision (My., H., from H. ಚೇಲಾ, a disciple).

ಚೇಲಿ čêli. 2. *A bad woman.*

ಚೇಲಿಕ čêlika. A tailor (ತುನ್ನವಾಯು, ಚಿಪ್ಪಿಗ Mr. 377).

ಚೇಲಿಕೆ čêlikĕ. ಚೋಳಿಕೆ. A bodice. 2, civet (ಪುಣುಗು Mr. 336).

ಚೇಷ್ಟತೆ čêshṭatĕ. The state of moving, stirring, etc. See ನಷ್ಟ-.

ಚೇಷ್ಟಿತ čêshṭita. Done with effort, exerted, set in motion. 2, motion, gesture, act, function; action, behaviour, etc. See ನಿಶ್-; Čpr. 3, 65.

ಚೇಷ್ಟಿಸು čêshṭisu. To move, to stir, to exert one's self, to be busy; to act, to do, to perform (Čpr. 2, 28; 3, 68).

ಚೇಷ್ಟೆ čêshṭĕ. Moving any member of the body; *gesture, action, activity* (as one of the sentiments, ಭಾವ Nn. 100); effort, exertion; doing, performing, behaving, manner of existence. 2, wild capers, mischievous tricks, derision (C.; Mhr.; not Sk.; B. 2, 34). ಕುಣ್ಣಿಗೆ ಎಣ್ಣು ಚೇಷ್ಟೆ, ಕುರುಡಗೆ ಹದಿನಾಲು ಚೇಷ್ಟೆ (Prv.). — ಚೇಷ್ಟೆಗಿಡು. -ಕಿಡು. Activity to cease (Abh. P. 7, 15). — ಚೇಷ್ಟೆಗುಸ್ತುಹ. -ಕುಸ್ತುಹ. Fainting (ನಷ್ಟಚೇಷ್ಟತೆ Nr.). — ಚೇಷ್ಟೆಯವನು. -ಅವನು. = ಚೇಷ್ಟೆಗಾಱ. (C.); fem. ಚೇಷ್ಟೆಯವಳು (C.).

ಚೇಷ್ಟೆಗಾಱ čêshṭĕ-gâṟa. A man full of tricks and pranks (C.).

ಚೇೞ್ čêḷ. = ಚೇಳು, ಕೇೞ್. A scorpion. — ಚೇೞ್ಪಿಸಿಗ. A kind of fish (Rsv. 5, 115).

ಚೇಳು čêḷu. = ಚೇೞ್, etc. (C.; ದ್ರುತ, ಅಲಿ, ವೃಶ್ಚಿಕ Hlâ.; Mr. 403; ಅಲಿ, ಆಲಿ, ದ್ರುಣ, ದ್ರೋಣ, ವೃಶ್ಚಿಕ Nr.; Si. 171; ವೃಶ್ಚಿಕ 405; Tu., T., M. ತೇಳ್; Tĕ. ತೇಲು). ಚೇಳಿ ಬಾಲ (ಅಲ, ವೃಶ್ಚಿಕಲಾಂಗೂಲ Hlâ.; ಅಲ, ದ್ರುತಪುಚ್ಛ Mr. 403). ಕಚ್ಚಿದರೆ ಕಚ್ಚುವದು, ಕಿಚ್ಚಿಲ್ಲ, ಚೇಱಿಲ್ಲ (pepper, Sp.). ಚೇಳಿ ಬಾಲದ ಉರಿಯ ತಾಳಲು ಬಹುದು; ಕಾಡುಮೂಡಿರ ಸಂಗ ಮಱಿದು ಕಳೆ, ಮನವೆ (Dp. 172). ಚೇಳಿಂ ತೆಗೆಯಲ್ಕೆ, ಸುಮ್ಮನಿಹುದೆ? (Šš. 85). ಚೇಳಿಗೆಯು ಕೊಣ್ಡಿಯಲಿಹುದು ವಿಷ (Jns. 42, 72). ಚೇಳಿಗೆ ಪಾರುಪತ್ಯ ಕೊಟ್ಟರೆ ಜಾವಕ್ಕೊನ್ದು ಸರ್ತಿ ಮುಟ್ಟಿಸಿತು. — ಚೇಳಿಗೆ ಮುತ್ತು ಕೊಟ್ಟ ಹಾಗೆ. — ಚೇಳಿನ ಮನ್ತ್ರವನ್ನಱಿಯದವ ಹಾವಿನ ಹುತ್ತಕ್ಕೆ ಕೈಯ್ ಹಾಕಿದ ಹಾಗೆ (Prvs.). See B. 2, 50; 5, 41; ಎಮ್ಮೆ-, ಎಲೆ-, ಕರೀ-, ಕೆಮ್ಪು-, ಲಕ್ಷ್ಮಿ-. — ಚೇಳಿನ ಕೊಣ್ಡಿಯ ಗಿಡ. A stout annual plant with showy flowers and a seed resembling the sting of a scorpion, Martynia diandra Don. (Z.). — ಚೇಳುಕೊಣ್ಡಿಗಿಡ. An annual herb, the Indian turnsole, Heliotropium indicum L. (St. & Pl.; My.). 2, the thorny shrub Vangueria spinosa (ವೃಶ್ಚಿಕ Si. 405). — ಚೇಳುಬಾಣ. A rocket resembling a scorpion in its movements (My.). — ಚೇಳುಬಾಲದ ಗಿಡ. = ಚೇಳುಕೊಣ್ಡಿಗಿಡ No. 1. (St. & Pl.; My.). — ಚೇಳುಮಣಿ. A stone used to extract the poison of a scorpion (R.). — ಚೇಳುಮಣಿಗಿಡ. = ಚೇಳುಬಾಲದ ಗಿಡ. (St. & Pl.).

ಚೈತನ್ಯ čaitanya. = ಚೇತನ್ಯ. (fr. ಚೇತನ). Intelligence; mental perception, feeling; *consciousness;* sensation; the soul; the deity considered as the source of life. 2, = ಚೇತನ No. 5 (C.; not Sk.). See ಮಿಡುಕು. 3, N. of a reformer of the Vaishṇava sect, born about 1484 A.D. 4, a family-name (Mg.).

ಚೈತನ್ಯಭಾವ čaitanya-bhâva. = ಚೇತನಭಾವ. (Šmd. 247 Cm.).

ಚೈತನ್ಯಭಾವಿ čaitanya-bhâvi. A person endowed with intelligence (Bp. 51, 31).

ಚೈತನ್ಯಮಯ čaitanya-maya. Full of life, life-like (Bh. 1, 12, 9).

ಚೈತನ್ಯಸ್ಥ čaitanya-stha. Standing, abiding, or living in intelligence, etc. (Bp. 61, 59); a rich man (My.).

ಚೈತ್ಯ čaitya. 1. (fr. ಚಿತಾ). Relating to a funeral pile; a monument on the site of a funeral pile; a place of sacrifice or religious worship; *a temple; a building containing an image or some relic of Buddha or Jina* (Čpr. 3, 81. 82); a Buddhist or Jaina image (ಜನಾಂಗ, ಜನಬಿಮ್ಬ Nn. 134); the world of Bauddhas (? ಬೌದ್ಧತಪ Mr. 485); heaven (ತ್ರಿದಶಾವಾಸ, ಸ್ವರ್ಗ Nn. 134; ಸುರಧಾಮ Mr. 485).

ಚೈತ್ಯ čaitya. 2. (fr. ಚಿತ್). The individual soul; the mind (ಚಿತ್ತ, ಮನಸ್ಸು Nn. 134).

ಚೈತ್ಯಗೃಹ čaitya-gṛiha. = ಚೈತ್ಯಾಲಯ. (Čpr. 1, 115; 6, 5).

ಚೈತ್ಯಭವ čaitya-bhava. = ಚೈತ್ಯಗೃಹ. (Čpr. 8, 100).

ಚೈತ್ಯಾಗಾರ čaitya-âgâra. = ಚೈತ್ಯಗೃಹ. (Čpr. 4, after 85).

ಚೈತ್ಯಾಯತನ čaitya-âyatana. = ಚೈತ್ಯಗೃಹ. (Čpr. 3, 17; 6, after 11).

ಚೈತ್ಯಾಲಯ čaitya-âlaya. A Jaina temple (ವಸತಿ, ಜಿನಗೃಹ Nn. 133; Čpr. 2, 57; Abh. P. 7, after 47).

ಚೈತ್ರ čaitra. (fr. ಚಿತ್ರಾ). *The first month of the year* (March-April) *when the full moon stands in čitrâ* (B. 5, 307. 308); the spring month, spring (ಮಧುಪ್ರಿಯ, ವಸನ್ತ Nn. 29, o. r. ಚೈತ್ರಮಾಸ; ಮದು Šm. 20). ಚೈತ್ರದಲ್ಲಿ ಮೈತ್ರನಾದರೂ ಮೆಯ್ ತಗಲಿಸ ಕೂಡದು (Prv.).

ಚೈತ್ರದೂತಿ čaitra-dûti. = ವಸನ್ತದೂತಿಕೆ. (Rsv. 9, 46).

ಚೈತ್ರಮಾಸ čaitra-mâsa. = ಚೈತ್ರ. (ಮಧು Nn. 13; ಮಧುಪ್ರಿಯ 29; ಸುಗ್ಗಿ Čt. I, 5; J. 5, 18).

Digitized by Google

ಚೈತ್ರರಥ čaitraratha. (fr. ಚಿತ್ರರಥ). *The garden of Kubêra planted by the gandharva Čitraratha.*

ಚೈತ್ರಸಖ čaitra-sakha. The friend of spring: Kâma. (R.).

ಚೈತ್ರಾನಿಲ čaitra-anila. The breeze of spring (Čpr. 7, 39).

ಚೈತ್ರಿ čaitri. The month čaitra. (R.).

ಚೈತ್ರಿಕ čaitrika. *The month čaitra.*

ಚೈದ್ಯ čaidya. Belonging to čêdi; Šišupâla. (Bhâgavata 10, 80, 11).

ಚೈನಿ čaini. Full or fond of sport (ಚಂಚಲ Čb.; Mhr. ಚೈನೀ ಗಡೀ).

ಚೈರಂತನ čairantana. (fr. ಚಿರಂತನ). Old, ancient (Kâvy. V, 968; Čpr. 1, 22).

ಚೊ čŏ. = ಚಾ, ಚೋ. (My.).

ಚೊಂಯಿ čŏṁyi. = ಚುಂಯಿ, etc. (My.).

ಚೊಕಟ čŏkaṭa. = ಚೊಕ್ಕಟ, etc. Purity, cleanness (My.).

ಚೊಕ್ಕ čŏkka. Niceness, elegance, beauty, charm, etc. (ರಯ್ಯ, ಲೇಸು, ಹಸಗಟ್ಟು, ಎಡ್ಡ, ಅನು, ಚೊಕ್ಕಳಿಕೆ, ಮನೋಹರ Šm. 55; ಚೊಕ್ಕಳಿಕೆ, etc. Kk. 18; T. ಚೊಕ್ಕ, ಚೊಕ್ಕು; M., Tĕ. ಚೊಕ್ಕು; Sk. ಚೋಕ್ಷ; Mhr., H. ಚೋಖಾ; see ಚನ್ 1 & 2, & ಚೂಪು 1; *cf.* Tĕ. ಚೋಕೆ, T. ಚೂಗಜು, M. ಚೊಂಗು, K. ಸೊಗಸು, beauty). ಚೊಕ್ಕಹೆಣ್ಣಾತಿಯವಳ್ಗೆ ತಕ್ಕ ವರನಿಲ್ಲದಿರೆ ಕುಕ್ಕೆ ತುಮ್ಬದ ರೊಕ್ಕವಿದ್ದು ಫಲವೇನು? (Dp. 148). **2,** purity, cleanness (C.; T., Tĕ.; Sk. ಚೋಕ್ಷ; Mhr., H. ಚೋಖ). — ಚೊಕ್ಕಊಟ. An excellent, clean meal (C.). — ಚೊಕ್ಕಚಿನ್ನ. Pure gold (C.). — ಚೊಕ್ಕದಮ್ಬುಲ. -ತಮ್ಬುಲ. Excellent tambula (Čpr. 8, 47). — ಚೊಕ್ಕನೀರು. Pure water (My.). — ಚೊಕ್ಕನೆಯ್ವಾರ್. N. (Bp. 11, 17). — ಚೊಕ್ಕಬೆಳ್ಳಿ. Pure silver (C.). — ಚೊಕ್ಕಭೋಜನ. = ಚೊಕ್ಕಊಟ. (My.). ಚಿಕ್ಕ ಮಡಿಕೆ ಚೊಕ್ಕಭೋಜನ (Prv.).

ಚೊಕ್ಕಟ čŏkkaṭa. = ಚೊಕಟ, ಚೊಕ್ಕಟು q. v., ಚೊಕ್ಕಳ. (Tĕ.). ಚೊಕ್ಕಟದ ತನಿಸುಖಂ (Čidakhaṇḍânubhava sâra 1, 7). ಪಜ್ಞನಾದಿಗಳಿನ್ದ ಶರೀರಮಂ ಚೊಕ್ಕಟ ಮಾಡುವುದು (ಪರಿಕರ್ಮ, ಅಂಗ ಸಂಸ್ಕಾರ Nr.). **2,** purity, cleanness (My.; Tĕ.).

ಚೊಕ್ಕಟು čŏkkaṭu. Comeliness, beauty, etc. (ಗಾಡಿ, ಸೊಬಗು, ಗರಗರಿಕೆ, ನಿರಿತ, ಸುಭಗ Šm. 47, o. r. ಚೊಕ್ಕಟ). **2,** purity (Mhr., H. ಚೋಖಟ, ಚೋಖಟಾ, ಚೋಖೋಟ).

ಚೊಕ್ಕಳ čŏkkaḷa. = ಚೊಕ್ಕಟ, etc. (ಗರಗರಿಕೆ Čt. II, 88; V. 11, 9; Mhr., H. ಚೋಖಾಳ, clean, clear; pure).

ಚೊಕ್ಕಳತನ čŏkkaḷatana. The state of being nice, etc. (V. 40, 75).

ಚೊಕ್ಕಳಿಕೆ čŏkkaḷikĕ. Elegance, beauty, etc. (ನೆ ಐವಣಿಗೆ Šmd. 386 Mdb. Cm.; ರಯ್ಯ, etc. Šm. 55; ಕೆನೆ 100; ಅನು, ಲೇಸು, ಹಸ, ಕೆನೆ, ಅಣಿ, etc., ಮನೋಹರ Kk. 18). ಸಕ್ಕದಮಂ ಮಱಿಗೊಳ್ಳದೆ ಚೊಕ್ಕಳಿಕೆಯಿನ್ ಅಚ್ಚಗನ್ನಡಂ ಬೆಟ್ಟಿಪ್ (Šmd. 386).

ಚೊಕ್ಕೆಯ čŏkkĕya. A device, a dexterous feat (of wrestlers, Grj. 2, after 106; Bh. 2, 2, 96; 3, 6, 23).

ಚೊಕ್ಕೆಯತನ čŏkkĕyatana. Skill, proficiency, etc. (ಪಿನ್ನಣ Bhn. 56).

ಚೊಗಚಿ čŏgači. = ಚಗಚಿ, etc. (S. Mhr.). The shrub-like, though annual herb Cassia occidentalis L. (Z.; *cf.* ದೊಡ್ಡ ತಗಚಿ).

ಚೊಗರ್ಚಿ čŏgarči. = ಚೊಗಚಿ. (Z.).

ಚೊಂಗ čŏṅga. = ಚಂಗ, etc., ಚೂಂಚ, ಚೊಂಚು. Crookedness, perverseness (My.). **2,** see s. ಚೊಂಗು.

ಚೊಂಗಿ čŏṅgi. = ಚುಂಗಿ. A perverse female (My.). **2,** = ಚೊಂಗು, *e. g.* in ಚೊಂಗಿದನ, ಚೊಂಗಿಮನುಷ್ಯ (My.).

ಚೊಂಗು čŏṅgu. = ಚೊಂಗ No. 1. (My.). — ಚೊಂಗ. -ಅ3. A perverse man (My.).

ಚೊಚ್ čŏč. = ಚೊಮ್, q. v. The state of being the point, first or previous. — ಚೊಚ್ಚಲ್. -ಚಲು. (The first pregnancy), the first birth; the first offspring. ಚೊಚ್ಚಲ ಮಗ, a first-born son (C.; B. 3, 15). ಚೊಚ್ಚಲ ಮಗಳು, a first-born daughter (C.). ಚೊಚ್ಚಲ ಬಸುರು, the pregnancy with the first offspring, the first pregnancy (used only of women, C.). ಚೊಚ್ಚಲ ಈತ, the first production of young (used of cattle, My.). ಚೊಚ್ಚಲ ಕರು, the first calf (My.). — ಚೊಚ್ಚಲ. = ಚೊಚ್ಚಲು. ಈತ ಚೊಚ್ಚಲ, ಆಕೆ ಚೊಚ್ಚಲ (C.). — ಚೊಚ್ಚಲ್. -ಚಲು. = ಚೊಚ್ಚಲ್. — ಚೊಚ್ಚಲದು. -ಅದು. One (*i. e.* a cow) that has had the first or one calf (ಗೃಷ್ಟಿ Mr. 181, o. r. ಚೊಚ್ಚಲದು). — ಚೊಚ್ಚಲಾತ್ಮಜ. -ಆತ್ಮಜ. A first-born son (Mr. 310, o. r. ಚೊಚ್ಚಲಾತ್ಮಜ). — ಚೊಚ್ಚುಲ್. -ಚುಲು. = ಚೊಚ್ಚಲ್. — ಚೊಚ್ಚುಲ ಮಣಕ. A cow that has had one calf (ಗೃಷ್ಟಿ, ಸಕೃತ್ಪ್ರಸೂತೆ Hlâ.). — ಚೊಚ್ಚುಲುಬಸುರು. = ಚೊಚ್ಚಲು. (My.). ಎಳೆತನದಲ್ಲೇ ಚೊಚ್ಚುಲುಬಸುರಾದ ಆಕಳು (ಪ್ರಷ್ಠೌಹಿ, ಬಾಲಗರ್ಭಿಣಿ Si. 322, thus *only* in Si.).

ಚೊಚ್ಚ čŏčča. Tbh. of ಸ್ವಚ್ಛ. (My.).

ಚೊಂಚ čŏṅča. = ಚೊಂಗ, etc., ಚೊಂಚು. **2,** see s. ಚೊಂಚು. — ಚೊಂಚಗೆಯ್. -ಕೆಯ್. A crooked, crippled arm (S. Mhr.).

ಚೊಂಚು čŏṅču. = ಚೊಂಚ No. 1. The state of being crooked. — ಚೊಂಚ. -ಅ3. A man who has a crooked, crippled arm (S. Mhr.).

ಚೊಟ್ಟ čŏṭṭa. (fr. ಕುದು 3). = ಚೊಟ್ಟಿ, ಚೊಟ್ಟು, ಸೊಟ್ಟ, ಸೊಟ್ಟು, ಚೊತ್ತು, ಸೊತ್ತು. Crookedness. — ಚೊಟ್ಟಗಾಲು. -ಕಾಲು. A crooked, crippled foot (My.). — ಚೊಟ್ಟಗೆಯ್. -ಕೆಯ್. A crooked, crippled arm (My.).

ಚೊಟ್ಟಗೆ čŏṭṭagĕ. = ಸೊಟ್ಟಗೆ. (My.).

ಚೊಟ್ಟಿ čŏṭṭi. = ಚೊಟ್ಟ, etc. Crookedness. (T. ಚೊಟ್ಟೈ; T. ಚೊರಡು, M. ಚುಲಿಡು, a crook, hook; see s. ಕೋಟ 1 and *cf.* ತೂಲಿಡು). — ಚೊಟ್ಟಗೆಯ್ಯ. -ಕೆಯ್ಯ. A man who has a crooked, crippled hand or arm (ಕುಕರ, ಕುಣಿ Nr.).

ಚೊಟ್ಟು čŏṭṭu. = ಚೊಟ್ಟ, etc. (My.).

ಚೊಟ್ಟೆ čŏṭṭĕ. Tbh. of ಚೇಟಾ. A small, mean man (My.).

ಚೊತ್ತಿ čŏtti. = ಸೊತ್ತಿ. A female with crooked, crippled limbs (My.).

ಚೊತ್ತಿಗೆ čŏttigĕ. = ಜತಿಗೆ, ಜತ್ತಿಗೆ, ಜೆತ್ತಿಗೆ, ಜೊತಿಗೆ, ಜೊತ್ತಗೆ, ಜೊತ್ತಿಗೆ. Tbh. of ಯೋಕ್ತ್ರಕ. The plaited strap or collar round an ox's neck by which it is fastened to the yoke (the form of ಚೊತ್ತಿಗೆ *only* in Si.). ಪಶುಗಳ ಕೊರಳಿಗೆ ಕಟ್ಟುವ ಚೊತ್ತಿಗೆ (ಆಬನ್ಧ, ಯೋಕ್ತ್ರ, ಯೋತ್ರ Si. 303).

ಚೊತ್ತು čŏttu. = ಚೊಟ್ಟ, etc. — ಚೊತ್ತ. -ಅ3. A male with crooked, crippled limbs (My.).

Digitized by Google

ಚೊಪ್ಪಟೆ **čoppaṭe.** The red cedar, Erythroxylon monogynum Roxb. (ದೇವದಾರು Mr. 118, one MS. ಚೊಪ್ಪಡೆ; for "redness" see s. ಚನ್ 1).

ಚೊಮ್ಬು **čombu.** = ಚಮ್ಬು No. 2. (My.).

ಚೊಱ್ **čoṟ.** = ಚುಯ್, etc. — ಚೊಱನ್ನು. -ಅನ್ನು. = ಚುಯ್ಯ್ನ್. (C.).

ಚೊಱ **čoṟa.** A shark (ಮಕರ Si. 88; T. ಚುಱಾ; M. ಚಱಾಗು, ಚುಱಾವು, ತುಱಾವು, ಶ್ರಾವು, ಇಱಾವು; Tĕ. ಚೊಱ, ಸೊಱ; *cf.* ತುಱ 2 ?).

ಚೊಲ್ಲಣ **čollaṇa.** = ಚಲ್ಲಣ, q. v. (My.).

ಚೊಲ್ಲೆಯ **čolleya.** = ಚೊಲ್ಲೆಹ, ಜೊಲ್ಲೆಹ. The pointed end of a female's bundle of hair at the back of the head (ತುಱುಮ್ಬಿನ ಕೊನೆ Šm. 72; Kk. 51, o. r. ಚೊಲ್ಲೆಹ; Tĕ. ಜೊಲ್ಲೆಮು, ಜೊಳ್ಳೆಮು, a tire formed by weaving the tresses in chains and then coiling them up at the back of the head; a wreath of Mogili flowers; *cf.* ಜೊಱ್?). See Čpr. 8, 52; Bh. 1, 18, 30; Rsv. 7, 5; Šsv. 3, 11; ಮಾಣಿಕಗೊಪ್ಪಚೊಲ್ಲೆಯ.

ಚೊಲ್ಲೆಹ **čolleha.** = ಚೊಲ್ಲೆಯ, q. v. (ತುಱುಮ್ಬಿನ ಕೊನೆ Šs.; Bp. 12, 43).

ಚೊಳ್ಣ **čoḷṇa.** = ಚೊಲ್ಲಣ, etc. (My.).

ಚೋ **čō.** = ಚೊ, etc. (My.).

ಚೋಕ್ಷ čōksha. Pure, clean; pleasing, delightful, beautiful; honest; clever; sharp, pungent, keen. *Cf.* ಚೊಕ್ಕ.

ಚೋಚ čōča. Bark, rind; skin. 2, *the bark of a kind of cinnamon;* see ತ್ವಚ. 3, a cocoanut (Čpr. 6, after 55). 4, a plantain.

ಚೋಜಿಗ čōjiga. = ಸೋಜಿಗ. Tbh. of ಚೋದ್ಯ (or a ಚೋದ್ಯಕ). Surprise, wonder; a marvel, a wonder (C.; T. ಚೋತ್ತಿಯ; Tĕ. ಸೋದೆ, ಸೋದ್ಯ, ಸೋಯಗಪು, ಸೋಯಗಮು, ಸೋಯಗಮ್ಬು; Mhr. ಚೋಜ). See Bh. 2, 4, 10; ಚಿಕ್ಕ-.

ಚೋಟಾ čōṭā. = ಚೊಟ್ಟ. Short, small, little (My.; H. ಛೋಟಾ).

ಚೋಟು **čōṭu.** (fr. ಕುಱು). = ಚುಟು 2. The small span of the thumb and forefinger (ಪ್ರದೇಶ Mr. 324; C.; M. ಚೊಟ್ಟಚಾಣ್). ಚೋಟು ಕಡಿಮೆ ಆಗದು ದಾಟದ ಹಾಗೆ (Prv.). — ಚೋಟಗಲ. -ಅಗಲ. A span's breadth (C.; Si. 122. 211). — ಚೋಟಳತೆ. -ಅಳತೆ. A span's measure (C.). — ಚೋಟುದ್ದ. -ಉದ್ದ. A span's length or height (C.; Si. 211; V. 39, 13). ಚೋಟುದ್ದ ಮಗುವಿಗೆ ಗೇಣುದ್ದ ಕುಲಾವಿ. — ಚೋಟುದ್ದ ಹುಡುಗಗೆ ಮಾರುದ್ದ ಕಮ್ಬಳಿ (Prvs.). — ಚೋಟೆತ್ತರ. -ಎತ್ತರ. A span's height (C.; Si. 211).

ಚೋಡಿ čōḍi. = ಚಡತಿ. (My.).

ಚೋದನ čōdana. Driving, impelling; commanding, etc. See ಪ್ರ-.

ಚೋದ್ಯ čōdya. (= ಚೋಜಿಗ, etc.). To be driven or impelled, etc. 2, raising a question, objecting. 3, *surprise, astonishment, wonder;* a wonderful thing (ಬಿಸುವಣ್ಣ Čt. I, 57). See ಕು-, ಬಲು-; Čpr. 1, 31; 6, 100; Grj. 1, 14; Bp. 32, 48; 50, 73; Prv. s. ದಾದ್ಯ. — ಚೋದ್ಯಮ್ಬಡು. -ಂ-ಪಡು. To be surprised, to wonder (Bp. 33, 18). — ಚೋದ್ಯಪಡು. -ಪಡು. = ಚೋದ್ಯಮ್ಬಡು. (Rsv. 14, after 58).

ಚೋದ್ಯತರ čōdya-tara. Uncommonly wonderful, uncommonly beautiful (ವಿಚಿತ್ರತರ Šmd. 301 Cm.; Bp. 26, 7).

ಚೋಪದಾರ čōpadāra. A mace-bearer (C.; Mhr.).

ಚೋಪಾರ čōpāra. = ಜಾಪಾರ, q. v.

ಚೋರ čōra. A thief, a robber. (My.).

ಚೋರಕ čōraka. = ಚೋರ. (Bp. 40, 54; 43, 51).

ಚೋರಖಂಡಿಕ čōra-khaṇḍika. N. of a plant (ಹಳ್ಳಿಸರಡು Mr. 142, one MS. -ಕಣ್ಡಿಕ).

ಚೋರತ್ವ čōratva. Theft, robbery (My.).

ಚೋರಪುಷ್ಪಿ čōra-pushpi. *The plant Chrysopogon aciculatus* Trin.

ಚೋರಪ್ರಸ್ತರೋಪಕರಣ čōra-prastarōpakaraṇa. A thief, and an instrument for (cutting) stones. See ಉಳಿ 3 and 4.

ಚೋರಸೂಚನ čōra-sūčana. Pointing out, informing against, or spying out thieves. See ತುಬ್ಬು.

ಚೋರಿ čōri. Theft, robbery (C.; Mhr.).

ಚೋಲ čōla. ಚೋಳ. *A short jacket, a bodice.* See ಕಟ್ಟುಂ ಜೋಳ.

ಚೋಲಕ čōlaka. A bodice, a jacket; a cuirass, mail (ವಾರವಾಣ, ಕಂಚುಕ, ಕುಪ್ಪಸ, ದಾಚ Mr. 343).

ಚೋಲಿ čōli. A kind of chignon made of some hair of the čamari (My.).

ಚೋಷಣ čōshaṇa. Sucking, suction. (G.).

ಚೋಷ್ಯ čōshya. Suckable; anything that can be sucked. (My.).

ಚೋಸರಿಗಿತಿ čōsarigiti. (Šmd. 246 Mdb., o. r. ಚೋಸರಗಿತಿ).

ಚೋಹ čōha. (Tbh. of ಯೋಗ). = ಚೋಹ, ಸೋಗು. Dress: an assumed character and guise, a mask (ವೇಷ Bhn. 45; Bp. 32, 15; Mhr. ಸೋಂಗ).

ಚೋಳ **čōḷa.** The coast of Coromandel; the titular name of a dynasty of that country; N. of its people (My., T., M. ಚೋಱ; Sk. ಚೋಡ, ಚೋಲ). See ಉತ್ತುಂಗ-, ಕರವೀರ-, ಕರವೂರ-, ಕರಿಕಾಲ-, ನರೇನ್ದ್ರ-, ಪಗಲ್-, ರಾಜೇನ್ದ್ರ-, ವಿಕ್ರಮ-, ವೀರ-; Čpr. 7, 41; Bp. 6, 18; 9, 33; 22, 6; 33, 15; 38, 56; Šmd. 276 Mdb.; Prv. s. ಜೋಳ. — ಚೋಳವ್ವೆ. -ಅವ್ವೆ. N. See ವೀರ-. — ಚೋಳಾದೇವಿ. -ದೇವಿ. N. (Bp. 33, 17; 59, 8).

ಚೋಳದೇಶ **čōḷa-dēša.** The čōḷa country (Bp. 16, 1). ಚೋಳದೇಶದವ (a Tamiḷ vagabond) ಚೇಟಿಗಿನ್ನ ಹೆಚ್ಚು (Prv.).

ಚೋಳನೃಪ **čōḷa-nṛipa.** The čōḷa king (Bp. 24, 73).

ಚೋಳಪಾಲಕಚರಿತ್ರ **čōḷa-pālaka-čaritra.** The history of the čōḷa king or of the čōḷa kings, a work by Kēšava (Šmd. 408).

ಚೋಳಭೂಮಣ್ಡಲ **čōḷa-bhūmaṇḍala.** = ಚೋಳದೇಶ. (Bp. 50, 62).

ಚೋಳಭೂವರ **čōḷa-bhūvara.** = ಚೋಳನೃಪ. (Bp. 24, 85).

ಚೋಳಮಣ್ಡಲ **čōḷa-maṇḍala.** Coromandel (T. ಚೋಱ-; My.).

ಚೋಳಮಹೀಶ **čōḷa-mahīša.** = ಚೋಳನೃಪ. (Bp. 31, 24).

ಚೋಳರಾಯ **čōḷa-rāya.** = ಚೋಳನೃಪ. (Bp. 9, 40; 25, 48; 50, 22; 52, 10).

ಚೋಳಿ **čōḷi.** Relating to or coming from Čōḷa; a man from Čōḷa (? My.). — ಚೋಳಿಯಣ್ಣ. -ಅಣ್ಣ. N. (Bp. 11, 4).

ಚೌ čau. = ಚವು 1. Tbh. of ಚತುಃ (Šmd. 377).

ಚೌಕ čauka. = ಚವುಕ 1, Nos. 1-5, ಚೌಕು. Tbh. of ಚತುಷ್ಕ (Šmd. 378). 6, a square in a town where four roads meet

Digitized by Google

(My.); the square space forming the central portion of a temple or house (My.; Mhr.); a square made with cowdung on the ground (Bp. 18, 3; Mhr., H. ಚೌಕಾ). 7, the number of four on a die (My.). 8, slow time in music. ಆದ್ಯನ್ತಮಧ್ಯಕಾಲಸ್ಥಿತಿಗಳು ಅನ್ದರೆ ಷುರು ಚೌಕ ಮುಕ್ತಾಯಗಳು (ತತ್ವ, etc. Si. 64; My.). 9, prolixity (in ಚೌಕಮಾತು, My.); of little worth (in ಚೌಕಮಾತು, S. Mhr.). ಚೌಕದ ಮಾತು (Bp. 43, 6).—See Si. 105. 421. 438. — ಚೌಕವನ್ ಎಣಿಸು. To count by four and four (C.; Bp. 28, 41).

ಚೌಕಟ್ಟು (ĉau-kaṭṭu). A frame (C.; B. 3, 58; 4, 209; Si. 112. 219; Mhr., H. ಚೌಕಟ).

ಚೌಕಣ್ಡ ĉau-kaṇḍa. Tbh. of ಚತುಃಖಣ್ಡ (Šmd. 378).

ಚೌಕದಾಯ ĉauka-dâya. A throw of dice that exhibits the even numbers from 4-12, one exceeding the other at the rate of four (Bp. 43, 6).

ಚೌಕದುಗ ĉauka-duga. Four times (a throw of) two dice of which both exhibit the number one (Bp. 43, 6).

ಚೌಕಸುದ್ದ ĉauka-sudda. Quite square (C.).

ಚೌಕಳಿ ĉaukaḷi. = ಚವುಕಳಿ, etc.

ಚೌಕಿ ĉauki. = ಚವಕಿ, etc., ಚೌಕಿಗೆ, ಚೌಕು, (ಚೌರಗೆ). A group of four houses; a quadrangle enclosed by four buildings; the square open court in the centre of a house (ಸಂಜವನ Mr. 195; see ಚೌರಗೆ).

ಚೌಕಿಗೆ ĉaukigĕ. The inner veranda of a house (Bp. 12, 8; Bh. 2, 13, 28; 3, 12, 66).

ಚೌಕೀದಾರ ĉaukî-dâra. A watchman (My.; Mhr., H.; B. 5, 106).

ಚೌಕು ĉauku. = ಚೌಕ. See ಚಚ್-. 2, = ಚೌಕಿ No. 3, q. v. (ಚತುಃಶಾಲ, ಸಂಜವನ Nr.).

ಚೌಕುಳ ĉau-kuḷa. The four castes. 2, a certain musical term (Bp. 19, 10).

ಚೌಕುಳಿ ĉaukuḷi. = ಚವುಕುಳಿ, etc.

ಚೌಗಾವೆ ĉau-gâvĕ. Tbh. of ಚತುಗ್ರಾಮ (Šmd. 378).

ಚೌಜನ್ತ ĉau-janta. Tbh. of ಚತುರ್ದನ್ತ (Šmd. 378; ಸುರಕರಿ Šm. 10, o. r. ಚೌದನ್ತ).

ಚೌಡ ĉauḍa. = ಚೌಲ. (fr. ಚೂಡಾ). Relating to a crest, crested; relating to tonsure. 2, the ceremony of tonsure.

ಚೌತಾಳ ĉautâḷa. Forty-four (S. Mhr.; Mhr. ಚೌವೇಚಾಳ).

ಚೌತಿ ĉauti. = ಚವುತಿ.

ಚೌಥಾಯಿ ĉauthâyi. A fourth part (My.; Mhr.).

ಚೌದನ್ತ ĉau-danta. = ಚೌಜನ್ತ, q. v. (Šsv. 3, 44).

ಚೌದರಿ ĉaudari. = ಚವುದರಿ.

ಚೌದಳ ĉau-daḷa. Having four leaves (Bp. 3, 8).

ಚೌಪಂಚಿ ĉau-panĉi. A play at dice at which four cinques are expected to fall (Bp. 43, 8).

ಚೌಪಟ ĉau-paṭa. = ಚೌವಟ No. 2. (Bh. 8, 19 sum.; 10, 6, 22).

ಚೌಪದ ĉau-pada. Tbh. of ಚತುಃಪದ (Šmd. 378, o. r. ಚತುಃಪಥ). 2, a class of metres (My.); a schoolmaster going with his pupils from house to house, singing ĉaupadas and asking for presents (My.).

ಚೌಪದಿ ĉau-padi. N. of two metres (Čh.; Mr. 366). 2, four roads, or a place where four roads meet (ನಾಲ್ವಟ್ಟೆ Čt. II, 88).

ಚೌಪಳಿಗೆ ĉau-paḷigĕ. A square-hall or pavilion: the maṇṭapa in front of a Jaina temple (My.; Abh. P. 5, after 53; 11, after 10).

ಚೌಭುಜ ĉau-bhuja. (= ಚತುರ್ಭುಜ). Four arms (Bp. 24, 73).

ಚೌಮೂಲೆ ĉau-mûlĕ. The four cardinal points (Râm. 1, 13, 7).

ಚೌರ ĉaura. 1. (fr. ಚೋರ). *A thief, a robber.*

ಚೌರ ĉaura. 2. Tbh. of ಕ್ಷೌರ. (C.).

ಚೌರಗೆ ĉauragĕ. = ಚೌರಿಗೆ, (ಚೌಕಿ No. 3, ಚೌಕು No. 2). (ಚತುಃಶಾಲ, ಸಂಜವನ Hlâ.).

ಚೌರಸ ĉaurasa. Tbh. of ಚತುರಶ್ರ. (J. 17, 23; My.; Mhr.).

ಚೌರಾಶೀತಿ ĉaurâśîti. Tbh. of ಚತುರ್ ಅಶೀತಿ. 84. (Bh. 2, 2, 77; Mhr. ಚೌರ್ಯ್ಯಾಶೀಂ).

ಚೌರಿ ĉauri. = ಚವರಿ, etc. (Mhr., H.). A chowrie. See Si. 169. 267. 453.

ಚೌರಿಕೆ ĉaurikĕ. *Theft, robbery.*

ಚೌರಿಗೆ ĉaurigĕ. = ಚೌರಗೆ, q. v. (ಮನೆ Šs.; V. 38, 101).

ಚೌರ್ಯ ĉaurya. *Theft, robbery.*

ಚೌಲ ĉaula. = ಚೌಡ.

ಚೌಲಕರ್ಮ ĉaula-karma. = ಚೂಡಾಕರ್ಮ. (My.).

ಚೌಲೋಪನಯನ ĉaula-upanayana. Tonsure and investiture with the sacrificial thread (ಮುಂಜಿ G.). ಚೌಲೋಪನಯನವಾಗದವ ನವಿಲಿಗಿನ್ತ ಕಡೆ (Prv.).

ಚೌವಂಗುಲ ĉau-aṅgula. Four fingers (Bh. 2, 2, 97).

ಚೌವಟ ĉauvaṭa. = ಚೌವಟ್ಟ (Šmd. 378). Place of junction of four roads (ಸಂಸ್ಥಾನ Mr. 192; Mhr. ಚವಠಾ, ಚವಾಠಾ). 2, = ಚೌಪಟ, four kinds of accomplishments (Rśv. 6, after 11).

ಚೌವಟ್ಟ ĉauvaṭṭa. Tbh. of ಚತುಃಪಟ್ಟ (Šmd. 378; Abh. P. 5, 103).

ಚೌವೀಸ ĉauvîsa. Tbh. of ಚತುರ್ವಿಂಶತ್. Twenty-four (Mhr. ಚವ್ವೀಸ). See s. ಖರ್ವ.

ಚೌವೇದಿ ĉau-vêdi. Tbh. of ಚತುರ್ವೇದಿ (Šmd. 378).

ಚೌವ್ವಾಂಗ ĉauvvâṅga. A play among children with tamarind seeds (S. Mhr. rare; Mhr. ಚ್ಯಾವಮ್ಯಾವ, a play amongst children).

ಚೌಶತ ĉau-śata. Tbh. of ಚತುಃಶತ. (R.).

ಚೌಶೀತಿ ĉauśîti. Tbh. of ಚತುರಶೀತಿ. (My.; Tĕ.).

ಚೌಷಷ್ಟಿ ĉau-shashṭi. Tbh. of ಚತುಃಷಷ್ಟಿ. (Mr. 82; J. 5, 72).

ಚೌಷಷ್ಟಿಕಲೆ ĉaushashṭi-kalĕ. The sixty-four arts or accomplishments (Č. Bp. 47, 43).

ಚೌಸೋಪಿ ĉausôpi. A building (Mhr.; ಸಂಜವನ G.).

ಚ್ಯವನ ĉyavana. Causing to move or go away; moving, motion; sinking, falling; etc. See ದುಶ್-.

ಚ್ಯುತ ĉyuta. Moved; fallen; fallen from; dropped; oozed out; *lost; perished.* See ಅ-, ಅಕ್ಷರ-, ಪರಿ-, ಬಿನ್ದು-.

ಚ್ಯುತಕ ĉyutaka. Moving, sinking, etc. See ಅ-.

ಚ್ಯುತತ್ವ ĉyutatva. The condition of moving, sinking, etc. See ಅ-.

ಚ್ಯುತಾಕ್ಷರ ĉyuta-akshara. A dropped syllable. 2, a kind of ĉitra (Kâvy. III, 2, B, 75 seq.).

ಚ್ಯುತಿ ĉyuti. Motion; falling, a fall; deviating from; perishing, ruin, loss; etc. (Râm. 3, 5, 1. 4; Rśv. 13, 22; My.).

Digitized by Google

ಛ್ ČH

ಛ್ čh. The twenty-seventh letter of the Alphabet (Śmd. 12. 21-23). Its use in Kannada and Tadbhava words is very limited, as it occurs only in ಛಟ, ಛಮ (74), ಛಮ್ಮನೆ (22), ಛಟಿಲೆನೆ (I), ಛರ್ಪಿಸು, ಛಲ್ಲ, ಏಕಛಾಯ (23), and in ಇಛ್ಛಾಸಿರಂ, ಎಣ್ಛಾಸಿರಂ, ನೂಛ್ಛಾಸಿರಂ, ಪದಿನೆಣ್ಛಾಸಿರಂ, wherein it replaces ಸ್ (22. 83).

ಛ ča. The letter ಛ್ when pronounced with a short a, as is generally done at school. **2,** the number 7 (Mr. 349).

ಛಕಾರ ča-kâra. The syllable ಛ (Śmd. 11).

ಛಕ್ಕ čakka. Six, at cards (My.; Tĕ. ಚಕ್ಕ; Sk. ಷಟ್ಕ).

ಛಗ čaga. = ಛಗ. *A he-goat.*

ಛಗಲಕ čagalaka. *A he-goat.*

ಛಗಲಾನ್ತ್ರಿ čagala-antri. *The plant Argyreia speciosa or argentea* Sweet.

ಛಟ čaṭa. (= ಚಟ). An imitative sound. — ಛಟ ಛಟ. rep. The sound of being suddenly separated, of bursting, of snapping, of rending, of clashing, of crackling, etc. (Bp. 51, 81). — ಛಟಛಟಛಟನೆ. With the sound of ಛಟಛಟಛಟ (Bh. 1, 20, 27). — ಛಟಛಟಧ್ವನಿ. The sound of ಛಟಛಟ (Bh. 8, 25, 6). — ಛಟಛಟನೆ. With the sound of ಛಟಛಟ (Bp. 23, 16; Rsv. 6, after 11). — ಛಟಛಟಾ-ಕೃತಿ. The uttering of ಛಟಛಟಾ (Râm. 5, 8, 60). — ಛಟಛಟೆಮ್ಬು. -ಎಮ್ಬು. Uttering ಛಟಛಟ (Śmd. 74).

ಛಟಿಸು čaṭisu. To crackle or brustle (Bh. 1, 20, 27).

ಛಟೆ čaṭĕ. A mass, lump, assemblage, etc. (Bp. 17, 18).

ಛಡಕಿ čaḍaki. One of the feats of wrestlers (Čpr. 5, 77).

ಛಡಾಛಡಿ čaḍâčaḍi. Quickly (My.; Br.; H.).

ಛತ್ತೀಸ čattîsa. ಛತ್ತೀಸು. Thirty-six (Bp. 57, 4; Mr. 82. 357; Mhr., H.).

ಛತ್ರ čatra. 1. = ಚತ್ರ 2. *A parasol, an umbrella,* regarded also as an ensign of dignity. 2, a mushroom.

ಛತ್ರ čatra. 2. = ಚತ್ರ 1, etc. (My.). ಛತ್ರದ ಗೃಹ (ಪ್ರತಿಶ್ರಯ Mr. 196).

ಛತ್ರಕ čatraka. *A mushroom.*

ಛತ್ರಪತಿ čatra-pati. Title of any king over whom a parasol is carried as a mark of dignity. (My.).

ಛತ್ರಾಕಿ čatrâki. *The ichneumon plant* (= ಗನ್ಧನಾಕುಲಿ, ರಾಸ್ನೆ).

ಛತ್ರಿಕೆ čatrikĕ. = ಚತ್ತರಿಗೆ, etc., ಸತ್ತಿಗೆ. A parasol or umbrella (not Sk.; ಸತ್ತಿಗೆ Śmd. 340. 345; Čt. II, 60). 2, *a mushroom* (ಕೆಸವು Mr. 149). See ಅನ್ದೋಲ-.

ಛತ್ರೆ čatrĕ. *The plant Anethum sowa* Roxb. 2, *coriander.* 3, *a mushroom.*

ಛತ್ವ čatva. The letter or syllable ಛ (Śmd. 82. 339).

ಛತ್ವರ čatvara. (= ಚಪ್ಪರ?). A house, a dwelling; a bower, an arbour.

ಛದ čada. A covering. 2, *a wing* (ವಾಜ, ಗರು Nn. 124). 3, *a leaf.*

ಛದನ čadana. A covering. 2, *a wing.* 3, *a leaf.*

ಛದಿಸ್ čadis. A covering. 2, *the thatch or roof of a house.*

ಛದೆ čadĕ. = ಛದಿಸ್. (ವಲಭಿ, ಮನೆಗೆ ಏರಿಸಿದ ಹೊದಕೆ Mr. 200).

ಛದ್ಮ čadma. A covering. 2, *disguise, fraud, deceit.*

ಛದ್ಮನೆ čadmanĕ. = ಛದ್ಮ No. 2. (My.).

ಛನ್ದ čanda. 1. = ಚನ್ದ 1. Pleasing, being pleasant or delightful. 2, appearance, look, shape (see Mr. s. ಢಂಗಿ). 3, pleasure, delight. 4, liking, fondness for; *intention, purpose; fancy, whim; will;* arbitrary choice; wilfulness, wilful conduct. ಸ್ವಸ್ತಿಕ ವರ್ಧಮಾನ ನನ್ದ್ಯಾವರ್ತ ಈ 3 ಮೊದಲಾ ಗುಳ್ಳವು ಅರಮನೆಯ ಛನ್ದಂಗಳು (Hlâ.). See Bp. 29, 16. 19.

ಛನ್ದ čanda. 2. = ಚನ್ದ 3. Tbh. of ಛನ್ದಸ್ (Mr. 362; Nn. 58; Ch.). 2, the number 26 (ಇಪ್ಪತ್ತಾರು Mr. 348).

ಛನ್ದಕ čandaka. = ಛನ್ದ 1. See ಏ-.

ಛನ್ದಸ್ čandas. = ಛನ್ದ 2, etc., ಛನ್ದಸ್ಸು. *Wish, will;* free will. 2, *metrical science, prosody* (Kâvy. II, 2, B, 30-32). 3, a metre-type (Čh.). 4, *the text of the vedic hymns, the vêdas.*

ಛನ್ದಸ್ಸು čandassu. Tbh. of ಛನ್ದಸ್. (Nn. 40. 100).

ಛನ್ದೋಮ್ಬುಧಿ čandas-ambudhi. N. of Nâgavarma's Prosody (Čh. v. 23. 24).

ಛನ್ದೋಮ್ಬುರಾಶಿ čandas-amburâśi. = ಛನ್ದೋಮ್ಬುಧಿ. (Čh. v. 22).

ಛನ್ದೋವತಂಸ čandas-avataṁsa. N. of a metre (Čh.).

ಛನ್ನ čanna. *Covered, full;* concealed; private, solitary.

ಛಪ್ಪಿಸು čappisu. = ಛರ್ಪಿಸು. (Śmd. 23, o. r. ಛರ್ಪಿಸು).

ಛಮ čama. (= ಘುಮ). An imitative sound. — ಛಮೆಮ್ಬು. -ಎಮ್ಬು. Emitting (or appearing with) ಛಮ (Śmd. 74, o. r. ಘುಮೆಮ್ಬು).

ಛಮ್ಮನೆ čammĕnĕ. With the sound (or appearance) of ಛಮ್ (Śmd. 22, o. r. ಘಳ್ಳನೆ).

ಛರು čaru. Tbh. of ತ್ಸರು. (ಅಡಾಯುಧಗಳ ಪಿಡಿಗಳ್ Mr. 298).

ಛರ್ದಿ čardi. Sickness, vomiting. (My.).

ಛರ್ದಿಕೆ čardikĕ. = ಛರ್ದಿ. See ಪ್ರ-.

ಛರ್ಪಿಸು čarpisu. = ಛಪ್ಪಿಸು, q. v.

ಛಲ čala. = ಚಲ 2, q. v. *Fraud, deceit, deception, disguise,* pretext; wickedness; design, device; intention. See Čpr. 1, 96; Bp. 6, 3. 2, see the meanings of ಚಲ 2. — ಛಲ ಛಲ. reit. (Bh. 8, 26, 29).

ಛಲಗಾಹಕ čala-gâhaka. The act of entering deeply into fraud, etc., excessiveness of deceit, etc. (Bp. 49, 45).

ಛಲಲಲೆ čalalalĕ. An imitative sound. ಬೆಳಗೆಯ್ದ ಕೊಳ್ ಇರ್ದು, ಎತ್ತಂ ಕಳರವದಿಂ ಕೆಯ್ಯನೆತ್ತಿ, ಛಲಲಲೆ ಎನುತುಂ etc. (Kâvy. I, 3, 95; Śmd. 231).

ಛಲವಾದಿ čala-vâdi. = ಚಲವಾದಿ. An obstinate speaker (J. 5, 61).

ಛಲ್ಲ čalla. ಛಲ್ಲಂ ಮಾಡಿದಂ (Śmd. 23, o. r. ಛಲ್ಲಿ-).

Digitized by Google

ಛಲ್ಲಿ čhalli. See ಛಲ್ಲ.

ಛಲ್ಲಿ čhalli. Skin, bark; a spreading creeper; a kind of flower; offspring.

ಛವಿ čhavi. = ಚವಿ. Skin, hide. 2, *colour; beauty.* 3, *light, lustre.* — ಛವಿವಡೆ. -ಪಡೆ. To bloom, etc. (Bp. 35, 13).

ಛಲುಲೆನೆ čhalilĕnĕ. With the sound (or the manner) of ಛಲುಲ್ (Šmd. I). (Tĕ. ಝುಲಿಲುನ, ಝುಲಾಲು ನ, at once, instantly; sweepingly, whizzingly).

ಛಾಗ čhâga. = ಛಗ. *A he-goat.*

ಛಾಗಗಲಸ್ತನ čhâga-gala-stana. Fleshy protuberances depending from a goat's throat (ಮಣಿ, ಆಡ ಕೊರಳ ಮೊಲೆ Nn. 67).

ಛಾಗಿ čhâgi. *A she-goat.*

ಛಾತ čhâta. *Cut off, cut, divided.* 2, *thin, feeble, emaciated.*

ಛಾತ್ರ čhâtra. (fr. ಛತ್ರ). *A pupil, a disciple.*

ಛಾದ čhâda. = ಛಾದನ. See ಆ-.

ಛಾದನ čhâdana. Covering; a cover; hiding, concealing, screening. See ಆ-, ಪ್ರ-.

ಛಾದಿತ čhâdita. *Covered.*

ಛಾನಸ čhânasa. Tbh. of ಛಾನ್ದಸ. Loitering, delay (My.).

ಛಾನಸಗಾಱ čhânasa-gâṟa. A loiterer (My.).

ಛಾನ್ದಸ čhândasa. (fr. ಛನ್ದಸ್). = ಚಾನ್ದಸ, ಛಾನಸ. Relating or belonging to prosody or to the vêda; *a Brâhmaṇa conversant with the vêdas* (ವೇದವನೋದಿದಾತನು Nr.; Šmd. 128; Bp. 53, 39). (2, a loiterer in vedic ceremonies: a loiterer in general).

ಛಾನ್ದಸಿಕ čhândasika. A Brâhmaṇa conversant with the vêdas (My. Amara).

ಛಾನ್ದಸಿಗ čhândasa-iga. (Šmd. 233, o. r. ಛನ್ದಸಿಗ). A priest familiar with the vêdas (?).

ಛಾಯಾಗ್ರಹ čhâyâ-graha. A mirror. (R.).

ಛಾಯಾಗ್ರಹಣ čhâyâ-grahaṇa. Seizing the shadow. — ಛಾಯಾಗ್ರಹಣಂಗೆಯ್. -ಂ-. To seize the shadow (Abh. P. 11, after 52).

ಛಾಯಾಗ್ರಾಹಿ čhâyâ-grâhi. N. of a râkshasi (Râm. 5, 1, 16).

ಛಾಯಾತನಯ čhâyâ-tanaya. The son of Čhâyâ: *the planet Saturn.*

ಛಾಯಾನನ್ದನ čhâyâ-nandana. = ಛಾಯಾತನಯ. (My.).

ಛಾಯಾಪತಿ čhâyâ-pati. The sun (Râm. 5, 1, 16).

ಛಾಯಾಯನ್ತ್ರ čhâyâ-yantra. Shadow-instrument: a sun-dial. (My.; B. 5, 181).

ಛಾಯೆ čhâyĕ. ಛಾಯಾ. = ಚಾಯ, ಚಾಯಿ. *Shade;* shadow. 2, *a reflected image,* reflection. 3, a screen, protection, shelter; respect, civility (S. Mhr.). 4, *splendour, lustre;* colour; appearance, look (of a man's face, My.). 5, *the wife of the sun and mother of Saturn.* 6, faint appearance (My.; Mhr.); hint (My., in ಛಾಯೆ ತೋಱಿಸು). — ಛಾಯೆಗಾಣಿಸು. -ಕಾಣಿಸು. To hint (J. 18, 61). — ಛಾಯೆಗೆಡು. -ಕೆಡು. Lustre, colour, etc. to disappear (Bp. 44, 27).

ಛಾಸಿರ čhâsira. = ಸಾಸಿರ, in compounds (Šmd. 22. 121. 226. 227).

ಛಿಕ್ಕಾರ čhikkâra. A kind of antelope (Sk.; *cf.* ಚಿಗರಿ).

ಛಿತ čhita. = ಛಾತ. *Cut.*

ಛಿದುರ čhidura. Cutting; easily breaking, frail (Kâvy. V, 950); hostile.

ಛಿದ್ರ čhidra. *A hole, a slit, a rent, a fissure, an opening;* a defect, a flaw, a fault; *a weak point or side, a foible;* imperfection, infirmity. See Nn. s. ತಂಟು.

ಛಿದ್ರತರ čhidra-tara. Being uncommonly full of openings for letting light in: open, manifest (ಉಲ್ಬಣ, ಪಾವಳ Nn. 122).

ಛಿದ್ರಾನ್ವೇಷಣ čhidra-anvêshaṇa. The act of searching for faults. (My.).

ಛಿದ್ರಾನ್ವೇಷಿ čhidra-anvêshi. Looking out for faults or flaws, a censorious or captious critic. (My.).

ಛಿದ್ರಿತ čhidrita. *Pierced, perforated, having holes.*

ಛಿನ್ನ čhinna. = ಚಿನ್ನ 1. *Cut;* divided, torn, broken, destroyed. — ಛಿನ್ನ ಛಿನ್ನ. rep. Shattered, mangled, destroyed, piecemeal, etc. (Bp. 14, 31; 18, 52; 21, 45; 60, 57). — ಛಿನ್ನ ಭಿನ್ನ. dupl. = ಛಿನ್ನ ಛಿನ್ನ. (My.; Tĕ.).

ಛಿನ್ನಕುಜಾತ čhinna-kujâta. The trunk of a lopped tree, a lopped tree (ಮುಣ್ಡ, ಕಡಿದ ಮರ Nn. 112, o. rs. ತಱಿದ ಮರ, ಕಡಿದ ಭೃಂಗಮರ).

ಛಿನ್ನರುಹೆ čhinna-ruhĕ. *The plant Cocculus cordifolius* DC.

ಛುಚ್ಛುನ್ದರ čhuččhundara. = ಚುಚುನ್ದರಿ, ಚುಚ್ಚುನ್ದರ. *The musk rat or shrew.*

ಛುಮ čhuma. See ಛಮು.

ಛುರಿಕೆ čhurikĕ. *A knife. Cf.* ಸುರಿಗೆ.

ಛೂರಿ čhûri. = ಚೂರಿ. A knife (Sk.; B. 2, 28).

ಛುಲುಮ್ಮನೆ čhulummĕnĕ. With the sound (or manner) of ಛುಲುಂ (Šmd. 22, o. r. ಛುಮ್ಮನೆ).

ಛೇಕ čhêka. *Tame, domesticated.* 2, *town-bred, shrewd, clever.* 3, a kind of alliteration, repetition of two or more consonants in different words (Sk.; My.).

ಛೇದ čhêda. Cutting; cutting off; chopping; tearing off; destroying; a section, a piece, etc. See ನಖ-; ತಱ. 2, divisor, the denominator of a fraction (Sk.; My.).

ಛೇದನ čhêdana. = ಛೇದ. *Cutting,* etc. See ಅರಿ. — ಛೇದನ ಮಾಡು. To cut, etc., to destroy (Bp. 24, 39).

ಛೇದಿ čhêdi. Cutting; a cutter; a pair of scissors or shears; a knife (ಕತ್ತರಿ Mr. 377; Bp. 40, 63).

ಛೇದಿಸು čhêdisu. To cut, to cut off, etc. ಹೊದಱ ಛೇದಿಪ ಉಪಿತ್ರಂ (Šm. 85). See Bp. 32, 35; 36, 42; 61, 79; Nn. 99; J. 34, 17.

ಛೇದಿಸುವಿಕೆ čhêdisuvikĕ. Cutting, etc. (ಲವ, etc. Si. 395).

ಛೇದ್ಯ čhêdya. To be cut, be cut off, etc. (adj.); amputation, excision. See ತಿಲಚ್ಛ-.

Digitized by Google

ಜ್

J

ಜ್ j. The twenty-eighth letter of the Alphabet (Šmd. 12. 21. 22. 53). It is substituted for ಸ್ in ಪೊಂಜುರಿಗೆ, ಮುಂಜೂರ್, ಮುಂಜೆಬಿಂಗು, ತಗ್ಜೊಡರ್, ತುಜುಜೊಡರ್ (83), ತೂಗುಂಜೊಡರ್, ಕಟ್ಟುಂಜುರಿಗೆ (204); for ಚ್, e. g. in ಜಕ್ಕ 1; for ಯ್, e. g. in ಜಕ್ಕ 2; for ದ್, e. g. in ಜಿನ 2, (ಜನಸು), ಜೇನ; and for ತ್, e. g. in ಜೂಗು, ಜೂಪಱು.

ಜ ja. The letter ಜ್ when pronounced with a short a, as is generally done at school.

ಜ ja. Born; produced; a son. See ಅಗ್ರಜ, etc. 2, the number eight (Mr. 349). 3, a certain metrical foot (Čh.; Mr. 363).

ಜಕಣಿ jakaṇi. = ಜಕ್ಕಣಿ. (My.). See Prv. s. ನೆರಮನೆ.

ಜಕಾತಿ jakâti. Customs, excise (C.; Mhr., H. ಜಕಾತ).

ಜಕಾರ ja-kâra. The letter or syllable ಜ (Šmd. 11).

ಜಕೇರೆ jakêrĕ. An old store or hoard (My.; Br., H.).

ಜಕ್ಕ jakka. 1. = ಚಕ್ಕ 1. — ಜಕ್ಕನ್ದೊಱಲಿ. -ಂ-ತೊಱಲಿ. (Šmd. 205). (The wheel-turner or cart-puller): a male buffalo, which is yamaratha or Yama's vehicle. ಜವನ್ ಏಱಿದೊನ್ದು ಜಕ್ಕನ್ದೊಱಲನ್ತೆ ಕಣ್ಗೆಸೆದುದು ಏಱಿದ ಇಭಂ ಚಲದಂಕರಾಮನಾ (205). — ಜಕ್ಕನ್ದೊಱಲಿದೇರ. -ತೇರ. Whose vehicle is a buffalo: Yama (ಅನ್ತಕ Šm. 12; ಯಮ Kk. 15). — ಜಕ್ಕವಕ್ಕ. = ಚಕ್ಕ-. (ಚಕ್ರವಾಕ Nr.; Kk. 14; ಚಕ್ರ, ಚಕ್ರವಾಕ, ಕೋಕ, ರಥಾಂಗ Hlâ.; ಎಣೆವಕ್ಕ, etc. Šm. 28; ಕಲಮ್ಬು, ರಥಾಂಗ Nn. 17; ಚಕ್ರ, ರಥಾಂಗ 49; ಕೋಕ, ಚಕ್ರಯುಗ 128; Abh. P. 3, after 133; J. 9, 13; 26, 13).

ಜಕ್ಕ jakka. 2. Tbh. of ಯಕ್ಷ. (Abh. P. 14, 95; 15, 3). — ಜಕ್ಕಣ. -ಅಣ. = ಜಕ್ಕಣ್ಣ. (C.). — ಜಕ್ಕಣಾಚಾರಿ. N. of an architect (C.). — ಜಕ್ಕಣಾಚಾರ್ಯ. N. of a Šaiva devotee (Rsv. 1, 17). — ಜಕ್ಕಣ್ಣ. -ಅಣ್ಣ. N. (S. Mhr.). See ಘಟಿಕಾಸಿಗಳ-. — ಜಕ್ಕಪ್ಪ. -ಅಪ್ಪ. N. (S. Mhr.; B. 5, 136). — ಜಕ್ಕವ್ವ. -ಅವ್ವ. N. (S. Mhr.).

ಜಕ್ಕಣಿ jakkaṇi. = ಜಕಣಿ, ಜಕ್ಕಿಣಿ. Tbh. of ಯಕ್ಷಿಣಿ. (My.).

ಜಕ್ಕಲು jakkalu. Obsequiousness, fawning (My.; Tĕ. ಜಾಗಿಲಿ, prostration, see s. ಚಾಱು).

ಜಕ್ಕಿ jakki. = ಜಕ್ಕೆ. Tbh. of ಯಕ್ಷಿ. (ಕರ್ಣಿಕೆ, ಜಲಾತ್ರಿತೆ Mr. 15, o. r. ಜಕ್ಕೆ; Bp. 23, 20). See ನೆಲಮುಕ್ಕ-. — ಜಕ್ಕಯರ ಬೊಮ್ಮಯ್ಯ. N. (Bp. 58, 3).

ಜಕ್ಕಿಣಿ jakkiṇi. = ಜಕಣಿ, etc. Tbh. of ಯಕ್ಷಿಣಿ. A woman who dies in the matron state, not as a widow, and receives divine honours, e. g. sîrĕs are dedicated to her, etc. (My.; Tĕ. ಜಕ್ಕನಿ).

ಜಕ್ಕಿಸು jakkisu. 1. = ಜಗ್ಗಿಸು 1. To bend the body in up and down (obscene) movements (when walking, My.). ಜಕ್ಕಿಸುತ್ತಾ ನಡೆ (My.).

ಜಕ್ಕಿಸು jakkisu. 2. = ಜಗ್ಗಿಸು 2. To pull with effort (My.; cf. ಜಗ್ಗು 3); to be rude or uncivil (C.).

ಜಕ್ಕಿಸು jakkisu. 3. = ಜಗ್ಗಿಸು 3, (ಜರಗಿಸು, ತಗ್ಗಿಸು). To lower, by pressure or blows (My.).

ಜಕ್ಕುಲಿ jakkuli. The state of being sensible to slight touches or ticklish (?). — ಜಕ್ಕುಲಿಗಾರೆ. -ಕಾರೆ. N. of a plant, Mimosa sensitiva or pudica (? ಪ್ರೀಡೆ Mr. 134).

ಜಕ್ಕುಲಿಸು jakkulisu. 1. To tickle; to touch (Abh. P. 6, 41; Grj. 7, after 11; Bp. 15, 14; 47, 32; V. 9, 113; cf. ಚಕ್ಕಲಗುಳಿ).

ಜಕ್ಕುಲಿಸು jakkulisu. 2. = ಜಕ್ಕುಳಿಸು. To amuse, to divert, to rejoice (Čpr. 1, 51; 8, 98; V. 2, 10; 5, after 43; 34, 66; Râm. 4, 3, 1). 2, to play about (Abh. P. 3, after 133). 3, to jeer at, to make sport of, to deride (Bhâgavata 10, 18, 2).

ಜಕ್ಕುಳಿಸು jakkuḷisu. = ಜಕ್ಕುಲಿಸು 2. (ನರ್ಮಕರಣ Šmd. Dh.; see ಚಕ್ಕನ್ದ; Tĕ. ಜಕ್ಕಲಿಮ್ಪು, jeering, quizzing).

ಜಕ್ಕೆ jakkĕ. = ಜಕ್ಕಿ, q. v.

ಜಗ jaga. 1. = ಜಗೆ, ಝಗ. Glittering, shining (Sk. ಝಗಝಗಾಯ್, to glitter); notoriety; greatness (Tĕ. ಜಗೆ; cf. ದಗ). 2, the large, round basket carried on the head by the Jôgatis (S. Mhr.). ಜಗಾ ಹೊಱುವವಳಿಗೆ ಮಗು ಭಾರವೇ? — ಜಗಾ ಜಾಲಿಸುವ ಬಡ್ಡಿ ಮಗೂ ತೂಗಲಾಱಳೋ? (Prvs.). — ಜಗ ಜಗ. rep. Sparklingly. (Mhr. ಝಳಝಳ). — ಜಗಜಗನೆ. Brightly (My.). — ಜಗಜಗ ಹೊಳೆ. To shine brilliantly (My.). — ಜಗಜಗಿಸು. To glitter, to shine (Râm. 1, 13, 9; Rsv. 5, after 19; Šsv. 4, 54; J. 4, 30; 12, 22; 16, 4; B. 5, 45). — ಜಗಜಟ್ಟಿ. A celebrated, matchless wrestler (Bh. 2, 2, 102; 7, 6, 81; 8, 23, 36; Tĕ.). — ಜಗಜಮ್ಪು. Greatness, grandeur (Rsv. 6, after 11; Tĕ. ಜಗಜಮ್ಪು, ಜಗಜಮ್ಬು, ಜೆಗಜೆಮ್ಪು). 2, the gown of the Jôgatis extending to the feet (S. Mhr.; Mhr. ಝಗಾ; see ಝಗೆ).

ಜಗ jaga. 2. Tbh. of ಜಗತ್. The world (ಜಗತ್, ಲೋಕ, etc. Hlâ.; ವಿಶ್ವ, ಲೋಕ Nn. 95). See Šmd. 159. 242; Nn. 3. 168. — ಜಗದಾಳ್ದ. -ಆಳ್ದ. The ruler of the world (Č. Bp. 47, 18). — ಜಗದೊಡೆಯ. -ಒಡೆಯ. (Šmd. 242, o. r. ಜಾಗದೊಡೆಯ). The lord of the world. — ಜಗಬಣ್ಡ. The greatest liar in the world (S. Mhr.); the most shameless man in the world (My.). — ಜಗಮೊಣ್ಡ. The most stupid or obstinate man in the world (C.).

ಜಗಚ್ಚಕ್ಷುಸ್ jagat-čakshus. The eye of the universe: *the sun*.

ಜಗಜ್ಜನ jagat-jana. Mankind, all human beings (Rsv. 1, 39; My.).

ಜಗಜ್ಜನನಿ jagat-janani. The mother of the world (J. 19, 28).

ಜಗಜ್ಜ್ಯೋತಿ jagat-jyôti. The light of the world; the sun (My.).

ಜಗಂಜ್ಯೋತಿ jaga-ṅ-jyôti. A flambeau on a pole fixed in the ground (My.).

ಜಗಣ ja-gaṇa. The syllable foot ಜ (Čh. v. 34).

Digitized by Google

ಜಗತ್ jagat. = ಜಗ 2, ಜಗತ್ತು. *Moving, movable, locomotive.* 2, *the world, the universe.*

ಜಗತಿ jagati. = ಜಗಲಿ q. v., ಜಗಳ, ಜಗುಲಿ. A raised place, etc. (ಜಗಲಿ, ವೇದಿ Nn. 86; Tĕ. ಜಗತಿ, ಜಗರಿ, ಜಗಿಲಿ; M. ಜೇದಿ; T. ತಾವಾರ; T. ತಾವಡ, a place, residence; ತಾವರ, a place, abode = ಸ್ಥಾವರ).

ಜಗತಿ jagati. ಜಗತೀ. = ಜಗತ್ತು. *The earth* (ಕ್ಷಿತಿ, ಭೂಮಿ Nn. 86). 2, *the world, the universe.* 3, *the king and his subjects;* the first attendant of a king (ಪ್ರಧಾನ, ಮುಖ್ಯನು 86); courtiers (ನೃಪಸಭೆಯರ್ Mr. 468). 4, the site of a house. 5, N. of a type of metres (Čh.; Mr. 362). 6, a person who earns a livelihood by carrying weights (ಭಾರೋಪಜೀವಿ, ಹೊರೆಯ ಹೊತ್ತು ಬದುಕುವವನು Nn. 86). — ಜಗತಿಯೊಡೆಯ. -ಒಡೆಯ. The lord of the earth or of the world (Bp. 57, 75; 61, 12).

ಜಗತಿಪ jagati-pa. A king (Bp. 61, 4).

ಜಗತೀತಲ jagatî-tala. = ಜಗತಿ Nos. 1 & 2. (Šmd. 57. 221).

ಜಗತೀಪಾಲಕ jagatî-pâlaka. A king (Bp. 50, 46).

ಜಗತೀಮಾನಿನಿ jagatî-mânini. A world-respected woman; the world regarded as a woman (Rŝv. 13, 45).

ಜಗತೀವಲಯ jagatî-valaya. The circumference of the earth; the terrestrial globe (J. 1, 1).

ಜಗತ್ಕರ್ತ jagat-karta. = ಜಗತ್ಕರ್ತೃ. (C.; B. 4, 202; 5, 103).

ಜಗತ್ಕರ್ತು jagat-kartu. = ಜಗತ್ಕರ್ತೃ. (Č. Bp. 47, 19).

ಜಗತ್ಕರ್ತೃ jagat-kartṛi. *The creator of the world; Brahmâ.*

ಜಗತ್ತು jagattu. Tbh. of ಜಗತ್ (Šmd. 106 Cm.; C.).

ಜಗತ್ತ್ರಯ jagat-traya. = ಜಗತ್ರಯ. The three worlds: svarga, bhûmi, and pâtâla.

ಜಗತ್ಪತಿ jagat-pati. = ಜಗನ್ನಾಥ. See ತ್ರೀ-.

ಜಗತ್ಪಾವನ jagat-pâvana. Purifying the earth (J. 2, 56).

ಜಗತ್ಪ್ರಖ್ಯಾತ jagat-prakhyâta. Renowned throughout the world. (My.).

ಜಗತ್ಪ್ರಾಣ jagat-prâṇa. *The breath of the world, wind, air.*

ಜಗತ್ಯ jagatya. Tbh. of ಜಗತಿ. The earth (S. Mhr.; B. 5, 199. 219).

ಜಗತ್ರಯ jaga-traya. Tbh. of ಜಗತ್ತ್ರಯ. (Čpr. 1, 69; 6, 67; Bp. 1, 13; 54, 57).

ಜಗತ್ರಯದೇವ jagatraya-dêva. The god or the king of the three worlds (Bp. 50, 55).

ಜಗತ್ರಯಪಾಲ jagatraya-pâla. The protector or ruler of the three worlds (Bp. 9, 40).

ಜಗದಂಡ jagat-aṇḍa. The world-egg: the world (Bp. 10, 1).

ಜಗದಂಬೆ jagat-ambĕ. Durgâ. 2, the river Ganges (J. 9, 28).

ಜಗದಿಟ್ಟಿ jaga-diṭṭi. The eye of the universe: the sun (ಸೂರ್ಯ Šm. 4).

ಜಗದೀಶ jagat-îśa. The lord of the universe. (Bp. 43, 12). ಜಗದ್ಗುರು ಜಗದೀಶ, ಹಳೆಗುರು ಶಿವುದೀಶ (Prv.).

ಜಗದೀಶ್ವರ jagat-îśvara. = ಜಗದೀಶ. (Bp. 58, 65). ಜಗದೀಶ್ವರನ ದಯೆ ಇದ್ದರೆ ಜಗತ್ತೆಲ್ಲಾ ನನ್ನದು (Prv.).

ಜಗದುದರ jagat-udara. Kṛishṇa (Bhâgavata 3, 2, 48).

ಜಗದುಳ jaga-tuḷa. Equal to the (whole) world (Šmd. 207, o. r. ಗಜದುಳ).

ಜಗದೃಶ್ jaga-dṛiś. -ದೃಶ್. = ಜಗಚ್ಚಕ್ಷುಸ್. (Mr. 33).

ಜಗದೇಕಚಕ್ಷು jagat-êka-čakshu. The sole eye of the world: the sun (ಅರ್ಕ, ಸೂರ್ಯ Nn. 56). 2, the moon (ಶಶಿ, ಚಂದ್ರ 56). 3, Yama (ಯಮ, ಅಂತಕ 56). 4, Karṇa (56). 5, glory, renown (ಯಶ, ಕೀರ್ತಿ 56).

ಜಗದೇಕದೇವ jagat-êka-dêva. The sole god of the world (Šsv. 4, 132).

ಜಗದೇಕಮಲ್ಲ jagat-êka-malla. The sole wrestler or strong person of the world (Bp. 23, 21; 53, 69).

ಜಗದೇಕರಕ್ಷಕ jagat-êka-rakshaka. The sole protector or guardian of the world (Bp. 28, 64).

ಜಗದೇಕವೀರ jagat-êka-vîra. The sole hero of the world (Šsv. 4, 95. 128).

ಜಗದೇವ jaga-dêva. N. (Bp. 9, 42; 60 sum.; 60, 1. 3. 46. 54. 59. 62; 61 sum.; 61, 6. 7. 13. 20. 21. 34). — ಜಗದೇವಣ್ಣ. -ಅಣ್ಣ. N. (Bp. 60, 2). — ಜಗದೇವದಣ್ಣಾಯಕ. N. (Bp. 37, 6). — ಜಗದೇವರಸ. -ಅರಸ. N. (Bp. 60, 5).

ಜಗದ್ಗುರು jagat-guru. The guru of the world; an eminent guru (C.). 2, Kṛishṇa (J. 6, 48). See ತ್ರಿ-; Prv. s. ಜಗದೀಶ.

ಜಗದ್ದರ್ಪಣ jagat-darpaṇa. (Šmd. 188). The mirror of the world.

ಜಗದ್ರಕ್ಷಕ jagat-rakshaka. The protector or saviour of the world (My.).

ಜಗದ್ರಾಜ jagat-râja. The king of the universe (J. 5, 4).

ಜಗದ್ವಂದಿತ jagat-vandita. Praised or adored by the world. 2, N. of a vṛitta (Čh.).

ಜಗದ್ವಲಯ jagat-valaya. The circumference of the world, the universe (Šmd. 217. 222 Mdb.).

ಜಗದ್ವಿನಾಶ jagat-vinâśa. *The destruction of the world.*

ಜಗನ jagana. Tbh. of ಜಘನ (Šmd. 338).

ಜಗನ್ನಾಥ jagat-nâtha. *Vishṇu or Kṛishṇa.* 2, N. of a district and town near Cuttack (B. 4, 28).

ಜಗನ್ನಾಯಕ jagat-nâyaka. The governor of the world (My.).

ಜಗನ್ನುತ jagat-nuta. Praised by the world (Bp. 4, 2; 5, 11).

ಜಗನ್ಮಯ jagat-maya. Containing, or one who contains, the whole world (J. 13, 29).

ಜಗನ್ಮಾತೆ jagat-mâtĕ. Durgâ; Lakshmî. (My.).

ಜಗನ್ಮೋಹನ jagat-môhana. A very fascinating man (My.). Feminine ಜಗನ್ಮೋಹಿನಿ (My.).

ಜಗಪಾಱು jaga-pâṟu. A very profligate woman (Šmd. 207, o. rs. ಗಜಪಾಱು, ಗಜಪೋರು).

ಜಗರ jagara. = ಜಗಲ, ಜಾಗರ 2, ದಗಲೆ. *Armour, mail.*

ಜಗಲ jagala. Fraudulent. 2, *vinous liquor for distilling.* 3, the plant Vangueria spinosa. 4, = ಜಗರ, armour, mail. 5, = ಸಗಣ, cow-dung.

ಜಗಲಿ jagali. = ಜಗತಿ, etc. An artificially raised place: a kind of sacrificial altar; the pedestal of an idol (S. Mhr.); a seat of mud, stone, etc. (ಜಗತಿ, ವೇದಿ Nn. 86; ವೇದಿಕೆ Nn. 148; ಎತಡಿಕೆ Hlâ.). ಯಾಗಕ್ಕೆನ್ನು ಮಾಡಿದ ಜಗಲಿ (ವೇದಿ Nr.). ಕಪ್ಪುರವಳಿಕಿನ್ ಅಳವಟ್ಟ ಜಗುಲಿಗಳ್ (Čpr. 7, after 92). ಜಗಲೀ ಹಾಡಿದವ ಗಗನಾ ಹಾಡ್ಯಾನೇ?—ಜಗಲೀ ಹಾಡಿದ ಬಡ್ಡಿ ಗಗನಾ ಹಾಡ್ಯಾಳೇ?—ಎಲ್ಲಾ ದೇವರ ಜಗಲಿಯಾದರೆ ನಿಲ್ಲೋದಕ್ಕೆ ಸ್ಥಳವೆಲ್ಲಿ?—ಗೋಡೆ ಬಿದ್ದರೆ ಜಗಲೀ ಮೇಲೆ (Prvs.). See Čpr. 8, after 73; Bp. 47, 10; Râm. 1, 13, 8; J. 17, 23; Si. 106; ಪೊಂ-, ರನ್ನ-.

Digitized by Google

ಜಗವತ್ತಿ jaga-vatti. Tbh. of ಜಗವರ್ತಿ (Šmd. 376).

ಜಗವರ್ತಿ jaga-varti. (Šmd. 376). The turner or mover of the world.

ಜಗಳ jagaḷa. A quarrel, a fight; war (ಪೆಣಕು Šmd. I; ದೌರ್ಮದ್ಯ, ಕಲಿಂಠಶ Hlâ.; Mr. 452; ಕದನ Nn. 96, o. r. ಕಾಳಗ; ಯುದ್ಧ, ಸಂಖ್ಯ, ಸಮಾಕ, ಕಲಹ, etc., ಬವರ Si. 294; ದ್ವನ್ದ್ವ 459; C.; Tĕ. ಜಗಡ; Mhr. ಝಗಡಾ, ಝಂಗಡ). See ಅಟ್ಟುಂ-.— ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.— ಜಗಳವಿಲ್ಲದೆ ಜಾವುಹೊತ್ತಿದ್ದರೆ ಜಗಳ ಬನ್ದು ಕಟ್ಟಿದ ಹಾಗೆ ಆಗುತ್ತದೆ.— ಜಗಳವಿಲ್ಲವೇ, ಜಂಗಮಯ್ಯಾ? ಅನ್ದರೆ ಹಡಿಕುಮುಣ್ಣೆ, ಭಿಕ್ಷಾ ನೀಡೆ! ಅನ್ದ (*i. e.* at once a quarrel arose).— ಜಾರ ಚೋರರ ಜಗಳದಿನ್ದ ಯಜಮಾನನಿಗೆ ಕ್ಷೇಮ.— ಮಾತು ಬಲ್ಲವ ಮಾಣಿಕಾ ತನ್ದ, ಮಾತರಿಯದವ ಜಗಳಾ ತನ್ದ (Prvs.). See Prv. s. ಗಾಸಿ. — ಜಗಳಗಣ್ಣ. A quarrelsome man (C.). — ಜಗಳಗಣ್ಣಿ. A quarrelsome woman (C.; Bp. 40, 53; Tĕ. ಜಗಡ-). — ಜಗಳಗಣ್ಣಿಗ. = ಜಗಳಗಣ್ಣ. (My.). — ಜಗಳಗಣ್ಣಿಮರ. = ಜಗಳದ ಮರ. (My.). — ಜಗಳ ತರು. To bring the news of some quarrel before others, generally as a complaint and with the purpose of rousing a quarrel (C.). — ಜಗಳ ತೆಗೆ. To pick a quarrel (C.; Bh. 1, 8, 7; B. 2, 31). — ಜಗಳದ ಮದ್ದು. (ಬಳಮದ್ದು G.). — ಜಗಳದ ಮರ. = ಜಗಳಗಣ್ಣಿಮರ. ತಿನ್ದುಕ, ಸ್ಫೂರ್ಜಕ, ಕಾಲಸ್ಕನ್ಧ, ಶಿತಿಸಾರಕ ಅನ್ದರೆ ತುಮ್ಬರಗಿಡ, ತೂಬರೇ ಗಿಡ; ಇದನ್ನು ಜಗಳದ ಮರವೆನ್ದು, ಕೆಲವರು ಅನ್ನುವರು (Si. 130). — ಜಗಳವಾಡು. = ಜಗಳಾಡು. (My.; B. 5, 321). — ಜಗಳ ಹಚ್ಚು. To create a quarrel or fight between two parties (C.). ನಡುವೆ ಬನ್ದು ಜಗಳ ಹಚ್ಚೋಣ (ತಳ್ಳಿ G.). ಜಗಳ ಹಚ್ಚುವವ (ಪಿಶುನ G.). — ಜಗಳಾಡು. -ಆಡು. To quarrel, etc. (C.; B. 1, 18; 2, 30). See Prvs. s. ಬೀದಿ, ಮಗಳು.

ಜಗಳಗಾತಿ jagaḷa-gâti. A quarrelsome woman (My.). ಜಗಳಗಾತಿ ಮಗಳನರಿಯಳು (Prv.)

ಜಗಳಿ jagaḷi. = ಜಗಲಿ, etc. (ವಿತರ್ದಿ, ವೇದಿಕೆ Nr.).

ಜಗಳೆ jagaḷĕ. = ಜೆಗಳೆ, ಝುಗಟೆ, ಝುಗಡೆ, ಝುಗಳೆ, (ಜಾಗಟೆ, etc.). Tbh. of ಝುಗಟೆ (Šmd. 339, o. r. ಝುಗಡೆ). A kind of cymbal; a round metal plate beaten on by a class of mendicants; that on which the hours are struck, a gong (ಕಂಸಾಳ Kk. 67; Šs.; Šm. 64, o. r. ಜೆಗಳೆ; Mhr. ಜಂಗಟ, ಝುಂಗಟ, ಝುಂಗಡ, ಜೇಂಗಟ).

ಜಗಾತ್ಮ jaga-âtma. Brahmâ (Mr. 9).

ಜಗಿ jagi. = ಜಗಿ 4, etc. (My.).

ಜಗುನೆ jagunĕ. = ಜಮುನೆ. Tbh. of ಯಮುನಾ (Šmd. 343. 362; Čt. II, 13). ಜಗುನೆಯ ತಡಿಯಲ್ಲಿ ತುರುಗಳಂ ಮೇಯಿಸಿದಂ (273). — ಜಗುನೆಯ ಪಿರಿಯ. The elder brother of Yamunâ: Yama (Šs.). — ಜಗುನೆಯಯ್ಯ. -ಅಯ್ಯ. The father of Yamunâ: the sun (ಸೂರ್ಯ Šm. 14).

ಜಗುಲಿ jaguli. = ಜಗಲಿ, etc. (ವೇದಿಕೆ, ವಿತರ್ದಿಕೆ Mr. 199, o. r. ಜಗಲಿ; ವಿತರ್ದಿ, ವೇದಿಕೆ Si. 111). See Si. 106.

ಜಗುಳ್ jaguḷ. 1. To go away or move off; to slip; to drop down (ಅಪಸರಣ Šmd. Dh.; ಜಾರು, ಬರ್ಟಲ್ Šmd. I; ನುಣ್ಚು, ಜಾರು Šs.). ಜಗುಳ್ದಂ (Šmd. 49. 55), ಜಗುಳ್ದಪಂ, ಜಗುಳ್ವಂ, ಜಗುಳ್ಗುಂ (55). ಗಗನಗಜನಿಟಿಲತಟದಿಂ ಜಗುಳ್ದನ್ತೆ ಪುರಾಣರತ್ನಮಣಿಮಯಮಕುಟಂ (Rśv. 11, 2). See Čpr. 6, after 106; Grj. 2, after 71; Râm. 3, 6, 5; J. 14, 26; Šśv. 4, 61. 62. 78.

ಜಗುಳ್ jaguḷ. 2. = ಜಗುಳ್ದು. P. p. of ಜಗುಳ್ 1. — ಜಗುಳ್ದರ್. To go away, to disappear (Čpr. 8, 98).

ಜಗೆ jagĕ. = ಜಗ 1, etc. Shine, lustre, glitter (Bh. 1, 20, 55; 2, 13, 25).

ಜಗ್ಗನೆ jaggaṇĕ. = ಚಕ್ಕನೆ. (S. Mhr., rare).

ಜಗ್ಗಿಸು jaggisu. 1. = ಜಕ್ಕಿಸು 1. (My.).

ಜಗ್ಗಿಸು jaggisu. 2. = ಜಕ್ಕಿಸು 2. (My.).

ಜಗ್ಗಿಸು jaggisu. 3. = ಜಕ್ಕಿಸು 3. (My.).

ಜಗ್ಗು jaggu. 1. (= ಜರಗು). To bend down, as a tree with fruit; to bend in, as a roof with weight; to sink, as a wall (My.). 2, to hang down: to overspread, in ಮೋಡ ಜಗ್ಗಿ ಹಾಕಿ ಅದೆ (S. Mhr.).

ಜಗ್ಗು jaggu. 2. Bending. — ಜಗ್ಗು ಹಾಕು. = ಜಕ್ಕಿಸು 1, etc. (My.).

ಜಗ್ಗು jaggu. 3. = ಜಿಗ್ಗು. To pull with effort, to drag, to draw, as cloth, a cart, water, etc. (C.; ಎಳೆ, ಸೆಳೆ G.; *cf.* ಜರಗು).

ಜಗ್ಧ jagdha. *Eaten.*

ಜಗ್ಧಿ jagdhi. *Eating; food.*

ಜಘನ jaghana. = ಜಗನ. *The hinder part, the buttock; the hip and loins; the pudenda, the mons veneris* (ತಿಕ Nn. 118; ಪೊಣವಾಟ್ Čt. II, 75). 2, *the rear guard of an army.*

ಜಘನಕೂಪಕ jaghana-kûpaka. *The hollow of the loins* (ಕುಣ್ಡೆಯ ಕುಟಿ Hlâ.).

ಜಘನೇಫಲೆ jaghanê-phalĕ. *The opposite-leaved fig-tree, Ficus oppositifolia.*

ಜಘನ್ಯ jaghanya. Hindmost, hinder; *last, ultimate.* 2, *low, base, wicked, very vile* (ಕುತ್ಸಿತ, ಅತಿಹೀನ Mr. 453); a Šûdra, or Čaṇḍâla.

ಜಘನ್ಯಜ jaghanya-ja. Last-born; *a younger brother.* 2, *a Šûdra.*

ಜಘನ್ಯಪಾತ್ರ jaghanya-pâtra. A low receptacle or person. (Kâvy. IV, 2, 34).

ಜಂಕಣೆ jaṅkaṇĕ. = (ಜಂಕೆ), ಜೆಂಕಣೆ. Scolding, chiding (ಜವುಕು Šm. 39; Kk. 42, o. r. ಜೆ-; Čt. II, 50; *cf.* ಜವಿ 1); crying, chirping, etc. (ಬಗ್ಗು Čt. II, 22; *cf.* ಜವಿಸು); grunting (ಹುಮ್ಮನೆ I, 44).

ಜಂಕಿಸು jaṅkisu. = ಜೆಂಕಿಸು. To scold, to chide; to despise; to put into shade (Bp. 21, 15; 22, 33; 40, 38; Rśv. 8, 47; Šśv. 4, 14);— to cry, to chirp, to grunt (Grj. 5, 20; Rśv. 5, after 55).

ಜಂಕೆ jaṅkĕ. (= ಜಂಕಣೆ, ಝುಂಕೆ). Crying out, chiding (Grj. 2, 15; Šśv. 4, 131).

ಜಂಕೆ jaṅkĕ. Tbh. of ಝುಂಕೆ (Šmd. 339).

ತಣ್ taṇ. = ತಂ (ತಮ್), etc. Coolness, cold. (T., M.; *cf.* ಚಳಿ 2, ತಣಿ 1). — ತಣ್ಗದಿರ್. -ಕದಿರ್. = ತಂಗದಿರ್. A cool ray (Lllv. 3, 2. 7). — ತಣ್ಗದಿರ. = ತಂಗದಿರ. (ಚಳಿಗದಿರ, ತಿಂಗಳ್, ಇಂಗದಿರ, etc., ಚನ್ದ್ರ Šm. 15. 16; Rsv. 13, 61). — ತಣ್ಗದಿರನನ್ವಯ. -ಅನ್ವಯ. The lunar race (J. 15 sum.). — ತಣ್ಗಡಿರಾಡಿ. -ಅಡಿ. The Greek partridge (ಜೊನ್ನವಕ್ಕಿ Čt. I, 38). — ತಣ್ಗರಗ. -ಕರಗ. A cool jar: a crystal jar (Abh. P. 7, after 106; V. 4, 25). — ತಣ್ಗಲ್. -ಕಲ್. The moon-gem (ಚನ್ದ್ರಕಾನ್ತ Šs.). — ತಣ್ಗಾಳಿ. = ತಂ-. (Čpr. 2, after 93; 6, 93; Abh. P. 9, after 120). — ತಣ್ಗೊಳ. = ತಂ-. (J. 18, 13). — ತಣ್ಣೊಡರ್.

Digitized by Google

-ಸೊಡರ್. (Šmd. 83). An extinguished lamp. — ತಣ್ಣೀರ್. -ನೀರ್. -ರು. Cool or cold water (C.; B. 4, 158). ತಣ್ಣೀರು ಆದರೂ ಪುಣ್ಯದಿಂದ ದೊರಕ ಬೇಕು (Prv.). — ತಣ್ಣೀರ್ದಳಿ. -ತಳಿ. To sprinkle cold water (J. 19, 16). — ತಣ್ಣೆರಲ್. -ಎರಲ್. A cool breeze (Čpr. 8, 103; Ršv. 2, 27). — ತಣ್ಣೆಲರ್. -ಎಲರ್. (Šmd. 214). A cool breeze (Čpr. 3, 15. 94; 5, after 19; J. 8, 18; 29, 49). — ತಣ್ಣೆಲೆ. -ಎಲೆ. A cool leaf. ಅರಲ್ದ ತಾವರೆಯ ತಣ್ಣೆಲೆ (Čpr. 7, after 92). — ತಣ್ಣೆಳಲ್. -ನೆಳಲ್. (Šmd. 190). A cool shade (Čpr. 7, 80; Abh. P. 14, 194; Bp. 5, 45; Ršv. 1, after 130). — ತಣ್ಬನಿ. -ಪನಿ. A cool drop (Čpr. 7, 84). — ತಣ್ಬಿಸಿಲ್. Assuaged, moderate heat or shine of the sun (Abh. P. 2, 5; 11, 177). — ತಣ್ಬುಳಿಲ್. -ಪುಳಿಲ್. (Šmd. 78). A cool sandbank or island; cool sand (Abh. P. 7, after 31; 9, after 75; 14, 48; V. 4, 25).

ತಣಕ್ taṇak. = ತಳಕ್. A sound in imitation of quick motion and flashing. — ತಣಕ್ಕೆನ್ನು. -ಎನ್ನು. A quick motion or flash to take place. ತಣಕ್ಕೆನ್ತ ಹಾಬ್ದ ನು; ತಣಕ್ಕೆನ್ತ ಮಿಂಚಿತು (My.).

ತಣಕಾಯಿಸು taṇakâyisu. (fr. ತನಕ). To inquire after, etc. (My.).

ತಣಲು taṇalu. Glowing coals (My.; T. ತಣಲ್; T. ತಬಲ್, fire).

ತಣವ taṇava. = ತಳವಾರ. (? Bp. 32, 22).

ತಣವು taṇavu. = ತಣಿವು. (ಸೌಹಿತ್ಯ, ತರ್ಪಣ, ತೃಪ್ತಿ Si. 317; My.).

ತಣಸು taṇasu. = ತಣಿಸು 2, ತಣ್ಣಸ. Coldness; wetness (My.).

ತಣಾಯಿಸು taṇâyisu. = ತಣಕಾಯಿಸು. (My.).

ತಣಿ taṇi. 1. (= ದಣಿ). To grow cool or of proper temperature; to be refreshed; to be satisfied or satiated; to be or become sufficient; to be calmed or appeased (ತೃಪ್ತಿ Šmd. Dh.; My.; T., M.; Tĕ. ತನಿ). **2,** to be subdued, get feeble or fatigued (ದಟ್ಟನ್ಣಬ್ Čt. II, 34; T., M.). See Čpr. 2, 57. 84; 7, 88; Grj. 1, 62; 4, 47. 64; Bp. 15, 25; 42, 34; 59, 3. 24; Bh. 8, 27, 7; ಬಸುಱುದಣಿ, ಮನ-, ಮನನ್-. P. ps. ತಣಿತು (Čt. II, 34), ತಣಿದು (C.).

ತಣಿ taṇi. 2. (Humbled state), shame, modesty (ನಾಚಿಕೆ G.).

ತಣಿಗೆ taṇigĕ. = ತಳಿಗೆ. (My.).

ತಣಿಪು taṇipu. 1. = ತಣಿಸು 1. To satisfy, to refresh, to appease, etc. (ತೃಪ್ತಿ Šmd. Db.; Abh. P. 2, 8; Ršv. 8, 117).

ತಣಿಪು taṇipu. 2. = ತಣಿವು, etc. (Čpr. 9, 22).

ತಣಿವು taṇivu. = ತಣವು, ತಣಿಪು 2, (ತಣು), ತಣುವು 1. Satiety, satiation, etc. (ಪರ್ಯಾಪ್ತ, ಉಪಸಮ್ಪನ್ನ, ತರ್ಪಣ, ತೃಪ್ತಿ, ಸೌಹಿತ್ಯ Nr., Hlâ.; Čpr. 3, 43; Bp. 35, 2; Šsv. 1, 21; Mhr. ಧಣೀ). ತಣಿವಿಲ್ಲದವನು (ಅಸೇಚನಕ Hlâ.). ಮಾಬ್ ತಣಿವಿಲ್ಲದಂ (ಅಸೇಚ Mr. 231). ಆವುದಱ ಕಾಣ್ಕೆಯಿಂ ತಣಿವು ಕಡೆಗಣಿಸದು, ಅದು ಅಸೇಚನಕಂ (Nr.).

ತಣಿಸು taṇisu. 1. = ತಣಿಪು 1. (Bp. 4, 47; 22, 58; 24, 53; 25, 2; 26, 19; 27, 59; 32, 30; 39, 63; 46, 75; 61, 54; Šsv. 1, 11). — ತಣಿಸು ತಣಿಸು. rep. (Bp. 6, 29).

ತಣಿಸು taṇisu. 2. = ತಣಸು, etc. (My.).

ತಣು taṇu. (Šmd. 59). (= ತಣುವು).

ತಣುವು taṇuvu. 1. = ತಣಿವು, etc. (My.).

ತಣುವು taṇuvu. 2. = ತನು, etc. (My.).

ತಣ್ಟೆ taṇṭĕ. 1. (= ಜಣ್ಟಿ). Connection, intercourse (ಗೊಡವೆ My.). ತಣ್ಟೆ ತೀರಿದರೂ ತಕರಾರು ಹೋಗಲಿಲ್ಲ. -ತುಣ್ಟುಮುಣ್ಟೇ ತಣ್ಟೆ ಹಬ್ಬೀತು (Prvs.).

ತಣ್ಟೆ taṇṭĕ. 2. A quarrel, a dispute; a troublesome and a necessary business (My.; Mhr., H. ತಣ್ಟಾ); trouble, annoyance (My.; Tĕ.; T. ತಣ್ಡ್ರ). ತಣ್ಟೆಯವನ ನಣ್ಟಿಕೆ ಸಲ್ಲ, ಒಣ್ಟಿಯಾಗಿ ಹೋಗ ಸಲ್ಲ (Prv.). See Prvs. s. ಒಣ್ಟಿ 2, ಒಣ್ಟಿಗ, ಪ್ರೇಮ. — ತಣ್ಟೆಯವ. -ಅವ. A troublesome man (My.).

ತಣ್ಟ್ಲು taṇṭlu. = ತಣ್ಟೆ 2. — ತಣ್ಟ್ಲುಮಾರಿ. A troublesome person (My.).

ತಣ್ಡ taṇḍa. A mass; a multitude; a crowd; a troop; a company, a party (ಗುಮ್ಪು, ಗುಣ್ಡು, ಬಮ್ಬಲ್, ತುಱುಗ, etc., ಶ್ರೇಣಿಕೆ Šm. 54; ಜಂಗುಳಿ, ಥಟ್ಟು, ಕದಲೆ, ಗಡಣ, etc., ಶ್ರೇಣಿಕೆ Kk. 17; ಓಳಿ Bhn.; My.; Tĕ.; Mhr. ತಾಣ್ಡಾ; see T., M. s. ತಡಿ 1; cf. ದಟ್ಟು 2). ತಣ್ಡದ ಜನರು ಹಿಣ್ಡು ಒಡಕೊಂಡು ಹೋದರೆ ಮುಣ್ಡೆಯರಿನ್ದ ಕಡೆ (Prv.). See Bp. 4, 5; Abh. P. 13, after 54; 13, 63; Grj. 2, after 106; Prll. 3, 30; J. 5, 13; 6, 34; ಇತ್ತಣ್ಡ; ತಣ್ಡೋಪತಣ್ಡ. — ತಣ್ಡ ತಣ್ಡ. rep. (Bp. 6, 20; 11, 2; 24, 1; 28, 48; 59, 27; 61, 10; J. 17, 10). — ತಣ್ಡಮ್ಬಿಡ್. -ಂ-ಪಿಡ್. To meet or come together, to convene (V. 36, 65).

ತಣ್ಡಕ taṇḍaka. *Right preparation, complete performance; decoration;* 2, *a composition abounding in compound words* (cf. ದಣ್ಡಕ). 3, a juggler, a cheat. 4, the trunk of a tree.

ತಣ್ಡಕಾಱ taṇḍa-kâṟa. One who amasses; a man who has a large amount of— (Bp. 38, 25).

ತಣ್ಡವಾಳ taṇḍavâḷa. = ತಾಣ್ಡವಾಳ. Cast iron (Si. 332; T.; Tĕ. ತಣ್ಡುವಾಳ).

ತಣ್ಡಸ taṇḍasa. = ತಾಣ್ಡಸ. Pincers, tweezers, tongs (ಲಾಳಿ, ಗಾಳುಕ, ಇಕ್ಕುಳ Mr. 883; Bp. 44, 14; My.; Tĕ. ತಣ್ಟಸ, ತಣ್ಡಸ; M. ತನಾಸ್ಸು; Portuguese *tenaz*).

ತಣ್ಡಸಿ taṇḍasi. = ತಣ್ಡಸು. (Ršv. 5, 58).

ತಣ್ಡಸು taṇḍasu. = ತಣ್ಡಸಿ. N. of a thorny tree (ಕಣ್ಟಕಿ Mr. 121).

ತಣ್ಡಾ taṇḍâ. = ತಣ್ಡೋಪ. ತಣ್ಡಾ ಮುಣ್ಡಾ ವಾಸುದೇವ (= ತಣ್ಡೋಪ-; Prv.).

ತಣ್ಡಿ taṇḍi. = ಚಣ್ಡಿ 2. Cold; coldness (C.; Mhr., H. ಥಣ್ಡೀ; B. 5, 86. 239. 257); wetness (My.).

ತಣ್ಡು taṇḍu. (= ತಡಿ 1? or Tbh. of ದಣ್ಡ?). A staff; a club (Bp. 38, 18; 42, 19; T.); a heavy (iron) club (Čpr. 7, 139).

ತಣ್ಡು taṇḍu. 1. Tbh. of ತರ್ದು. (Si. 310).

ತಣ್ಡು taṇḍu. 2. *One of Šiva's door-keepers or attendants, and an original teacher of the arts of dancing and mimicry.*

ತಣ್ಡುಲ taṇḍula. *Rice cleaned from the husk* (ಅಕ್ಕಿ Mr. 14). 2, *the vegetable substance Erycibe paniculata.* ತಣ್ಡುಲಂ ವಸ್ತುಮೂಲಂ (Prv.).

Digitized by Google

ತಣ್ಡುಲಚೂರ್ಣ tandula-cūrna. Broken rice. See ನುಚ್ಚು.

ತಣ್ಡುಲಪ್ರಕ್ಷಾಲಜಲ tandula-prakshâla-jala. Water in which rice has been washed. See ಕಝುಗ.

ತಣ್ಡುಲೀಯ tandulîya. *The plant Amaranthus polygonoides* Roxb. See ಕಿರುಕುಸಾಲೆ.

ತಣ್ಡುಲೀಯಕ tandulîyaka. = ತಣ್ಡುಲೀಯ. (ಮುದಿಷ್ಟ, ನೀರದರವ, ಕಿರುಕುಸಾಲೆ Mr. 142, o. rs. ಮುದ್ರಿಷ್ಟ, ನೀರಧ-).

ತಣ್ಡೆ tandĕ. A foot-ornament of women (= ಗಗ್ರ My.; M.; T. ತಣ್ಡೈ).

ತಣ್ಡೇಲ್ tandêl. The master of a boat, a Tindal (My.; Tĕ.; Mhr. ತಾಣ್ಡೇಲ; T., M. ತಣ್ಡಲ್).

ತಣ್ಡೋ tandô. = ತಣ್ಡಾ. — ತಣ್ಡೋ ಮುಣ್ಡೋ ವಾಸುದೇವ. An expression used of a man who is free from domestic incumbrances, but at the same time without refuge and destitute (My.).

ತಣ್ಡೋಪತಣ್ಡ tanda (as if Sk.) -upatanda. Crowds upon crowds, etc. (My.; Tĕ.).

ತಣ್ಣ tanna. (= ತಣ್). — ತಣ್ಣ ತಣ್ಣನೆ. rep. (Ṡmd. 229). Very cool.

ತಣ್ಣಗೆ tannagĕ. = ತಣ್ಣನೆ. Cool; cold; cooling, refreshing; in good health, happy; calm; finished, as work; extinguished, as a light (My.; B. 1, 22; 4, 119; Si. 228; J. 28, 5). ಎಣ್ಣೆ ತಣ್ಣಗಾದರೆ ಬೆಣ್ಣೆಯ ಹಾಗೆ ಇದ್ದೀತೇ?—ಗಾಣಿಗಿತ್ತಿ ಅಯ್ಯೋ ಅನ್ದರೆ ನೆತ್ತಿ ತಣ್ಣಗಾದೀತೇ?—ತಣ್ಣಗಿದ್ದರೆ ಮಣ್ಣಾದರೂ ಅಸಾಧ್ಯ (Prv.).

ತಣ್ಣನೆ tannanĕ. = ತಣ್ಣಗೆ (Ṡmd. 89; Čpr. 1, 59; 2, 83. 84; Abh. P. 3, 77; Bp. 18, 16; My.; Si. 138). See ತಣ್ಣ-. — ತಣ್ಣನೆ ಪಣ್ಣನೆ. reit. (Čpr. 3, 94).

ತಣ್ಣನ್ನ tannanna. = ತಣ್ಣನೆ, ತಣ್ಣಾನೆ. ತಣ್ಣನ್ನ ಉಸುಬು (ತಣ್ಣುಬುಲ್ G.).

ತಣ್ಣಸ tannasa. = ತಣ್ಣಸು. Coldness, frigidity, cold, coolness (ಶೈತ್ಯ Čt. I, 2; II, 28; Abh. P. 11, 153; J. 13, 57; 18, 34; 30, 35). — ತಣ್ಣಸನ್ದೋರು. -ಂ-ತೋರು. Coldness to appear (J. 30, 12). — ತಣ್ಣಸಮ್ಪಡೆ. -ಂ-ಪಡೆ. To get cold or cool (J. 30, 16).

ತಣ್ಣಾನೆ tannânĕ. = ತಣ್ಣನೆ. (My.).

ತಣ್ಣಿತು tannitu. = ತಣ್ಣಿತ್ತು (Ṡmd. 96). That is cold or cool; coolness; coldness (ಕೊರೆ, ಕೊರಡು, ಶೈತ್ಯ Kk. 23; ಕುಳಿರ್, ಕೊರಡು, ಕೊಟ್ಟ, ಶೈತ್ಯ Ṡm. 36).

ತಣ್ಣಿತ್ತು tannittu. = ತಣ್ಣಿತು, q. v. (Čpr. 8, 69).

ತಣ್ಪಳಿ tanpali. ತಣ್ಪಳಿವೊಸರುವ ಪ್ರಭೆ (Čt. I, 57, o. r. ತಾಣ್ಪಳಿವಸರುವ ಪಣ್ಪೊಪ್ಪು).

ತಣ್ಪು tan-pu. (Ṡmd. 248). = ತಮ್ಪು, etc. Coolness; cold; a cooling, refreshing quality; happiness. ತಣ್ಪಿನ ತವರ್ಮನೆ (Rsv. 10, after 31). See Čpr. 2, 83; 8, 62. 90; Abh. P. 12, 28; Bp, 18, 30; 30, 28. — ತಣ್ಪುವಡೆ. -ಪಡೆ. To get cold or cool (Čpr. 1, after 101). — ತಣ್ಪುವೀರು. -ಬೀರು. To bestow coolness or refreshment profusely (Ṡsv. 4, 136).

ತಣ್ವಣ tanvana. The sound of the lute (ವೀಣೆಯ ಧ್ವನಿ Mr. 81).

ತತ್ tat. = ತಱ1, ತಳ1, in ತತ್ತಱ, ತತ್ತಳ.

ತತ್ tat. = ತತು, ತತ್ತ1, ತತ್ತು, ತದ್ q. v., (ತತಿ 2, ತತುವು), ತದು.

ತತ tata. *Extended, drawn, stretched out; spread, diffuse.* 2, *any stringed musical instrument.* 3, wind, air.

ತತವಿತತಾದಿವಾದ್ಯ tata-vitata-âdi-vâdya. Various stringed and other musical instruments (Bp. 37, 2. 69; 59, 29).

ತತಸ್ tatas. From that; *from that place; afterwards, then; therefore.*

ತತಾ tatâ. = ತಾತಾ. — ತತಾತೂತು. = ತಾತಾತೂತು. (My.).

ತತಿ tati. 1. Extent; a series, a line, a range; a number, a crowd, a troop (ಸ್ತೋಮ Mr. 422); a sacrificial act, a ceremony.

ತತಿ tati. 2. = ತತುವು. (Tbh. of ತತ್). A proper time or season (S. Mhr.; Tĕ.; T. ತಡಿ; Mhr. ತಥೀ, on that day, at that time).

ತತು tatu. = ತತ್, etc. Tbh. of ತದ್.

ತತುಕ್ಷಣ tatu-kshana. = ತತ್ಕ್ಷಣ. (Bp. 24, 26; My.).

ತತುವ tatuvu. Tbh. of ತತ್ವ 2. (Bh. 3, 8, 30; My.).

ತತುವು tatuvu. = ತತಿ 2. (My. occasionally).

ತತ್ಕಾಲ tad-kâla. That time; *time being, present time;* at that time. ತತ್ಕಾಲಂ, *at the time being;* directly, immediately.

ತತ್ಕಾಲೋತ್ಪನ್ನಧಿ tatkâla-utpanna-dhi. *Possessed of presence of mind.*

ತತ್ಕ್ರಿಯ tad-kriya. *Performing a particular work or service.*

ತತ್ಕ್ಷಣ tad-kshana. = ತಕ್ಷಣ, ತಚ್ಛಣ, ತತುಕ್ಷಣ. That or the same moment. ತತ್ಕ್ಷಣಂ, *at the time being, at the same time, instantly, forthwith.*

ತತ್ತ tatta. 1. = ತತ್, etc. ತತ್ತರಣ (J. 14, 24). ತತ್ತಳವಿ (-ಅಳವಿ, 14, 15).

ತತ್ತ tatta. 2. Tbh. of ತಥ್ಯ. (J. 31, 43). ತನಯರೊಳ್ ತನ್ನ ತಾನೆ ದೊರೆ ಕೊಣ್ಡವಂ ತತ್ತನನ್ದನಂ (J. 28, 57).

ತತ್ತಕಾರ tatta-kâra. Truthfulness (Râm. 4, 3, 20).

ತತ್ತರ tat (= ತರ) -tara. = ತರತರ. Trepidation, trembling, shuddering (My.; T., M.; see Mhr. s. ತರ 2). — ತತ್ತರಗುಟ್ಟು. -ಕುಟ್ಟು. To tremble, to shudder (My.). — ತತ್ತರಗೊಳ್ಳು. -ಕೊಳ್ಳು. To begin to tremble (My.).

ತತ್ತರಿಸು tattarisu. To tremble, etc. (My.; B. 4, 90).

ತತ್ತಱ tat-tara. = ತತ್ತಳ, ತಱತಱ. Perplexity, confusion, embarrassment (Ch. v. 19; Tĕ.). See ಎತ್ತಱ-. — ತತ್ತಱನ್ದಱ'. -ಂ-ತಱ'. To cut so that confusion arises (Grj. 6, 5). ತತ್ತಱ ಬಿತ್ತಱ. Mental embarrassment (V. 11, 8).

ತತ್ತಱಿ tattari. = ತತ್ತಱ. — ತತ್ತಱಿದಱ'. -ತಱ'. = ತತ್ತಱನ್ದಱ'. (Bh. 3, 18, 34).

ತತ್ತಳ tat-tala. = ತತ್ತಱ. (J. 30, 23). ತತ್ತಳದ ರಾವುತಂ (Ṡmd. 162). — ತತ್ತಳಂಗೊಳ್. -ಂ-ಕೊಳ್. To get perplexed (J. 14, 15).

ತತ್ತಿ tatti. = ತೆತ್ತಿ. An egg (ಅಣ್ಡ Nr.; ಕೋಶ, ಅಣ್ಡ, ಪೇಶಿ Mr. 167; C.; T. ತರಳ, ತಿರಣ್ಣ, ತಿರಳ್, ತಿರಳ್ಚಿ, roundness; a ball; a round lump; ತಿರಟ್ಟು, to make round; *cf.* ತಿರಳು 2). See B. 2, 6; 3, 20. 113. 120; 4, 119. 132. 193.

ತತ್ತು tattu. A tripping, a stumbling (T.); peril, misfortune (Grj. 4, 97; T.).

ತತ್ತು tattu. Tbh. of ತತ್, in ತತ್ತುಗೊತ್ತು, in the sense of "the master of that" (My.).

Digitized by Google

ತತ್ತುದು tattudu. Third person singular of the imperfect of ತಡು 1 (J. 25, 58).

ತತ್ತುವ tattuva. = ತತುವ. (Dp.; T.).

ತತ್ತ್ವ tad-tva. = ತತ್ವ 2. (Sk.).

ತತ್ತ್ವಮಸಿ tad-tvam-asi. Thou art that, viz. the supreme soul (a common vêdântic expression, *e. g.* Abhâ. 3, 19).

ತತ್ಪರ tad-para. *Subsequent to that;* following after, inferior. 2, *having that as one's highest object or aim, intent upon, totally devoted to, attending to closely and anxiously* (ಪ್ರೇಮಿ, ಪ್ರಬರ್ಹ, ಪರಾಯಣ, ಪ್ರೇಮುಗೆಯ್ವುವ Mr. 229).

ತತ್ಪರತೆ tad-paratĕ. Entire devotion or addiction to. (Čpr. 3, after 38; 8, after 4).

ತತ್ಪುರುಷ tad-purusha. The original or supreme soul. 2, a class of compounds in which the last number is defined or qualified by the first without losing its original independance (Šmd. 89 Mdb. Cm.; 196. 201. 209; Kâvy. I, 3, 6-9. 49-52).

ತತ್ಪುರುಷವಕ್ತ್ರ tatpurusha-vaktra. One of the faces of Šiva (Šêv. 5, 6).

ತತ್ಪೂರ್ವ tad-pûrva. Prior, former. (My.).

ತತ್ರ tatra. 1. *In that, therein; on account of that; there; thither; then.*

ತತ್ರ tatra. 2. Tbh. of ತನ್ತ್ರ. — ತತ್ರ ಚಿತ್ರ. reit. Jugglery. ತತ್ರ ಚಿತ್ರಿಯವನ ಮುನ್ದೆ ಕತ್ತೆಯ ಹಾಗೆ ಆದ (Prv.).

ತತ್ರಭವತ್ tatra-bhavat. Your honour there: *venerable, respectable* (used in speaking of a person not present). See ಪೂಜಾವಚನ.

ತತ್ರಾಣಿ tatrâṇi. (tatṟâṇi). — ತತ್ರಾಣಿಕೋಱ್. The poochard, Fuligula ferina (Bḍ.).

ತತ್ವ ta-tva. 1. The letter or syllable ತ (Šmd. 103. 350).

ತತ್ವ tatva. 2.= ತತುವ, ತತ್ತುವ, ತತ್ತ್ವ. The state of being that; true state, real state; reality, truth; essential nature; the very essence; the real nature of the human soul as being one and the same with the universal soul; a principle; a first principle or an elementary substance: bhû, salila, têja, anila, âkâša (Mr. 53), or satva, rajas, tamas (ಸತ್ವಾದಿಗಳು 259), or any one of the twenty-five Sâṅkhya first principles; the number 25 (ಇಪ್ಪತ್ತಯ್ದು 348); *Brahma;* a kind of šlêsha (Kâvy. III, 3, B, 148 seq.); slow time in music. — ತತ್ವವೆಱು. -ಪೆಱು. The essence (of something) to have been born or be (Bp. 61, 1).

ತತ್ವಜ್ಞ tatva-jna. Knowing the truth or true nature of anything; understanding the principles of a science thoroughly (Kâvy. III, 3, B, 148).

ತತ್ವಜ್ಞಾನ tatva-jnâna. = ತತ್ವಾಲೋಕ, q. v.

ತತ್ವಾರ tatvâra. Want, lack (My.). ಹೆಸರು ಮಾತ್ರ ಕ್ಷೀರಸಾಗರಭಟ್ಟ, ಮನೆಯಲ್ಲಿ ಮಜ್ಜಿಗೆನೀರಿಗೆ ತತ್ವಾರ (or ಗೊಟ್ಟು, Prv.).

ತತ್ವಾಲೋಕ tatva-âlôka. Knowledge of the truth, etc. (ತತ್ವಜ್ಞಾನ Šmd. 8 Cm.).

ತತ್ಸಮ tad-sama. The same with it; equal to it. 2, one of the terms that are not borrowed from Samskṛita, but exist in Kannaḍa as well as in Samskṛita (Šmd. 220. 384-387; Čt. II, 2; Kk. 3. 95. 100; Šm. 77. 119; see ಸಮಾನ); the Šmd. adduces 21 such tatsamas (384).

ತಥಾ tathâ. *So, thus.* 2, *yes, it is so.* See Prv. s. ರಾಜ.

ತಥಾಗತ tathâ-gata. Being in such a state or condition. 2, *a Buddha; a Jina.*

ತಥ್ಯ tathya. = ತತ್ವ 2. *True, real, genuine; truth, reality.* (J. 9, 31). ಸಂಸಾರಿಗೆ ತಥ್ಯ, ರೋಗಿಗೆ ಪಥ್ಯ (Prv.).

ತದ್ tad. = ತತ್, etc. *He, she, it, that, this.* 2, *therefore.* (Šmd. 100).

ತದಕು tadaku. 1. To strike, to beat (My.).

ತದಕು tadaku. 2. Striking, beating. See Prv. s. ಮುದುಕ.

ತದನನ್ತರ tad-anantara. Nearest or next to that; immediately upon that, thereupon, then (J. 7, 19; 10, 38; 24, 65; C.).

ತದಲು tadalu. = ತಡ್ಲು. A frame of thorns, etc., used as a gate in a hedge (My.; T. ತದಲ್, firmness, stability, *cf.* ತಗೆ; ತತ್ತು, a hedge of briers, etc.; a wicket or small gate; lines of intrenchment).

ತದಾ tadâ. *At that time, then.*

ತದಾತ್ವ tadâtva. *Time being, present time.*

ತದಾನೀಂ tadânîm. *Then.*

ತದಾರಭ್ಯ tad-ârabhya. Beginning from that time, thence, since then (My.; Tĕ.).

ತದಿಕು tadiku. = ತದುಕು. The gum olibanum tree, Boswellia thurifera (ಸಲ್ಲಕಿ, ಗಜಪ್ರೇಮಿ Mr. 123; Čpr. 5, after 64).

ತದಿಗಿಣ tadigiṇa. Sounds used in beating time in music (My.; *cf.* ತನ್ದನತಾನ). — ತದಿಗಿಣಥೋ. = ತದಿಗಿಣ. (My.).

ತದಿಗೆ tadigĕ. Tbh. of ತೃತೀಯೆ (Šmd. 343. 359. 373; Šm. 19).

ತದೀಯ tadîya. His, hers, its, theirs; such. (Bp. 3, 6; 4, 56; 18, 49).

ತದು tadu. Tbh. of ತಪ್. (Bp. 19, 32).

ತದುಕು taduku. = ತದಿಕು. (ಸಲ್ಲಕಿ, ಗಜಪ್ರಿಯೆ Hlâ.; ಗಜಭಕ್ಷ್ಯೆ, ಸುವಹೆ, ಸುರಭಿ, ರಸೆ, ಮಹೇರಣೆ, ಕನ್ದುರುಕಿ, ಶಲ್ಲಕಿ, ಹ್ಲಾದಿನಿ Nr.; ಗಜಭಕ್ಷ್ಯ, etc., ಆನೇ ಬೇಲ Si. 153; Rsv. 5, after 55). ತದುಕಿನ ಧೂಪ (ಯಾವನ, ತುರುಷ್ಕ, ಪಿಣ್ಡಕ, ಸಿಹ್ಲ Nr.; ಪಿಣ್ಯಾಕ, ಸಿಹ್ಲ Si. 406). ತದುಕಿನ ಮಡ್ಡಿ (ಯಾವನ, ತುರುಷ್ಕ, etc., ಅಸ್ದುಗಬೊಂಕ, ಹಾಲುಮಡ್ಡಿ Si. 227; *cf.* ಮಡ್ಡಿಯ ಧೂಪ).

ತದೆ tadĕ. = ಸದೆ. To strike (ತಾಡನ Šmd. Dh.; T. ತಯ್, M. ತಯ್; Tĕ. ತನ್ನು; *cf.* ತಗಲು, ತಟ್ಟು 1).

ತದ್ಗತ tad-gata. Gone to that; *bent or intent on.*

ತದ್ಗುಣ tad-guṇa. The quality or virtue of anything; possessing these qualities. 2, a figure of speech in rhetoric, transferring the quality of one thing to another (Kâvy. III, 3, B, 121. 140 seq.).

ತದ್ದಿನ tad-dina. That day (J. 10, 26); during the day; day by day. 2, the day of mourning for deceased relations (ಮೃತತಿಥಿ My.; Tĕ.).

ತದ್ದು taddu. = ದದ್ದು. Tbh. of ದದ್ರು. (ದದ್ರು Nr., Mr. 384; Si. 202). ತದ್ದುಳ್ಳವನು (ದದ್ರುಣ, ದದ್ರುರೋಗಿ Nr.).

ತದ್ಧರ್ಮ tad-dharma. Having that business; that business; that religion (My.).

ತದ್ಧಿತ tad-d-hita. Good for that, etc. 2, an affix which forms nouns from other nouns. 3, a noun formed by a

Digitized by Google

taddhita affix, a derivative noun. See Śmd. 6. 88. 110. 120. 232. 245. 252; Kâvy. I, 1*a*, 6; I, 4, 1 seq.

ತದ್ಧಿತಪ್ರತ್ಯಯ taddhita-pratyaya. = ತದ್ಧಿತ No. 2. (My.).

ತದ್ಧಿತಲಿಂಗ taddhita-liṅga. = ತದ್ಧಿತ No. 3. (Śmd. 88 Cm.).

ತದ್ಧಿತಾನ್ತ taddhita-anta. = ತದ್ಧಿತ No. 3. (My.).

ತದ್ಬಲ tad-bala. *A sort of arrow;* a sort of bow (ದಣ್ಡಾಸನ, ತೇಂ, ಬಿಲ್ಲ ಭೇದ Mr. 294).

ತದ್ಭವ tad-bhava. Born or coming from that (Śmd. 236). 2, a word corrupted from Saṁskṛita (Śmd. 334. 360. 375. 377. 383), (or from any other language).

ತದ್ಭಾವ tad-bhâva. The becoming that. 2, the substance, thing, or nature of that (Śmd. Dh. No. 67).

ತದ್ಯಮ (tad-yama). Kindness, gentleness, mildness, peaceable behaviour (ಸಾಮ Ćt. II, 49 in one MS.).

ತದ್ಲು tadlu. = ತದಲು. (My.).

ತದ್ವಚನ tad-vaćana. That speech or word. (Śmd. 100).

ತದ್ವತ್ tad-vat. *Having or containing that.* 2, *like that, in that manner, thus.* 3, also, likewise.

ತನ್ tan. 1. = ತಂ (ತಜ್), etc., ತನು. — ತನ್ನೆಲೆವುಳುಕ ಗಿಡ. -ಎಲೆ-ವುಳುಕ-. The herb or low shrub Crotolaria verrucosa Lin. (St. & Pl.).

ತನ್ tan. 2. = ತನ್ನ, ತಾ 1, ತಾಂ 1, ತಾನ್ q. v., ತಾನು. (Śmd. 178). Gen. ತನ (see ತನತು), Dat. ತನಗೆ (My.; Śmd. 133. 178; Nr.; Nn. 73; J. 8, 2; 28, 57; 29, 34; 30, 49; Bh. 1, 8, 8), ತನಿಗೆ (Si. 69. 264. 265. 267. 293), ತಂಗೆ. Plural ತಮ್ (ತಮ್ಮ). ತನಗೆ ಇಲ್ಲದ ಮಾರಿ ತಮ್ಮಡಿಗೆ ವರಾ ಕೊಟ್ಟೀತೇ?— ತನಗೆ ಬನ್ದ ಹಾನಿ ಅರ್ಥದಿನ್ದ ಹೋಯಿತು.— ತನಗೆ ಇಲ್ಲದವನು ಪರರಿಗೇನು ಕೊಟ್ಟಾನು?— ತನಗೆ ಇಲ್ಲ, ಕೂಸಿಗೆ ಏನು ಹೊದ್ದಿಸಲಿ?— ತನಗೆ ಇಲ್ಲದವಳು ಮಕ್ಕಳಿಗೇನು ಹೊದಿಸ್ಯಾಳು? (Prvs.). ನಾಳೆ ತಿಳುವಳಿಕೆ ಹುಟ್ಟಿತೆನ್ದರೆ ತನಗೆ ತಾನೇ ಇದೆಲ್ಲಾ ತುಣ್ಡುತನ ಕಡಿಮೆ ಆದೀತು (B. 4, 200). — ತನ ತನಗೆ. rep. (Bp. 10, 4; 18, 82; 57, 8; J. 13, 24). — ತನ್ದು. = ತನ್ನದು. (My.).

ತನ tana. An affix for forming true Kannaḍa words, *e. g.* ಕಲಿತನಂ, ಆಳ್ತನಂ, ಪೆಣ್ತನಂ (Śmd. 248); words like ಆರೋಹಕತನ are wrong formations (248).

ತನಕ tanaka. = (ಅನಕ), ತನ್ಕ. Up to that measure: till, until, as far as (C.; Tĕ. ದನಕ, ದಾಕಾ, ದಾಕ; M. ತನೆ, T. ತನ್ನೆ, quantity, number, measure). ಶನಿವಾರತನಕ (B. 1, 7). ಹುಡುಗರು ಹದಿನಾಱು ವರ್ಷದವರಾಗುವ ತನಕ (1, 12). ಇನ್ದಿನ ತನಕ (2, 33). ಅಯ್ನೂಱು ತನಕ (2, 42); ಕಡೆತನಕ (4, 197). ಇಷ್ಟು ದಿವಸತನಕ (4, 199). See Bp. 27, 22; 49, 18; 57, 12; 61, 57; B. 2, 6. 7; 3, 10. 67; 5, 59. 64. 72. 243; ಅಲ್ಲಿ-, ಇಲ್ಲಿ-, ಎಲ್ಲಿ-.

ತನಕಿ tanaki. Ascertaining; examination (My.; H. tanqih; Br. ತನಕಿ, ತನಕ್ಕಿ, ತನಿಖಿ).

ತನಖೆ tanakhĕ. An assignment on the revenues, an order for money; a standard rent-roll of villages (Mhr., H. ತನಖಾ; Br. ತನಖಾ, ತನಿಖಿ; R.).

ತನತು tanatu. ತನ-ಅತು. = ತನತ್ತು, ತನ್ನದು (Śmd. 178; Kk. 61). Its, hers. ನಿನತು ಬಲಮ್, ಎನತು ಶೌರ್ಯಂ, ತನತು ಮಹಾಧೈರ್ಯಮ್ ಅವನಿಪತಿಗೆ (Śmd. 179).

ತನತ್ತು tanattu. ತನ-ಅತ್ತು 1. = ತನತು, etc. (Śmd. 178; Ćt. II, 102). See Śmd. 179. 144.

ತನಯ tanaya. *A son.* Feminine ತನಯಳ್ = ತನಯೆ. (Bp. 4 sam.; 5, 5; 11, 38; 42, 17).

ತನಯೆ tanayĕ. *A daughter.*

ತನಿ tani. 1. To thrive, to develop, to become full-grown, etc. P. p. ತನಿತು (Ćpr. 3, 15).

ತನಿ tani. 2. The state of having thriven, full, strong, fully developed, complete, matured, abounding in agreeable qualities, rich, etc. (T. ತಣಿ, M. ತಱ³, Tĕ. ತನಿ, to thrive, prosper, grow, increase, become full or fleshy). — ತನಿಗಣ್ಡ. -ಕಣ್ಡ. A big piece of flesh (Abh. P. 13, after 54). — ತನಿಗನ್ಧ. = ತನಿಗಮ್ಮು. (J. 26, 8). — ತನಿಗಮ್ಮು. -ಕಮ್ಮು. A full or rich fragrance (Śmd. 77; Ćpr. 7, 49; Abh. P. 3, after 75; J. 3, 8; 15, 9). — ತನಿಗಬ್ಬು. -ಕಬ್ಬು. Juicy sugar-cane (V. 4, 29). — ತನಿಗಿಚ್ಚು. -ಕಿಚ್ಚು. A great, blazing fire (Abh. P. 11, 144). — ತನಿಗುದಿ. -ಕುದಿ. To be completely boiled (Bh. 1, 20, 54). — ತನಿಗುಳ್ಳ. (Si. 149). A kind of prickly nightshade. — ತನಿಗೆಣ್ಡ. -ಕೆಣ್ಡ. A glowing coal (Rśv. 5, 34; V. 30, after 35; J. 3, 32; 13, 12). — ತನಿಗೆದಱು. -ಕೆದಱು. 1. To be greatly or completely scattered (Bh. 8, 23, 20; Râm. 3, 6, 7). — ತನಿಗೆದಱು. -ಕೆದಱು. 2. The state of being profusely scattered (J. 9, 24). — ತನಿನಗೆ. Great laughter (Râm. 6, 10, 10). — ತನಿಪರಿಮಲ. = ತನಿಗಮ್ಮು. (Râm. 2, 7, 3). — ತನಿಬೀಜ. A seed full of vital power (Bh. 2, 13, 9). — ತನಿಬೆಲ್ಲ. Delicious jaggory (Bh. 1, 15, 7). — ತನಿಯೆಱೆ³. -ಎಱೆ³. To throw delicious food to snakes to appease them (My.; Bh. 8, 2, 15). — ತನಿರಸ. A superior fluid, essence; excellent taste or flavour; great beauty. ಕಾಳದೊಳಗೆ ಕಾಮುರ್ಗಿಲ ಅಂಜನವ ಕಲಿಸಿ ತನಿರಸದೊಳು ಪೊರಳ್ದ ನೀಲಪುತ್ರಿಕೆಗಳನ್ತೆ (Râghć. 17, 64). ಕುಱಿ' ಕಬ್ಬಿನೊಳು ಹೊಕ್ಕು, ಅಱಿ'ವದೇ ತನಿರಸವ, ಪೊಱಿಗಣ ಸೋಗೆಯುಗಿವನ್ತೆ? (Sp.). See J. 15, 47; 21, 57. — ತನಿವಣ್. -ಪಣ್. A fully ripe fruit. ನೇಱಿ'ಲ ತನಿವಣ್ಣಂ (Śmd. 85 Mḍb.). See Ćpr. 7, 88; Bp. 18, 16; 48, 11; Rśv. 2, 47; J. 3, 11. 31; 28, 20. — ತನಿವಣ್ಣು. = ತನಿವಣ್. (Bp. 20, 26). — ತನಿವಾಲ್. -ಪಾಲ್. Rich milk (V. 9, 107). — ತನಿವೀರರಸ. Great heroism (J. 8, 31; 12, 25; 13, 51; 23, 26). — ತನಿವೆಚ್ಚು. -ಪೆಚ್ಚು. To increase much (Ćpr. 3, 45). — ತನಿವೆಳಗು. -ಬೆಳಗು. A great or brilliant light or lustre (Bh. 2, 2, 1). — ತನಿವೇಟ. -ಬೇಟ. Various love-gestures (Rśv. 11, 93). — ತನಿವೇಸಿಗೆ. -ಬೇಸಿಗೆ. A very hot season (J. 15, 5). — ತನಿಸುಖ. Great pleasure or joy. ಅನಾತುರದೊಳು ಚೊಕ್ಕಟದ ತನಿಸುಖವ ಮುಕ್ಕಳಿಸುವ ಅನುಭವ (Ćidakhaṇḍânubhavasâra 1, 7). — ತನಿಸೂಱೆ³. Enormous plundering (Bh. 2, 4, 12). — ತನಿಸೊಬಗು. Great beauty (J. 6, 25). — ತನಿ ಸೋಂಕು. (or -ಸೊಂಕು). To cling to closely (Ćpr. 7, 94). — ತನಿಹರಕೆ. Great blessing or praising (Bh. 1, 7, 30). — ತನಿಹೞುಕು. A large piece (Bh. 2, 2, 103).

ತನು tanu. = ತಳುವು 2, ತನ್ 1, ತನುವು, ತಮ್ಮು. (My.).

ತನು tanu. *Thin, slender, emaciated; small, minute; delicate, fine.* 2, *the body; self.* 3, *the skin.* ತನುವಱಿ'ಯದ ನೋವಿಲ್ಲ, ಮನವಱಿ'ಯದ ಪಾಪವಿಲ್ಲ (Prv.). — ತನುಗಮ್ಮು. -ಕಮ್ಮು. Fragrance of the body (J. 6, 12).

ತನುಕರಣ tanu-karaṇa. An organ, or the organs, of the body (Bp. 4, 65).

ತನುಜ tanu-ja. *A son* (ತನುಜಾತ Mr. 309; ಮಗ Nn. 48. 92).

ತನುಜಾತ tanu-jâta. = ತನುಜ. (Mr. 309; ಬಾಲಿಶ, ಮಗ Nn. 131).

ತನುಜಾತೆ tanu-jâtĕ. = ತನುಜೆ. (J. 2, 51).

Digitized by Google

ತನುಜೆ tanu-jĕ. A daughter. See ಜನಕ-.

ತನುತರ tanu-tara. Thinner, more minute; uncommonly small or insignificant (Śsv. 2, 86).

ತನುತ್ರ tanu-tra. *Armour, mail.*

ತನುತ್ರಾಣ tanu-trâṇa. *Armour, mail.*

ತನುತ್ವ tanutva. Thinness, etc. See ಕಟಿಲ್.

ತನುಧನಪ್ರಾಣ tanu-dhana-prâṇa. Body, property and life (J. 17, 35).

ತನುಧರ್ಮ tanu-dharma. The right, merit, or nature, of the body (Bp. 42, 20).

ತನುಭವ tanu-bhava. = ತನುಜ. (Bp. 24, 62. 63).

ತನುಮಧ್ಯೆ tanu-madhyĕ. N. of a vṛitta (Ch.)

ತನುಮನಧನ tanu-mana-dhana. Body, mind and property (Bp. 1, 17; 2, 42; see ಅರ್ಥಪ್ರಾಣವಪುಸ್).

ತನುವಿಕಾರ tanu-vikâra. Gesticulation (ಅಂಗಹಾರ Mr. 75).

ತನುವಿದಾಹ tanu-vidâha. Burning or great heat of the body (Čpr. 4, 33).

ತನುವು tanuvu. = ತನು, etc. (My.).

ತನುಸಮ್ಭವ tanu-sambhava. = ತನುಭವ. (J. 2, 35).

ತನೂಕರಣ tanû-karaṇa. Making thin or fine, attenuation, diminishing, weakening; paring. See ಒರೆ; ಕೆತ್ತು.

ತನೂಕೃತ tanû-kṛita. *Made thin; pared.*

ತನೂಜ tanû-ja. = ತನುಜ. (Ch. v. 11; Čpr. 2, after 53; Bp. 2, 3; 25, 25).

ತನೂಜೆ tanû-jĕ. = ತನುಜೆ. See Čpr. 5, 102; Bp. 4, 32; ಶೈಲರಾಜ-.

ತನೂದರಿ tanu-udari. Having a thin, delicate belly (Ch. v. 89; Čpr. 7, 139).

ತನೂನಪಾತ್ tanû-napât. The son or descendant of himself: *Agni.*

ತನೂನಪಾತ tanû-napâta. = ತನೂನಪಾತ್. (Mr. 46).

ತನೂಭವ tanû-bhava. = ತನುಭವ. (ಮಗ Nn. 126; Śmd. 227).

ತನೂರುಹ tanû-ruha. *The hair of the body; the wing of a bird.*

ತನೆ tanĕ. = ಜನೆ, ಕೆನೆ 2, ಸೆನೆ. The embryo of beasts; pregnancy (ಪ್ರಜನ, ಉಪಸರ Nr.; *cf.* Sk. ಘನ, the fetus in its second month). ತನೆ ಕರಗಿದ ಆಕಳು (ಸ್ರವದ್ಗರ್ಭ, ಅವತೋಕೆ Nr.). ತನೆಯ ಆವು (ಪ್ರಷ್ಠೌಹಿ, ಗರ್ಭಿಣಿ Hlâ.). ತನೆ ಬಲಿಯೆ ಪಲಿಕ್ಷ ಎನಿಸುಗು; ತನೆ ನಿಲಲು ಪ್ರಷ್ಠೌಹಿ (Mr. 180). See ಎಳದನೆ.

ತನ್ಕ tanka. = ತನಕ. (My.).

ತನ್ತರ tantara. Tbh. of ತನ್ತ್ರ. (My.). ತನ್ತ್ರರವಿದ್ದವನಿಗೆ ಮನ್ತ್ರರಬೇಡ (Prv.).

ತನ್ತಿ tanti. Tbh. of ತನ್ತ್ರಿ. (My.; Si. 61; B. 4, 97. 124. 157; B. 5, 219). — ತನ್ತಿಟಪ್ಪಾಲು. The telegraph (My.).

ತನ್ತಿಮೇಹ tanti-mêha. = ತನ್ತುಮೇಹ. (My.).

ತನ್ತಿರ tantira. Tbh. of ತನ್ತ್ರ. (My.).

ತನ್ತಿವಾದ್ಯ tanti-vâdya. A wire or stringed instrument. ತನ್ತಿವಾದ್ಯವನ್ನು ತಕ್ಕೆಯ್ಸಿ ಕೇಳಿದ ಹಾಗೆ (Prv.).

ತನ್ತು tantu. = ತನ್ದಿತು. Third person singular imperfect of ತರು (C.). ಕೇಳದ ಕಿವಿ ಊರಿಗೆ ಮಾರಿಯ ತನ್ತು.— ಬುದ್ಧಿಯಿಲ್ಲದ ಮುಕ್ಕ ಇದ್ದವರಿಗೆಲ್ಲ ಕೇಡು ತನ್ತು.—ಕೋಪ ಪಾಪಾ ತನ್ತು, ತಾಪ ಬ್ರಹ್ಮೇತಿ ತನ್ತು (Prvs.). See Prv. s. ನಾಯಿ.

ತನ್ತು tantu. 1. *A thread, a string, a cord;* a filament or fibre; wire (ತನ್ತ್ರ, ನೂಲು Nn. 75; ಗುಣ, ನೂಲು 78; ನೂತ ನೂಲ ಎಬಿ Mr. 530; ಸಾರಸದ ನಾಳದ ಎಬಿ 421; ಪುರಿ Šm. 106; ಎಬಿ 112). — ತನ್ತುಹಾರುವ. A cord-Brâhmaṇa, a Brâhmaṇa whose only merit is his sacrificial thread (Bp. 55, 33).

ತನ್ತು tantu. 2. Tbh. of ತನ್ತ್ರ. (ಬಲುತನ್ತ್ರ, ಪರಿಗ್ರಹ Mr. 530; My.; Tĕ.). ಆಚಾರಮಾರ್ಗತನ್ತುವನ್ ಅಱಿವನ್ ಅವನೊರ್ವಂ (ಬ್ರಹ್ಮವರ್ಚಸ Mr. 248).

ತನ್ತುಕರಣ tantu-karaṇa. Making thread. See ನೂಲ್.

ತನ್ತುಕ್ರಿಯೆ tantu-kriyĕ. Working in thread; weaving. See ಕೆಚ್ಚು, ನೆಯ್.

ತನ್ತುಗಾಱ tantu-gâṛa. = ತನ್ತ್ರಗಾಱ. A cunning, crafty, trickful man (My.). ತನ್ತುಗಾಱಗೆ ಯಾಕೆ ತನ್ತಿಯಾಟ? (Prv.).

ತನ್ತುಗ್ರನ್ಥಿ tantu-granthi. A knot in a thread. See ಕಿಂ.

ತನ್ತುನಾಗ tantu-nâga. A shark. (R.).

ತನ್ತುನಾಭ tantu-nâbha. A spider (Tĕ., R.).

ತನ್ತುಪಟ tantu-paṭa. Cotton-cloth (Râm. 5, 8, 24).

ತನ್ತುಭ tantu-bha. *Mustard seed, Sinapis dichotoma* Roxb.

ತನ್ತುಮಾತ್ರ tantu-mâtra. Nothing but (the sacrificial) cord, only in the- -. ತನ್ತುಮಾತ್ರ ಬ್ರಾಹ್ಮಣ್ಯಂ (Prv.). 2, a thread, a string. See ಎಬಿ, ನೂಲ್.

ತನ್ತುಮೇಹ tantu-mêha. = ತನ್ತಿಮೇಹ. A particular stage of gonorrhoea (My.).

ತನ್ತುರ tantura. Tbh. of ತನ್ತ್ರ (Śmd. 336 Mdb.).

ತನ್ತುವಾಯ tantu-vâya. *A weaver.* 2, *a spider.* 3, weaving. 4, a loom (ಮಗ್ಗ Mr. 383).

ತನ್ತುವಾಯಕ್ರಿಯೆ tantuvâya-kriyĕ. A certain work done by a weaver. See ಕೆಚ್ಚು.

ತನ್ತ್ರ tantra. = ತತ್ರ 2, ತನ್ತರ, ತನ್ತಿರ, ತನ್ತು 2, ತನ್ತುರ. *A thread, a string* (ತನ್ತು, ನೂಲು Nn. 75). 2, *weaving;* a loom. 3, *raiment, vesture* (ಪರಿಧಾನ, ಹೊದಕೆ 75). 4, the leading or principal action of a ceremony, characteristic or prevalent features, the regular order of ceremonies or rites, system, ritual, rule. 5, *an established doctrine, a scientific treatise; a system.* 6, *magical and mystic formularies.* 7, *a medicament, a drug;* a charm. 8, an expedient, a design, a stratagem, as sowing dissension (ಉಪಾಯ 75; ಭೇದ, ತನ್ತ್ರಭೇದ 62; *cf.* ಪಂಚ-); cunning, trick, intrigue, plot. 9, an oath or ordeal, curse, imprecation; designing, plotting (see Mr. s. ತನ್ತು 2). 10, *royal retinue, a court, train;* an assembly (ವಿಧಾನ, ಕೂಟ 75). 11, *an army* (ಸೇನೆ 75). 12, a division of class or caste (ಕುಲಭೇದ 75). 13, decoration (ಸಿಂಗರ, ಶೃಂಗಾರ 75). 14, *the quality of being chief or principal* (ಪ್ರಧಾನ, ಮುಖ್ಯ 75). 15, the highest truth, real truth, reality, certainty (ಪರಮಾರ್ಥ, ನಿಶ್ಚಯ 75).—ಮನ್ತ್ರವಿದ್ದರೂ ತನ್ತ್ರವಿರ ಬೇಕು.—ತನ್ತ್ರವನಱಿಯೆನು, ಮನ್ತ್ರವನಱಿಯೆನು, ಯನ್ತ್ರವನಱಿಯೆನು ಎನ್ದೆನ ಬೇಡ! (Prvs.). See Prv. s. ಮನ್ತ್ರ; ಯನ್ತ್ರತನ್ತ್ರ. — ತನ್ತ್ರಮ್ಬೆರಸು. -ಂಬೆರಸು. Expedients, etc. to be combined with (Bp. 54, 75).

ತನ್ತ್ರಕ tantraka. *New and unbleached, as cloth.*

ತನ್ತ್ರಗಾಱ tantra-gâṛa. = ತನ್ತುಗಾಱ. A man who uses an expedient, one who is fertile in expedients; a cunning, crafty man (My.). ತನ್ತ್ರಗಾಱನನ್ನು ಕುತನ್ತ್ರಗಾಱ ಜಯ್ಸಿದ (Prv.).

ತನ್ತ್ರಾಧ್ಯಕ್ಷ tantra-adhyaksha. A master of ceremonies (Rsv. 6, after 10 & 43). 2, a general (Čpr. 10, after 1).

Digitized by Google

ತನ್ತ್ರಿ tantri. = ತನ್ತಿ. *A string, a cord; a wire; the string or wire of a lute, etc.* 2, a pûjâri. See Prv. s. ಮನ್ತ್ರಿ.

ತನ್ತ್ರಿಕೆ tantrikĕ. *The plant Cocculus cordifolius* DC.

ತನ್ತ್ರಿಸು tantrisu. To use an expedient, etc. See Nn. 147 s. ತ್ರಾಸ.

ತನ್ದನತಾನ tandana-tâna. = ತನ್ದನಾನ, ತನ್ದಾನತಾನ, ತನ್ದಾನತಾನಾನ. Sounds used in beating time in music (My.; Tĕ.; M. ತತ್ತಿತ್ತೋಣ್ಣ, ತನ್ದಿನಾದಿ; *cf.* ಣತ್ತಡಗಡ್ಡೈಡಣ, ತದಿಗಿಣ; Mhr. ತಣಾಣಾ).

ತನ್ದನಾನ tandanâna. = ತನ್ದನತಾನ. (My.).

ತನ್ದಲ್ tandal. (Šmd. 48. 58). Water-drops, spray, light rain (ಸೀವರ, ಜಲಕಣ Kk. 13; Šm. 85; ಸೋನೆ Čt. I, 101; II, 113; Čpr. 1, 97; 2, 86; 5, after 19; Abh. P. 3, after 67; 4, 119; *cf.* ಜಡಲು).

ತನ್ದಾನತಾನ tandâna-tâna. = ತನ್ದನತಾನ. (My.).

ತನ್ದಾನತಾನಾನ tandâna-tânâna. = ತನ್ದನತಾನ. (My.).

ತನ್ದು tandu. 1. P. p. of ತರ್, ತರು.

ತನ್ದು tandu. 2. See s. ತನ್ 2.

ತನ್ದೂರಿಸು tandûrisu. = ತಾನ್ದುರಿಸು, ತಾನ್ದೂಳಿಸು. To grieve, to be distressed (ಚಿನ್ತಿಸು, ಬೇವಸ Kk. 52, o. rs. ತಾನ್ದುರಿಸು, ತಾನ್ದೂಳಿಸು).

ತನ್ದೆ tandĕ. Father (C.; ಜನಕ, ಪಿತೃವಪ್ಪ ತಾತ Mr. 309; ಅವುಕ Hlâ., Si. 65; ಪಪ್ಪು, ತಾತ, ಜನಕ, ಪಿತೃ Hlâ., Si. 190; M.; T. ತನ್ದೈ; Tĕ. ತಣ್ಡ್ರಿ, ತಡ್ಡಿ; it is said to be a Tbh. of Sk. ತಾತ, Šmd. 338. 356. 372; *cf.* vêdic ತತ, father). Occasionally it is an endearing appellation (like ಅಪ್ಪ), *e. g.* Bp. 47, 29; J. 13, 55. Plural ತನ್ದೆವಿರ್, ತನ್ದೆಗಳ್ (Šmd. 120. 124), ತನ್ದೆಯರ್ (Bp. 32, 42; 48, 36), ತನ್ದೆಗಳು (C.). ಪ್ರಸಿದ್ಧನಪ್ಪ ತನ್ದೆಗೆ ಪುಟ್ಟಿದಾತನು (ಆಮುಷ್ಯಾಯಣ Hlâ.). ತಾತನ ತನ್ದೆ (ಪ್ರಪಿತಾಮಹ, ಮುತ್ತಾತ Si. 192). ತನ್ದೆಗೆ ಒಳ್ಳೆಯವ ಎನ್ದ ಹೇಳಿಸಿದ ಅಮ್ಮಿಗನ ಮಗ.— ತನ್ದೆಯ ಮದಿವೆಗೆ ಪಂಜು ಹಿಡಿಯುವ ಮಗ.— ಅರಸ ಯಾರಿಗೆ ತನ್ದೆ? ಸೂಳೆ ಯಾರಿಗೆ ತಾಯಿ?— ತನ್ದೆಯ ಬದುಕು ತಾಯಿಗೆ ದಾನ.— ತನ್ದೆಯ ಹೋಲೋ ಕನ್ದಯ್ಯ (Prvs.). See ಮಲ-; Bp. 60, 60; B. 1, 28; Râm. 3, 2, 15; J. 13, 55; 30, 24; 31, 34; Rsv. 13, 26; Bh. 1, 8, 17; Prvs. s. ನೊಗ, ಪಿತ. — ತನ್ದೆಗೆ ತನ್ದೆ. A paternal grandfather (ಪಿತಾಮಹ, ತಾತ Si. 192). — ತನ್ದೆಗೆ ಪಿತಾಮಹ. A paternal great-grandfather (ಪ್ರಪಿತಾಮಹ, ತಾತನ ತನ್ದೆ, ಮುತ್ತಾತ Si. 192). — ತನ್ದೆತಾಯ್. Father and mother (Bp. 46, 48). — ತನ್ದೆ ತಾಯಿಗಳ್. -ಳು. Parents (Bp. 3, 81; 14, 16; 25, 15; My.). ತನ್ದೆ ತಾಯಿಗಳ ಮಾತು ಕೇಳದ ಮಕ್ಕಳು ನಾಯಿಪಾಯಿಗೆ ಹಸ್ತ (Prv.). — ತನ್ದೆ ತಾಯ್ಗಳ್. = ತನ್ದೆ ತಾಯಿಗಳ್. (J. 28, 17). ತನ್ದೆ ತಾಯ್ಗಳು (ಮಾತಾಪಿತೃಗಳು Nr.). — ತನ್ದೆಯ ತನ್ದೆ. = ತನ್ದೆಗೆ ತನ್ದೆ. (ಪಿತಾಮಹ, ತಾತ Nn. 22; B. 4, 156). 2, Brahmâ (ಬೊಮ್ಮ Kk. 9). — ತನ್ದೆಯ ತನ್ದೆಯಿಲ್ಲದ. = ತನ್ದೆಯಯ್ಯನಿಲ್ಲದವ, q. v. — ತನ್ದೆಯಯ್ಯ. -ಅಯ್ಯ. = ತನ್ದೆಯ ತನ್ದೆ. — ತನ್ದೆಯಯ್ಯನಿಲ್ಲದವ. Gaṇêśa (ವಿನಾಯಕ Kk. 5, o. r. ತನ್ದೆಯ ತನ್ದೆಯಿಲ್ಲದ). — ತನ್ದೆಯೊಡಹುಟ್ಟಿದವ. A paternal uncle (ಪಿತೃವ್ಯ, etc. Nr.). — ತನ್ದೆವಾದಿ. Relationship by a father's side (My.).

ತನ್ದ್ರ tandra. Tired, fatigued; lazy. (R.).

ತನ್ದ್ರತೆ tandratĕ. = ತನ್ದ್ರಿ. (Čpr. 4, 85).

ತನ್ದ್ರಿ tandri. ತನ್ದ್ರೆ tandrĕ. *Fatigue, lassitude;* sleepiness, drowsiness; *fainting, exhaustion.*

ತನ್ನ್ tann. = ತನ್ 2, (ತನ್ನು), etc., ತಾನ್, q. v. Gen. ತನ್ನ (C.); Dat. ತನಗೆ (C.); Acc. ತನ್ನಂ (J. 18, 39), ತನ್ನನ್ನು (My.); Loc. ತನ್ನೊಳ್ (J. 29, 40), ತನ್ನಲ್ಲಿ (C.); Abl. ತನ್ನಿನ್ದ (C.). Pl. (ತಮ್), ತಮ್ಮ್.— ತನ್ನ ಕಾಲಿಗೆ ತಾನೇ ಶರಣು ಮಾಡಿ ಹರಸಿ ಕೊಣ ಹಾಗೆ.— ತನ್ನ ಅಕ್ಕನ ಅರಿಯದವಳು ನೆರಮನೆಯ ಬೊಮ್ಮಕ್ಕನ ಬಲ್ಲಳೇ?— ತನ್ನ ತಾನರಿದರೆ ಸುಜ್ಞಾನಿ.— ತನ್ನ ದನ್ತಾ ತಾನು ಮುದಿ ಕೊಣ್ಡು ಅನ್ಯನ ಮೇಲೆ ದೂರು ಹೇಳಿದ.— ತನ್ನ ಮನೆ ಉಪ್ಪ ಇಲ್ಲ; ಬೆನ್ನ ಹಿನ್ದೆ ಉರಿಯೋ?— ತನ್ನ ಸುಖವೇ ಲೋಕದ ಸುಖ, ತನ್ನ ಕಷ್ಟವೇ ಲೋಕದ ಕಷ್ಟ.— ತನ್ನ ಹೊಟ್ಟೇ ತಾನು ಹೊರೆಯದವ ಮುನ್ನಾರ ಸಲಹುವನು?— ತನ್ನ ಊರಿಗೆ ರಂಗ, ಪರಊರಿಗೆ ಮಂಗ.— ತನ್ನ ತಾನು ಅರಿತರೆ ತಾನಾದನು; ತನ್ನ ತಾನು ಮರೆತರೆ ತಾನು ಹೋದಾನು (Prvs.). — ತನ್ನದು. -ಅದು 1. = ತನ್ದು 2, ತನತು, ತನತ್ತು. Its, his, hers (Šmd. 178; Čt. II, 102; Bp. 51, 22; C.). — ತನ್ನಳ್. -ಅಳ್ 4. His, etc. own female or woman (V. 29, 28).

ತನ್ನಿ tanni. Second person plural of the imperative of ತರ್, q. v.

ತನ್ನು tannu. Perhaps = ತನ್ನ್ (but see ಉವಂ 2). — ತನ್ನುವಂ. Himself, herself, itself (Acc.; or: also him, etc.). ತನ್ನುವನ್ ಅಡಿಸುವ ಕೆಳದಿಯರ ತಣ್ಣವನು ಹೆಮ್ಮೆಗೊಳಿಸುತ (Prll. 3, 30). See Bp. 8, 7. 57; 39, 11; 40, 10; 44, 3; 55, 34.

ತನ್ಮಧ್ಯ tad-madhya. In its middle: meanwhile (My.).

ತನ್ವಿ tanvi. A delicate, slender, or graceful woman. (J. 11, 26). 2, N. of a vritta (Čh.).

ತಪ tapa. = ತಪ್ಪ 1, ತೊಪ, ತೊಪ್ಪ, (ದಪ 1, ದೊಪ್ಪ 2). A sound in imitation of the noise of blows, of running feet, of falling cow-dung, fruits, etc. — ತಪ ತಪ. rep. (My.; Tĕ.). — ತಪ ತಪನೆ. = ತಪ ತಪ. With the sound of ತಪ ತಪ (My.).

ತಪ tapa. = ತವ 2. Heat; burning; shine (ದಾವ Nn. 33). 2, *the hot season.* 3, the month of mâgha (January-February, ತಪಸ್ Mr. 70). 4, austerity, penance. 5, a demon (ಗ್ರಹ Nn. 33). ತಪದ ಬಾಧೆಯಂ ಸಯ್ರಿಸುವಾತನು (ದಾನ್ತ Hlâ.). — ತಪಗೆಯ್. To perform or undergo penance. ತಪಗೆಯ್ದು ಮುಖ್ಯಮುಷಿಯರ್ (Mr. 258). — ತಪಂಗೆಯ್. -ಂ-ಗೆಯ್. = ತಪಗೆಯ್. (Abh. P. 15, after 80; Šsv. 2, 89). — ತಪಂಗೊಳ್. -ಂ-ಕೊಳ್. To undertake penance (Abh. P. 16, after 34). — ತಪಮಾನ್. -ಅನ್. = ತಪಂಗೊಳ್. (Šsv. 2, 116). — ತಪವಿರ್. -ಇರ್. = ತಪಂಗೆಯ್. (Šsv. 2, 115. 117). — ತಪಪ್ಪಡು. -ಪಡು. = ತಪಗೆಯ್. (Bp. 4, 73). — ತಪಪ್ಪುಡುಹ. -ಪಡುಹ. Ascetic devotion, religious austerity (ಪರಿವ್ರಜ್ಯೆ, etc. Hlâ.).

ತಪಃಕ್ಲೇಶಸಹ tapas-klêśa-saha. *Enduring with resignation the privations imposed by austerities.*

ತಪಃಪ್ರಭಾವ tapas-prabhâva. The efficacy of devotion. (Čpr. 2, 82).

ತಪಕ್ಕನೆ tapakkanĕ. = ದಬಕ್ಕನೆ. All at once, slapdash (My.; Tĕ. ತಟುಕು, ತಟುಕ್ಕು). ತಪಕ್ಕನೆ ಬಿದ್ದನು (My.).

ತಪಟೆ tapaṭĕ. = ತಪ್ಪಟೆ, ತಬಟೆ, ತಮಟೆ, ತಮ್ಬಟ, ತಮ್ಬಟೆ, ತಮ್ಬಟ್ಟ, ತಮ್ಮಟ, ತಮ್ಮಟೆ. A large tambourine beaten with sticks (My.).

ತಪನ tapana. Heating; burning; shining. 2, *the sun.* 3, *a kind of hell.* 4, a divine being or demon who fights with Garuḍa (ಗ್ರಹ Nn. 490). 5, pining, mental distress.

ತಪನಸುತ tapana-suta. The son of the sun: Karṇa (J. 12 sum.). 2, Yama. 3, Šani. 4, Sugrîva (My.).

Digitized by Google

ತಪನಸುತನನ್ದನ tapanasuta-nandana. Karṇa's son Vrishakêtu (J. 12 sum.).

ತಪನೀಯ tapanîya. To be heated. 2, *gold.*

ತಪಪಕ್ಷಿ tapa-pakshi. The Bengal kite (ಚಿಲ್ಲ, ಮುಣ್ಣುಮುಳು ಕ Mr. 171, o. r. ಅತಪ-).

ತಪರಾಖು taparâkhu. A slap (Mhr. ಥಪಡಾಕ, ಥಬರಾಕ; My.).

ತಪಲೆ tapalĕ. = ತಪ್ಪಲೆ, ತಪೇಲಿ. A round brass or copper cooking-vessel (My.; Tĕ. ತಪೆಲಿ, ತಪೇಲಾ; T. ತವಲೈ; M. ತಗಲೆ, ತವಲೆ; Mhr. ತಪೇಲೇಂ). See Prv. s. ತೆಬಿಪು.

ತಪಲೋಕ tapa-lôka. = ತಪಸ್ No. 4, ತಪೋಲೋಕ. (Mr. 32).

ತಪವೇಸ tapa-vêsa. Tbh. of ತಪವೇಶ. A mere masquerade of penance. — ತಪವೇಸಗೊಳ್. -ಕೊಳ್. To put on the mere form of penance. ಬ್ರಾಹ್ಮಣರೊಳು ತಪವೇಸಗೊಪ್ಪುವಂ (ಧರ್ಮಧ್ವಜ, ಲಿಂಗವೃತ್ತಿ Mr. 254).

ತಪಶೀಲು tapaśîlu. ತಪಸೀಲು. A detailed account, details, a minute narration (My.; ವಿವರ Čb. 132; Br.; Mhr., H. ತಪಸೀಲ).

ತಪಶ್ಚರಣ tapas-čaraṇa. The practice of penance (My.).

ತಪಶ್ಚರಣೆ tapas-čaraṇĕ. = ತಪಶ್ಚರಣ. (My.; Bp. 12, 29).

ತಪಶ್ಚರ್ಯ tapas-čarya. = ತಪಶ್ಚರ್ಯೆ. (My.; Čb. 41).

ತಪಶ್ಚರ್ಯೆ tapas-čaryĕ. = ತಪಶ್ಚರಣ. (My.).

ತಪಶ್ರೀ tapa-śrî. The goddess called tapa (Čpr. 2, 40).

ತಪಶ್ರೀಕ tapa-śrîka. A man possessing excellent austerity or being rich in austerity (Čpr. 3, 70).

ತಪಸ್ tapas. = ತಪಸು, ತಪಸ್ಸು. Heat; fire. 2, *austerity, penance.* 3, *the month of mâgha* (January-February). 4, one of the seven worlds, the region above the janalôka, inhabited by saints or devotees after death. 5, the ninth lunar mansion.

ತಪಸಿ tapasi. ತಪಸ್ಸಿ, (ತಪ್ಪಸಿ), ತವಸಿ. Tbh. of ತಪಸ್ವಿ (Śmd. 368; ಋಷಿ Kk. 33, o. r. ತವಸಿ). — ತಪಸಿಗಿಡ. = (ತಪ್ಪಸಿ-), ತವಸಿಮರ. The plant Caesalpinia bonducella Flemm., (Guilandina bonducella or bonduc Lin., see ಗಜುಗ; ಪ್ರಕೀರ್ಯ, ಪೂತಿಕ, ಕಲಿಕಾರಕ Si. 133). See ನವುಲಿಗಿಡ.

ತಪಸಿಗ tapasiga. An ascetic or religious mendicant (Bp. 43, 28).

ತಪಸು tapasu. Tbh. of ತಪಸ್. (Bp. 45, 36).

ತಪಸ್ಯ tapasya. *The month phâlguna* (February-March). 2, = ತಪಸ್ಯೆ.

ತಪಸ್ಯೆ tapasyĕ. *Religious penance, mental devotion.*

ತಪಸ್ವಿ tapasvi. = ತಪಸಿ, etc. *Practising austerities; an ascetic, a religious mendicant* (ಯತಿ Nn. 109). 2, a mendicant, a pauper. 3, *poor, miserable, pitiable* (ಕರುಣ 109). 4, the flower Artemisia indica (ದವನ, ಋಷಿಪುತ್ರಿ Mr. 136). 5, fire (ದಹನ, ಅಗ್ನಿ 109). 6, a kind of Pongamia glabra tree (ಕುಜಾತಭೇದ, ವೃಕ್ಷಭೇದ 109).

ತಪಸ್ವಿನಿ tapasvini. A female devotee (J. 15, 16); a poor wretched woman. 2, *spikenard, Valeriana jatamansi.*

ತಪಸ್ಸಿ tapassi. = ತಪಸಿ, etc. (Bp. 32, 52. 58).

ತಪಸ್ಸು tapassu. Tbh. of ತಪಸ್. (ದಾವ, ತಪ Nn. 66; ವರ್ಣ, ತಪ 71). ತಪಸ್ಸಿಗೆನ್ತ ಹೋಗಿ, ಕುಪ್ಪಸಾ ಕಳಕೊಣ್ಡ.— ತಪಸ್ಸು ಇದ್ದವನೇ ಗಭಸ್ತಿ ಉಳ್ಳವನು (Prvs.).

ತಪಾತ್ಯಯ tapa-atyaya. The end of the heat: *the rainy season.*

ತಪಾಲು tapâlu. = ಟಪಾಲು, etc. (My.).

ತಪಿತ tapita. Heated, burnt, spoiled. ತಪಿತೆ, a spoiled, ruined woman (J. 5, 61).

ತಪಿಸು tapisu. = ತವಿಸು. To be hot, to burn; to suffer pain (J. 17, 34; 23, 20; My.).

ತಪೇಲಿ tapêli. = ತಪಲೆ, etc. (ಕುಣ್ಡ, ಪಿಠರ, ಸ್ಥಾಲ G.; B. 2, 24; 3, 58).

ತಪೋಧನ tapas-dhana. Rich in penance; ascetic, pious; richness in austerities; an ascetic, a devotee. (Čpr. 9, 21; Bp. 16, 6; 19, 79; 24, 30; 52, 3; J. 2, 30).

ತಪೋಧನನಿಧಿ tapôdhana-nidhi. An ocean of austerity-riches (Bp. 52, 5).

ತಪೋನಿಧಿ tapas-nidhi. A treasury of austerities and penance, an eminently pious man. See ತಪನಿಧಿ; J. 2, 15.

ತಪೋಬಲ tapas-bala. The power acquired by austerities (J. 10, 45).

ತಪೋಭರ tapas-bhara. A mass of austerities (Čpr. 4, 16).

ತಪೋರಾಜ್ಯ tapas-râjya. The empire or reign of austerities (Čpr. 2, 41).

ತಪೋಲಕ್ಷ್ಮಿ tapas-lakshmi. The riches of austerities (Čpr. 4, 60).

ತಪೋಲೋಕ tapas-lôka. = ತಪಲೋಕ. (My.).

ತಪೋವನ tapas-vana. A penance-grove. (Čpr. 4, 15).

ತಪೋವೃದ್ಧ tapas-vriddha. Very ascetic or pious. (J 32, 10).

ತಪೋವೇಶ tapas-vêśa. = ತಪವೇಸ. — ತಪೋವೇಶಗೊಳ್. -ಕೊಳ್. = ತಪವೇಸಗೊಳ್. ತಪೋವೇಶಗೊಣ್ಡವನು (ಧರ್ಮಧ್ವಜ, ಲಿಂಗವೃತ್ತಿ Hlâ.).

ತಪೋವೇಷಿ tapas-vêshi. He who has the garb of an ascetic on; a hypocritical ascetic (Bp. 24, 40).

ತಪ್ತ tapta. Heated; hot; burnt; afflicted. See ಸನ್-; Bp. 50, 42; J. 11, 31. 32. 40.

ತಪ್ತಮುದ್ರಾಂಕನ tapta-mudrâ-aṅkana. Branding (the upper arm) with a hot seal (on which there is either a śaṅkha or čakra, My.).

ತಪ್ತೃ taptri. Heating; a heater. See ಉಪ-.

ತಪ್ಪ tappa. 1. = ತಪ, etc. — ತಪ್ಪ ತಪ್ಪನೆ. = ತಪ ತಪನೆ. (My.).

ತಪ್ಪ tappa. 2. Present relative participle of ತವು 1, q. v.

ತಪ್ಪ tappa. 3. = ತರ್ಪ. A present relative participle of ತರ್, *e. g.* Bp. 13, 13; 26, 6; 30, 9; 53, 22.

ತಪ್ಪ tappa. 4. = ತಪ್ಪಲ್ 2. See ತಪ್ಪ ತಪ್ಪಲ್ s. ತಪ್ಪಲ್ 2.

ತಪ್ಪಟೆ tappaṭĕ. = ತಪಟೆ, etc. (My.; Tĕ. ತಪ್ಪೆಟ; M. ತಪ್ಪಿಟ್ಟ).

ತಪ್ಪಡಿ tappaḍi. See s. ತಪ್ಪ 2.

ತಪ್ಪಣ tappaṇa. Tbh. of ತರ್ಪಣ, q. v.

ತಪ್ಪನೆ tappanĕ. = ತಪ್ಪ 1, (ತೊಪ್ಪನೆ 2). Quickly, suddenly, all at once (My.; Tĕ. ತಪ್ಪನ, ತಪ್ಪನೆ, ದಬ್ಬುನೆ; M. ತರುತ್ತನೆ). ತಪ್ಪನೆ ಬಾ! ಅನ್ದರೆ ತಬ್ಬಲಿಕ್ಕೆ ಬನ್ದ ಹಾಗೆ (Prv.).

ತಪ್ಪಲ್ tappal. 1. Stumbling; erring; missing. — ತಪ್ಪಲಡಿ. -ಅಡಿ. A staggering, tottering, or false step (Bp. 44, 2). — ತಪ್ಪಲೆಚ್ಚಂ. -ಎಚ್ಚಂ. A man who misses the mark in shooting (ಲಕ್ಷ್ಯಚ್ಯುತ Mr. 296).

ತಪ್ಪಲ್ tappal. 2. = ತಪ್ಪಲ 1, ತಪ್ಪಲು q. v., ತಪ್ಪಿಲ್. A level expanse round the foot of a mountain,

Digitized by Google

level ground on the top or edge of a mountain, table-land. ವನಮ್ ಅದು ಆ ಗಿರಿಯ ತಪ್ಪಲಲೊಪ್ಪಿ ತೀವಿರಲ್ ಉಪತ್ಯಕನಾಮಮ್ ಅಕ್ಕುಂ (Mr. 151). ತಪ್ಪಲ್ಗಳ್ (see s. ಕಿಕ್ಕಿಱ್ 1). See J. 10, 3; 26, 4; Rsv. 5, 53; ರನ್ನದಪ್ಪಲ್. — ತಪ್ಪ ತಪ್ಪಲ್. rep. (J. 28, 41).

ತಪ್ಪಲ tappala. 1. = ತಪ್ಪಲ್ 2, etc. (B. 4, 213). — ತಪ್ಪಲ ಸೀಮೆ. A table-land (B. 4, 115. 116. 163).

ತಪ್ಪಲ tappala. 2. = ತೊಪ್ಪಲ, etc. See ಮುಷ್ಟಿ-.

ತಪ್ಪಲು tappalu. = ತಪ್ಪಲ್ 2, etc. (ಸ್ನು, ಪ್ರಸ್ಥ, ಸಾನು Nr.; My.). ಬೆಟ್ಟದ ತಪ್ಪಲು (ಕಟಕ, ಸಾನು, ಪ್ರಸ್ಥ Nr.; ಶೀಟ, ಗಿರಿಸಾನು Nn. 23; ಸಾನು 90; ಕಟಕ, ಪರ್ವತೋಪತ್ಯಕ 127; ಕಕುದ, ಅದ್ರಿತಟ 143; ಕೂಟ, ಮೇಖಲೆ 152, o. r. ಬೆಟ್ಟದ ತುದಿ).

ತಪ್ಪಲೆ tappalĕ. = ತವಲೆ, etc. (My.). ತಪ್ಪಲೇಲಿ ಇದ್ದದ್ದು ಹೋದರೆ ಕಪಾಲದಲ್ಲಿ ಇದ್ದದ್ದು ಹೋದೀತೇ? (Prv.). ತಮ್ಬಿಗೆಯು ತಪ್ಪಲೆಯು ಅವು ತಾಮ್ ಉಮ್ಬುದಕೆ ಕುಡಿವದಕೆ ದಾಹವು (Jns. 42, 14).

ತಪ್ಪಸಿ tappasi. (= ತವಸಿ, etc.). — ತಪ್ಪಸಿಗಿಡ. The wild mangosteen, Diospyros embryopteris Pers. (St. & Pl.).

ತಪ್ಪಳಿಸು tappaḷisu. = ಚಪ್ಪಳಿಸು. (My.).

ತಪ್ಪಿತ tappita. = ತಪ್ಪು 2. (My.).

ತಪ್ಪಿಸು tappisu. To cause to miss; to cause to pass by or not to fall into; to let slip; to leave undone; to interrupt; to do without; to avert; to deviate; to swerve; to evade; to resort to subterfuges; to elude; to avoid; to escape, to run away, etc. (C.). ತಪ್ಪಿಸಿ ಕೊಣ್ಡು ಓಡಿ ಹೋಗುವಿಕೆ (ಪ್ರದ್ರಾವ, ಉದ್ದ್ರಾವ, ಅಪಯಾನ, etc. Si. 296). ಸಾಲೆಗೆ ಹೋಗುವದನ್ನು ತಪ್ಪಿಸ ಬಾರದು (B. 1, 12). ಕುಱುಮಱಿ ಕುಮಿಬನ ಕಣ್ಣು ತಪ್ಪಿಸಿ ಅಡವಿಗೆ ಹೋಯಿತು (2, 46). ಪಾರಿವಾಳ ತಾವಿರುವ ಮನೆಯನ್ನು ಬಿಟ್ಟು ತಪ್ಪಿಸಿ ಕೊಣ್ಡು ಅವೆನ್ದಿಗೂ ಹೋಗುವದಿಲ್ಲ (3, 113). ಅವಳು ಬೇಕಾದಷ್ಟು ನೆವ ಹೇಳಿ ತಪ್ಪಿಸಿ ಕೊಣ್ಡಾಗ್ಯೂ ಅವನು ಕೇಳಲಿಲ್ಲ (4, 6). ನೀನು ಈಗ ಎರಡು ದಿವಸದಿನ್ದ ಆ ಕೆಲಸಕ್ಕೆ ತಪ್ಪಿಸಿದ್ದರೂ ತಪ್ಪಿಸಿರ ಬಹುದು (4, 154). ಅದರ ಸಂಗಡ ಮನುಷ್ಯನ ಹೆಜ್ಜೆಯಿಲ್ಲದ ಕಾರಣ ಅದು ಬಹುತರ ತಪ್ಪಿಸಿ ಕೊಣ್ಡ ಒಣ್ಟೆಯೆನ್ದು ಗ್ರಹಿಸಿದೆನು (4, 170). ನೀನು ತಪ್ಪಿಸಿ ಕೊಣ್ಡು ಹೋಗದಿದ್ದರೆ (4, 154). ಕೊಟ್ಟ ಮಾತನ್ನು ತಪ್ಪಿಸ ಬಾರದು (C.). ನಿನ್ನ ಧರ್ಮವನ್ನು ತಪ್ಪಿಸ ಬಾರದು (C.). ಇವನನ್ನು ತಪ್ಪಿಸಿ ಆ ಕೆಲಸ ಮಾಡ ಬೇಡ (C.). ತಪ್ಪಿಸಿ ಕೊಣ್ಡವನು, a man who escaped (C.). ಪೆಟ್ಟಿಗೆ ತಪ್ಪಿಸಿ ಕೊಳ್ಳು (C.). ಈ ಕಾಟದಿನ್ದ or ಈ ಕಾಟಕ್ಕೆ ನನ್ನನ್ನು ತಪ್ಪಿಸು! (My.). See Bp. 13, 7; 14, 3; 30, 5; 34, 27; 43, 13. 23; 46, 47; 47, 12; 51, 48; 58, 15. 34; 60, 36; Prv. s. ಪರಹಿತ.

ತಪ್ಪು tappu. 1. To make a false step, to trip; to slip; to deviate; to commit an error, mistake or blunder; to be missed; to be forfeited or lost; not to come to pass; to fail; to disappear, to be passed (ಸ್ಖಲನ Śmd. Dh.; ತೊಲಗು Śmd. 96. 132. 259 Cm.; C.; T., M., Tĕ., Tu.; T. also ತವರ್, ತವಱು, *cf.* ತಪ್ಪರಿಸು 2); to miss. ತಪ್ಪಿದವನಿಗೆ ಒಪ್ಪು ಇಲ್ಲ.— ತಪ್ಪಿ ಬಿದ್ದವನಿಗೆ ತೆಪ್ಪ ಏನು ಮಾಡೀತು?— ಸೂಲು ತಪ್ಪಿದರೆ ಗೊಡ್ಡೇ?— ಜಾತಿ ತಪ್ಪಿದರೂ ನೀತಿ ತಪ್ಪ ಬಾರದು (Prvs.). ತಪ್ಪದು (ಪ್ರಮಾಣ, ಸತ್ಯ Nn. 139). ಎಚ್ಚು ತಪ್ಪಿದವನು (ಅಪರಾದ್ಧೇಷು Hlâ.). ಅವನಾನೊಬ್ಬನು ಗುಱಿಯನ್ ಎಚ್ಚು ತಪ್ಪಿದವನುಣ್ಟು, ಈತನು ಅಪರಾದ್ಧಪೃಷತ್ಕ (Nr.). ಹಾದಿ ತಪ್ಪಿ, ಕೆಱೆಯೊಳಗೆ ಹೊಕ್ಕಿದ್ದೇನೆ (B. 3, 123). ಬನ್ದ ಪಥಮಂ ತಪ್ಪದೆ (Bp. 60, 26). ತಪ್ಪದೆ ಮ್ಮ ಬ್ರತಕೆ (60, 28). ಉದ್ದ ಮರದ ತುದಿಯನ್ ಏಱಿ, ಕೆಯ್ ತಪ್ಪಿ, ಬಿದ್ದು ಸತ್ತನ್ತೆ (Sp.). ರೊಟ್ಟಿ, ಕೆಯ್ ತಪ್ಪಿ, ಬಿತ್ತು (My.). ಯಾವ ಗುಱಿಕಾಱನು ಬಿಲ್ಲಿನ್ದೆಸ್ತ ಕೋಲು ಗುಱಿಯಿನ್ದ ತಪ್ಪಿ ಹೋಯಿತೋ, ಅನ್ಥವನು ಅಪರಾದ್ಧಪೃಷತ್ಕ (Si. 280). ಕ್ರಮ ತಪ್ಪಿ ಮಾತಾಡುವದು (ವಿಪ್ರಲಮ್ಭ 74). ಎಚ್ಚಱಿಕೆ ತಪ್ಪಿ ಹೋಗುವದು (ಪ್ರಮಾದ, etc. 71). ತಪ್ಪಿ ಹೋಗಿರುವದು (ಸ್ರಸ್ತ, ಭ್ರಷ್ಟ, ಸ್ಕನ್ನ, etc., ಜಾಱಿ ಬಿದ್ದುದು 382). ಜೋಕೆ ತಪ್ಪಿದ ಬಱಿಕ ಅರ್ಥ ವೆರ್ಥ (Dp. 1). ವಿಪ್ರರಿನ್ದ ನುಡಿ ತಪ್ಪದು (J. 28, 29). ನುಡಿದುದು ತಪ್ಪುಗುಮೆ ಗಂಗಚೂಡಾಮಣಿಯಾ? (Śmd. 68). See Čpr. 2, 41; 6, 95; Abh. P. 13, 71; Čh. v. 50; Bp. 24, 76; 27, 3; 28, 33; 30, 9; 31, 25; 32, 43; 34, 13; 37, 25; 39, 32; 43, 13. 14. 45; 46, 17. 44; 48, 3; 57, 13; 61, 76; Bh. 1, 8, 19. 58. 59; J. 2, 60; 4, 2; 6, 6; 30, 27; Śm. 38; Si. 57. 92. 247. 264. 265. 295. 377; ನೀರ್ಲೆದಪ್ಪು, ಮಾರ್ಗನ್ದಪ್ಪು, ಮುನ್ದಪ್ಪು, ಮೇರೆದಪ್ಪು; Prvs. s. 303, ಬಱಿಗಾಲ. — ತಪ್ಪು ತಪ್ಪು. rep. ತಪ್ಪ ತಪ್ಪದೆ ಶರ ಶರಂಗಳಂ ತೆಗೆದೆಚ್ಚು (J. 28, 41).

ತಪ್ಪು tappu. 2. (Śmd. 191). Tripping, slipping, erring, missing. **2,** a slip, an error, a mistake, a blunder; an impropriety; a fault, misdemeanor (C.; T., M., Tĕ.). ತಪ್ಪಿರ್ದ ಲಿಪಿ (J. 30, 29). ತಪ್ಪಿಲ್ಲ ತನ್ನ ತನಯನೊಳು! (31, 35). ಮದನನ ಮೇಲೆ ತಪ್ಪಿಲ್ಲ (31, 36). ತಪ್ಪುಳ್ಳಡೆ ಒಪ್ಪಂಗೆಯ್ವುದು! (Mr. 3). See Śmd. 377; Čpr. 1, 104; Bp. 11, 5; 24, 86; 38, 27; 40, 43. 62. 90; 45, 4; 48, 2; 53, 34. 44; 60, 31; 61, 4. 35. 56; J. 21, 46; B. 3, 84. — ತಪ್ಪಜ್ಜೆ. (-ಅಜ್ಜೆ). = ತಪ್ಪು ಹೆಜ್ಜೆ. (My.). — ತಪ್ಪಡಿ. -ಅಡಿ. (Śmd. 48). = ತಪ್ಪಲಡಿ. A false step, a slip; an irregular, waddling step. (T.). — ತಪ್ಪಣಿ. -ಅಣಿ. The condition of the woof missing the warp in the web of a loom (My.). — ತಪ್ಪು ಒಪ್ಪಿ ಕೊಳ್ಳು. To acknowledge one's fault (B. 3, 84; My.). — ತಪ್ಪುಕಾಣಿಕೆ. A gift (to an idol or a guru) to make amends for an impropriety (My.). — ತಪ್ಪುಕೆಲಸ. A misdeed, a fault. ತಪ್ಪುಕೆಲಸ ಮಾಡಿದ (ಅಭಿಪನ್ನ Si. 439). — ತಪ್ಪು ಕ್ಷಮಿಸು. To put up a fault, to pass it unavenged or overlook it (Bp. 18, 80; 22, 41; B. 4, 200; 5, 9; My.). — ತಪ್ಪುಗಣ್ಟು. A knot that is wrongly formed and cannot be solved (My.). 2, a connexion that is contrary to rule and useless (B. 3, 79). — ತಪ್ಪು ತಪ್ಪು. rep. (Bp. 49, 16). — ತಪ್ಪುದಾರಿ. A wrong road (ಅಪಥ Si. 105; My.). — ತಪ್ಪುನುಡಿ. A wrong word (ಅಬದ್ಧ, ವಿಯುತಾರ್ಥಕ Hlâ.; ಅಬದ್ಧ Mr. 84; My.). — ತಪ್ಪು ಬೀಳು. A mistake to occur (C.). — ತಪ್ಪು ಸಯ್ರಿಸು. = ತಪ್ಪು ಕ್ಷಮಿಸು. (Bp. 22, 34; 23, 40; 27, 60; My.). — ತಪ್ಪು ಸಹಿಸು. = ತಪ್ಪು ಸಯ್ರಿಸು. (My.). — ತಪ್ಪು ಸಾಧಿಸು. To charge a fault upon (a man), to charge (a man) with a fault (My.). ತಪ್ಪ ಸಾಧಿಸುವನಲ್ಲಿ ಇಪ್ಪವನೆ ಕಡುಹೆಡ್ಡ (Sp.). — ತಪ್ಪು ಹಚ್ಚು. To impute a fault to (B. 5, 266). — ತಪ್ಪು ಹಿಡಿ. To find fault with (Bp. 25, 23; My.). — ತಪ್ಪು ಹೆಜ್ಜೆ. = ತಪ್ಪಡಿ. (My.; ದಟ್ಟಡಿ G.). — ತಪ್ಪು ಹೊಟ್ಟೆಯೊಳಗೆ ಹಾಕಿ ಕೊಳ್ಳು. = ತಪ್ಪು ಸಯ್ರಿಸು. (B. 4, 201). — ತಪ್ಪು ಹೊಱಿಸು. To accuse (one) of misdemeanor, to charge a fault upon (one, My.). ಇಲ್ಲದ ತಪ್ಪುಗಳನ್ನು ಮೇಲೆ ಹೊಱಿಸಿ ಹೇಳುವದು (ಮಿಥ್ಯಾಭಿಶಂಸನ, ಅಭಿಶಾಪ Si. 56). ತಪ್ಪು ಹೊಱಿಸಿದವನಿಗೆ ಒಪ್ಪುವವನು ಯಾರು? (Prv.). — ತಪ್ಪು ಹೊಱು. A fault to be charged upon (one, Râm. 6, 53, 78).

ತಪ್ಪುವಿಕೆ tappuvikĕ. Erring, etc.; missing. ಕ್ರಮವನ್ನು ತಪ್ಪುವಿಕೆ (ಅತಿಪಾತ, etc. Si. 247). ಕ್ರಮ ತಪ್ಪುವಿಕೆ (ವ್ಯತ್ಯಾಸ, ವಿಪರ್ಯಾಸ, etc. 398).

ತಪ್ಪೆ tappĕ. = ಟಪ್ಪಾ, etc. (My.).

Digitized by Google

ತಫರೀಕು tapharîku. Allotment, division into shares (Br., H. ತಫ್ರೀಕು; R.).

ತಫಾವತಿ taphâvati. = ತಫಾವತು. (My.).

ತಫಾವತು taphâvatu. Difference; deviation, variance, as of accounts; failure, shortcoming; error (My.; Mhr., H.).

ತಫಾವತುಗಾಱ taphâvatu-gâṟa. A man who defalcates. ತಫಾವತುಗಾಱ ತಪ್ಪಿದರೆ ತಿಪ್ಪಯ್ಯಗೆ ಏನು ಕೋಪ? (Prv.).

ತಬಕ tabaka. = ತಬಕು. A platter or plate for betel leaf, betel nut, etc. (Mhr., H. ತಬಕ; B. 4, 125; 5, 283).

ತಬಕು tabaku. = ತಬಕ. (My.). See Prv. s. ತಬ್ಬಲಿ.

ತಬಟೆ tabaṭĕ. = ತಪಟೆ, etc. (My.).

ತಬಲಕು tabalaku. A packet of papers (My.; Mhr., H. ತಬಲಕ). 2, the string encircling and confining them (Mhr.; My. as ತಬಲಕುದಾರ).

ತಬೀಯತು tabîyatu. Constitution; disposition; temper of mind (My.; Mhr., H. ತಬಿಯತ).

ತಬೇಲಿ tabêli. A stable (My.; Mhr., H. ತಬೇಲಾ).

ತಬ್ಬರಿಸು tabbarisu. (ತಬ್ಬಱೀಸು). **1.** To be overcome by terror, grief, etc.; to be amazed or bewildered (My.; *cf.* ತಱ 1; Tĕ. ದೆಪ್ಪರ, difficulty, distress).

ತಬ್ಬರಿಸು tabbarisu. 2. To slip, to stumble (My.; T. ತವರ್, ತವಱು). ತವಕ ಪಟ್ಟವ ತಬ್ಬರಿಸಿ ಬಿದ್ದ (Prv.).

ತಬ್ಬಲಿ tabbali. = ತಬ್ಬಿಲಿ, q. v. (My.). ತಬ್ಬಲಿ ತಬಕು ಕದ್ದು ಜಗಲೀಲಿ ಸಿಕ್ಕ ಬಿದ್ದ (Prv.). See Prv. s. ತಲೆ ಬೋಳಿಸು. — ತಬ್ಬಲಿಕೂಸು. A child who is bereaved of its mother; an orphan; a bad, troublesome child (My.). — ತಬ್ಬಲಿಕೆಲಸ. Vile action (My.). — ತಬ್ಬಲಿದನ. Vicious cattle (My.). — ತಬ್ಬಲಿಬಾಳೆಹಣ್ಣು. An inferior plantain (My.). — ತಬ್ಬಲಿಮನುಷ್ಯ. A vile man (My.). — ತಬ್ಬಲಿಮುಱಿವ. A friendless and broken man (My.). See Prv. s. ತಲೆಕೂದಲ್. — ತಬ್ಬಲಿಯಕ್ಕಿ. -ಅಕ್ಕಿ. Inferior rice (My.).

ತಬ್ಬಿಬ್ಬು tabbibbu. The state of being overcome by terror, etc., bewilderment, maze (My.; Tĕ.). ಅವನಿಗೆ ತಬ್ಬಿಬ್ಬಾಯಿತು, ಅವನು ತಬ್ಬಿಬ್ಬಾದನು (My.). — ತಬ್ಬಿಬ್ಬುಗೊಳ್. -ಕೊಳ್. To get bewildered or confused (Č. Bp. 46, 20; My.). — ತಬ್ಬಿಬ್ಬುಮಾತು. Bewildered or disordered language, as that of a dying person, etc. (My.).

ತಬ್ಬಿಲಿ tabbili. = ತಬ್ಬಲಿ, ತಬ್ಲಿ. (Tu. ತಬ್ಬಿಲಿ, ತಬ್ಬುಲಿ). The state of a child's being bereaved of its mother (My. as ತಬ್ಬಲಿ); the state of its being bereaved of its parents (My. as ತಬ್ಬಲಿ). **2,** a wretched, mean or inferior person or thing (My. as ತಬ್ಬಲಿ; if ತಬ್ಬಿಲಿ, as Si. has it, be the true form, it might be ತಬ್ಬು 2 -ಇಲಿ 1; but see ತಏಲ್). — ತಬ್ಬಿಲಿ ಹುಟ್ಟು. Be born as a low person! (ಅಜನನಿ, ಅಕರಣಿ Si. 401).

ತಬ್ಬಿಸು tabbisu. To cause to embrace; to cause to clasp in the arms, as a quantity of straw, firewood, etc. (My.).

ತಬ್ಬು tabbu. 1. = (ತಕ್ಕೆಯ್ಸು), ತಬ್ಬ್, ತಬ್ಬು. To embrace (My.; Bh. 8, 26, 56). ಜೋಗಿಗೆ ಜೋಗಿ ತಬ್ಬಿ ಕೊಣ್ಡರೆ ಮೆಯ್ಯೆಲ್ಲಾ ಬೂದಿ.— ತಪ್ಪನೆ ಬಾ! ಅನ್ದರೆ ತಬ್ಬಲಿಕ್ಕೆ ಬನ್ದ ಹಾಗೆ (Prvs.). **2,** to clasp in the arms, as a quantity of wood, etc. (My.; Bp. 16, 20). See Prv. s. ದಿಕ್ಕಿಲ್ಲದೆ.

ತಬ್ಬು tabbu. 2. (= ತಕ್ಕೆ 1). An embrace. **2,** the amount of wood, etc., that can be taken in the arms at once. — ತಬ್ಬುಹುಲ್ಲು. An armful of grass, straw, etc. (My.).

ತಬ್ದೀಲ್ tabdîl. = ತಭ್ದೀಲ್, q. v.

ತಬ್ಲಿ tabli. = ತಬ್ಬಿಲಿ, etc. (My.).

ತಭ್ದೀಲ್ tabhdîl. Exchange; transposition; transfer (Si. 398; My., Br., H. ತಬ್ದೀಲ್).

ತಮ್ tam. 1. = ತಮ್ಮ, (ತಮ್ಮು), ತಾಂ 2, ತಾಮ್, ತಾವು. Plural of ತನ್ 2, etc.; (*cf.* ತಮರ್). Gen. ತಮ್, ತಮ (see below), ತವ; Dat. ತಮಗೆ (Šmd. 296; C.), ತವಗೆ (see ತವ ತವಗೆ). — ತಮ ತಮ. rep. (Bp. 54, 19; 60, 30). — ತಮ ತಮಗೆ. rep. = ತಮಗೆ ತಮಗೆ, ತವ ತವಗೆ. (Čpr. 7, after 115 & 129; Bp. 4, 6. 68; 8, 8; 51, 71; 53, 7; 56, 25; 58, 15. 68; J. 8, 31; 17, 18; 33, 21; My.). — ತಮ ತಮ್ಮ. = ತಮ ತಮ. (Bp. 3, 85; 7, 10; 46, 27). — ತಮ್ತಮ್ಮ. = ತಮ ತಮ್ಮ, ತಮ್ಮ ತಮ್ಮ. (Šmd. 211; Čpr. 7, 125; B. 3, 77).

ತಮ್ tam. 2. = ತಂ (ತಣ್), etc. — ತಮ್ಬುಳಿ. -ಪುಳಿ. Triturated vegetables, etc. mixed with curds (My.). — ತಮ್ಬೆಳಗ. He of cool light: the moon (ಚನ್ದ್ರ, etc., ಶಶಿ Kk. 44, o. r. ತೆಳ್ವೆಳಗ). — ತಮ್ಬೆಳಗು. Cool light (Bh. 3, 8, 16).

ತಮ tama. 1. The termination of the superlative degree: most, etc.

ತಮ tama. 2. = ತಮಸ್. (ಕತ್ತಲೆ Nn. 26. 34; ಮಬ್ಬ್ Kk. 11*b*; ರಾಹು Mr. 39). See Čh. IV, 2, 49; Abh. P. 14, 20; ಶ್ರುತಿಚೋರ-. — ತಮವಿಡಿ. -ಪಿಡಿ. Darkness to seize (Bp. 54, 30).

ತಮಂಗ tamaṅga. = ತವಗ, ತವಂಗ. *A platform, a stage.*

ತಮಟೆ tamaṭĕ. = ತಪಟೆ, etc. (My.; ಆನಕ Si. 404). See Prv. s. ಅಮಟೆ.

ತಮತ tamata. Desirous, longing after. 2, wished, desired. (R.; see ತವಕ).

ತಮತು tama-atu. = ತಮತ್ತು, ತಮ್ಮತು, ತಮ್ಮದು. (Šmd. 179; T. ತಮದು). Theirs.

ತಮತ್ತು tama-attu1. = ತಮತು. (Šmd. 179).

ತಮನ tamana. Becoming breathless. (R.).

ತಮನ್ಧ tamandha. Tbh. of ತಮೋನ್ಧ (Bp. 8, 57; 58, 48; 61, 85. 88).

ತಮರ್ tamar. = ತವರ್, ತವರು, ತವುರು. Those who are his, hers or theirs (= ತಮವರ್), one's own people (T., M.; Tĕ. ತಮರು, ತಾರು). — ತಮರೂರ್. -ಊರ್. A woman's native village. ತಮರೂರ್ಗೆವೋಪ ಕುಲಜಾಂಗನೆಯರ್ ಮಹೀಧರಂಗೆ ಪಡೆದರ್ ಮುದಮಂ (Šmd. 82).

ತಮರ tamara. (= ತಗರ 1, etc.). Tin; (lead).

ತಮರಸ tamarasa. = ತಾಮರಸ. The lotus (ತಾವರೆ Kk. 13, one MS.; not Sk.).

ತಮಸ್ tamas. = ತಮ 2, ತಮಸ್ಸು. *Darkness.* 2, *Râhu.* 3, mental darkness; *sin.* 4, *darkness or ignorance as one of the three qualities or constituents of everything in creation,* the other two being ಸತ್ವ and ರಜಸ್. 5, a N.

ತಮಸೂಕು tamasûku. A note of hand, a bond (My.; Mhr., H. ತಮಾಸೂಕ).

ತಮಸ್ವಿನಿ tamasvini. *Night.*

ತಮಸ್ಸು tamassu. Tbh. of ತಮಸ್. (My.).

Digitized by Google

ತಮಾಮು tamâmu. Completed, finished (Mhr., H.); the whole (My.; Br.); wholly, entirely.

ತಮಾಲ tamâla. *A tree with a very dark bark, but white blossoms, Xantochymus pictorius* Roxb. (ಗಹ್ವರ Mr. 469; ಕಡ್ಡಾಳೀ ಗಿಡ G.). See ಹೊಂಗೆ. 2, = ತಮಾಲಪತ್ರ.

ತಮಾಲಪತ್ರ tamâla-patra. *A sectarial mark on the forehead.*

ತಮಾಲರೇಖೆ tamâla-rêkhĕ. A streak or stripe on the forehead (Rśv. 6, after 11).

ತಮಾಲಿ tamâli. N. of several plants. (Čpr. 4, 31. 37).

ತಮಾಷೆ tamâshĕ. A diverting exhibition; a farce; the trick of conjurers; sport, fun (C.; Mhr., H. ತಮಾಶಾ).

ತಮಾಷೆಗಾಱ tamâshĕ-gâṟa. A seeker of sights and shows; a showman, buffoon (My.).

ತಮಿ tami. *Night.*

ತಮಿಸ್ರ tamisra. *Darkness.*

ತಮಿಸ್ರೆ tamisrĕ. *Darkness.* 2, *night;* a dark night.

ತಮಿೞ tamiḻa. = ತಮ್ಬೞ. The Tamiḻ language; Tamiḻ (T. ತಮಿೞ್; B. 4, 128. 206).

ತಮೋಗುಣ tamas-guṇa. = ತಮಸ್ No. 4. (My.).

ತಮೋಘ್ನ tamas-ghna. Destroying darkness: *fire.*

ತಮೋನುದ್ tamas-nud. Dispersing darkness: *fire.*

ತಮೋಂಧ tamas-andha. = ತಮನ್ಧ. Great darkness (J. 31, 63).

ತಮೋಪಹ tamas-apaha. Removing darkness: *fire.* 2, *the sun.* 3, *the moon.*

ತಮೋಮಣಿ tamas-maṇi. The jewel of darkness: a kind of gem. 2, a fire-fly. (R.).

ತಮೋಮಯ tamas-maya. = ತಮ್ಮಮಯ. Consisting or composed of darkness, covered with darkness.

ತಮ್ಪಿಸು tampisu. To cool: to extinguish, as fire or a light (My.), or a fiery weapon (J. 4, 36).

ತಮ್ಪು tampu. = ತಣ್ಪು, ತನುವು, (ತಮ್ 2), ತಮ್ಬು. Coolness; coldness; wetness, dampness (of soil); a cooling, satisfying, gratifying, pleasing or refreshing quality, character or thing; satisfaction, etc.; (cool, coolly; C.). ತಮ್ಪು ಇದ್ದವನಿಗೆ ಸಮ್ಪು ಇದ್ದೀತು (Prv.). ತಮ್ಪು ಮಾಡುಹವು (ಅತಂಚನ Nr.). ತಮ್ಪಿಸಿಂ (J. 15, 9). ತಮ್ಪಿನ ಮನೆ (G. 147). See Bp. 1, 7; 36, 29; Bh. 1, 5, 5; Č. Bp. 4, 7; Râm. 2, 7, 8; Śśv. 3, after 35; 4, 68; J. 3, 10; 6, 32; 10, 16; Rághč. 17, 54; B. 2, 22. 49. — ತಮ್ಪುಕಿರಣ. A cool ray (G. 148). — ತಮ್ಪುಗಾಳಿ. A cool wind (G. 147). — ತಮ್ಪುನಾಡು. A cool or cold country (B. 3, 29). — ತಮ್ಪುಭೂಮಿ. Cool, damp soil (ಕಚ್ಛ G.; My.). — ತಮ್ಪುವಡೆ. -ಪಡೆ. To obtain coolness: to remain unburnt (J. 11 sum.). — ತಮ್ಪುವೆಡೆ. -ಪೆಡೆ. To obtain coolness: to be refreshed (J. 8, 5).

ತಮ್ಬಗಿ tambagi. = ತಮ್ಬಿಗೆ, etc. (ಕಲಶ Čb.).

ತಮ್ಬಟ tambaṭa. = ತಪಟೆ, etc. (ಮಡ್ಡು Nr.; T. ತಮ್ಬಟ್ಟ). ಪಟಹ, ಡಿಣ್ಡಿಮ, ಡವುಡೆ, ಭೇರಿ, ನಿಸ್ಸಾಳ, ತಮ್ಬಟ, ಮುರಜ, ಢಕ್ಕೆ, ಡಮರುಗ, ಕೊಮ್ಬು, ಕಹಳೆಗಳ ಬಹಳರವಮ್ ಅಳ್ಳಿರಿದುದು (J. 12, 12). See Rśv. 6, after 11; Bp. 5, 39; Č. Bp. 5, 7.

ತಮ್ಬಟೆ tambaṭĕ. = ತಮ್ಬಟ, etc. ತಮ್ಬಟೆ ಹೋಗಿ ಭೇರಿಗೆ ದೂಱು ಹೇಳಿದ ಹಾಗೆ (Prv.).

ತಮ್ಬಟ್ಟ tambaṭṭa. = ತಮ್ಬಟೆ, etc. (ಆನಕ Nr.).

ತಮ್ಬತ್ತಿ tambatti. — ತಮ್ಬತ್ತಿಜಾಲಿ. A shrub with long white thorns and fragrant yellow flowers, Acacia eburnea Willd. (Z.).

ತಮ್ಬಲ tambala. — ತಮ್ಬಲದ ಹುೞು. A worm that is found in damp places, especially in the drain of a bathroom (My.).

ತಮ್ಬೞ tambaḻa. = ತಮಿೞ. (C.).

ತಮ್ಬಾಕ tambâka. = ತಮ್ಬಾಕು. Tobacco (ಧೂಮ್ರಪತ್ರ, ಹೊಗೆಸೊಪ್ಪು G.; B. 4, 205; Mhr., H. ತಮ್ಬಾಕೂ, ತಮ್ಬಾಖೂ). ತಮ್ಬಾಕ ಸೇದೋಣ (ಧೂಮ್ರಪಾನ G.).

ತಮ್ಬಾಕು tambâku. = ತಮ್ಬಾಕ. (B. 4, 40; My.; Tĕ., T., M.).

ತಮ್ಬಿ tambi. Chastisement, beating (Mhr., H. ತಮ್ಬೀ; Sd.).

ದೂಷಣೆ dûshaṇĕ. = ದೂಷಣ. Blaming, etc. (My.). — ದೂಷಣೆ ಮಾಡು. To abuse, to blame, etc. (My., ಅವನನ್ನು-). — ದೂಷಣೆಮಾತು. Words of abuse (My.). — ದೂಷಣೆ ಹೇೞು. To tell tales, etc. (My., ಅವನ ಮೇಲೆ-). — ದೂಷಣೆ ಹೊನ್ದು. To get blamed, censured, etc. (ಪಱಿ ಪೊರ್ದು G.).

ದೂಷಿಕೆ dûshikĕ. *The secretion or rheum of the eyes.*

ದೂಷಿತ dûshita. Corrupted, spoiled; contaminated, defiled; blamed, censured, calumniated. See ದೋಷ-, ಮಲ-.

ದೂಷಿಸು dûshisu. To blame, to censure, to abuse, etc. (Ĉpr. 5, 127; Bp. 37, 12; 54, 52; J. 7, 11. 65; My.).

ದೂಷ್ಯ dûshya. 1. Corruptible; deserving censure, condemnable, reprehensible; contemptible, vile, bad (Śmd. 28; Kâvy. II, 2, B, 44).

ದೂಷ್ಯ dûshya. 2. = ದೂಸ 2, ದೂಸು. Cloth, or a kind of cloth; cotton, calico. 2, *a tent.*

ದೂಸ dûsa. 1. Milk. See ಅವಿ-.

ದೂಸ dûsa. 2. Tbh. of ದೂಷ್ಯ 2. See ದೂಸಿಗ; Ĉpr. 7, 63.

ದೂಸಣೆ dûsaṇĕ. Tbh. of ದೂಷಣ (Śmd. 335; My.).

ದೂಸರ dûsara. Tbh. of ಧೂಸರ (Śmd. 338; ನಸುಬಿಳಿದು Cm.).

ದೂಸಱ್ dûsaṟ. ದೂಸಱು. Reason, motive; cause; — one's own side, one's own point of view, one's own advantage, self-interest (ತನ್ನಯ ದೆಸೆ Ĉt. I, 95; II, 20; ತನ್ನ ದೆಸೆ Śs.). (ಅನುಸ್ವಾರ ವಿಸರ್ಗಂಗಳ್) ಸ್ವರಂಗಳ ಪರದೊಳ್ ಇರ್ಪ ದೂಸಱಿಂ ಸ್ವರಾಂಗಮುಮ್ ಅಪ್ಪುವು (Śmd. 21). ಆ ಕ್ರೂರಕರ್ಮಿಯ ದೂಸಱಿಂ ಬನ್ದು (Bp. 28, 27). ನಿನ್ನೊಡನಾಡಿದ ದೂಸಱಿನ್ದೆ ಎನಗಮ್ ಈ ಸಂಕಟಂ ಬನ್ದುದು (V. 14, after 33). ದೂಸಱಿಂ (ತನ್ನ) ಭುಜವಿಜಯಪ್ರತಾಪತೇಜವನ್ ಇಳೆಯೊಳು ನಿನ್ದಿಸರ್, ಎಲೇ? (J. 18, 42). ನುಡಿವರ್ ಎನ್ತು ಇಳೆಯೊಳ್ ಆರಾದೊಡಂ ದೂಸಱಿಂ? (18, 56). See Abh. P. 8, 23; 7, after 47; 9, after 15; 9, 158; Ĉ. Bp. 10, 28; V. 2, 34; J. 18, 53. 54.

ದೂಸಿಗ dûsa-iga. (Śmd. 233). A cloth merchant (ಸೀರೆವರದ Kk. 35; Śm. 67; Ĉ. Bp. 47, 41; Râm. 5, 8, 51). — ದೂಸಿಗವಸರ. -ವಸರ. The shop of a cloth merchant (ಸೀರೆಯ ವಸರ Ĉt. II, 59; Grj. 2, 95).

ದೂಸು dûsu. = ದೂಸ 2. Cloth (ಪಱಿ Śm. 115; T. ತೂಸು).

ದೂಹತಿ dûhati. = ದೂಹತ್ತಿ. (Râm. 6, 45, 32).

ದೂಹತ್ತ dû-hatta. = ದುಹತ್ತ. (Śmd. 378).

ದೂಹತ್ತಿ dû-hatti. = ದೂಹತಿ, ದೂಹಸ್ತಿ. A sword wielded with both hands (Bh. 6, 4, 140).

ದೂಹಸ್ತಿ dû-hasti. Tbh. of ದ್ವಿಹಸ್ತಿ. (Śmd. 352).

ದೂೞ್ dûḷ. = ದೂೞು, etc. (J. 16, 37; 17, 57; 19, 29; T. ತುಗಳ್, ತೂಜ, ತೂಳ್; M. ತೂಳ್, ತೂಳಿ, ಚೂಳಿ; Tĕ. ತುಮುರು, ದುಮ್ಮರ, ದೂಗರ, ದುವ್ವೆ; *cf.* ದುಮ್ಮು). — ದೂೞಾಟ. -ಆಟ. Playing with dust (J. 19, 51). — ದೂೞಿಡು. -ಇಡು. To throw or raise dust (J. 4, 23; 10, 8). — ದೂೞ್ಗೋೞ್ಟೆ. -ಕೋೞ್ಟೆ. = ದೂೞಗೋಟೆ. (Ĉ. Bp. 42, 23).

ದೂೞ dûḷa. = ದೂೞ್. (ಪಾಂಶು G.; ರೇಣು Ĉb.; Mhr. ಧೂಳ).

ದೂೞಿ dûḷi. (= ಧೂಳಿ). Tbh. of ಧೂಳಿ (Śmd. 339; ರಜಸ್, ಪಾಂಶು, etc. Nr.; ರೇಣು Nn. 55, o. r. ದೂೞು; J. 8, 8; 22, 36). ದೂೞಿ ದೂಪವಾದೀತೇ? ಮಾಳಿಗೆ ಸ್ವರ್ಗವಾದೀತೇ?— ದೂೞಿಯಲ್ಲಿ ಬಿದ್ದರೆ ಚೇಳಿನ ಕಾಟ ತಪ್ಪೀತೇ?— ದೂೞಿಯಿನ್ದ ಮಾಳಿಗೆ ಆದೀತೇ? (Prvs.). — ದೂೞಿಕೇಳಿ. = ದೂೞಾಟ. (Rśv. 11, 77). — ದೂೞಿಗೋಟೆ. -ಕೋಟೆ. = ಧೂಳಿಕೋೞ್ಟೆ, q. v. (J. 18, 7; Bh. 1, 7, 64). — ದೂೞಿಪಟ. = ಧೂಳಿಪಟ. — ದೂೞಿಮರ. A fence of wood over a carriage wheel to keep the dust down, a dust-board (My.).

ದೂೞಿಸು dûḷisu. To smear on (V. 42, after 21; T. ತುಳುಮ್ಬು; *cf.* ತೊಳಿ 1). **2,** to be smeared on (Râm. 1, 7, 13).

ದೂೞು dûḷu. = ದೂೞ್, ದೂೞ. (Tbh. of ಧೂಳಿ). Dust; powder; pollen (My.; ರಜ Nn. 69. 111; ರೇಣು 90; ರೇಣು, ಪರಾಗ 113; ರಜಸ್ Si. 409). ಹೂವಿನ ದೂೞು (ಪರಾಗ, ಸುಮನೋರಜ Nr.). ಹುವ್ವಿನೊಳಗಿರುವ ದೂೞು (ಪರಾಗ, etc., ಅಲರ ಪುಡಿ Si. 124). ಗಾಳಿಯಿನ್ದ ದೂೞು ಹಾಱಿದರೆ ಕೋೞೀ ಹೊಟ್ಟೆ ತುಮ್ಬೀತೇ?— ದೂೞಲ್ಲಿ ಬಿದ್ದವ ಮೂಱಿನಿನ್ದ ಕಡೆ (Prvs.). See ಕೆನ್-. — ದೂೞಕ್ಷರ. -ಅಕ್ಷರ. A letter which a school-boy draws upon the sand-board, etc. in learning to write (My.; Mhr. ಧುಳಾಕ್ಷರ). — ದೂೞಯ. -ಅಯ. N. (Bp. 47, 35). — ದೂೞುಗೆದಱು. -ಕೆದಱು. To fly about like dust (Râm. 6, 10, 26). — ದೂೞುಮುಱಿ[3]. A fence of wood or iron protecting a chariot from collisions, etc. (ರಥಗುಪ್ತಿ, ವರೂಥ Nr.). — ದೂೞುವಡೆ. -ಪಡೆ. To be reduced to powder. ದೂೞುವಡೆದುದು (ಗುಣ್ಡಿತ, ರೂಷಿತ Nr.).

ದೃಕ್ dṛik. = ದೃಕ್ಕು, (ದೃಗ್), ದೃಗು, ದೃಶ್ q. v. (ಕಣ್ಣು Nn. 131).

Digitized by Google

ದೃಕ್ಕು drikku. Tbh. of ದೃಕ್. (ಕಣ್ಣು Kk. 63; My.).

ದೃಕ್ಪ್ರಭೆ drik-prabhĕ. Lustre of the eye (Čpr. 6, 70).

ದೃಕ್ಶ್ರುತಿ drik-śruti. Hearing with the eyes: *a snake.*

ದೃಕ್ಷ driksha. = ದೃಶ. See ಸ-.

ದೃಕ್ಸಿದ್ಧಾನ್ತ drik-siddhânta. The science of astronomical observation (My.).

ದೃಗಮ್ಬು drik-ambu. Tears (Čpr. 3, 53).

ದೃಗು drigu. Tbh. of ದೃಕ್. (Bp. 40, 7; J. 16, 4).

ದೃಗುಜಲ drigu-jala. Eye-water: tears (Bp. 18, 53; Sk. ದೃಗ್ಜಲ).

ದೃಗುಮಧ್ಯ drigu-madhya. The pupil of the eye (ತಾರ, ಕಣ್ಣಿನ ಮಧ್ಯ Nn. 40).

ದೃಗುಶಿಖಿ drigu-śikhi. Fire of the eye (Bp. 17, 19).

ದೃಗ್ಗಣಿತ driś-ganita. Calculations founded on observations on the heavenly bodies (My.).

ದೃಗ್ಹಸನ drig-g-hasana. Laughter or a smile of the eye (Bp. 38, 1).

ದೃಗ್ದೃಶ್ಯ drik-driśya. Visible unto the eye (Abhâ. 3, 18).

ದೃಗ್ರುಜ್ drik-ruj. *Disease of the eye.*

ದೃಢ dridha. = ದಿಡ, ದುಡ. *Fixed, fastened; firm, hard, strong, solid, massive; compact;* not giving way; tenacious. 2, *confirmed, established; certain; reliable.* 3, *strong, powerful; able.* 4, truth; strength (ಸತ್ವ Nn. 112). 5, *much, excessive,* severe, mighty, important. — ದೃಢಗೊಳ್ಳು. -ಕೊಳ್ಳು. To become firm (My.; B. 5, 207).

ದೃಢಚಿತ್ತ dridha-čitta. Having a firm mind, firm of resolve or purpose (ಸಂಕಿತ, ಸುನಿಶ್ಚಿತ Mr. 252; see ದೃಢವ್ರತ); a firm, or strong, will.

ದೃಢದಂಶಕ dridha-damśaka. A shark. (R.).

ದೃಢಪೀಡನ dridha-pîdana. Pressing firmly. See ಅವುಂಕು.

ದೃಢಬುದ್ಧಿ dridha-buddhi. A firm, or strong, mind (My.). ದೃಢಬುದ್ಧಿಯಿಲ್ಲದವ ಕಡುಮೂರ್ಖ (Prv.).

ದೃಢಬ್ರತ dridha-brata. ದೃಢವ್ರತ. Having firm vows: strictly observing religious vows or obligations; having a firm resolution; firm, persistent, persevering (ಸಂಕಿತ, ಸುನಿಶ್ಚಿತ Hlâ.).

ದೃಢಮನಸ್ಸು dridha-manassu. A firm, or strong, mind (My.).

ದೃಢಮುಷ್ಟಿ dridha-mushti. A strong fist; having a firmly closed or hard fist; one whose hand is difficult to be opened; one who does not open his hand, miserly, niggardly. (R.).

ದೃಢಸನ್ಧಾನ dridha-sandhâna. Uniting or joining firmly. See ಮಡು.

ದೃಢಸನ್ಧಿ dridha-sandhi. *Firmly united; strong-knit.*

ದೃಢಾಂಗ dridha-anga. Firm-bodied, stalwart (My.; also ದೃಢಾಂಗಿ).

ದೃಢಾಯತಿಕೆ dridha-âyatikĕ. Excessive grandeur (Bh. 1, 7, 2).

ದೃಢಾಯ್ಲ dridha-âyla. A strong, powerful man (Bh. 2, 2, 108).

ದೃಢೀಕರಣ dridhî-karana. Making strong or firm; fixing firmly; corroboration, confirmation. See ಬಲಿ.

ದೃಢೀಕೃತ dridhî-krita. Made fast, firm or strong (Čpr. 2, 85; 4, after 28).

ದೃಣಿ drini. Tbh. of ದ್ರುಣಿ. (ಕಿವಿ ಹೊಗುವ ಹಾವು Si. 485).

ದೃತ drita. Burst asunder. 2, afraid, frightened.

ದೃತಿ driti. = ತಿತ್ತಿ, ತಿದಿ. *A leather bag for holding liquids.* 2, *a pair of bellows, a bellows* (ಚರ್ಮಪ್ರಸೇವಕ, ತಿದಿ Mr. 453). 3, = ದ್ರಾವಕ No. 2 (My.; see ಲೋಹ-).

ದೃಪದ dripada. Tbh. of ದ್ರುಪದ. (G.; My.).

ದೃಪದನನ್ದನೆ dripada-nandanĕ. Draupadî (J. 11, 35).

ದೃಬ್ಧ dribdha. 1. *Strung, tied, connected.*

ದೃಬ್ಧ dribdha. 2. Afraid, frightened.

ದೃಶ್ driś. = ದೃಕ್, ದೃಕ್ಕು, ದೃಗು. Seeing, viewing; seeing with the mind, discerning. 2, *a person who sees or knows.* 3, *knowledge.* 4, *the eye.* 5, looking like. See ಸ-.

ದೃಶ driśa. Seeing; looking. See ಸ-.

ದೃಶ್ಯ driśya. To be seen, visible; to be looked at; pleasing, beautiful. See ದೃಗ್-. — ದೃಶ್ಯ ಮಾಡು. To make visible, to show (My.).

ದೃಶ್ಯಾದೃಶ್ಯ driśya-adriśya. Visible and invisible. (My.).

ದೃಷದ್ drishad. ದೃಷತ್. *A stone* (ಏಸ್ತರ, ಕಲ್ಲು Nn. 140).

ದೃಷದ drishada. = ದೃಷದ್.

ದೃಷದಾಶನ drishada-aśana. Stone-eating: a dove (ಪಾರಿವ Mr. 174; *cf.* ಕಲ್ಲುಣಿಸು).

ದೃಷ್ಟ drishta. Seen, beheld, observed; visible, apparent; appearing, manifested; learned, known; experienced, endured; determined, decided. See Bp. 39, 61; 48, 33; ವಾಗ್-. 2, *an obvious danger or calamity.* 3, ಮುಷ್ಟ q. v. (Mr. 358, one MS. ಮುತ್ತ).

ದೃಷ್ಟತ್ವ drishtatva. The state of having been looked at or examined. (Čpr. 7, after 87).

ದೃಷ್ಟಪ್ರತ್ಯಯ drishta-pratyaya. Having confidence manifested. See Bp. 34, 19; 39, 65. 66; 50, 50; 51, 52; 52, 32; 58, 13.

ದೃಷ್ಟರಜಸ್ drishta-rajas. *A girl arrived at puberty.*

ದೃಷ್ಟಾನ್ತ drishta-anta. = ದಿಷ್ಟಾನ್ತ 2. The end or aim of what is seen, or of what is in view: *an example, an illustration.* 2, *a śâstra; science.* 3, death, dying. See Kâvy. III, 3, B, 61. 99 seq.; Bp. 51, 56.

ದೃಷ್ಟಿ drishti. = ದಿಟ್ಟಿ, ದಿಷ್ಟಿ 2. Seeing, viewing. 2, the faculty of seeing, *sight.* 3, *the sight of the eye, look.* 4, *the eye* (ಕಣ್ Čt. II, 100). 5, *intellect, wisdom, knowledge.* 6, consideration, regard. 7, aspect of the stars. See Mr. s. ಕೋಪ; Kâvy. III, 3, B, 103; B. 5, 288. 8, N. of a minister (Râm. 1, 16, 12). — ದೃಷ್ಟಿ ಇಡು. To look at, to inspect, to look after; to aim at (My.). ಕೆಲವರು ಆಳುಗಳ ಕೆಲಸದ ಮೇಲೆ ದೃಷ್ಟಿ ಇಡುತ್ತಾರೆ (B. 5, 293). — ದೃಷ್ಟಿ ಕೊಡು. To pay attention to, etc. ಸಮ್ಬಳದ ಮೇಲೆ ದೃಷ್ಟಿ ಕೊಡದೆ (B. 5, 295). — ದೃಷ್ಟಿಗೆ ಬೀಳು. To come in sight, to appear (B. 4, 67; 5, 184; My.). — ದೃಷ್ಟಿಗೆ ಹರಿ. = ದೃಷ್ಟಿಗೆ ಬೀಳು. (B. 4, 65; My.).

ದೃಷ್ಟಿಗೋಚರ drishti-gôčara. The range or compass of the sight. 2, within the range of sight, in sight, visible, observable, appearing (My.; B. 4, 129. 171; Bp. 58, 15).

ದೃಷ್ಟಿದೋಷ drishti-dôsha. A blast from an evil eye (ಕಣ್ಣಿಂಬಲ್ Kk. 54; Šm. 63; My.).

ದೃಷ್ಟಿವಿಕ್ಷೇಪ drishti-vikshêpa. Casting the eye obliquely: *an oblique look, a side glance, leer.*

Digitized by Google

ದೃಷ್ಟಿವಿಷ dṛishṭi-visha. = ದಿಟ್ಟಬಿಸ, ದಿಟ್ಟವಿಸ. Having poison in the eyes: a snake. 2, an evil eye.

ದೃಷ್ಟಿಸು dṛishṭisu. = ದಿಟ್ಟಿಸು. To see, to look at, etc. (Bp. 3, 70; 53, 70; 60, 14; My.).

ದೆ dĕ. = ದ 2, etc. See Šmd. 131. 132.

ದೆಕಾರ dĕ-kâra. The syllable ದೆ (see Šmd. 54).

ದೆಖ್ಖಾ dĕkhkhâ. (Mhr. ದೇಖಾವ, seeing; sight, view, prospect). — ದೆಖ್ಖಾದೆಖ್ಖಿ. (Šmd. 23, o. r. ದಖ್ಖಾದಖ್ಖಿ). Emulation, vieing with (Grj. 6, after 75; Bh. 8, 21, 23; Mhr. ದೇಖೋದೇಖೀ).

ದೆಖ್ಖಾಣ dĕkhkhâṇa. (Šmd. 23). (= ದೆಖ್ಖಾಳ).

ದೆಖ್ಖಾಯೆ dĕkhkhâyĕ. Showiness, pompousness (Bh. 7, 18, 27; Mhr. ದೇಖಾವು, showy, gaudy).

ದೆಖ್ಖಾಳ dĕkhkhâḷa. (= ದೆಖ್ಖಾಣ). Greatness, grandeur, pomp (ಪೆಚ್ಚುಗೆ Bhn. 65; Grj. 2, after 106; Râm. 4, 3, 12; Bh. 1, 10, 9; Mhr. ದೇಖಣಾ, sightly, comely; ದೇಖಣಾವು, showy, gaudy).

ದೆಖ್ಖಾಳತನ dĕkhkhâḷatana. = ದೆಖ್ಖಾಳ. (Bh. 7, 6, 37).

ದೆಗ್ dĕg. — ದೆಗ್ಗಿರಳೆ. -ಇರಳೆ (*i. e.* ಹಿರಳೆ). A large hiraḷĕ (My.).

ದೆಂಗು dĕṅgu. Sexual union (Tĕ.; My.).

ದೆಬ್ಬೆ dĕbbĕ. = ದಬ್ಬೆ, etc. (My.).

ದೆಬ್ಬೆ dĕbbĕ. = ದಬ್ಬೆ 1. (My.; Tĕ.). ದೆಬ್ಬೇ ಕೊಟ್ಟು, ಬೊಬ್ಬೇ ಕೊಣ್ಡ (Prv.).

ದೆವಸ dĕvasa. Tbh. of ದಿವಸ (Šmd. 357; ಪಗಲ್, ದಿವಸ Šm. 18; Čpr. 2, after 21; 3, after 28).

ದೆವ್ವ dĕvva. = (ತೃಯ), ದೆವ್ವು, ದೈಯ. Tbh. of ದೈವ. A demon, an evil spirit (My.; Mhr. ದೇವ, a demon; Tĕ. ದಯ್ಯ, ದೇಯ). — ದೆವ್ವಚೇಷ್ಟೆ. The grimaces of one who is possessed (My.). — ದೆವ್ವತಿಣ್ಡಿ. A glutton (My.). — ದೆವ್ವದುಮ್ಮೆ. A herb with scarlet flowers, Leonotis nenetaefolia Br. (Z.; My.). — ದೆವ್ವ ಬಡಿ. A demon to strike (or to possess) a person so that he is not likely to survive; a demon to kill (My.). — ದೆವ್ವ ಬಿಡಿಸು. To dispossess by mantras, to exorcise (My.). — ದೆವ್ವಸೋಕು. The touch of an evil spirit (My.). — ದೆವ್ವ ಹಿಡಿ. A demon to possess a person (but first not to kill him, My.). ದೆವ್ವ ಹಿಡಿದವಗೆ ದೈವದ ಯೋಚನೆ ಏನು? (Prv.).

ದೆವ್ವು dĕvvu. = ದೆವ್ವ. (S. Mhr.).

ದೆಸಿ dĕsi. (or most probably) ದೇಸಿ. = ದೇಸಿ. Beauty, fitness, niceness, comeliness, finish, etc. (ಗಾಡಿ, ನಿರುತೆ, ಸೊಬಗು Šs.; ನಿರುತೆ, ಗಾಡಿ, ಸೊಬಗು, ಸುಭಗತೆ Kk. 54; *cf.* the terms s. ಕೆಯ್ 4, ಚನ್ 2).

ದೆಸೆ dĕsĕ. 1. Tbh. of ದಶೆ. (My.; Tĕ.; B. 5, 6). ದೆಸೆಯಿಲ್ಲದವ ಮಸಿಗಿನ್ತ ಕಡೆ (Prv.). See ದುರ್ದೆಸೆ.

ದೆಸೆ dĕsĕ. 2. = ದಸೆ 2. Tbh. of ದಿಶೆ (Šmd. 357; ದಿಶ್ Hlâ.; ದಿಕ್ಕು Nn. 162, Mr. 57; ದಿಕ್ಕು, ಗೋಣ್ಬು, ದಿಶೆ Kk. 16, Šm. 13; My.; Tĕ.). ದೆಸೆಗಳಿರ! (Šmd. 153). ಪಡುವ ದೆಸೆಗೊಡೆಯ (Šm. 13). ದೆಸೆಗಳೊಡೆಯರು (Bp. 2, 14). ಆವ ದೆಸೆಗಯ್ದಿದರವರು? (50, 6). ಅವನ ದೆಸೆಯಿಂದ (on account of him) ಬಹಳ ಚಿನ್ತೆ ಮಾಡುವರು (B. 4, 142; My.). See Si. 68. 193. 202. 267. 316. 337. 397. 410; Prv. s. ಶಾನಭೋಗ. — ದೆಸೆಗಿಡು. -ಕಿಡು. = ದೆಸೆಗೆಡು. (Abh. P. 9, 63; 15, 78; Grj. 6, 50). — ದೆಸೆಗೆಡಿಸು. -ಕೆಡಿಸು. To cause to lose the direction, etc. (J. 16, 37. 45). — ದೆಸೆಗೆಡು. -ಕೆಡು. ದೆಸೆಗಿಡು. -ಕಿಡು. = ದಿಕ್ಕುಗೆಡು. Direction, refuge, etc. to be destroyed or lost (Bp. 21, 16). ದೆಸೆಗೆಟ್ಟವಂ (ನಷ್ಟ, ಗೃಹೀತದೃಕ್, etc. Hlâ.; ದಿಗ್ಭಯ q. v., ದ್ರುತ, ನಷ್ಟ, ವಿನಾಶನ, ಗೃಹೀತ Mr. 300). — ದೆಸೆಗೆಳವಿ. -ಕೆಳವಿ. = ದೆಸೆವೆಣ್. (Čpr. 2, 89). — ದೆಸೆ ದಿಕ್ಕು. rep. (Bp. 32, 62). — ದೆಸೆದೀವು. -ತೀವು. To fill the quarters of the compass (Rśv. 11, 19). — ದೆಸೆ ದೆಸೆ. rep. (Bp. 3, 33; 12, 37. 48; 28, 6; 32, 27; 56, 34; J. 16, 41; 18, 40). — ದೆಸೆಬಲಿ. = ದೆಸೆವಲಿ. Tbh. of ದಿಶಾಬಲಿ (Šmd. 376). — ದೆಸೆ ಬಿದ್ದಂ. A man who is ordered (to do something, Abh. P. 4, 28). — ದೆಸೆವಲಿ. -ಬಲಿ. = ದಿಗ್ಬಲಿ q. v., ದೆಸೆಬಲಿ. (Abh. P. 11, 5). — ದೆಸೆವಲಿಗುಡು. -ಕುಡು. To offer a dĕsĕvali (Abh. P. 13, 96; 14, 62). — ದೆಸೆವೆಣ್. -ಪೆಣ್. A point of the compass considered as a woman (Čpr. 8, 4; Abh. P. 10, 156; Rśv. 5, 32).

ದೆಸೆಗಾಱ dĕsĕ-gâṟa. A fortunate man (My.).

ದೇ dê. 1. Tbh. of ದೇವ. (T.). See ದೇಗುಲ, ದೇಸಿಂಗ.

ದೇ dê. 2. Tbh. of ದೇಶ. See ದೇಸಾಶೆ.

ದೇಖೀಲು dêkhīlu. Of or belonging to, together with (My.; Br., H.).

ದೇಗಲ dêgala. = ದೇಗುಲ. (Bp. 4, 57; 9, 6; 14, 6; 16, 15; 26, 38; 43, 45; 49, 11. 12; 56, 38; My.).

ದೇಗುಲ dêgula. Tbh. of ದೇವಕುಲ (Šmd. 382). A temple (ಆಯತ Hlâ.; My.; Mhr. ದೇಊಳ; J. 17, 40; B. 3, 80). ಪಡುವ ದೇಗುಲದೆಡೆಯಾವುದು? (Šmd. 125).

ದೇಗುಲಿಗ dêgula-iga. (Šmd. 233). An attendant on an idol. *Cf.* ದೇವಲ, ದೇವಲಕ.

ದೇಟು dêṭu. = ದೇಣ್ಟು. A stem (ಕಲವ್ಬು, ಕಾವು, ತುಮ್ಬು, ವೃನ್ತ G.; Mhr. ದೇಟ, ದೇಣ್ಟ).

ದೇಡ dêḍa. = ದೀಡ. (My.).

ದೇಣ dêṇa. ದೇಣಾ, ದೇಣಿ (in ಲೇಣಾ-). Money due, a debt (My.; H.; Mhr. ದೇಣೇಂ); a thing to be given (Mhr.). — ದೇಣಾಲೇಣ. Paying and receiving, lending and borrowing, mercantile transactions (My.; Mhr. ದೇಣೇಂಘೇಣೇಂ).

ದೇಣೆ dêṇĕ. = ದೇಣ. (My.).

ದೇಣೆದಾರ dêṇĕ-dâra. A debtor (My.; H.).

ದೇಣ್ಟು dêṇṭu. = ದೇಟು. (B. 4, 54. 70; ಕಡವ್ಬು, ಪ್ರಸವಬನ್ಧನ G.).

ದೇದೀಪ್ಯಮಾನ dêdīpyamâna. Brilliant, splendid (Čpr. 2, 46; 3, after 97; 4, after 75).

ದೇಮಿ dêmi. = ದ್ಯಾಮಿ. Tbh. of ದೇವಿ 1. — ದೇಮವ್ವ. -ಅವ್ವ. Durgâ (C.).

ದೇಯ dêya. To be given or presented, etc.; a gift, an oblation. See ಅ-, ಪಥಿ-.

ದೇವ dêva. = ದೇ 1, ದ್ಯಾವ. (Shining, being bright); divine, celestial; a deity, a god. 2, *a king, a prince.* 3, *a title of honour added to names;* his majesty, his honour. ದೇವರ್, your honour (Čpr. 5, after 135). 4, Indra; Šiva. 5, sign for a long syllable (Čh.). 6, a certain metrical foot (Čh.). 7, a fool, a dolt. Pl. ದೇವರ್, ದೇವರು (Bp. 60, 29); ದೇವರ್ಕಳ್ (Hlâ. I, 115); ದೇವಗಳ್ (Bp. 31, 25; 32, 10; 33, 19; 36, 9; 37, 61).—The plural honorific is used also with regard to men, but especially with regard to a deity or an idol, the verb appearing in the singular (B. 4, 144. 178; 5, 132; My.), or in the neuter (My.). ದೇವರೊಳ್ ನಿರ್ದೋಷಿಯಾಪ್ತಂ (Šmd. 163). ದೇವರ ಗಣ್ಟು ಹೋದರೆ ಪೂಜಾರೀ ಸಣ್ಟ ಹೋಯಿತು.—ದೇವರ ಕಡೆಗೆ ಕೆಯ್, ಮನೆಯ ಕಡೆಗೆ ಒಯ್!—ದೇವರ ಮುನೆ ಕಾಯಿ, ಜವಳೀ ಮುನೆ ಹಣ.—ದೇವರನ್ನು

Digitized by Google

ನೋಡಲಿಕ್ಕೆ ಹೋದರೆ ದೇವಸ್ಥಾನ ಹರಿದು ಬಿತ್ತು.—ದೇವರ ಸತ್ಯಕ್ಕೆ ಕಡಿಮೆಯಾದರೆ ಕಂಚಿನ ಬೆಲೆಗೆ ಕಡಿಮೆಯಿಲ್ಲ.—ದೇವರು ಕೊಟ್ಟರೂ ಪೂಜಾರಿ ಕೊಡ (Prvs.). ಆ ದೇವ ಈ ದೇವ ಮಾದೇವನೆನ ಬೇಡ; ಆ ದೇವರ ದೇವ ಭುವನಪ್ರಾಣಿಗಳಿಗಾದವನೆ ದೇವ (Sp.). — ದೇವಗಣಿಗಿಲು. -ಕಣಿಗಿಲು. A white sort of oleander (My.). — ದೇವಯ್ಯ. -ಅಯ್ಯ. N. (Bp. 54, 71). See ಅಂಕ-, ಆಯ್ಕೆ-, ಕೇತಿ-, ಡೋಹರ ತಕ್ಕ-, ಪರಿಣಾಮಿ-, ಬಂಕಿ-, ಬಲಹರಿ-, ಬೊಮ್ಮ-, ಭೋಗಿ-, ಮಾಳಿ-, ರುದ್ರ-, ಲಕ್ಕ-, ಸುಂಕಿ-. — ದೇವರ ದಾಸಿ. N. (Bp. 9, 38; 51, 36. 42. 62; 58, 4). — ದೇವರಸ. -ಅರಸ. N. (Bp. 58, 2. 11). — ದೇವರು ದಿಣ್ಣರು. dupl. (My.).

ದೇವಕನೆಕ dêva-kaniša. N. of a plant (ಪಚ್ಚೆ Mr. 132).

ದೇವಕಾಂಚನ dêva-kâñcana. The tree Bauhinia purpurea. (R.).

ದೇವಕಾರ್ಯ dêva-kârya. Worship of the household gods (My.); any act of worship; any religious rite (Bp. 44, 72).

ದೇವಕಿ dêvaki. *Dêvaki, the wife of Vasudêva and mother of Krishṇa* (Mr. 20; J. 6, 44. 48).

ದೇವಕೀತನಯ dêvakî-tanaya. Krishṇa (ಬಾಲಕ Mr. 525).

ದೇವಕೀನನ್ದನ dêvakî-nandana. *Krishṇa.*

ದೇವಕುಲ dêva-kula. = ದೇಗಲ, ದೇಗುಲ. A Vidyâdhara (ಬಿಜ್ಜೋದರ Kk. 10 *b*). 2, an Apsaras (ಅಚ್ಚರ 10 *b*). 3, a temple.

ದೇವಕುಸುಮ dêva-kusuma. *Cloves* (ತ್ರಿಸನ್ಧಿ Mr. 132; ಲವಂಗ, ಲವಿ, ತೀಬು 143).

ದೇವಖಾತ dêva-khâta. Dug by the gods: *hollow by nature.* 2, *a natural pond.*

ದೇವಖಾತಕ dêva-khâtaka. *A natural pond.*

ದೇವಗಂಗೆ dêva-gangĕ. The celestial Ganges (My.).

ದೇವಗಣ dêva-gaṇa. A troop or class of gods. 2, a class of nakshatras (My.).

ದೇವಗಣನಾಥ dêvagaṇa-nâtha. Indra. 2, a N. (Bp. 9, 42).

ದೇವಗತಿ dêva-gati. The state of the gods; svarga (Abh. P. 6, after 35; 16, after 39).

ದೇವಗೇಹ dêva-gêha. A temple (ಕೇದಾರ, o. r. ಶಿವಾಲಯ Nn. 38).

ದೇವಗ್ರಾಮ dêva-grâma. = ದೇವಪುರ No. 1. (J. 18, 64).

ದೇವಚಿಕಿತ್ಸಕ dêva-cikitsaka. A physician of the gods. ದೇವಚಿಕಿತ್ಸಕಂಗಳ್, *the two Aśvins.*

ದೇವಚ್ಛನ್ದ dêva-c-chanda. *A necklace of pearls consisting of a hundred strings* (ನೂಱು ಸರಮುತ್ತು Mr. 338).

ದೇವಜಗ್ಧಕ dêva-jagdhaka. *A kind of fragrant grass* (= ಕತ್ತೃಣ).

ದೇವಡಿ dêvaḍi. = ದೇಹಲಿ. A porch or vestibule; the threshold; a raised terrace in front of the door (Mhr. ದೇವಡೀ, ದೇಹುಡೀ; ಪ್ರಘಣ G.; Br.); a house (My.).

ದೇವಡಿಗ dêva-aḍiga. (Smd. 239). An attendant upon an idol.

ದೇವತನ dêvatana. = ದೇವತ್ವ. (J. 6, 54).

ದೇವತರು dêva-taru. The divine tree: the holy fig tree. 2, *a celestial tree; the tree of plenty,* a general name for the five trees mandâra, pârijâtaka, santâna, kalpavṛiksha and haricandana.

ದೇವತಾಂಶ dêvatâ-amśa. A part of the deity; divine (B. 4, 167; My.).

ದೇವತಾಉತ್ತಾರ dêvatâ-uttâra. = ದೇವದಾಯ. (My.).

ದೇವತಾಕಾರ್ಯ dêvatâ-kârya. = ದೇವಕಾರ್ಯ. (My.).

ದೇವತಾಡ dêva-tâḍa. = ದೇವತಾಲ, ದೇವತಾಳ, ದೇವತಾಳೆ, ದೇವದಾಳಿ. *A kind of grass, Lipeocercis serrata* Trin. (= ಖರೆ, ಗರಿ, ಜೀಮೂತ). 2, the climbing herb Luffa acutangula Roxb. or L. foetida Cav.

ದೇವತಾಮೂಢ dêvatâ-mûḍha. Folly with regard to deities (Śâstrasâra in W. v. 1259).

ದೇವತಾಯನ dêvatâ-âyana. *A temple.*

ದೇವತಾರ್ಚನೆ dêvatâ-arcanĕ. Worship of the gods (Bp. 24, 28). See Nr. s. ಕಪ್ಪಡಿಗ.

ದೇವತಾಲ dêva-tâla. = ದೇವತಾಡ. (See Nr. s. ದೇವದಾಳಿ).

ದೇವತಾವಿನಿಯೋಗ dêvatâ-viniyôga. Application (of money, land, etc.) to the benefit of idols (My.).

ದೇವತಾಳೆ dêva-tâḷĕ. = ದೇವತಾಲ. (ದೇವತಾಡ, ಜೀಮೂತ, etc. Si. 138).

ದೇವತೆ dêvatĕ. ದೇವತಾ. The state or nature of a deity, divine dignity or power, divinity. 2, *a deity, a god* (Bp. 23, 17).

ದೇವತ್ವ dêvatva. = ದೇವತೆ No. 1. (My.).

ದೇವದಣ್ಡಿ dêva-daṇḍi. — ದೇವದಣ್ಡಿಯ ಕಾಯಿದೇವ. N. (Bp. 58, 10).

ದೇವದತ್ತ dêva-datta. God-given. 2, N. of the conch-shell of Arjuna (J. 13, 2. 8). 3, one of the vital airs, that which is exhaled in yawning (Sk.; ಮೇಲು ಕೆಳಗಂ ನೋಡುವುದು Mr. 52). 4, (when used in grammatical examples =) any one, a certain man, etc. 5, N. (B. 3, 33; My.).

ದೇವದನ್ತಿ dêva-danti. A shrubby creeper, the Indian jalap, Ipomœa turpethum R. Br. (St. & Pl.).

ದೇವದಾಯ dêva-dâya. Lands allotted free of rent for the support of pagodas (Br.; My.).

ದೇವದಾರ dêva-dâra. Tbh of ದೇವದಾರು. (G. 263. 386; My.).

ದೇವದಾರು dêva-dâru. *A species of pine, Pinus deodora* Roxb. 2, the red cedar, Erythroxylon monogynum Roxb. (St. & Pl.). See ಚೊಪ್ಪಟೆ.

ದೇವದಾಸ dêva-dâsa. A servant of a god or of the gods; N. (My.).

ದೇವದಾಸಿ dêva-dâsi. A courtezan, especially one employed as a dancer, etc. in a temple (My.).

ದೇವದಾಳಿ dêva-tâḷi. A kind of tree. ದೇವದಾಳೀ ವೃಕ್ಷ (ವೇಣಿ, ಗರಾಗರಿ, ದೇವತಾಳ, etc.), ದೇವದಾಳೀ ಕಾಯಿ ಪ್ರಸಿದ್ಧ (Si. 138). 2, = ದೇವತಾಡ (ದೇವತಾಲ, ಜೀಮೂತ, etc. Nr.; ತಾಡಕ Mr. 133). 3, a kind of cucurbitacaeus plant (Sk.).

ದೇವದುನ್ದುಭಿ dêva-dundubhi. A divine or celestial drum. (J. 31, 74; 33, 45).

ದೇವದೂತ dêva-dûta. A messenger of the gods, an angel. (My.).

ದೇವದೇವ dêva-dêva. The god of the gods; the chief of the gods: Śiva (Bp. 1, 60; 38, 72; 44 sum.; 44, 6; 58, 47; J. 15, 23).

ದೇವದೇವೇಶ dêvadêva-îśa. The lord among the chiefs of the gods: Śiva (Bp. 60, 7).

ದೇವದ್ರ್ಯಕ್ dêva-dryak. ದೇವದ್ರ್ಯಂಚ್. Turned towards the gods: *adoring the gods.*

ದೇವನ dêvana. 1. Going, motion. 2, emulation, desire to excel or overcome. 3, affair, business, profession. 4, *sport, play.* 5, *a die, dice for gambling.* 6, gaming, gambling. See ಗಮಿಸುವಿಕೆ and ವ್ಯವಹರಿಸುವಿಕೆ.

Digitized by Google

ದೇವನ **dêvana. 2.** Lamentation, wailing, grief, sorrow. See ಪರಿ-.

ದೇವನಗರಿ **dêva-nagari.** = ದೇವಪುರ 1. (J. 19, 55).

ದೇವನಗರೀಶ **dêvanagarî-îśa** N. of an idol of Krishṇa (J. 32, 57).

ದೇವನದಿ **dêva-nadi.** The Ganges (Mr. 413).

ದೇವನಾಗರಿ **dêva-nâgari.** The divine city writing: the character in which Saṁskṛita is usually written. (My.).

ದೇವನಾಮ್ಪಟ್ಣ **dêvanâm-paṭna.** The fort of St. David's on the Coromandel coast (My.).

ದೇವನಾಳ **dêva-nâḷa.** ದೇವನಾಲ. = ದೇವಲಾಲಿ. A kind of reed, Arundo bengalensis (ನಡ, ಧಮನ, ಪೋಟಗಲ Nr.; Si. 163). ದೇವನಾಳಂ ಪಿರಿಪಾಗಿರ್ಪ ಭೂಮಿ (ನಪ್ವತ್, ನಪ್ವಲ Nr.). (Mhr. ದೇವನಳ, the reed Arundo tibialis).

ದೇವಪತ್ರ **dêva-patra.** N. of a plant (ಗಾನ್ಧಾರಿ, ಪಂಚಪತ್ರ, etc. Mr. 132, o. r. ಮಂಡಪತ್ರ).

ದೇವಪುರ **dêva-pura.** N. of a place in Mysore (J. 1, 1; now ದೇವನೂರು). 2, the residence of Indra.

ದೇವಪೂಜೆ **dêva-pûjĕ.** Worship of the gods or of an idol (ಅರ್ಚನ Čt. I, 24).

ದೇವಪ್ರಯಾಗ **dêva-prayâga.** N. of a sacred bathing place. (R.).

ದೇವಭೂಮಿ **dêva-bhûmi.** The Gaṅgâ of the sky (Sk.). 2, heaven (My.); holy ground, places where are sacred rivers, mighty idols, etc. (Mhr.). *Cf.* ಭೋಗಭೂಮಿ.

ದೇವಭೂಮಿಜ **dêvabhûmi-ja.** An ârya (ಭೂತ, ಆರ್ಯ Nn. 78).

ದೇವಭೂಯ **dêva-bhûya.** *Identification with a deity,* inferior deification.

ದೇವಮಣಿ **dêva-maṇi.** A divine jewel; the śrîvatsa mark. 2, a twist of hair (like the śrîvatsa) on a horse's neck (ಕುದುರೆಯ ನಡುಗೊರಲ ಸುಳಿ Mr. 281; see ಶ್ರೀವತ್ಸಕ).

ದೇವಮನ್ದಿರ **dêva-mandira.** = ದೇವಾಲಯ. (My.).

ದೇವಮಾತೃಕ **dêva-mâtṛika.** *Fostered or watered by Indra or by rain,* as corn, land, etc.

ದೇವಮಾದಳ **dêva-mâdaḷa.** A large kind of citron (My.).

ದೇವಮಾನ್ಯ **dêva-mânya.** = ದೇವದಾಯ. (My.).

ದೇವಮಾನುಷ **dêva-mânusha.** = ದೇವವಾನಸ. A divine man; a simple, harmless fellow.

ದೇವಮಾರ್ಗ **dêva-mârga.** The way of the gods; the sky, the ether (My.). 2, the anus or penis.

ದೇವಯಜ್ಞ **dêva-yajña.** A sacrifice to the superior gods by oblations to fire. 2, the hôma sacrifice. (My.).

ದೇವಯಾನ **dêva-yâna.** The car or vehicle of a god. (My.).

ದೇವಯಾನಿ **dêva-yâni.** N. of the wife of Yayâti. (Bhâgavata 9, 20, 25. 27).

ದೇವಯುಗ **dêva-yuga.** *An age or period of the gods comprising the four ages of mankind.*

ದೇವಯೋನಿ **dêva-yôni.** *A being of divine origin,* viz. a kinnara, gandharva, apsara, vidyâdhara, niśâčara, piśâča, guhyaka, siddha, nabhaśčara, yaksha and bhûta (Mr. 56; ಭೂತ 494).

ದೇವರ **dêvara.** = ದೇವೃ. *A husband's brother,* especially his younger brother.

ದೇವರಥ **dêva-ratha.** *A car for carrying the images of the gods in a procession;* the car or vehicle of a deity (ಪುಷ್ಪಕ, ಸುರರ ರಥ Mr. 285).

ದೇವರಮ್ಯ **dêva-ramya.** N. of a vṛitta (Čh.).

ದೇವರಾಜ **dêva-râja.** A divine ruler; king of the gods: Indra. 2, N. (My.).

ದೇವರಾಜೇನ್ದ್ರ **dêvarâja-indra.** The chief of divine rulers. 2, N. (Râghč. 1, 42).

ದೇವರ್ಷಿ **dêva-ṛishi.** A ṛishi or saint of the celestial class, as Nârada, Atri, etc. (My.). See ಅಮರಮುನಿ, ರವಣಾಯ.

ದೇವಲ **dêvala.** *An attendant upon an idol;* a Brâhmaṇa who subsists upon idol-offerings, etc. 2, N.

ದೇವಲಕ **dêvalaka.** = ದೇವಲ. (Bp. 16, 13).

ದೇವಲಾಮ್ಬಿಕೆ **(dêvala-ambikĕ).** N. (Bp. 57, 7).

ದೇವಲಾಲಿ **dêva-lâli.** = ದೇವನಾಳ. ದೇವನಾಳ (ನಡ, etc.); ದೇವಲಾಲೀ ಕಡ್ಡಿಗಳಗೂ ಹೆಸರು (Si. 163).

ದೇವಲಿಪಿ **dêva-lipi.** A divine writing (Bp. 5, 60).

ದೇವಲೋಕ **dêva-lôka.** Heaven (ಸ್ವರ್ಗ Nn. 115). ನಾಯಿ ದೊಗಳದರೆ ದೇವಲೋಕ ಹಾದೀ?— ದೇವಲೋಕಕ್ಕೆ ಹೋದರೂ ಭೂಲೋಕ ತಪ್ಪದು (Prvs.).

ದೇವವರ್ಧಕಿ **dêva-vardhaki.** *Tvashṭri, the carpenter of the gods.*

ದೇವವಲ್ಲಭ **dêva-vallabha.** *The tree Rottleria tinctoria* Roxb.

ದೇವವಸ್ತ್ರ **dêva-vastra.** (= ದೇವಾಂಗ). A divine garment (Bp. 61, 22).

ದೇವವಾನಸ **dêvavânasa.** Tbh. of ದೇವಮಾನುಷ (Śmd. 380).

ದೇವವೈರಿ **dêva-vairi.** A râkshasa (ರಾಕ್ಷಸ, ಪುಣ್ಯಜನ Nn. 95).

ದೇವಸ **dêvasa.** = ದಿವಸ. (ದಿವಸ Čt. I, 58).

ದೇವಸಭೆ **dêva-sabhĕ.** *An assembly of the gods.*

ದೇವಸಾಯುಜ್ಯ **dêva-sâyujya.** Absorption into or identification with a deity. (My.).

ದೇವಸ್ತ್ರೀ **dêva-strî.** The wife of a god; a courtezan of svarga; a celestial nymph, an Apsaras (ರಮ್ಭೆ, ಸುರಸತಿ Nn. 62).

ದೇವಸ್ಥಾನ **dêva-sthâna.** A temple (My.). See Prv. s. ಮುಷ್ಟಿ.

ದೇವಸ್ವ **dêva-sva.** The property of the gods; property applicable to the service of idols (My.).

ದೇವಾಕ್ಷರ **dêva-akshara.** Certain metrical feet (Čh.).

ದೇವಾಗಾರ **dêva-âgâra.** = ದೇವಾರ. The dwelling of the gods or of an idol; heaven (ಸ್ವರ್ಗ Nn. 71); a temple.

ದೇವಾಂಗ **dêva-aṅga.** N. of an emanation from the body of Sadâśiva, said to be the inventor of the art of weaving. (C.). 2, a kind of cloth (ಪಟಭೇದ Mr. 342; V. 42, after 21; J. 30, 15), silk cloth (T., S. Mhr.). 3, the penis (My.). ಪ್ರಸ್ತಾವ ನುಡಿಯಲ್ ಪ್ರಶಸ್ತವಾಗಿರ ಬೇಕು; ಪ್ರಸ್ತಾವ ತಪ್ಪಿ ನುಡಿದರೆ ದೇವಾಂಗದುಸ್ತು (the cover of the privities) ಬಿದ್ದನ್ತೆ (Sp.). 4, N. of a merchant (Čpr. 3, after 76). — ದೇವಾಂಗದವರು. -ಅವರು. A class of Śaiva weavers (C.; Tĕ. ದೇವಾಂಗಿ).

ದೇವಾಂಗನೆ **dêva-aṅganĕ.** = ದೇವಸ್ತ್ರೀ. (My.; Čb. 70. 112).

ದೇವಾಜೀವ **dêva-âjîva.** *An attendant upon an idol;* a low Brâhmaṇa.

ದೇವಾದ್ರಿ **dêva-adri.** Mount Mêru (My.).

ದೇವಾಧಿದೇವ **dêva-adhidêva.** A god over all other gods (My.); an Arhat of the Jainas.

ದೇವಾಧಿಪ **dêva-adhipa.** The king of the gods: Indra.

ದೇವಾಧಿಪಪುರ **dêvâdhipa-pura.** Heaven. 2, a certain metrical foot (Čh.).

ದೇವಾನಾಮ್ಪ್ರಿಯ **dêvânâm-priya.** The beloved of the gods: simple, foolish; a fool. 2, a goat. (R.).

Digitized by Google

ದೇವಾಪಿ dêva-âpi. The friend of the gods;—N. of a ṛishi;—N. of a king.

ದೇವಾರ dêvâra. Tbh. of ದೇವಾಗಾರ (Šmd. 883).

ದೇವಾರಾಧನೆ dêva-ârâdhanĕ. Worship of the gods or of a god, especially idolatry (My.).

ದೇವಾರಿ dêva-ari. = ದೇವವೈರಿ. (My.).

ದೇವಾರ್ಚಕ dêva-arčaka. A worshipper of the gods; a pûjâri (My.).

ದೇವಾರ್ಚನೆ dêva-arčanĕ. The worship of the gods; idolatry. (My.).

ದೇವಾರ್ಯ dêva-ârya. N. (Bp. 1, 14).

ದೇವಾಲಯ dêva-âlaya. The residence of the gods: heaven. 2, a temple (ಆಯತನ Mr. 193; C.; B. 4, 174; Bp. 4, 52; 32, 52; J. 3, 18). 3, a temple of Šiva (ಶೇವಾರ, ದೇವಗೇಹ, o. r. ಶಿವಾಲಯ Nn. 38).

ದೇವಾಶ್ವ dêva-aśva. *The horse of a god;* Indra's horse.

ದೇವಿ dêvi. 1. = ದೇಮಿ, ದ್ಯಾಮಿ. A goddess. 2, Durgâ (Bp. 50, 2; My.). 3, *a queen*, chiefly in theatrical language (ನರ್ತನದ ದೇವಿ Mr. 83; Bp. 44, 40); a princess; a lady. 4, the small-pox (My.); vaccinia. 5, *the plant Medicago esculenta* Rottl. Roxb. (Trigonella corniculata Lin.). 6, *the plant Sanseviera roxburghiana* Shult. — ದೇವಮ್ಮ. -ಅಮ್ಮ. N. (My.). — ದೇವಿಪಣ್ಡಿತ. A vaccinator (My.).

ದೇವಿ dêvi. 2. = ದೇಣ, etc. Giving; a thing to be given. See ಲೇವಾದೇವಿ.

ದೇವಿಕೆ dêvikĕ. *N. of a river*.

ದೇವುಳಿಗ dêva-uḷiga. (Šmd. 237). An attendant upon an idol (My.).

ದೇವೃ dêvṛi. = ದೇವರ. *A husband's brother,* especially his younger brother.

ದೇವೇನ್ದ್ರ dêva-indra. The chief of the gods: Indra (ಇನ್ದ್ರ Nn. 53; ಪುರನ್ದರ, ಇನ್ದ್ರ 57; ಬಿಡೌಜ, ಹರಿ 10; Šmd. 145).

ದೇವೇನ್ದ್ರತ್ವ dêvêndratva. The state or dignity of Indra (Bp. 18, 22).

ದೇವೇನ್ದ್ರಪಟ್ಟ dêvêndra-paṭṭa. The frontlet or tiara of the chief of the gods (Bp. 41, 11).

ದೇವೇಶ dêva-îśa. The chief of the gods: Indra (Bp. 24, 48).

ದೇವೋತ್ತಮ dêva-uttama. N. of the author of the Nânârtha-ratnâkara (Nn. 3).

ದೇಶ dêśa. = ದೇ 2, ದೇಸ. Pointing out, showing; teaching; see ಅನು-, ಉಪ-, ನಿ-. 2, any place or spot shown or pointed out; *a place, a spot; a side, a part, a department; a country, a district* (ನಾಡು Nn. 50). — ದೇಶ ದೇಶ. rep. (Bp. 59, 56).

ದೇಶಕಾಲ dêśa-kâla. Place and time; the proper place and time. (My.).

ದೇಶಕಾಲವರ್ತಮಾನ dêśakâla-vartamâna. News with regard to place and time (My.).

ದೇಶನ dêśana. Pointing out, etc. See ಪ್ರ-.

ದೇಶಪರ್ಯಟನ dêśa-paryaṭana. = ದೇಶಾಟನ. (My.).

ದೇಶಪಾಣ್ಡ್ಯೆ dêśa-pâṇḍyĕ. (-ಪಾಣ್ಡೆ. -ಪಾಣ್ಡೆ). An hereditary officer of a mahâl (Mhr.); a recordkeeper, a registrar, a clerk (Br.; R.); the head revenue-officer of a district (Br.).

ದೇಶಬಾನ್ಧವ dêśa-bândhava. A kinsman or friend on account of the (same) country: a countryman (B. 4, 142).

ದೇಶಭಾಷೆ dêśa-bhâshĕ. The dialect of a country. (My.).

ದೇಶಭೇದ deśa-bhêda. (A variety of country), a certain country (ಮರುತ Nn. 72).

ದೇಶಭ್ರಷ್ಟ deśa-bhrashṭa. Expelled from a country, expatriated (My.).

ದೇಶಭ್ರಷ್ಟತ್ವ deśabhrashṭatva. Expatriation (My.).

ದೇಶರೂಪ dêśa-rûpa. *Conformity with place, propriety, fitness.*

ದೇಶಶಾಖೆ dêśa-śâkhĕ. = ದೇಸಾಕೆ. A sub-division, etc. of a country.

ದೇಶಸ್ಥ dêśa-stha. Resident or existing in a country. 2, a tribe of Brâhmaṇas, immigrated from the north and belonging to the Mâdhva and Smârta sects (C.; Mhr.).

ದೇಶಾಚಾರ dêśa-âčâra. The custom and manners of a country (My.).

ದೇಶಾಟನ dêśa-aṭana. Journeying; travelling abroad (B. 4, 155; My.).

ದೇಶಾಧಿಪತಿ dêśa-adhipati. = ದೇಶಾಧೀಶ. (My.).

ದೇಶಾಧೀಶ dêśa-adhîsa. The chief or ruler of a country (Mr. 15).

ದೇಶಾನ್ತರ dêśa-antara. Another or foreign country (B. 4, 6. 152. 160). 2, longitude (Sk., Mhr.).—ದೇಶಾನ್ತರದವರಿಗೆ ಸ್ವತನ್ತ್ರ ಕೊಟ್ಟರೆ ತನ್ನ ಭೋಜ ಹೋಗದೇ?—ದೇಶಾನ್ತರ ಹೋದರೂ (if one goes to—) ಸ್ವತನ್ತ್ರವಿರ ಬೇಕು.—ದೇಶಾನ್ತರ ಹೋದರೆ ದೈವ ಬಿಟ್ಟೀತೇ?—ದೇಶಾನ್ತರಕ್ಕೆ ಹೋದರೂ ಶನೀಶ್ವರ ಬಿಡದು (Prvs.).

ದೇಶಾನ್ತರಿ dêśântari. Belonging to another country; a foreigner. (My.).

ದೇಶಾನ್ತ್ರ dêśa-antra. Tbh. of ದೇಶಾನ್ತರ. (My.). ಅವಾನ್ತ್ರದಲ್ಲಿ ಸಿಕ್ಕದ ಕುದುರೆ ದೇಶಾನ್ತ್ರವಾಗಿ ಓಡಿ ಹೋಯಿತು (Prv.).

ದೇಶಾಭಿಮಾನ dêśa-abhimâna. High opinion of, or love for, a country (My.).

ದೇಶಾಭಿಮಾನಿ dêśa-abhimâni. A person that has a high opinion of, or love for, his country (B. 4, 55; My.).

ದೇಶಾಯಿ dêśâyi. = ದೇಸಾಯಿ, q. v. (B. 4, 216; My.).

ದೇಶಾವರ dêśa-âvara. = ದೇಶಾವಾರ. Wandering from country to country begging alms (Mhr.). 2, alms so obtained (Mhr.). 3, foreign countries (Mhr.). 4, imports (Mhr.). 5, = ಚಲಾಯಿತ (Si. 157). ದೇಶಾವರಕ್ಕೆ ಹೋಗಿ, ಭೋಜ ಕಳಕೊಣ್ಡ (Prv.).

ದೇಶಾವಾರ dêśâvâra. = ದೇಶಾವರ. (My.).

ದೇಶಿ dêśi. = ದೇಸಿ. Pointing out, showing; instructing; guiding. See ಉಪ-. 2, of or belonging to a country (Bh. 1, 10, 2); the language or dialect of a country (Čh.; Čh. v. 16; Šmd. 43. 190). 3, a certain râga (Bp. 19, 11).

ದೇಶಿಕ dêśika. = ದೇಸಿಗ. A guide. 2, a teacher, a spiritual teacher or guru. 3, a traveller, a sojourner; a stranger. 4, Šiva. See Bp. 19, 85; 46, 40. 72.

ದೇಶೀಯ dêśîya. = ದೇಸೀಯ. Peculiar or belonging to a country or province, provincial, native; (a letter, word, etc.) pertaining to the dialect or language peculiar to a country (Šmd. 26. 27. 44; Šm. 119; Kk. 3).

ದೇಶೀಯಪದ dêśîya-pada. A word belonging to a native dialect or language (Šmd. 386).

ದೇಶೀಯಾಕ್ಷರ dêśîya-akshara. A dêśîya letter (Šmd. 27 Cm.).

ದೇಶ್ಯ dêśya. = ದೇಶೀಯ. Local; provincial; native. (My.).

Digitized by Google

ದೇಷ್ಟ dêshṭa. Tbh. of ದೇಷ್ಟೃ. One who possesses knowledge (ಅರಿವವಂ Mr. 239).

ದೇಷ್ಟೃ dêshṭri. One who shows, directs, or teaches. See ಆ-.

ದೇಸ dêsa. Tbh. of ದೇಶ. (My.). See ಉತ್ತರ-, Bp. 28, 52. — ದೇಸಗತ್ತಿ. The office of a dêsâyi (B. 4, 216). — ದೇಸಗತ್ತು. = ದೇಸಗತ್ತಿ. (B. 4, 217).

ದೇಸಾಕೆ dêsâkĕ. Tbh. of ದೇಶಶಾಖೆ (Šmd. 382).

ದೇಸಾಯಿ dêsâyi. = ದೇಶಾಯಿ. An hereditary officer; the head of a district (Mhr.; My.).

ದೇಸಿ dêsi. = ದೆಸಿ, q. v. See ದೇಸಿಕಾರ್ತಿ, ದೇಸಿಗಾಱ. — ದೇಸಿವಡೆ. -ಪಡೆ. To become fit (Rsv. 1, after 135). — ದೇಸಿವೆಟ್. -ಪೆಟ್. To obtain a finished state (Čpr. 8, after 52).

ದೇಸಿ dêsi. Tbh. of ದೇಶಿ. ದೇಸಿ ತದ್ಭವಂ ತತ್ಸಮಂ (Čt. II, 2).

ದೇಸಿಕಾರ್ತಿ dêsi-kârti. A beautiful, charming woman (Čpr. 8, 52).

ದೇಸಿಗ dêsiga. Tbh. of ದೇಶಿಕ. Šiva (Šmd. 39; ಶಿವ Kk. 4; ಈಶ್ವರ Šm. 2). 2, a stranger, a homeless male (Šmd. 345; J. 18, 40; 28, 20).

ದೇಸಿಗಾಱ dêsi-gâṟa. A finisher, an artist (Bh. 2, 13, 24).

ದೇಸಿಗಿತಿ dêsiga-iti. (Šmd. 246). The wife of a dêsiga; a female dêsiga.

ದೇಸಿಂಗ dê-singa. Tbh. of Sk. ದೇವಸಿಂಹ, the lion of the gods: Šiva. — ದೇಸಿಂಗರಾಯ. N. (Bp. 51 sum.; 51, 2).

ದೇಸಿಮಾರ್ಗ dêsi-mârga. The language of the country and the style (or rhetorical expression, Abh. P. 16, 97).

ದೇಸೀಯ dêsîya. Tbh. of ದೇಶೀಯ. A provincial or dialectical term (ಶಾಕು Kk. 66).

ದೇಹ dêha. *The body* (Bp. 1, 63; ಗೂಡು Bhn. 30). ಹರಣ-ದೇಹ-ಅರ್ಥ (Bp. 39, 17). ದೇಹವಿದ್ದರೆ ಭಾವಿಸ ಬಹುದು (Prv.). — ದೇಹಸುರ್ಕು. A wrinkle (ತೆರೆ Šm. 105).

ದೇಹತೆ dêhatĕ. The possession of a body, embodiment, corporality, materiality (Bp. 26, 24).

ದೇಹತ್ಯಾಗ dêha-tyâga. Resigning the body; death. (My.).

ದೇಹದಣ್ಡನೆ dêha-daṇḍanĕ. Exercising the body (My.); mortification of the body (My.); corporal punishment (My.).

ದೇಹಧರ್ಮ dêha-dharma. The function or law of the body (Sk.); the constitution (My.).

ದೇಹಧಾರಣ dêha-dhâraṇa. Living, life, existence. (My.).

ದೇಹಧಾರಿ dêha-dhâri. Carrying or holding a body: incarnate (Mhr.); a living being, an individual (My.).

ದೇಹಬಾಧೆ dêha-bâdhĕ. A call of nature (My.).

ದೇಹರ dêhara. (= ದೇಹಲಿ). (Bp. 47, 26).

ದೇಹಲಿ dêhali. (= ದೇವಡಿ). *The threshold of a door* (ಹೊಸನ್ತಿಲ್ Kk. 47; Šm. 57; ಹೊಸತಿಲ್ Mr. 199); a raised terrace in front of a door.

ದೇಹವಂಚಕ dêha-vañcaka. A man who practises fraud with regard to the body (in his not offering it up to Šiva, Bp. 39, 19).

ದೇಹಾನ್ತ dêha-anta. The end of the body: death (B. 5, 234; My.).

ದೇಹಾವಸಾನ dêha-avasâna. = ದೇಹಾನ್ತ. (J. 5, 49).

ದೇಹಿ dêhi. Having a body, corporeal, embodied. 2, a living being, especially a man. 3, the soul (Bp. 1, 63).

ದೇಹಿಕ dêhika. Appertaining to the body; bodily. (Bp. 1, 63; 26, 24).

ದೈ dĕi. (Tbh. of ದೇಹಿ, give!). An expression of humbly begging. ದೈಯೆನ್ದಂ (Šmd. 64, one MS. ಮಾಧೈಯೆನ್ದಂ).

ದೈತ daita. Tbh. of ದಯಿತ. (ಒಡೆಯ Mr. 227).

ದೈತೇಯ daitêya. (fr. ದಿತಿ). The offspring of Diti: *a giant or Titan, an asura.*

ದೈತ್ಯ daitya. = ದೈತೇಯ. *A demon, an asura, a râkshasa* (ರಾಕ್ಷಸ Nn. 6; ರಾಕ್ಷಸಭೇದ 40. 112; see ದಾನ). ದೈತ್ಯನಾದವಗೆ ವೈತ್ಯವೆಮ್ಬುದದೇನು? (Prv.).

ದೈತ್ಯಗುರು daitya-guru. The preceptor of the Daityas: *Šukra*, the planet Venus.

ದೈತ್ಯಧ್ವಂಸಿ daitya-dhvaṃsi. Vishṇu (My.).

ದೈತ್ಯಮರ್ದನ daitya-mardana. = ದೈತ್ಯಧ್ವಂಸಿ. (My.).

ದೈತ್ಯಮುನಿ daitya-muni. N. of a ṛishi (Râm. 4, 2, 45).

ದೈತ್ಯಲೋಕ daitya-lôka. Tripura (Mr. 32).

ದೈತ್ಯವೈರಿ daitya-vairi. = ದೈತ್ಯಾರಿ No. 1. (Bp. 54, 59).

ದೈತ್ಯಾರಿ daitya-ari. *Vishṇu.* 2, sign for a short metrical syllable (Čh.).

ದೈತ್ಯೆ daityĕ. *A species of fragrant plant* (= ಮುರಾ). 2, a female daitya (My.).

ದೈನ್ಯ dainya. (fr. ದೀನ). Feebleness, wretchedness; *affliction, grief; depression, low-spiritedness* (ಮನ್ಯು Nn. 36; ಲಘು 145; ವಿಕೃತ, ವಿಪ್ರಲಬ್ಧ Mr. 242);—poverty; humbleness (Bp. 22, 53; J. 6, 28; 18, 57; My.);—meanness, covetousness. See Kâvy. IV, 2, 16.—ದೈನ್ಯದವರಿಗೆ ಮಾನ್ಯ ಮಾಡಿದರೆ ಮರಣದಲ್ಲಿ ಕಾಣುವದು.—ದೈನ್ಯವಾಗಿ ಬೇಡೋಕಿನ್ತ ದೈವಾಧೀನವಾಗೋದುತ್ತಮ (Prvs.). See ಕಡು-, ಬಲು-; ದಾಯ್ವುಡು. — ದೈನ್ಯಂಗವಿ. -ಂಕವಿ. Humbleness to come upon one (to become humble, Bp. 57, 51). — ದೈನ್ಯನ್ದೋಱು. -ಂತೋಱು. To show humility (Šsv. 2, after 25; 4, after 105). — ದೈನ್ಯಮ್ಬಡು. -ಂಪಡು. To be depressed or low-spirited; to be humble (especially in supplication, Bp. 26, 67; 27, 72; 56, 39). ದೈನ್ಯಮ್ಬಟ್ಟವ (ನಿಕೃತ, ವಿಪ್ರಲಬ್ಧ Hlâ.).

ದೈನ್ಯವೃತ್ತಿ dainya-vṛitti. Wretched, miserable subsistence; mean behaviour; humble behaviour. 2, a person of mean behaviour (Bp. 40, 67).

ದೈಯ daiya. = ದೆವ್ವ, etc. (My.; Tĕ.).

ದೈರ್ಘ್ಯ dairghya. (fr. ದೀರ್ಘ). *Length.*

ದೈವ daiva. (fr. ದೇವ). = ದೆವ್ವ, etc. Divine. 2, a deity, a god; a lord (Bp. 23, 16. 17; 36, 3; 49, 12; 51, 75; 53, 4; 54, 2. 6-15). 3, *destiny; fortune, fate, accident.* 4, property, wealth (B. 2, 20; 4, 50. 55; My.). 5, a demon or devil (My.). ಅರಸನ ಅಂಕೆಯಿಲ್ಲ, ದೈವದ ಕಾಟವಿಲ್ಲ.—ಕಣ್ಣು ಕೊಣ್ಡು ಹೋದ ದೈವ ಮತೀ ಕೊಟ್ಟತು.—ತಾನೊನ್ದೆಣಿಸಿದರೆ ದೈವವೊನ್ದೆಣಿಸಿತು.—ದೆವ್ವ ಹಿಡಿದವನಿಗೆ ದೈವದ ಯೋಚನೆ ಏನು? (Prvs.). See ವರ-, ಬಣಗು-.

ದೈವಕ daivaka. Divine; the state of being divine (Râm. 4, 2, 45).

ದೈವಜ್ಞ daiva-jña. *An astrologer.* Fem. ದೈವಜ್ಞೆ.

ದೈವತ daivata. (fr. ದೇವತಾ). *Of or relating to a god or to the gods, divine.* 2, *a deity, a god.*

ದೈವದ್ರೋಹ daiva-drôha. Perfidy committed against a deity (J. 3, 35; 4, 2).

Digitized by Google

ದೈವಪರ daiva-para. *Trusting to fate, believing in predestination,* a fatalist.

ದೈವಯನ್ತ್ರ daiva-yantra. God's control or government (J. 29 sum.).

ದೈವಯೋಗ daiva-yôga. A fortuitous combination, the intervention of destiny, fortune, chance (B. 4, 38; My.).

ದೈವಶಾಲಿ daiva-śâli. A fortunate person (ಧನ್ಯ Ĉb.; My.).

ದೈವಾಧೀನ daiva-adhîna. Depending on fate, subject to fate (or the deity, Sk.). 2, death (My.). ದೈನ್ಯವಾಗಿ ಬೇಡೋಚಿನ್ತ ದೈವಾಧೀನವಾಗೋದುತ್ತಮ (Prv.).

ದೈವಿಕ daivika. Relating to, or proceeding from, the gods; (and noun, B. 4, 223; My.). See Prv. s. ರಾಜಕ.

ದೈವು daivu. Tbh. of ದೈವ. ದೈವುಳ್ಳ ಗೃಹಸ್ಥನು (B. 4, 122). ದೈವುಳ್ಳವರು ಬಡವರಿಗೆ ಸಹಾಯ ಮಾಡುವರು (4, 142). — ದೈವುಳ್ಳತನ. The state or condition of being rich (B. 4, 194).

ದೈಷ್ಟಿಕ daishṭika. (fr. ದಿಷ್ಟ). Fated, predestined; a predestinarian, a fatalist. (R.).

ದೊಗರು dôgaru. = ದೊಗರು. (My.).

ದೊಗೆ dôge. = ದೊಸೆ. To dig or excavate with the nails, claws or an instrument; to take out, as serum from the ear, as ghee from out of a pot (My.).

ದೊಂಗರ dôngara. = ಡೊಂಗರ. (My.).

ದೊಠಾರ dôṭhâra. A firm, steadfast man (Bh. 8, 24, 41; *cf.* ದೃಢ ೧).

ದೊಠಾರತನ dôṭhâratana. Firmness, steadfastness (Bh. 7, 1, 26).

ದೊಠಾರಿಸು dôṭhârisu. To be firm, steadfast or resolute (Bh. 7, 16, 45).

ದೊಡ್ಡ doḍḍa. (genitive of a ದೊಡ್ಡು, that still exists in Tĕ., *cf.* ದೊಡ್ಡಿತು). (Of largeness, etc.), large, big, stout, thick, great; extensive, spacious; respectable; eminent; important; chief, principal; loud (ಬಹುಲ, ಸ್ಥೂಲ, ಪೀನ, ಪೀವ, ಪೀವರ Hlâ.; ಎತಂಕಟ, ಪೃಥು, ಬೃಹತ್, etc. Si. 370; C.; Tĕ. ದೊಡ್ಡ; T. ತುಱು, ತುನ್ದು, to be close or thronged, be thick together; ತುದ್ದು, closeness; see ತೊಂಗಲ್, ತೊಡೆ, ತುಱುಗು). — ದೊಡ್ಡ ಅಡವಿ. A large wood, a great forest (ಮಹಾರಣ್ಯ Si. 118). — ದೊಡ್ಡ ಅನ್ತರ. A great difference or distinction (My.); a large story of a building (My.). — ದೊಡ್ಡ ಅಲೆ. A large wave (ಉಲ್ಲೋಲ, etc. Si. 81). — ದೊಡ್ಡ ಕಲ್ಲು. A large stone or rock. ಬೆಟ್ಟದಿನ್ದ ಉರುಳ್ದ ದೊಡ್ಡ ಕಲ್ಲಂ ಗಣ್ಡಶೈಲ ಎಮ್ಬುದು (Hlâ.). — ದೊಡ್ಡ ಕಾಡುಮಲ್ಲಿಗೆ. The shrub Jasminum pubescens L. (St. & Pl.). — ದೊಡ್ಡ ಕೂಗು. A loud cry or call (ಘೋಷಣೆ G.). — ದೊಡ್ಡ ಕೂವೆ. = ಕೆಮ್ಪು ಕೂವೆ. (St. & Pl.). — ದೊಡ್ಡ ಕೆಲಸ. An important business (My.); a difficult work (My.). — ದೊಡ್ಡಕ್ಕ. -ಅಕ್ಕ. The elder one of two or more elder sisters (C.). — ದೊಡ್ಡ ಗಾದಾರಿ. The plant Grangea maderaspatana Poir. (Z.). — ದೊಡ್ಡ ಗೋರಟ್ಟೆ. (ಅಮ್ಲಾನ, ಮಹಾಸಹೆ Si. 139). — ದೊಡ್ಡ ಚಳ್ಳ. = ಚಳ್ಳೆ. (Z.). — ದೊಡ್ಡಚ್ಚು. -ಅಚ್ಚು. A large cake of jaggory (My.). — ದೊಡ್ಡ ಜಡ. Cholera (My.). — ದೊಡ್ಡ ಜಿಗಣೆ. A large leech (ದುರ್ನಾಮ, etc. Si. 90). — ದೊಡ್ಡ ಜೋಳ. The maize or Indian corn, Zea Mayis L. (St. & Pl.). — ದೊಡ್ಡಣ್ಣ. -ಅಣ್ಣ. The elder one of two or more elder brothers (My.). — ದೊಡ್ಡ ತಗಚೆ. An under-shrub, Cassia occidentalis L. (St. & Pl.). — ದೊಡ್ಡ ತಪ್ಪು. A great, serious mistake or sin (My.). — ದೊಡ್ಡ ತನ್ದೆ. = ದೊಡ್ಡಪ್ಪ. A father's elder brother (My.). 2, the husband of a mother's elder sister (My.). — ದೊಡ್ಡ ತಾಯಿ. A mother's elder sister (My.). 2, the wife of a father's elder brother (My.). — ದೊಡ್ಡ ತಾಳ್ಮೆ. Great patience (My.). — ದೊಡ್ಡ ತುಮ್ಬೆ. The herb Leucas urticaefolia Br. (Z.). — ದೊಡ್ಡ ದನ. A very good kind of cattle (My.). — ದೊಡ್ಡ ದನಿ. A loud sound or voice (ಕವಚ, ಪ್ರವಚ Nu. 88). — ದೊಡ್ಡದು. -ಅದು. = ದೊಡ್ಡಿತು, q. v. separately. A thing which is large, etc. (ಮಹತ್, etc. Si. 427). ದೊಡ್ಡದಾಗಿರುವದನ್ನು ಚಿಕ್ಕದಾಗಿ ಮಾಡುವಿಕೆ (ಸಂಕ್ಷೇಪಣ, ಸಮಸನ Si. 394). ದೋತ್ರ ದೊಡ್ಡದಾದರೆ ಗೋತ್ರ ದೊಡ್ಡದೇ? (Prv.). ವಿದ್ಯೆ ದ್ರವ್ಯಕ್ಕಿನ್ತ ದೊಡ್ಡದು (B. 1, 4). — ದೊಡ್ಡ ದೊಡ್ಡ. rep. ಬೆಟ್ಟದಿನ್ದ ಕೆಳಕ್ಕೆ ಉರುಳಿ ಕೊಣ್ಡು ಜಾರಿದ ದೊಡ್ಡ ದೊಡ್ಡ ಕಲ್ಲು ಗುಣ್ಡುಗಳು (ಗಣ್ಡಶೈಲ Si. 116). See B. 3, 33. 38. 43. 74; 5, 119. 194, 270. — ದೊಡ್ಡ ದೊಣ್ಣೆ. A large or stout bludgeon. ಕಬ್ಬಿಣದ ಕಟ್ಟು ಹಾಕಿದ ದೊಡ್ಡ ದೊಣ್ಣೆ (ಪರಿಘ, etc. Si. 412). — ದೊಡ್ಡ ದೊರೆ. The chief ruler; the first in authority at any place; etc. (My.). — ದೊಡ್ಡ ನಡೆ. A fast walk (My.). — ದೊಡ್ಡ ನಾಯಿ. A large dog; a tiger (My.; see ಹೆಬ್ಬಾರೇ ಹುಲಿ). — ದೊಡ್ಡ ನಿದ್ರೆ. Great sleep: death (My.). — ದೊಡ್ಡ ನೂಲು. Stout or coarse thread. ದೊಡ್ಡ ನೂಲ ಸೀರೆ (ಸ್ಥೂಲ ಶಾಟಕ Nr.). — ದೊಡ್ಡ ನೆಕ್ಕರೆ. A spreading shrub with purple flowers, the Indian rhododendron, Melastoma malabathricum L. (St. & Pl.). — ದೊಡ್ಡ ನೆಗ್ಗಿಲು. = ಆನೆನೆಗ್ಗಿಲು. (St. & Pl.). — ದೊಡ್ಡ ನೊಣ. A large fly (ಪತಂಗಿಕೆ, ಪುತ್ತಿಕೆ Nr.). — ದೊಡ್ಡ ಪತ್ರೆಗಿಡ. A herb, the thick-leaved Lavender, Anisochilus carnosus Wall. (St. & Pl.). — ದೊಡ್ಡಪ್ಪ. -ಅಪ್ಪ. = ದೊಡ್ಡ ತನ್ದೆ. (My.; ಪಿತೃವ್ಯ Si. 191; G.; B. 2, 25). — ದೊಡ್ಡ ಬಯ್ಯನೆಲ್ಲು. (-ಬಯ್ಯ-). A kind of paddy (My.). — ದೊಡ್ಡ ಬಸಳೆಬಳ್ಳಿ. = ಹಿರಿ-. (St. & Pl.). — ದೊಡ್ಡ ಬೀದಿ. The main street (My.). — ದೊಡ್ಡ ಬೆಟ್ಟ. A big hill, a high mountain (Si. 88. 114; My.). — ದೊಡ್ಡ ಬೆಳ್ಳೀ ಹಣ. A double fanam, worth two Aṇas (My.). — ದೊಡ್ಡ ಮಣಿ ಮರ. A lofty tree, Ailanthus excelsa Roxb. (St. & Pl.). — ದೊಡ್ಡ ಮದ್ದು. The root of the aśvagandha (My.). — ದೊಡ್ಡ ಮನಸು. -ಮನಸ್ಸು. A munificent, generous mind; generosity (My.; B. 4, 89; 5, 206). ದೊಡ್ಡ ಮನಸಿನವ (ಸ್ಥೂಲಲಕ್ಷ, ದಾನಶೂರ G.). — ದೊಡ್ಡ ಮನುಷ್ಯ. A great or respectable man (My.; Si. 258). — ದೊಡ್ಡ ಮನೆ. A large house (My.). 2, a jail (My.). ದೊಡ್ಡ ಮನೆಯನ್ನ ಓದಿ ಹೋದರೆ ಹಾಕಿದ್ದು ಎರಡು ಶಾದಿಕ್ಕ (Prv.). — ದೊಡ್ಡ ಮರ. A large tree. 2, the tree Calosanthes indica (ಮಣ್ಡೂಕಪರ್ಣ, ಪತ್ರೋರ್ಣ, etc. Si. 185). — ದೊಡ್ಡ ಮರದರಸಿನ. A climbing shrub, the tree turmeric, Menispermum fenestratum Gaert. (St. & Pl.). — ದೊಡ್ಡ ಮಾರವಾಳಿ. A very good fodder-grass, Andropogon mollicomus Kunth. (Z.). — ದೊಡ್ಡ ಮಾರ್ಗ. A main or high road. 2, a callous spot on an elphant's or a horse's leg (ಆನೆ ಕುದುರೆಗಳೊಳ್ ಆದ ಕಿಬುದೊಡೆಯ ಜಡ್ಡು Šmd. II; ಆನೆ ಕುದುರೆಗಳ ಕಿಬುದೊಡೆಯೊಳ್ ಇರದೆ ಆದ ದಡ್ಡು Kk. 92). 3, a virtuous way, good conduct (My.). — ದೊಡ್ಡ ಮೂಗು. A large nose (Bp. 20, 12). — ದೊಡ್ಡ ಮೆಕ್ಕೆಗಿಡ. = ಹಿಂಮೆಕ್ಕೆಗಿಡ. (St. & Pl.). — ದೊಡ್ಡಮ್ಮ. -ಅಮ್ಮ. = ದೊಡ್ಡ ತಾಯಿ. (My.). 2, the small-pox (C.). 3, misfortune personified as a goddess, jêshṭhâ (My.). — ದೊಡ್ಡಯ್ಯ. -ಅಯ್ಯ. = ದೊಡ್ಡಪ್ಪ. (C.). — ದೊಡ್ಡ ರತ್ನಗನ್ಧಿ. The royal Gool-mohr, a tree with showy scarlet flowers, Poinciana regia Bojer. (St. & Pl.).

Digitized by Google

— ದೊಡ್ಡ ರಾಮು. N. (Bp. 56, 33). — ದೊಡ್ಡರಿಸಿನ. -ಅರಿಸಿನ. (ಪೀತದ್ರು, ಕಾಲೇಯಕ, etc. Si. 146). — ದೊಡ್ಡವ. -ಅವ. A male person who is tall, old, great, noble, rich, etc. (ಉದಾರ Si. 454). ಸಣ್ಣವರೂ ದೊಡ್ಡವರೂ (B. 3, 70). ದೊಡ್ಡವನ ಮನೇ ನೋಟ, ಬಡವನ ಮನೇ ಊಟ.—ದೊಡ್ಡವನಾಡಿದ್ದೇ ಆಟ, ಬಡವನಾಡಿದ್ದೇ ಬಣ್ಣಾಟ.—ದೊಡ್ಡವನುಣ್ಣರೆ ಮದ್ದು, ಬಡವನುಣ್ಣರೆ ಹೇಸಿಗೆ.—ದೊಡ್ಡವನ ಸಣ್ಣತನ ಬಡವನಿಗೆ ಬಣ್ಣಾಟ.—ದೊಡ್ಡವರ ಮನೆಗೆ ಬಡನಣ್ಣ ಹೋದ ಹಾಗೆ.—ದೊಡ್ಡವರ ಸಂಗಡ ಕೂತು, ಒಡ್ಡಾದ ಹಣ್ಣು (ತಾನು ಕೆಯ್ ಹಾಕಿ) ತಿನ್ನ ಬಾರದು.—ಹೆಡ್ಡನಾದರೂ ದೊಡ್ಡವನೇ ಲೇಸು.—ದೊಡ್ಡವನ ಮಾತು ಸವಿ, ಬಡವನ ಊಟ ಸವಿ.—ದೊಡ್ಡವನ ಮನೆ ಸುಡ ಬಾರದು, ಬಡವನ ಹೆಣ್ಡತಿ ಸಾಯ ಬಾರದು.—ದೊಡ್ಡವನ ಹೆಣ್ಡತಿ ಎಲ್ಲರಿಗೂ ಅತ್ತೆ, ಬಡವನ ಹೆಣ್ಡತಿ ಎಲ್ಲರಿಗೂ ಸೊಸೆ (Prvs.). — ದೊಡ್ಡವಳು. -ಅವಳು. A female person who is tall, etc. (My.). — ದೊಡ್ಡವ್ವ. -ಅವ್ವ. = ದೊಡ್ಡಮ್ಮ. (My.). — ದೊಡ್ಡ ಶಬ್ದ. A great, loud noise (Si. 60; My.). — ದೊಡ್ಡ ಸರ್ಲೆಹಕ್ಕಿ. = ಸಿರಿಗಿರಿ. (My.). 2, = ತಾಡಿಗ್ಯ. (My.). 3, = ಸಲಿಕಬಾಯಿಹಕ್ಕಿ. (My.). — ದೊಡ್ಡ ಸಾಸುವೆ. A kind of mustard (Si. 305). — ದೊಡ್ಡ ಸುದ್ದಿ. Important news (My.). — ದೊಡ್ಡ ಹರಳುಗಿಡ. A shrub used to make hedges, Jatropha curcas Lin. (St. & Pl.; My.). — ದೊಡ್ಡ ಹಿಪ್ಪಲಿ. (ಕಪಿವಲ್ಲಿ G.). — ದೊಡ್ಡ ಹುಳಕ. A kind of sand-piper, snipe (Pr.). — ದೊಡ್ಡ ಹೆಣ್ಡತಿ. A woman whose husband has taken another wife (ಕೃತಸಾಪತ್ನಿಕೆ, etc. Si. 183). — ದೊಡ್ಡ ಹೊಟ್ಟೆ. A large belly (Bp. 59, 14). ದೊಡ್ಡ ಹೊಟ್ಟೆಯ ಮಾಧವ, N. (56, 33). ದೊಡ್ಡ ಹೊಟ್ಟೆಯವ (ಪೆರ್ಬೊಡೆಯ, ಗಣೇಶ G.). ದೊಡ್ಡ ಹೊಟ್ಟೆಯಿದ್ದವ ಹೆಡ್ಡನೋ? (Prv.). — ದೊಡ್ಡಾನೆ. -ಆನೆ. A large elephant, the leader of a herd (ಯೂಥನಾಥ, etc. Si. 269). — ದೊಡ್ಡಿಹ. (ದೊಡ್ಡು) -ಇಹ. (Greatness being therein), large, great, etc. ದೊಡ್ಡಿಹ ಎತ್ತು (ಮಹೋಕ್ಷ Nr.). ದೊಡ್ಡಿಹ ಐಶ್ವರ್ಯ (ಮಹೈಶ್ವರ್ಯ Nn. 106). ಬೆಟ್ಟದತ್ತಣಿನ್ದ ಉರುಳ್ವ ದೊಡ್ಡಿಹ ಕಲ್ಲುಗಳು (ಗಣ್ಡಶೈಲಂಗಳ್ Nr.). ದೊಡ್ಡಿಹ ವೃಕ್ಷ (ಉನ್ನತವೃಕ್ಷ Nn. 161). — ದೊಡ್ಡೊಕ್ಕಲು. -ಒಕ್ಕಲು. The chief or head inhabitant (My.); a well-to-do inhabitant (My.).

ದೊಡ್ಡತನ dŏḍḍatana. Exalted state or position, greatness, dignity, etc. (My.; ಉತ್ಕರ್ಷ, ಅತಿಶಯ Si. 390; ಭಗ, ಮಹಾತ್ಮ್ಯ, etc. 411). ದೊಡ್ಡತನದ ಅಹಂಕಾರ (ಮಾನ, ಚಿತ್ತಸಮುನ್ನತಿ 68).

ದೊಡ್ಡತ್ವ dŏḍḍatva. = ದೊಡ್ಡತನ. (My.).

ದೊಡ್ಡಸ್ತನ dŏḍḍastana. = ದೊಡ್ಡತನ, ದೊಡ್ಡಿಸ್ತನ. (B. 5, 39; My.).

ದೊಡ್ಡಸ್ತಿಕೆ dŏḍḍastikĕ. = ದೊಡ್ಡಸ್ತನ, ದೊಡ್ಡಿಸ್ತಿಕೆ. (ಆಢ್ಯನ, ಠೀವಿ G.; ಆಸ್ಪದ, ಠೀವಿ Ĉb.; My.).

ದೊಡ್ಡಿ dŏḍḍi. = ದಡ್ಡಿ 3. A cow-pen, a cattle-pound, a fold, a stable (Si. 103. 104. 113. 114; My.; M. ದೊಟ್ಟ, T. ತೊಟ್ಟಿ; cf. ತೊಟ್ಟಿ 1; T. ತೊಡು, ತೊಡುವ, ತೊಳು, M. ತೊಡು, ತೊಡುತ್ತು, ತೊಡುವ, a fold, pen, stable); a stockade for impaling wild elephants (My.); a settler's first house (My.).

ದೊಡ್ಡಿತು dŏḍḍa-itu. = (ದೊಡ್ಡದು), ದೊಡ್ಡಿತ್ತು. That is large, etc. (ಬಲ, ಸ್ಥೂಲ Nn. 14; ವಿಶಾಲ 20; ವಿಪುಲ 86; ವಿಕಟ 146; ಗಾಢ Bhn. 41). ದೊಡ್ಡಿತು or ದೊಡ್ಡಿತ್ತು (Śmd. 96). ದೊಡ್ಡಿತಾದ ಸಂಸ್ಕೃತಂ (ಘನತರಸಂಸ್ಕೃತಂ 257 Cm.). ದೊಡ್ಡಿತಪ್ಪವಂ (ಪೀವರ, ಸ್ಥೂಲ, ಬಹುಲ, ಬಲವನ್ತ Mr. 232). ದೊಡ್ಡಿತಲ್ಲಿ (Nn. 86, o. r. ದೊಡ್ಡಿತ್ತಲ್ಲಿ). ಎಳೆಗಬುಂ ತಾಂ ದೊಡ್ಡಿತತ್ತು ಆಗದೇ? (Si. 44).

ದೊಡ್ಡಿತ್ತು dŏḍḍa-ittu 1. = ದೊಡ್ಡಿತು (Śmd. 96). (ತ್ರುಂಗ, ತುಂಗ Nn. 28; ಪೃಥು 32; ವಿಪುಲ 127). ದೊಡ್ಡಿತ್ತಹುದು (ವಿಕಟ, ಪೃಥು, ಬೃಹತ್, ವಿಶಾಲ, ಪೃಥುಲ, ಮಹತ್, ವಡ್ರ, ಉರು, ವಿಪುಲ Nr.). ದೊಡ್ಡಿತ್ತಾದನ್ತಾದು (ಔನ್ನತ್ಯ Nn. 136). ದೊಡ್ಡಿತ್ತಿನಲ್ಲಿ (Nn. 28), ದೊಡ್ಡಿತ್ತಲ್ಲಿ (32).

ದೊಡ್ಡಿಸ್ತನ dŏḍḍistana. = ದೊಡ್ಡಸ್ತನ. (ಗೌರವ G.; My.; B. 5, 46. 94. 282).

ದೊಡ್ಡಿಸ್ತಿಕೆ dŏḍḍistikĕ. = ದೊಡ್ಡಸ್ತಿಕೆ. (ಸ್ಥಿತಿ Ĉb.; My.).

ದೊಡ್ಡೆ dŏḍḍĕ. The bat used at tip-cat (My.; Tĕ. ದುಡ್ಡು, T. ತುಟ್ಟು-ಕ್ಕೋಲ್, a short club or cudgel; cf. ದೊಣ್ಣೆ).

ದೊಡ್ಲಿ dŏḍli. A large shrub or small tree, Atalantia monophylla Corr. (Limonia mon. Lin., Roxb., St. & Pl.; cf. ಕಾಡುಲಿಮ್ಬೆ).

ದೊಣೆ dŏṇĕ. 1. = ಡೊಣೆ 1. (J. 10, 8; My.). ದೇವತೆಗಳಿನ್ದ ತೋಡಲ್ಪಟ್ಟ ದೊಣೆ (ಅಖಾತ, ದೇವಖಾತಕ Si. 91). ದೊಣೆಗೆ ಹೋದರೂ ಹೊಣೆ ತಪ್ಪದು (Prv.).

ದೊಣೆ dŏṇĕ. 2. = ಡೊಣೆ 2. (ಪುದೆ Ĉt. I, 37, o. r. ಪೊದೆ; Abh. P. 11, 52; 14, 171; Śiv. 8, 52).

ದೊಣ್ಡಳೆ dŏṇḍaḷĕ. = ಡೊಣ್ಡೊಳೆ, q. v.

ದೊಣ್ಡೆ dŏṇḍĕ. The state of being blended, lumpy, clotted, folded up (cf. ದೊಣ್ಡು 2; ತೊನ್ದು 1?). — ದೊಣ್ಡೆಗರುಳ್. -ಕರುಳ್. Clotted entrails (Bh. 4, 2, 66). ಕುಪ್ಪಳಿಸಿ ಗುಪ್ಪೆಗೊಣ್ಡ ದೊಣ್ಡೆಗರುಳ್ಗಳ್ (Rśv. 5, after 120). — ದೊಣ್ಡೆನರ. Clotted arteries, etc. (Bh. 6, 8, 12).

ದೊಣ್ಡೆ dŏṇḍĕ. = ತೊಣ್ಡೆ, etc. (ತುಣ್ಡಿಕೇರಿ, ರಕ್ತಫಲೆ, etc. Si. 156).

ದೊಣ್ಣೆ dŏṇṇĕ. = ಡೊಣ್ಣೆ, etc. A cudgel, a club (ದಣ್ಡ, ಲಗುಡ Si. 416; My.; Si. 281. 290. 302). ದೊಣ್ಣೇ ಹಿಣ್ಡಿದರೆ ಎಣ್ಣೆ ಬೇಡುವದೇ?—ದೊಮ್ಬಗೆ ದೊಣ್ಣೆ ಯಾಕೆ? ದೊಣ್ಣೆಗೆ ಕಣ್ಣು ಯಾಕೆ? (Prvs.). — ದೊಣ್ಣಪ್ಪನಾಯಕ. -ಅಪ್ಪ-. N. See Prv. s. ನಾನು 1. — ದೊಣ್ಣೆಕೇತ. = ತೊಣೆಕೇತ. (My.). — ದೊಣ್ಣೆಮುಳ್ಳು. A large thorn. See ದೊಣ್ಣೆಮುಳ್ಳಿನ ಜಾಲಿ.

ದೊದ್ದೆ dŏddĕ. 1. (= ದೊನ್ದಡಿ, etc.). A mass, a heap; a crowd, a mob, a host (see T. ತೊಡುದಿ s. ತೊಂಗಲ್, and see s. ದೊಡ್ಡು); tumult. See Bp. 61, 37; Bh. 6, 1, 6; 6, 7, 21; 7, 2, 10; 7, 16, 13; 7, 18, 46; J. 5, 9; 21, 20. — ದೊದ್ದೆಗೂಡು. -ಕೂಡು. A heap of boiled rice (Bh. 4, 2, 58).

ದೊದ್ದೆ dŏddĕ. 2. Indistinct or inarticulate speech connected with stuttering (Tu. ಗೊದ್ದೆ, ದೊದ್ದೆ; cf. ಗೊಜಗು). See Prv. s. ವಿದ್ಯಾ. — ದೊದ್ದೆಬಿದ್ದೆ. dupl. = ದೊದ್ದೆ. (My.).

ದೊದ್ದೆಗ dŏddĕga. A man who belongs to a crowd or host (Bh. 7, 2, 9; 7, 17, 29).

ದೊನ್ದಡಿ dŏndaḍi. = (ದೊದ್ದೆ 1), ದೊನ್ದುಳಿ 1, etc. (Bp. 5, 38; Tĕ. ದನ್ದಡಿ, ದೊನ್ದಡಿ).

ದೊನ್ದಣ dŏndaṇa. = ದೊನ್ದಡಿ, etc. (Bp. 61, 28).

ದೊನ್ದಣಿ dŏndaṇi. = ದೊನ್ದಣ, etc. (Bp. 18, 9).

ದೊನ್ದಿ dŏndi. = ದೊನ್ದೆ, q. v. (My.; Tu.). ಚಿನ್ದಿಯಾದರೂ ದೊನ್ದಿಗೆ ಆಗುತ್ತದೆ (Prv.).

ದೊನ್ದುಳಿ dŏnduḷi. 1. = ದೊನ್ದಡಿ, ದೊನ್ದಣ, ದೊನ್ದಣಿ. A mass, a crowd, a throng; squeeze; tumult,

Digitized by Google

fray (ಗೊಣ್ದಣ, ಗದಣ Ct. I, 34; ಗೊಣ್ದಣೆ, ತೆರಳ್ಕೆ, ಸಾಲ್, ಜಂಗುಳಿ, ತುಱುಗ, ತೋಮ, ತೊಮ್ಬೆ, etc., ಶ್ರೇಣೀ Šm. 54; Kk. 17; ನೆರವಿ Šm. 113; V. 7, 28).

ದೊಣ್ದುಳಿ dŏnduḷi. 2. Joy (ಸನ್ತೋಷ Šm. 56; ಮುದ 113).

ದೊಣ್ದೆ dŏndĕ. = ದೊಣ್ದಿ. A bundle of sticks, grass, rags, etc. for being kindled and used as a torch, etc. (My.). ಕೃಶಾನು ಒಳ್ಗಿರಿಸಿದ ಪುಲ್ಲ ದೊಣ್ದೆ (Rŝv. 6, 116). See ಪುಲ್.

ದೊನ್ನೆ dŏnnĕ. = ಜೊನ್ನೆ, ದೊಪ್ಪೆ, ದೊಪ್ಪೆ. A cup or dish made of leaves, to hold ghee, etc. (ಪುಟ Si. 498; My.; M.; Tĕ. ದೊನ್ನೆ, ದೊಪ್ಪೆ; T. ತೊನ್ನೈ; see s. ತುಡಿಲ್ 1, ತೊಣೆ, and Mhr. s. ದ್ರೋಣ). ದೊನ್ನೆ ತುಮ್ಬ ತುಪ್ಪ ಹೊಯ್ದರೂ ದಮ್ಮಯ್ಯ! ಎಮ್ಬೋದು ಬಿಡ.— ದೊಮ್ಬಗೆ ದೊನ್ನೆ ಯಾಕೆ? ದೊನ್ನೆಗೆ ಕಣ್ಣು ಯಾಕೆ? (Prvs.). See Bp. 18, 29; 39, 33; ತಱಗು.

ದೊಪ್ dŏp. = ದಪ್, etc. (My.). — ದೊಪ್ಪನ್. -ಎನ್. To produce the sound of ದೊಪ್ (V. 6, 16).

ದೊಪ್ಪ dŏppa. 1. = ದಪ್ಪ 2. Thickness, etc. ಬಲಿತು ದೊಪ್ಪವಾದುದು (ಸ್ಥೂಲ Si. 457). ಬಾಲದ ಬಿಳೀ ದೊಪ್ಪಬತ್ತ (ತಿತ ತೊಳ, ಯವ 304).

ದೊಪ್ಪ dŏppa. 2. = (ದಪ 1, etc., ದುಬು), ಧೊಪ್ಪ. A sound imitating that of a heavy body suddenly falling or knocking against any thing. — ದೊಪ್ಪ ದೊಪ್ಪನೆ. With the repeated sound of ದೊಪ್ಪ (Bp. 20, 14; 49, 26).

ದೊಪ್ಪನೆ dŏppanĕ. = ದುಪ್ಪನೆ, ಧೊಪ್ಪನೆ. With the sound of ದೊಪ್ಪ (Bp. 14, 18; 45, 6).

ದೊಪ್ಪಾನೆ dŏppaı-ânĕ4. = ದಪ್ಪಾನೆ. Thick, etc.; thickness, etc. ದೊಪ್ಪಾನೇ ಭದ್ರಮುಸ್ತೆ (ಭದ್ರಮುಸ್ತಕ, etc. Si. 162). ಸ್ತ್ರೀಯರ ಅಣ್ಣುಗಳ ಬಡೀ ದೊಪ್ಪಾನೇ ಪ್ರದೇಶ (ನಿತಮ್ಬ 208).

ದೊಪ್ಪೆ dŏppĕ. = ದೊನ್ನೆ, etc. (My.).

ದೊಬ್ಬಿಸು dŏbbisu. To cause to push, etc. (My.).

ದೊಬ್ಬು dŏbbu. = ಡೊಬ್ಬು, etc. To shove, to push, to thrust, to push away (My.; Tĕ.). ದೊಬ್ಬಿ ಹಾಕ ಬಹುದೇ ಮಬ್ಬನ್ನು? (Prv.).

ದೊಬ್ಬುಳಿ dŏbbuḷi. = ದುಬ್ಬಳಿ, q. v.

ದೊಮ್ಬ dŏmba. = ಡೊಮ್ಬ, etc. (My.). ದೊಮ್ಬಗೆ ದೊನ್ನೆ ಯಾಕೆ? ದೊನ್ನೆಗೆ ಕಣ್ಣು ಯಾಕೆ?— ದೊಮ್ಬರ ಸಾವು ಗಣೆಯ ಮೇಲೆ, ಬಿಲ್ಲವರ ಸಾವು ಮರದ ಮೇಲೆ (Prvs.). See Prv. s. ಬಣಜಿಗ. — ದೊಮ್ಬರ ಗಣೆ. A tumbler's pole (My.). — ದೊಮ್ಬರ ಪೋರಿ. A Dŏmba girl: a harlot (My.). — ದೊಮ್ಬರಾಟ. -ಆಟ. Tumbling (My.).

ದೊಮ್ಬರ dŏmbara. = ದೊಮ್ಬ.

ದೊಮ್ಬರಗಿತ್ತಿ dŏmbara-gitti. = ದೊಮ್ಬಿತಿ. (My.).

ದೊಮ್ಬಿ dŏmbi. = ಡೊಮ್ಬಿ, etc., ತೊಮ್ಬೆ 2. A crowd, a mob; a disorderly, riotous mob; fray, quarrel (My.; Si. 294; Tĕ. ದೊಮ್ಮಿ, ದೊಮ್ಮಿ; T. ತುಮ್ಬೈ; *cf.* ದೊಣ್ದುಳಿ 1). ದೊಮ್ಬಿಗೆ ಹೋದವನು ತರೀರದ ಹಮ್ಬಲು ಬಿಟ್ಟರೆ ಲೇಸು (Prv.). — ದೊಮ್ಬಿಜಗಳ. A street quarrel (My.). — ದೊಮ್ಬಿದಾಸರಿ. One of a company of stage players (My.). — ದೊಮ್ಬಿಸಾಕ್ಷಿ. A confused testimony (My.). ದೊಮ್ಬಿಸಾಕ್ಷಿ ಹಮ್ಬಿಗೆ ಕಾರಣ (Prv.). — ದೊಮ್ಬಿಸ್ವಾಧ್ಯಾಯ. A vain repetition or study of the vêda (My.). 2, disorderly coitus (My.).

ದೊಮ್ಬಿಗ dŏmbiga. = ದೊಮ್ಬ. (My.).

ದೊಮ್ಬಿಗಾಱ dŏmbi-gâṟa. A man that belongs to a disorderly mob, a rioter (My.).

ದೊಮ್ಬಿತಿ dŏmbiti. = ದೊಮ್ಬರಗಿತ್ತಿ. (My.).

ದೊಮ್ಬೆ dŏmbĕ. = ದೊಮ್ಬಿ, etc. (Šm. 54, o. rs. ಗೊಂಗೆ, ಗೊಮ್ಬೆ).

ದೊಮ್ಮಳಿಸು dŏmmaḷisu. To move or whirl about, or to be in a hurry and flurry, or to be alarmed, as a herd of cattle or other beasts (ತಿರ್ಯಕ್ಸಮೂಹಸಮ್ಭ್ರಮ Šmd. Db.).

ದೊರ dŏra. = ದೊರದು, ದೊರಿತು, ದೊರೆ 2, ದೊರೆದು. P. p. of ದೊರೆ 1, in ದೊರ ಕೊಳ್, -ಕೊಳ್ಳು. = ದೊರೆ ಕೊಳ್. (Bp. 4, 65; 23, 42; 27, 79; 28, 69; 53, 22; My.).

ದೊರಕಿಸು dŏrakisu. To cause to obtain;—to acquire for one's self, to obtain, etc. (Bp. 27, 2; B. 3, 34. 91; 4, 50. 113; My.).

ದೊರಕು dŏraku. = ದೊರೆ 1, q. v. (My.; Tĕ. ದೊಱುಕು). ಮುಖ್ಯ ದೊರಕದಿದ್ದಡೆ ಪ್ರತಿನಿಧಿ ಹೇಳುವ ಶಾಸ್ತ್ರವು (ಅನುಕಲ್ಪ Nr.). ನಿನಗೆ ಹೊಟ್ಟೆ ತುಮ್ಬ ಮೇವು ದೊರಕುವನ್ತೆ ನಾನು ಮಾಡುತ್ತೇನೆ (B. 3, 22). ದೊರಕದ ಏಟ್ಟೆ ಹಲಸು ಆದರೆ ನರಕೋದು ಯಾಕೆ?— ದೊರಕದರೆ ಹರಕೇ ಕೊಡ ಬಹುದು (Prvs.). See Bp. 1, 25; 8, 23; 16, 21; 27, 17; 39, 71; 43, 70; B. 2, 4.

ದೊರದು dŏradu. P. p. of ದೊರೆ 1.

ದೊರಿತು dŏritu. = ದೊರೆದು, etc. P. p. of ದೊರೆ 1. (My.). ಪುಷ್ಟಿಕರಪದಾರ್ಥಗಳು ತಿನ್ನುವದಕ್ಕೆ ದೊರಿತರೆ (B. 4, 41). ಆಹಾರವು ಅವರಿಗೆ ದೊರಿತರೆ (4, 76).

ದೊರೆ dŏrĕ. 1. To come or draw near; to be equal to, to resemble, to suit, to fit (Tĕ.; *cf.* ತುಡು); to come about, to appear (J. 2, 65). **2,** to be obtained, gained or found, to accrue (ಪ್ರಾಪ್ತಿಯಾಗು Šm. 105; C.; Tĕ.; Si. 113. 354). P. ps. ದೊರ, ದೊರದು, ದೊರಿತು, ದೊರೆ, ದೊರೆದು. ಆತನಿನ್ದ ನಮಗೆ ಬೆಳಕು ಬಿಸಿಲುಗಳು ದೊರೆಯುತ್ತವೆ (B. 2, 24). ಹೊತ್ತು ದೊರೆದವರಿನ್ದ (2, 34). ಮುಂಚೆ ಲವಂಗಗಳು ನಾಲ್ಕು ಆಣೆಗೆ ತೊಲೆ ದೊರೆಯುತ್ತಿದ್ದವು (3, 13). ಬೆಳ್ಳಿ ಶುದ್ಧಸ್ಥಿತಿಯಲ್ಲಿ ಬಹುತರವಾಗಿ ದೊರೆಯುವದೇ ಇಲ್ಲ (4, 124). See Čpr. 3, 66; Bp. 27, 22; 34, 36; J. 7, 65; 33, 4; B. 4, 179. — ದೊರೆಯಗೊಡು. -ಕೊಡು. To let be obtained, etc. ಹಣವು ಅವರ ಮಕ್ಕಳಿಗೆ ದೊರೆಯಗೊಡುವದಿಲ್ಲ (B. 5, 89).

ದೊರೆ dŏrĕ. 2. = ದೊರ, etc. P. p. of ದೊರೆ 1. — ದೊರೆ ಕೊಳ್. To come near; to come, to appear, to occur, to be in use; to arise; to accrue; to be obtained, gained, or found (ಪ್ರಾಪ್ತಿ Šmd. Dh.; ಎಡ್ Šmd. I; ಗಡಾಯಿಸು Šmd. I; ಪ್ರಾಪ್ತಿಸು Šmd. 42. 127. 136. 164. 190. 203. 270 Cm.; ಬರ್ 221. 352. 382 Cm.). ಆಗರನ್ತೆ ದೊರೆ ಕೊಮ್ಬ ಫಲವು (ಸಾನ್ದೃಷ್ಟಿಕ Nr.). See Šmd. 8. 16; Čh. v. 217; Čpr. 1, 50; 3, 65; 5, 135; Abh. P. 9, 54; 14, 144; 15, 71; Šm. 81. 110; Kk. 19; J. 5, 48; 20, 49; 28, 57. 58; 29, 33. — ದೊರೆ ಕೊಳಿಸು. To cause to be obtained (by one's self): to obtain or gain for one's self (ಗಡಾಯಿಸು Šmd. I.). 2, to cause to be got; to cause to happen, to occasion, to produce

Digitized by Google

ನಿರ್ಯೂಹ nir-yûha. = ನಿರ್ವ್ಯೂಹ. *A peg or bracket projecting from a wall to hang or place anything upon.* 2, *a chaplet worn on the crown of the head, a crest, a head-ornament;* see ಬಾಸಿಗ. 3, *a door.* 4, *extract, decoction.*

ನಿರ್ಯೋಗ nir-yôga. Inconnection, disconnection (Šâstrasâra in W. v. 1508).

ನಿರ್ಲಕ್ಷ್ಯ nir-lakshya. Disregard, contempt (My.).

ನಿರ್ಲಜ್ಜೆ nir-lajjĕ. Want of shame, indecency, impudence (My.).

ನಿರ್ಲಜ್ಜೆತನ nir-lajjĕtana. = ನಿರ್ಲಜ್ಜೆ. (ಸ್ತ್ರೀಯಾತ್ಮ G.).

ನಿರ್ಲೇಪ nir-lêpa. Unsmeared; uncontaminated, stainless, spotless; the state of being uncontaminated, spotlessness, etc. (Jns. 22, 53; My.).

ನಿರ್ಲೋಟಿಸು nir-lôṭisu. To roll or move about (Bh. 2, 9, 17).

ನಿರ್ಲೋಭ nir-lôbha. Free from desire (Sk.); freedom from desire, unavariciousness, unselfishness (My.).

ನಿರ್ಲೋಭಿ nir-lôbhi. Uncovetous, unselfish (B. 5, 228).

ನಿರ್ಲ್ವಯನಿ nir-lvayani. *The cast off skin of a snake.*

ನಿರ್ವಕ್ರ nir-vakra. Straightness, uprightness, justice (Bp. 5, 8). 2, not ambiguous, plain, evident, as guilt (22, 50).

ನಿರ್ವಂಗ nir-vaṅga. A kind of good horse (Mr. 281; ವಂಗ = ವ್ಯಂಗ?).

ನಿರ್ವಂಚಕ nir-vañcaka. Without fraud or deceit, sincere (Bp. 1, 31; My.). 2, sincerity (Bp. 28, 4; 36, 21; 59, 49).

ನಿರ್ವಂಚಕತ್ವ nir-vañcakatva. = ನಿರ್ವಂಚಕ No. 2. (Bp. 8, 22; My.).

ನಿರ್ವಂಚನೆ nir-vañcanĕ. = ನಿರ್ವಂಚಕತ್ವ. (My.).

ನಿರ್ವಪಣ nir-vapaṇa. Pouring out, sprinkling, scattering; libation, oblation; —*spending, bestowing presents;*—*gift, donation.*

ನಿರ್ವರ್ಣನ nir-varṇana. *Looking at, regarding, seeing.*

ನಿರ್ವರ್ತನ nir-vartana. *Completing, effecting, accomplishment, completion, execution.*

ನಿರ್ವರ್ತಿತ nir-vartita. Finished, completely done, accomplished (Čpr. 2, after 39; 7, after 148; 8, after 24).

ನಿರ್ವರ್ತಿಸು nir-vartisu. To complete, to accomplish, to finish (Abh. P. 7, after 47; My.).

ನಿರ್ವರ್ತ್ಯ nir-vartya. To be accomplished, to be executed or produced (adj., Šmd. 155. 156).

ನಿರ್ವಹಣ nir-vahaṇa. *Conclusion, completion, end;* the state of being spent. 2, carrying out; effecting, completing. See ಮುಗಿ, ಸಮೆ; Bp. 58, 19; 59, 38; (Šmd. 177, o. r. ನಿರ್ವಾಹಣ).

Digitized by Google

ನಿರ್ವಹಿಸು nir-vahisu. To carry out; to accomplish, to effect (Bp. 10, 54; J. 20, 7; 31, 42; Si. 238. 256. 267; My.).

ನಿರ್ವಾಣ nir-vâna. *Blown out, extinguished;* becoming extinguished. 2, *liberated from existence.* 3, dead, defunct. 4, extinction of life: *the delivery of the individual soul from the body and further transmigration, and its reunion with the universal or supreme soul* (ಕೈವಲ್ಯ, ಮೋಕ್ಷ Nn. 19; ಮುಕ್ತಿ, ಮೋಕ್ಷ, etc. Mr. 26). 5, the end of life, death (ಜನ್ಮಾಂತ, ಜನ್ಮದ ಕಡೆ 19, o. r. ಪ್ರಾಣಾಂತ್ಯ; ಜನ್ಮದವಹಣೆ Mr. 507). 6, calm; complete satisfaction or pleasure, highest felicity. 7, vacuity, vacuum. 8, setting, vanishing from sight; evening, eventide (ಅಸ್ತಮಯಸಮಯ, ಅಸ್ತಮಾನ, ಸಾಯಂಕಾಲ 19; ಅಸ್ತಮಯ 507). 9, sinking under, diving, immersion (ಮಜ್ಜನ 507). 10, a kind of penance, sanctification of the body by penance (ತಪ, ತಪೋಭೇದ 19; ವಪುಸಿದ್ಧಿ 507). 11, a Jina (507). 12, the soul (ಜೀವನು, ಆತ್ಮನು 19). 13, the body (ದೇಹ 19). 14, an elephant (ಸಾಮಜ, ಆನೆ 19; ಗಜ 507). 15, vairavaśa (ವೈರದ ವಶ 19, o. rs. ವೈರದ ತಮ, ವೈರದ ಸಮ). 16, presenting funeral oblations; funeral rites (ಉತ್ತರಕರ್ಮ, ಉತ್ತರಕ್ರಿಯೆ 19; one MS. ಉತ್ತರ = ಪ್ರತಿವಾದ; ಕರ್ಮ = ಕ್ರಿಯೆ). 17, works or performances in general (ಕಾರ್ಯ, ಕೆಲಸ, ಕಾರ್ಯಂಗಳ್ 19). 18, nakedness, nudity (My.).

ನಿರ್ವಾಣಕ್ಷೇತ್ರ nirvâṇa-kshêtra. A place where penance is performed (Śâstrasâra in W. v. 1259).

ನಿರ್ವಾಣರೇಖೆ nirvâṇa-rêkhĕ. A life-like stripe (Čpr. 6, after 64).

ನಿರ್ವಾಣಿ nir-vâṇi. A person who goes naked and is exonerated whilst living from future birth and all ritual ceremonies (Bp. 20, 16). 2, N. of an Arhat. 3, N. (My.). — ನಿರ್ವಾಣಿದೇವ. N. (Bp. 59, 3).

ನಿರ್ವಾತ nir-vâta. Free from wind; *not windy, calm, still.*

ನಿರ್ವಾದ nir-vâda. Speaking out: *obloquy, censure.* 2, *rumour, report.* 3, asseveration.

ನಿರ್ವಾಪ nir-vâpa. Pouring out, etc.; *offering oblations, especially funeral oblations;* gift, giving, alms.

ನಿರ್ವಾಪಣ nir-vâpana. 1. = ನಿರ್ವಾಪ.

ನಿರ್ವಾಪಣ nir-vâpana. 2. Blowing out, putting out, extinguishing; *extinction, annihilation; slaughter.*

ನಿರ್ವಾರ್ಯ nir-vârya. *Irresistible; acting fearlessly.*

ನಿರ್ವಾಸನ nir-vâsana. Expelling or driving from home, banishment. 2, *hurting, killing, slaughter, annihilation.*

ನಿರ್ವಾಹ nir-vâha. (= ನಿದಾವು). Causing one's self to be brought out of: bringing one's self out of, extricating one's self; a way out, an escape (My., not Sk.). ಆದಕ್ಕೆ ಆ ಮೃಗಗಳೆಲ್ಲ ನಿರ್ವಾಹವಿಲ್ಲದೇ ಒಪ್ಪಿ ಕೊಳ್ಳ ಬೇಕಾಯಿತು (B. 4, 12). ನಿಮ್ಮ ಮಾತಿನ ಪ್ರಕಾರ ಮಾಡುವೆನು, ನಿರ್ವಾಹವಿಲ್ಲ (My.). ಅವನಿಗೆ ನಿರ್ವಾಹವಿಲ್ಲ (for him there is no escape, he is going to die, My.). 2, accomplishment, achievement; effecting, doing; managing. ನನ್ನಿಂದ ನಿರ್ವಾಹವಿಲ್ಲ (I cannot accomplish it, My.). ಹಾಗೆ ಮಾಡದೇ, ನಿರ್ವಾಹವಿಲ್ಲ (B. 4, 45). ಬರೆದು ತಿಳಿಸದಿದ್ದರೆ ನಿರ್ವಾಹವಿಲ್ಲ (4, 196). See Šmd. 156. 160. 173. 3, supporting, maintaining (J. 18, 15). 4, subsisting on. 5, sufficiency, adequacy, competent provision or means of living. 6, accomplished, finished (ಸಿದ್ಧ Nn. 24); completion, end. See ವಾಕ್ಯ-. — ನಿರ್ವಾಹ ಆಪ್ಪಿಸು. To effect, to bring into being (Bp. 37, 53). — ನಿರ್ವಾಹ ಮಾಡು. = ನಿರ್ವಾಹಿಸು. 2, (to shift), to live frugally or economically, to be content with so much as is absolutely necessary to sustain life (B. 4, 74). — ನಿರ್ವಾಹ ಸಾಗಿಸು. To obtain, or supply, the means of sustenance; to maintain, to sustain (B. 3, 110; 5, 88. 186). — ನಿರ್ವಾಹ ಸಾಗು. Maintenance or sustenance to take place (B. 4, 108).

ನಿರ್ವಾಹಕ nir-vâhaka. Accomplishing, performing, effecting (adj., Sk.; My.).

ನಿರ್ವಾಹಣ nir-vâhana. = ನಿರ್ವಾಹ. (Šmd. 177, see ನಿರ್ವಹಣ).

ನಿರ್ವಾಹಶಾಲಿ nirvâha-śâli. A person who has the power of accomplishing anything (My.).

ನಿರ್ವಾಹಿಸು nir-vâhisu. = ನಿಬಾಯಿಸು. To accomplish, to effect.

ನಿರ್ವಿಕಲ್ಪ nir-vikalpa. Not admitting an alternative (Kâvy. V, 70). 2, free from change (Bp. 18, 100; My.).

ನಿರ್ವಿಕಾರ nir-vikâra. Unchanged; unchangeable, immutable (Bp. 38, 27; 61, 43; My.).

ನಿರ್ವಿಕಾರತೆ nir-vikâratĕ. Unchangeableness, uniformity. (Šâv. 2, after 105).

ನಿರ್ವಿಕಾರಿ nir-vikâri. = ನಿರ್ವಿಕಾರ. (ಅವಿಕೃತಿ Šmd. 67. 68).

ನಿರ್ವಿಘ್ನ nir-vighna. Unobstructed, free from obstructions or difficulties; absence of obstruction or impediment (Bp. 61, 43; J. 18, 15; My.).

ನಿರ್ವಿಘ್ನತೆ nir-vighnatĕ. Absence of obstructions or difficulties (J. 1, 3).

ನಿರ್ವಿಘ್ನದಾಯಕ nirvighna-dâyaka. Gaṇêśa. (My.).

ನಿರ್ವಿಣ್ಣ nir-viṇṇa (-vinna). = ನಿರ್ವಿಣ್ಣ. Despondent; disgusted with anything; loathing; self-disparaged, overcome with fear or sorrow.

ನಿರ್ವಿಣ್ಯ nirviṇya. Tbh. of ನಿರ್ವಿಣ್ಣ. (J. 14, 10; 18, 60).

ನಿರ್ವಿಂದ nir-vinda. = ನಿರ್ವೇದ. (Čpr. 5, 96).

ನಿರ್ವಿಭವ nir-vibhava. Devoid of substance or wealth, etc. (Bp. 51, 18).

ನಿರ್ವಿರಲ nir-virala. Having no interstices (Bp. 61, 44).

ನಿರ್ವಿವಾದ nir-vivâda. Absence of contention or controversy. (My.).

ನಿರ್ವಿಶೇಷ nir-viśêsha. Absence of difference;—showing no difference, without distinction; indiscriminate (Kâvy. V, 57); without any specification (ಅವಿಶೇಷ Šmd. 123).

ನಿರ್ವಿಶೇಷಶಬ್ದ nirviśêsha-śabda. A term which does not specify (the quantity, etc., Šmd. 123).

ನಿರ್ವಿಷ nir-visha. Without venom, poisonless; innocuous (Šmd. 224; Bp. 13, 4).

ನಿರ್ವಿಷಯ nir-vishaya. Not attached to any object; separated from, or not attached to, sensual objects (Bp. 61, 43).

ನಿರ್ವೀರೆ nir-vîrĕ. *A woman whose husband and children are dead.*

ನಿರ್ವೀರ್ಯೆ nir-vîryĕ. = ನಿರ್ವೀರೆ. (ಪತಿ ಪುತ್ರರಿಲ್ಲದಳ್ Mr. 303).

ನಿರ್ವೃತಿ nir-vṛiti. = ನಿವೃತ್ತಿ. Complete satisfaction, bliss, happiness; final emancipation. (Čpr. 9, 37).

ನಿರ್ವೃತ್ತ nir-vṛitta. *Finished, completely done, accomplished.*

ನಿರ್ವೃದ್ಧ nir-vṛiddha. Not growing old, always young (Bp. 61, 44).

Digitized by Google

ನಿರ್ವೇಗ nir-vêga. Without violent motion or impetuosity, not waving, quiet, calm. (Čpr. 2, after 24).

ನಿರ್ವೇದ nir-vêda. Disgust, satiety. 2, *despondency, self-disparagement;* grief, sorrow (ಖೇದ, ಉಮ್ಮಳಿಕೆ Mr. 455). 3, one of the sañčâribhâvas (Kâvy. IV, 2, 16).

ನಿರ್ವೇಶ nir-vêśa. Entering into; gaining, obtaining. 2, *wages, hire.* 3, payment; expiation, atonement. 4, *enjoyment, enjoying* (ಉಪಭೋಗ, ಭೋಕ್ತ Mr. 457).

ನಿರ್ವೇಶನ nir-vêśana. = ನಿರ್ವೇಶ. (ಭೋಗ Mr. 514, one MS. ನಿರ್ವೇಶ).

ನಿರ್ವ್ಯಗ್ರ nir-vyagra. Not bewildered or distracted; not agitated or alarmed; steady (Čpr. 3, after 97); not eagerly engaged in (Kâvy. III, 1, A, 12).

ನಿರ್ವ್ಯಥನ nir-vyathana. *A chasm, a hole.* 2, freedom from pain.

ನಿರ್ವ್ಯಸನ nir-vyasana. The state of being unconcerned or careless (My.).

ನಿರ್ವ್ಯಾಕುಲ nir-vyâkula. Not troubled or disquieted, calm. (Čpr. 1, 91).

ನಿರ್ವ್ಯಾಜ nir-vyâja. Without deceit, candid, honest, plain, exact (Čh. v. 98. 200); honesty, etc. (Śmd. 188); without a pretext. 2, without a cause or reason (My., not Sk.).

ನಿರ್ವ್ಯಾಪಾರ nir-vyâpâra. *Without employment or business, unoccupied.*

ನಿರ್ವ್ಯೂಹ nir-vyûha. = ನಿರ್ಯೂಹ. (G.).

ನಿರ್ಹರಣ nir-haraṇa. = ನಿರುಹರಣ. Taking forth or out, rooting up, taking away, removing.

ನಿರ್ಹಾರ nir-hâra. = ನಿರ್ಹರಣ. *Extracting, extraction;* rooting up, destruction; carrying away or out; taking away, removing.

ನಿರ್ಹಾರಿ nir-hâri. *Diffusely fragrant.*

ನಿರ್ಹೇತುಕ nir-hêtuka. Causeless, reasonless. (Čpr. 3, 65).

ನಿಲ್ nil. = ನಿಲು 1, ನಿಲ್ಲು. Not to walk, to stand still; to stand; to stand up; to cease to go on, to stop; to continue in a place, to stay; to be; to wait; to remain, to be left as a remainder;—to stand or last, to continue unimpaired, as colour;—to stand, to remain fixed or without injury, as the garbha; to remain, as life; to cease, to come to an end, as rain; to cease, not to occur again, as pregnation, etc.; to make an interruption in one's work, to rest;—to endure, to be able to resist unimpaired, as the force of a blow, etc. (ಗತಿಮುಕ್ತ Śmd. Dh.; ಇರ್ Śmd. 6. 135. 174 Cm.; ನೆಲೆಗೊಳ್ 24. 70 Cm.; ನೆಲಸು 65. 122; ತಡೆ 150; My. as ನಿಲ್ಲು; T. ನಿಲ್, ನಿರ್; M. ನಿಲ್; Tě. ನಿಲು; *cf.* ನೆಲೆ). P. ps. ನಿಲ್ತು, ನಿನ್ದು (Śmd. 281). ನಿಲ್! (272), ನಿಲಲ್ (174), ನಿಲೆ (65. 70. 135), ನಿಲ್ಕುಂ (258), ನಿಲ್ಕೆ (408), ನಿಲ್ವುದು (258 Cm.), ನಿಲ್ಲದೆ (150), ನಿಲ್ಲವು (291). ಬೆನ್ನೊಳ್ ನಿಲ್ತಂ ಗಾಣ್ಡೀವಿ (288). ಗಿರಿಯುಂ ಕರಿಯುಂ ನಿಲ್ಲವು ಪವಿಮುಖದ ಕೋಟಿಗಮ್ ಅತನ ಬಾಳ್ಗಂ (291). ನಿನ್ದು ಇರ್ದಪ (ಊರ್ಧ್ವಗಜಾನು, ಸಮುತ್ಥಿತ Hlâ.). ನಿನ್ದಂ (ಸಮುತ್ಥಿತ Mr. 246). ಮಂಚದೊಳ್ ನೃಪಗೆ ನಿನ್ದು ಸೇವೆ ಮಾಡ್ಪ ದೊಮ್ಬೆಗಳು ಪಾಂಚಾಲಿಕೆಗಳು ಪುತ್ರಿಕೆಗಳಕ್ಕುಂ (204). ನಿನ್ದ ಗೆರೆ (ಲಘು 364). ನಿನ್ದುದು (ಕುಣ್ಠಿತ 453). ನಿನ್ದುದು (ಅಮೃತ 511). ನಿನ್ದಿತು (Bp. 37, 50). ತನೆ ನಿಲಲು ಪ್ರಸ್ತಾಪಿಂ (180). ನಿನ್ದ ಬಸುಬು (ಕೃಪೀಟ Nn. 85; Mr. 484). ದೇಶಿಗನಾಗಿ ನಿಲ್ವೆನಂ (J. 28, 20). ಅವುದು ಸಂಕಟಂ ನಿನಗೆ? ನಿಲ್ಲಜ, ನಿಲ್ಲಜ! (Śmd. 139). See Śmd. 6. 24. 153. 281; Čh. vs. 131. 140. 147. 150; Čpr. 1, 111. 136; 4, 47; 8, after 4; Bp. 12, 47; 14, 7. 21; 18, 55; 32, 28; 37, 27; 39, 62; 42, 28. 87; 43, 26; 45, 34; 54, 12. 36; 86, 38; Bh. 1, 10, 34; 2, 13, 11. 37. 39. 46; Râv. 5, 21. 129; 8, 112; J. 15, 3; 26, 4; 28, 26. 33. 35. 36; 31, 28; Râm. 1, 14, 1. — ನಿಲ್ ನಿಲ್. rep. (Bp. 26, 30). — ನಿಲೆ ನುಡಿ. To tell to stand or stop (Abh. P. 7, after 21). — ನಿನ್ದ ಬೇಕೆ. -ಅಬೇಕೆ. Authority, proof (ಸನ್ದ ಪವಣಂ Bhn. 46).

ನಿಲ nila. 1. = ನಿಲು 2. Standing. **2,** that stands upright: the side-post of a door (My.; T. ನಿಲೈ). **3,** remainder; balance; arrears (Tě. ನಿಲವೆ; T. ನಿಲುವೈ; M. ನಿಲವು). ನಿಲವಿಲ್ಲದೆ ಹಲದಿನ್ದ ಹೊಲದ ಉಕ್ಕೆ; ನಿಲ ನೋಡಿ ಸಂಸಾರ (Prv.). — ನಿಲಕಡೆ. = ನಿಲಗಡೆ, ನಿಲು-. Standing; attitude (see Mr. s. ತ್ರಿಭಂಗಿ). 2, cessation: leisure (My.). 3, waiting: patience, composure (My.). ನಿಲಕಡೆಯಿಲ್ಲದವನಲ್ಲಿ ಊಟಕ್ಕೆ ಹೋಗಿ (as a mendicant, etc.), ಇದ್ದ ಹಲ್ಲು ಉದುರಿಸಿ ಕೊಣ್ಡ (Prv.). — ನಿಲಗಡೆ. = ನಿಲಕಡೆ. (My.). — ನಿಲದಾಳಿ. = ನಿಲ No. 3. ನಿಲದಾಳಿ ಕೇಳಲಿಕ್ಕೆ ಹೋಗಿ, ಗೊಲ್ಲಮಿಣ್ಡನಿನ್ದ ಪೆಟ್ಟು ತಿನ್ದ (Prv.).

ನಿಲ nila. 2. = ನೆಲಹು, etc. (My.).

ನಿಲಕಿಸು nilakisu. = ನಿಲಿಕಿಸು, ನಿಲುಕಿಸು. To cause to come within reach, to make reachable (My.). **2,** to cause to stretch one's self (My.). **3,** to come within reach (My.).

ನಿಲಕು nilaku. = ನಿಲುಕು, etc. (My.). ನಾಲಿಗೆಗೆ ನಿಲಕದ ಹಾಗಿದ್ದರೆ (B. 3, 31). ಆತನ ಕೆಯ್ಗೆ ನಿಲಕದ್ದದ'ನ್ದ (3, 44).

ನಿಲಯ ni-laya. Lying or settling down; hiding one's self. 2, *a dwelling, an abode, a residence.*

ನಿಲಯವಾನ್ nilaya-vân. (ನಿಲಯವನ್ತ್). The householder who performs the domestic rites (ಗೃಹಮೇಧಿ, ಗೃಹಸ್ಥ Mr. 242).

ನಿಲವು nilavu. (Śmd. 247). = (ನಿಲ 1), ನಿಲುವು 1. Standing (Śâv. 2, 101). **2,** position, state, condition (Bp. 51, 25; Râm. 3, 6, 33). **3,** height, as that of a man, a tree, etc.; high (ಉನ್ನತ, ಉದ್ದ G.; My.; Bp. 19, 29). **4,** = ನಿಲ 1, No. 2 (My.). **5,** = ನಿಲ 1, No. 3 (My.). **6,** cessation: leisure (My.; see Prv. s. ನಿಲ 1). ಕರಡಿಗಳು ಅಯ್ಗೇಣು ನಿಡಿದು, ಮೂಡು ಗೇಣು ನಿಲವು (B. 3, 108). ತೋಳ ಸುಮಾರು ಎರ್ಡುಪರೆ ಪೂಟ ನಿಲವಾಗಿಯೂ ಮೂಡುವರೆ ಪೂಟ ನಿಡಿದಾಗಿಯೂ ಇರುತ್ತದೆ (5, 252). **7,** a resting place; a seat, a place of abode; an apartment in a house (ಸಂಸ್ಥಾನ, ಸನ್ನಿವೇಶ Hlâ.; ಸಂಸ್ಥಾನ Mr. 461; J. 8, 2). ಮನೆಯ ನಿಲವು (ಕಕ್ಷಾನ್ತರ, ಪ್ರಕೋಷ್ಠ Mr. 201). — ನಿಲವಂಗಿ. -ಅಂಗಿ. = ನಿಲುವಂಗಿ. A garment of a person's own height, a long, loose garment (My.). — ನಿಲವುಗೆಡಿಸು. -ಕೆಡಿಸು. To destroy one's standing, position, etc. (J. 2, 12).

ನಿಲಿ nili. An abbreviation of the P. p. ನಿಲಿಕಿ of ನಿಲಿಕು. — ನಿಲಿ ನಿಲಿಕು. rep. (Bp. 31, 5; 60, 29).

Digitized by Google

ನಿಲಿಕಿಸು nilikisu. = ನಿಲಕಿಸು, etc. (Bp. 47, 59; My.).

ನಿಲಿಕು niliku. = ನಿಲಕು, etc. See ನಿಲಿ ನಿಲಿಕು.

ನಿಲಿಮ್ಪ ni-limpa. = ನಿಳಿಮ್ಪ. A god, a deity (Mr. 8; Bp. 10, 38).

ನಿಲಿಮ್ಪನಿಲಯ nilimpa-nilaya. Heaven (ಬಡಿಗ Čt. II, 62).

ನಿಲಿಸು nilisu. = ನಿಲ್ಲಿಸು. To cause to stand, stop, cease, stay, etc. ನಿಲಿಸಿದಪಂ or ಕಿಲಿಸಿದಪ್ಪಂ (Šmd. 276). ನಿಲಿಸುವರ್ಥಂ (ನಿವಾರಣಾರ್ಥಂ 394 Cm.). See Čpr. 6, after 28; Bp. 16, 9; 18, 11; 22, 14; 28, 42; 32, 22; 40, 40; 42, 20. 28; 45, 12; 47, 58; 50, 12. 21; 51, 3. 31; 53, 14; 59, 13. 55; ಹಾ; Bh. 1, 8, 9; Rāv. 6, after 11; J. 5, 25. 43; 28, 54; 29, 32; Râm. 1, 14 sum.

ನಿಲು nilu. 1. = ನಿಲ್, etc. ನಿಲುವೆ (Bp. 44, 9). — ನಿಲು ನಿಲ್. rep. (Bp. 17, 11). — ನಿಲು ನಿಲ್ಲು. (Bp. 9, 31).

ನಿಲು nilu. 2. = ನಿಲ 1. — ನಿಲುಕಡೆ. = ನಿಲಕಡೆ. Patience, composure (ತಾಳುವದು Šm. 113; My.). 2, cessation: leisure (My.). — ನಿಲುಗಣ್ಣು. -ಕಣ್ಣು. A staring condition of the eye (My.). — ನಿಲುಗನ್ನಡಿ. -ಕನ್ನಡಿ. A full length mirror (My.; Tĕ.). — ನಿಲುಗಮ್ಬ. -ಕಮ್ಬ. A post or pillar that is standing (My.). — ನಿಲುಗಮ್ಬಳಿ. -ಕಮ್ಬಳಿ. A cumley that reaches to the feet (My.). — ನಿಲುಪಯಣ. Cessation of a journey (ನಿರ್ಯಾಣ, ಉಪ್ಪಯಣ Nn. 79. 90).

ನಿಲುಕಿಸು nilukisu. = ನಿಲಕಿಸು, etc. (My.).

ನಿಲುಕು niluku. = ನಿಲಕು, ನಿಲಿಕು, ನಿಲ್ಕು, (ನಿಳ್ಕು). To stretch one's self (Bp. 3, 10; My.; see s. ನಿಕ್ಕುಳಿಸು); to stretch one's self or one's limbs, from fatigue, etc. (Bp. 32, 25; 38, 16; 59, 20); to be extended to one's full height, to reach, so as to obtain something, etc., to stand upon one's tiptoes (My.; Bp. 26, 30; 42, 3; Râm. 3, 8, 69; 6, 14, 25; J. 8, 19); ನಿಲುಕಿದರೆ ಸಿಕ್ಕದೆ ಇದ್ದದ್ದು ಕೂತರೆ ಸಿಕ್ಕೀತೇ? (Prv.);—to rise up to, to rush up to or at (Bh. 3, 13, 27). **2,** to come or be within reach, to be reachable (My.). ಅದು ನನಗೆ ನಿಲುಕುವದಿಲ್ಲ (it is not within my reach, My.). ಗೊನೆಗಳು ಬಾಯಿಗೆ ನಿಲುಕಲಿಲ್ಲ (B. 2, 16). ಕಣಿಕೆ ನನ್ನ ಕೆಯ್ಗೆ ನಿಲುಕುವ ಹಾಗಿಲ್ಲ (2, 19). ಸಾರವಾನನ ಕಾಲು ಅವನಿಗೆ ನಿಲುಕಲಿಲ್ಲ (4, 181). **3,** to come within the reach of, or in contact with, something. ಯಾವ ಪ್ರಕಾರದ ದೋಷಗಳಿಗೂ ನಿಲುಕದನ್ಥ ಪರಮೇಶ್ವರನು (B. 4, 89). **4,** to apply one's self to, to begin. ಕೆಲಸಕ್ಕೆ ನಿಲುಕಿದನು (My.). **5,** to apply one's thoughts unto (Bh. 4, 6, 26). — ನಿಲುಕು ನಿಲುಕು. rep. (Bp. 26, 30).

ನಿಲುಮ್ಬು nilumbu. 1. (Šmd. 48). = ನಿಗುಮ್ಬು. To heap up, to heap together, to amass (ಪುಂಜೀಕರಣ Šmd. Dh.). **2,** to crowd (v. i.), to swarm, to be numerous (Rāv. 1, after 135; 2, after 8; Šāv. 2, after 42; 2, 47). **3,** to coil, as a serpent (Rāv. 5, after 55). See s. ಕುಪ್ಪಳಿಸು 1.

ನಿಲುಮ್ಬು nilumbu. 2. = ನಿಲುವು 2. To jump, to caper. See ಕುಪ್ಪಳಿಸು 1 & 2.

ನಿಲುವಿಕೆ niluvikĕ. Standing. **2,** = ನಿಲವು No. 3, height, tallness. ನಿಲುವಿಕೆಯಲ್ಲಿ ನಾಯಿಗಳೆಲ್ಲ ಒನ್ದೇ ಸವನೆ ಇರುವದಿಲ್ಲ (B. 3, 39). ಯಾವನಾದರೂ ಎತ್ತರವಾದ ನಿಲುವಿಕೆಯ ಮನುಷ್ಯನು (4, 65).

ನಿಲುವು niluvu. 1. = ನಿಲವು, etc. (Šāv. 1, after 81; My.; ಎತ್ತರ, ಸ್ಥಲ G.). ಹುಲಿಗಳ ನಿಲುವು ಸಾಧಾರಣವಾಗಿ ಎರಡು ಎರಡುವರೆ ಮೊಳ ಇರುತ್ತದೆ (B. 4, 35). — ನಿಲುವಂಗಿ. = ನಿಲವಂಗಿ. (My.). — ನಿಲುವು ಬೀಳು. To fall into, *i. e.* entering, the standing (of corn, *i. e.* entering or hiding in standing corn). ತುಡುಗ ಆವು ಗವ ಗವ ತಿನ್ದು, ಹೊಲ ಕಾಯುವವರ ಸುಡಿವು ಕಣ್ಣು ಕೂಡಲೆ ಜೋಳದ ನಿಲುವು ಬಿದ್ದು, ಓಡಿ ಹೋಯಿತು (B. 3, 22).

ನಿಲುವು niluvu. 2. = ನಿಲುಮ್ಬು 2. (Bp. 32, 37; 52, 42).

ನಿಲ್ಕ nilka. = ನಿಕ್ಕ, q. v.

ನಿಲ್ಕು nilku. = ನಿಲುಕು, etc. (Čpr. 7, 108; Grj. 5, 49).

ನಿಲ್ತು niltu. P. p. of ನಿಲ್, q. v.

ನಿಲ್ಲಿಸು nillisu. = ನಿಲಿಸು. (My.; Si. 91. 288. 393; B. 4, 13. 80. 104. 121. 134).

ನಿಲ್ಲಿಸುವಿಕೆ nillisuvikĕ. Placing, etc. (Si. 284).

ನಿಲ್ಲು nillu. = ನಿಲ್, q. v. (C.; B. 4, 195; J. 28, 45; Bp. 12, 12; 26, 28). P. ps. ನಿತ್ತು (My.), ನಿನ್ತು (C.; B. 2, 47; 3, 11. 33), ನಿನ್ದು. ನಿನ್ತಿತು (Bp. 11, 47), ನಿನ್ತು (My.), ನಿತ್ತಿತು (My.). ಚಿಕ್ಕ ಹಳ್ಳದಲ್ಲಿ ನೀರು ನಿನ್ತ ಪುಟ್ಟ ಪುಟ್ಟ ಕುಣ್ಟೆ (ಪಲ್ವಲ, etc. Si. 91). ಹೊಳೆ ನಿನ್ತು ಹೋದ ಮುದಕಿಯನ್ಥವಳು (ನಿಷ್ಕಳೆ 188). ನಿನ್ತು ಹೋದ ಗಾಳಿ (ನಿರ್ವಾತ, ಗತಾನಿಲ 380). ನಿಲ್ಲುತ (Bp. 20, 13). ನಿಲ್ಲುವ, ನಿಲ್ಲುವದು, ನಿಲ್ಲುತೇನೆ, ನಿಲ್ಲುತ್ತೇನೆ (My.). ನಾಲ್ವತ್ತು ಆಯ್ವತ್ತು ವರುಷದ ಹಿನ್ದೆ ಭಾಗವತದ ಪುಸ್ತಕವು, ನೂರಿಽ ಇಪ್ಪತ್ತಯ್ದು ನೂರಿಽ ಅಯ್ವತ್ತು ರೂಪಾಯಿ ಕೊಡಲಿಕ್ಕೆ ನಿನ್ತಾಗ್ಯೂ, ಹೊತ್ತಿಗೆ ದೊರೆಯುತ್ತಿದ್ದಿಲ್ಲ (B. 4, 208). ನಿಲ್ಲದಿರುವ ಮಲ್ಲನ ಸಂಗತಿ (to a malla who is in too great a hurry to give an answer) ಕಲ್ಲು ಹೊತ್ತೀಯಾ? ಅನ್ದ ಹಾಗೆ.— ನಿಲ್ಲಲಾರದ ಗುಲ್ಲು ವಣಿ, ಕೊಲ್ಲಿಸಿ ಕೊಣ್ಡ.— ನಿಲ್ಲು! ಎನ್ದರೆ ಹಲ್ಲು ಕಿಸಿದು, ಗುಲ್ಲು ಮಾಡಿದ (Prvs.). — ನಿನ್ದರು. 1. = ನಿನ್ತರು. 3rd pers. plural imperf. They stood. — ನಿನ್ದರು. 2. = ನಿನ್ದಿರು. ನಿನ್ದರಗೊಡು (B. 5, 187). — ನಿನ್ದಿರಿಸು. (-ಇರಿಸು). To cause to stand, to place, etc. (Bp. 27, 11. 12; Râm. 4, 4, 6; 6, 40, 7). — ನಿನ್ದಿರು. -ಇರು. To stand, to remain, etc. (Bp. 27, 31; B. 5, 132). — ನಿಲ್ಲಗೊಡಿಸು. -ಕೊಡಿಸು. To allow to stand, etc. (B. 4, 45). — ನಿಲ್ಲು ನಿಲು. rep. (Bp. 44, 9). — ನಿಲ್ಲು ನಿಲ್ಲು. rep. (Bp. 21, 40; 22, 33).

ನಿಲ್ಲುವಿಕೆ nilluvikĕ. Standing, etc. (Si. 288).

ನಿವಡಿಸು nivaḍisu. To become conspicuous (for good or evil qualities, Râm. 3, 5, 3; 6, 53, 99; Mhr. ನಿವಟಣೇಂ, ನಿವಡಣೇಂ).

ನಿವರಿಸು nivarisu. To cause to pass the hand gently over, etc.

ನಿವರು nivaru. To pass the hand gently over, to stroke or rub gently (My.; Tĕ. ನಿಮುರು, ನಿವುರು. ನೆಮುರು; *cf.* ನೀವು 2, ನೇವರಿಸು).

ನಿವರ್ತಕ ni-vartaka. Completing, finishing, causing to cease (Bp. 55, 19); turning back; returning; retreating, retiring; desisting from; ceasing.

ನಿವರ್ತನ ni-vartana. (also ನಿವರ್ತನೆ, My.). Accomplishment, completion;—turning back; ceasing, not happening;

Digitized by Google

desisting from; repenting;—causing to come back or return. See ಮುಗುದ್.

ನಿವರ್ತಿ ni-varti. = ನಿವೃತ್ತಿ. See ಅ-.

ನಿವರ್ತಿಸು ni-vartisu. To turn away, to drive back, to repel; to leave off, to desist from, to remove (My.). 2, to turn back; to disappear, to cease; to be removed. ಕಪಿಧ್ವಜಂ ನಿಕ್ಕೆ ನಿವರ್ತಿಸುತ್ತುಮಿರೆ (Śmd. 280).

ನಿವರ್ಹಣ ni-varhaṇa. = ನಿಬರ್ಹಣ. Throwing down; destroying; removing; *destruction, eradication, extirpation.*

ನಿವಸನ ni-vasana. 1. *A dwelling, a habitation, a house* (ಮನೆ Mr. 194).

ನಿವಸನ ni-vasana. 2. Putting on clothes; *clothes, raiment.* 2, *an under garment.* See ಶಬ.

ನಿವಸನೋದ್ವಹನ nivasana-udvahana. Raiment at weddings. See ತೆರಣ್ಣು.

ನಿವಹ ni-vaha. Bringing near; *a multitude, a quantity, a heap* (Bp. 35, 6; 36, 33; 46, 53; 52, 41; Śm. 118).

ನಿವಳಿತ ni-vaḷita. ನಿವಲಿತ. Moved, waved (Čpr. 8, after 24).

ನಿವಳಿಸು ni-vaḷisu. (= ನಿವಾಳಿಸು). To wave (a burning lamp, Čpr. 3, after 102).

ನಿವಾಜು. = ನಿವಾಜು, etc. (My.).

ನಿವಾಡ nivâḍa. Settlement, decision (Mhr. ನಿವಾಡಾ). See Bp. 45, 26; 50, 38; 53, 52; Râm. 3, 7, 39.

ನಿವಾತ ni-vâta. *Inaccessible to the wind, not reached by the wind, calm.* 2, *a place sheltered from the wind, a sheltered spot, an asylum.* 3, *an impenetrable coat of mail.* 4, N. of a demon.

ನಿವಾತಕವಚ nivâta-kavača. A class of Dânavas or Râkshasas (J. 13, 19).

ನಿವಾಪ ni-vâpa. Pouring out; scattering; seed. 2, *an oblation or offering of water, etc. to the manes of deceased parents or relatives* (see ಪ್ರೇತತರ್ಪಣ).

ನಿವಾರ ni-vâra. = ನಿವಾರಣ. (Bp. 12, 47; see ಅ-).

ನಿವಾರಕ ni-vâraka. Keeping off, warding off, removing. (My.).

ನಿವಾರಣ ni-vâraṇa. (ನಿವಾರಣೆ). *Keeping back or off, warding off, averting;* preventing, hindering, impeding, stopping, checking, interdicting, prohibiting, suppressing. See Śmd. 393; Bp. 3, 68; B. 4, 63; 5, 20; ಜ್ಯಾಘಾತ-, ತರ್ಜಿಸು, ಮಾಣ್, ಸೊಪ್ಪು.

ನಿವಾರಿಕೆ ni-vârikĕ. = ನಿವಾರಣ. (G.).

ನಿವಾರಿತ ni-vârita. Hindered, prevented, checked, forbidden, etc. (Bp. 41, 6; Rśv. 10, after 1).

ನಿವಾರಿಸು ni-vârisu. To keep back or off, to ward off, to avert, to prevent, etc. See Grj. 10, after 61; Bp. 2, 20; 22, 29. 40; 28, 60; 37, 37; 50, 76; Śśv. 1, after 79; J. 14, 7; ಪೊಡೆ.

ನಿವಾಸ ni-vâsa. = ನಿವಸನ 1. (ಮನೆ Nn. 91; Mr. 194; Bp. 28, 48; 35, 53; 37, 34).

ನಿವಾಸಸ್ಥಾನ nivâsa-sthâna. A place of residence (J. 10, 6).

ನಿವಾಸಿ ni-vâsi. Dwelling, residing; an inhabitant (Bp. 37, 21; My.; B. 3, 110).

ನಿವಾಸಿಸು ni-vâsisu. To dwell, to reside (My., occasionally).

ನಿವಾಳಿ ni-vâḷi. The act of waving (a thing, as boiled rice, salt, pepper, a lamp, a weapon, blood, a sheep's or buffalo's head, etc., etc.) downwards in front of a person or persons, or of the goddess Kâḷi, either to ward off or remove any evil or to create a feeling of satisfaction or pleasure, etc. (Grj. 10, after 79; J. 31, 14; My.; Tĕ. ನಿವಾಳಿ, ನಿವ್ವಾಳಿ). ನಿವಾಳಿಗೆ ತನ್ನ ಬಟ್ಟೆ (for wicks) ಕಚ್ಚೆಗೆ ಆದರೆ ದಿವಾಳಿಗೆ ಏನು ಮಾಡ್ಯಾನು? (Prv.). — ನಿವಾಳಿ ತೆಗೆ. = ಇದ್ದಿದೆಗೆ, ನಿವಾಳಿ ಮಾಡು. (My.). — ನಿವಾಳಿ ಮಾಡು. = ನಿವಾಳಿಸು. (My.). ನಿವಾಳಿ ಮಾಡೋಕ್ಕೆ ಹೋಗಿ, ದಿವಾಳಿಯಾದ (Prv.). — ನಿವಾಳಿಯ ಬೊಮ್ಮದೇವಯ್ಯ. N. (Bp. 58, 2).

ನಿವಾಳಿಸು ni-vâḷisu. = ನಿವಳಿಸು. To wave (a thing) slowly downwards (in front of etc.), to perform nivâḷi (Grj. 10, after 79; Bp. 4, 6; 39, 6; 43, 20; J. 22, 7; My.). ಯುದ್ಧಪ್ರಯಾಣಾದಿಗಳಲ್ಲಿ ಆಯುಧಗಳನ್ನು ಧರಿಸಿದ ಅರಸುಗಳಿಗೆ ರಕ್ಷೆಯಾಗಿ ಆರತಿಯನ್ನು ನಿವಾಳಿಸಿ ಬೆಳಗುವಿಕೆ (ಲೋಹಾಭಿಸಾರ, ಅಸ್ತ್ರಪೃದ್ರಾಜನೀರಾಜನಾವಿಧಿ Si. 291; *cf.* ನಿರಾಜಿಸು).

ನಿವಾಳಿಸುಹ nivâlisuha. = ನಿವಾಳಿ. ಶಸ್ತ್ರಧರರಹ ಅರಸುಗಳಿಗೆ ಪರಿವಾರ ಕೆಯ್ದುಗಳ ನಿವಾಳಿಸುಹಂ (ಲೋಹಾಭಿಸಾರ Nr.).

ನಿವಿಡ ni-viḍa. (ni-vila). = ನಿಬಿಡ. *Without interstices, close, contiguous, tight, compact, thick, crowded, impervious, dense, full.*

ನಿವಿಡೀಶ ni-viḍîśa. = ನಿವಿರೀಶ.

ನಿವಿರೀಶ ni-virîśa. = ನಿವಿಡ, ನಿವಿಡೀಶ. *Without interstices, etc.*

ನಿವಿಷ್ಟ ni-vishṭa. Entered; seated; fixed on, intent upon. (Bp. 38, 51).

ನಿವಿಸ nivisa. Tbh. of ನಿಮಿಷ (Śm. 18).

ನಿವಿಸು nivisu. (fr. ನಿಭ). To disguise (Čpr. 6, 78).

ನಿವೀತ ni-vîta. Wearing the sacrificial thread round the neck (ಜನ್ನಿವಾರಮಂ ಕೊರಲಲಿಕ್ಕುವದು Mr. 255). 2, *that thread so worn.* 3, *a wrapper, a mantle, a veil* (see ಪ್ರಾವೃತ).

ನಿವೀತಿ ni-vîti. Wearing the sacrificial thread round the neck (Sk.). 2, that thread so worn (My.).

ನಿವೃತ ni-vṛita. *Surrounded, enclosed.* 2, = ನಿವೀತ No. 3.

ನಿವೃತ್ತ ni-vṛitta. Returned; returning; turned back; gone, vanished; *ceased, refrained from, abstained;* prohibited; abstaining, abstracted or abstained from this world and its acts;—finished, completed.

ನಿವೃತ್ತಿ ni-vṛitti. = ನಿವೃತಿ, ನಿವರ್ತಿ. Return; disappearance, ceasing, *cessation, abstaining from action, inactivity;*—leaving off, desisting from; resigning; abstinence; rest; cessation from worldly concerns and engagements. 2, felicity, bliss, beatitude. See Čpr. 4, after 18.

ನಿವೃದ್ಧಿ ni-vṛiddhi. Great increase or growth (? o. r. ಸಿವರ್ಧ). See ಬೀಳ್.

ನಿವೇದಕ ni-vêdaka. Communicating, relating, telling (adj.). (Čpr. 2, 90; 9, 17).

ನಿವೇದನ ni-vêdana. Making known; communication, announcement; information. (My.);—delivering, offering; an offering or gift to men or idols. (My.). See ಅತ್ಮ-.

ನಿವೇದಿತ ni-vêdita. Made known, announced, told;—presented, given. See Čpr. 6, after 18; Bp. 33, 8; Rśv. 10, after 1.

ನಿವೇದಿಸು ni-vêdisu. To make known, to tell, to state (Čpr. 3, 62; 6, after 25). 2, to present, to offer (Bh. 1, 10, 4).

ನಿವೇದ್ಯ ni-vêdya. To be communicated; fit to be reported. 2, an oblation, a gift of food to an idol. (Čpr. 6, 104).

ನಿವೇಶ ni-vêśa. Entering; settling in a place; a settlement; a dwelling-place, a house (Sk.; My.); *a halting place, a camp.*

Digitized by Google

ನಿವೇಶನ ni-vêśana. = ನಿವೇಶ. Entering, etc.; *a habitation, an abode*, etc.; building ground (My.; Si. 113).

ನಿವೇಶಿತ ni-vêśita. Made to enter; entered; placed in or upon. (Čpr. 2,* after 56).

ನಿಶ್ niś. = ನಿಃ, etc.

ನಿಶ niśa. *Night.*

ನಿಶಠ ni-śaṭha. = ನಿಃಶಠ. Not false, candid, honest; honesty, sincerity; N. (J. 7, 2).

ನಿಶಠೆ ni-śaṭhĕ. Truth, honesty. See ಅತಿದಿಟ.

ನಿಶರಣ ni-śaraṇa. *Killing, slaughter.*

ನಿಶಾ niśâ. = ನಿಷಾ. Intoxication (My.; Mhr.). 2, = ನಿಶೆ. — ನಿಶಾಖೋರ. A man who takes any intoxicating substance (My.).

ನಿಶಾಕರ niśâ-kara. The night-maker: *the moon.*

ನಿಶಾಕಾಂತ niśâ-kânta. The moon (Ršv. 11, 10).

ನಿಶಾಚರ niśâ-čara. Moving about by night. 2, the moon (ಮೃಗಾಂಕ, ಚಂದ್ರ Nn. 23). 3, a thief (ತಸ್ಕರ, ಕಳ್ಳ, ಕಳ್ಳಬಂಟ 23). 4, an owl (ಘೂಕ, ಗೂಗೆ 23). 5, a kind of owl (ಪಾಲ್ವಕ್ಕಿ, ಪಾಲುವಕ್ಕಿ 23). 6, a vicious snake (ಉಗ್ರಾಹಿ, ಕ್ರೂರಸರ್ಪ 23). 7, a kind of sheat-fish (ಪಾಠೀನ, ಮೀನ್ 23). 8, a fiend, a râkshasa (ದನುಜ, ರಾಕ್ಷಸ 23). See Prv. s. ಪಿಶಾಚ.

ನಿಶಾಚರಿ niśâ-čari. A female râkshasa (J. 2, 58).

ನಿಶಾಚೂರ್ಣ niśâ-čûrṇa. A black powder (V. 9, 110).

ನಿಶಾಟ niśâ-aṭa. A demon (Abh. P. 13, 66); an owl. — ನಿಶಾಟದಲ್ಲಣ. -ತಲ್ಲಣ. Who causes demons to tremble: Vishṇu or Kṛishṇa (J. 13, 43).

ನಿಶಾಟನ niśâ-aṭana. *An owl.*

ನಿಶಾತ ni-śâta. *Sharpened, whetted, sharp.*

ನಿಶಾದರ್ಶಿ niśâ-darśi. Seeing at night: an owl. (R.).

ನಿಶಾದಿ niśâ-âdi. = ನಿಸಾದಿ 1. The beginning of night, evening.

ನಿಶಾನಾಥ niśâ-nâtha. = ನಿಶಾಪತಿ. (My.).

ನಿಶಾನಿ niśâni. An ensign, a flag, a standard (My.; Mhr., H. ನಿಶಾಣ; Si. 84. 281. 293; B. 5, 136. 155).

ನಿಶಾಂತ niśâ-anta. 1. The end of night, break of day. (My.).

ನಿಶಾಂತ ni-śânta. 2. Quiet. 2, *a house, a habitation.*

ನಿಶಾಪತಿ niśâ-pati. *The moon.*

ನಿಶಾಮಣಿ niśâ-maṇi. The moon. (R.).

ನಿಶಾಮನ ni-śâmana. *Seeing, sight; looking at, beholding; observing; hearing.*

ನಿಶಾರಣ ni-śâraṇa. *Killing, slaughter.*

ನಿಶಾಸ್ವೈರಿಣಿ niśâ-svairiṇi. A harlot. ಭೀತಿಯಿಂ ನಿಶಾಸ್ವೈರಿಣಿ ಪೋಗೆ ಬಿದ್ದ ಕಿವಿಯೋಲೆಯ ಮೌಕ್ತಿಕಪತ್ರಮೋ? (Lilv. 3, 4).

ನಿಶಾಹ್ವೆ niśâ-âhvĕ. *Turmeric.*

ನಿಶಿ niśi. 1. (= ನಿಸಿ). Night (Mr. 65; My.).

ನಿಶಿ niśi. 2. Together with, along with, accompanied by (My.; Mhr. ನಿಶೀಂ).

ನಿಶಿಕರ niśi-kara. The moon (Mr. 86).

ನಿಶಿಚರ niśi-čara. A thief (ಕನ್ನಗಳ Mr. 226).

ನಿಶಿತ ni-śita. *Sharpened, whetted, sharp, pointed* (Bp. 39, 64); virulent, as poison (58, 67); penetrating, keen (59, 37).

ನಿಶಿತತರ niśita-tara. Uncommonly sharp (Šśv. 4, 19).

ನಿಶಿವೈರಿ niśi-vairi. The sun (Mr. 34).

ನಿಶೀಥ ni-śîtha. The time of sleep, *midnight.*

ನಿಶೀಥಿನಿ ni-śîthini. *Night.*

ನಿಶೀಥಿನೀನಾಥ niśîthinî-nâtha. *The moon.*

ನಿಶುಮ್ಭ ni-śumbha. N. of a Dânava (Bp. 47, 21).

ನಿಶುಮ್ಭನ ni-śumbhana. *Killing, slaying.*

ನಿಶೆ niśĕ. ನಿಶಾ. = ನಿಸಿ. *Night.* 2, *turmeric.*

ನಿಶ್ಚಂಚಲ niś-čančala. = ನಿಶ್ಚಂಚಲಿತ. (My.).

ನಿಶ್ಚಂಚಲಿತ niś-čančalita. Unmoved, fixed, firm, steady (Bp. 24, 3).

ನಿಶ್ಚಯ niś-čaya. = ನಿಚಯ 2, ನಿಚ್ಚಯ. Ascertainment, investigation, inquiry;—accurate or certain knowledge, a firm conviction;—*certainty, positiveness* (ನಿಶ್ಚಾನ Kk. 79);—determination, resolution, final decision, settlement (ನಿಶ್ಚಿತ, ನಿಯತ Mr. 435; My.);—fixed intention, design, purpose. See ತಬ್ಸರ್. ನಿಶ್ಚಯಕ್ಕೆ ಪಕ್ಷಪಾತವೇ? (Prv.). — ನಿಶ್ಚಯಂಗೆಯ್. -ಂ-ಗೆಯ್. To regard as decided, to fix upon, to settle (Abh. P. 14, after 81). — ನಿಶ್ಚಯ ಮಾಡು. To ascertain, to arrive at a certain decision (B. 5, 219); to make certain to the mind, to satisfy one's self by proof (5, 219; My.); to resolve (4, 56; My.); to appoint (My.).

ನಿಶ್ಚಯಿಸು niščayisu. = ನಿಶ್ಚಯ್ಸು. (My.). To ascertain; to investigate; to settle; to come to a certain decision, to regard as decided (B. 2, 53); to determine, to resolve (B. 3, 97); to appoint (My.). ನಿಶ್ಚಯಿಪುದು (Šmd. 253).

ನಿಶ್ಚಯ್ಸು niščaysu. = ನಿಶ್ಚಯಿಸು. (Bp. 27, 2; 28, 51; 43, 81; 53, 22; 57, 58; My.). ನಿಶ್ಚಯ್ಸಲ್ ಪಟ್ಟುದು (ನಿಶ್ಚಿತ, ನಿಯತ Hlâ.).

ನಿಶ್ಚಲ niś-čala. = ನಿಚ್ಚಲ, ನಿಶ್ಚಳ. *Immovable, not moving, still, fixed, steady* (ಚಲಿಸದೆ ಇದ್ದುದು Nn. 33). 2, not subject to motion or fluctuation, *unchanging, invariable, unchangeable.* 3, a mountain (ಅಚಲ, ಪರ್ವತ Nn. 46). 4, an ascetic (ಸಂಯಮಿ, ಯತಿ 46). 5, the earth (= Sk. ನಿಶ್ಚಲಾ; ಇಳೆ, ಭೂಮಿ 46).

ನಿಶ್ಚಲತೆ niś-čalatĕ. The state of being immovable, etc. (Šśv. 4, 46).

ನಿಶ್ಚಲಾಂಗ niščala-aṅga. Having immovable limbs, firm-bodied, firm (Sk.); an immovable body (Šśv. 2, 79).

ನಿಶ್ಚಲಿತ niś-čalita. Unmoved; unchanged; etc. (Grj. 4, 33; Bp. 16, 27; 35, 19. 36; 44, 87; 52, 27).

ನಿಶ್ಚಿತ niś-čita. = ನಿಚಿತ 2. *Ascertained, settled, decided, established, certain* (ನಿಯತ, ನಿಶ್ಚಯ್ಸಲ್ಪಟ್ಟುದು Hlâ.); certainty (Sk.; B. 4, 16). ನಿಶ್ಚಿತಂ, decidedly, positively.

ನಿಶ್ಚಿತನಾಮ niščita-nâma. A word known from customary usage (ರೂಢನಾಮ Šmd. 94).

ನಿಶ್ಚಿತಾರ್ಥ niščita-artha. = ನಿಸ್ತಾರ್ತ. A fixed matter;—the ceremony of betrothing two persons in which the terms of the future marriage are settled, etc. (My.). 2, a man who has the firm conviction of getting something (Šśv. 2, 117).

ನಿಶ್ಚಿಂತ niš-činta. = ನಿಚ್ಚಿಂತ. Thoughtless, inconsiderate, careless, unconcerned. 2, free from solicitude, free from care or anxiety (Bp. 39, 17; 61, 44; My.). Fem. ನಿಶ್ಚಿಂತಳು (My.). 3, = ನಿಶ್ಚಿಂತೆ (Bp. 24, 34; 41, 15; 61, 54).

ನಿಶ್ಚಿಂತತೆ niš-čintatĕ. = ನಿಶ್ಚಿಂತೆ. (Čpr. 7, 3).

Digitized by Google

ನಿಶ್ಚಿಂತೆ niś-cintĕ. Freedom from anxiety or solicitude, ease (My.; B. 3, 96). ನಿಶ್ಚದರಿದ್ರನಿಗೆ ನಿಶ್ಚಿಂತೆ (Prv.).

ನಿಶ್ಚೇತನ niś-cêtana. Without consciousness; without reflection; unreasonable, (foolish); without animation. (Čpr. 4, 53; Bp. 8, 12; 54, 14).

ನಿಶ್ಚೇಷ್ಟ niś-cêshṭa. Motionless; powerless, helpless; incapable of motion or effort. (Bp. 36, 14).

ನಿಶ್ಚೇಷ್ಟಾವಲಮ್ಬನ niścêshṭâ-avalambana. Hanging down motionless. See ನೆಲಲ್.

ನಿಶ್ಚೇಷ್ಟಿತ niś-cêshṭita. = ನಿಶ್ಚೇಷ್ಟ. (Bp. 3, 25).

ನಿಶ್ಚೇಷ್ಟೆ niś-cêshṭĕ. Motionlessness; incapability of motion or effort; want of power. See ಬಡಿಲ್ಲು.

ನಿಶ್ಚೈತನ್ಯ niś-čaitanya. Want of strength or power (My.).

ನಿಶ್ವಸಿತ ni-śvasita. Breath having been drawn in, inspired (Sk.). 2, = ನಿಃಶ್ವಸಿತ (Čpr. 3, 54).

ನಿಶ್ವಾಸ ni-śvâsa. Inspiration, inhaling; sighing (Sk.). 2, = ನಿಃಶ್ವಾಸ (Čpr. 3, after 32; 4, 40; 5, after 9; 5, 98; J. 14, 22).

ನಿಶ್ವಾಸೋಚ್ಛ್ವಾಸ niśvâsa-ucchvâsa. Inhaling and exhaling (Čpr. 4, after 76).

ನಿಶ್ಶಂಕ niś-śanka. = ನಿಃಶಂಕ. (Šmd. 335; Bp. 53, 55; My.).

ನಿಶ್ಶಂಕತೆ niś-śankatĕ. = ನಿಃಶಂಕತೆ. (Bp. 16, 18).— ನಿಶ್ಶಂಕತೆ ವಡೆ. -ಪಡೆ. To obtain freedom from fear, etc. (Šsv. 4, 58).

ನಿಶ್ಶಂಕೆ niś-śankĕ. = ನಿಃಶಂಕೆ, ನಿಸ್ಸಂಕೆ. (My.).

ನಿಶ್ಶಬ್ದ niś-śabda. = ನಿಃಶಬ್ದ. (My.).

ನಿಶ್ಶಲ್ಯ niś-śalya. = ನಿಃಶಲ್ಯ. (My.).

ನಿಶ್ಶೇಷ niś-śêsha. = ನಿಃಶೇಷ. (My.).

ನಿಶ್ಶ್ವಾಸ niś-śvâsa. = ನಿಃಶ್ವಾಸ. (My.).

ನಿಷ್ nish. = ನಿಃ, etc.

ನಿಷಂಗ ni-sanga. Union. 2, *a quiver.*

ನಿಷಂಗಿ ni-sangi. A bowman, an archer (ಬಿಲ್ಲಾಳು G.).

ನಿಷಣ್ಣ ni-sanna. Seated, sitting, perched, etc.; gone to. (Čpr. 3, after 2).

ನಿಷತ್ ni-sat. Sitting down; sinking down.

ನಿಷದ್ಯೆ ni-sadyĕ. A couch. 2, *a market-place.*

ನಿಷದ್ವರ nishat-vara. *Mud, mire.*

ನಿಷಧ nishadha. *N. of a mountain.* 2, N. of the kingdom of Nala; Nala (Râm. 3, 2, 17).

ನಿಷಾ nishâ. = ನಿಶಾ No. 1. (My.).

ನಿಷಾದ ni-sâda. *N. of a wild aboriginal tribe, described as hunters, fishermen, robbers, etc.*, a Hôlĕya (ಜನಂಗಮ, ದುಷ್ಕರ್ಮ, ಹೊಲೆಯ Mr. 381; Bp. 57, 77). 2, *the last note of the musical scale* (Mr. 76, see ಸಪ್ತಸ್ವರ). 3, = ನಿಷದ್ವರ, mud, clay (Bp. 21, 27).

ನಿಷಾದಿ ni-sâdi. = ನಿಸಾದಿ 2. Sitting down or on. 2, *an elephant-driver* (ಉದ್ದಣ್ಡಗಜವೇಋವರ Mr. 247).

ನಿಷಿಕ್ತ ni-sikta. Sprinkled, sprinkled or poured upon (Bp. 39, 68).

ನಿಷಿದ್ಧ ni-siddha. Prohibited, forbidden, kept back, prevented, denied. (My.). ನಿಷಿದ್ಧವಾದ ವಸ್ತು ಅತುದ್ಧವೆನ್ನದೆ ಕ ಸೂತಿ ಹಾಕಿದ್ದು ಯಾಕೆ? (Prv.). See Prv. s. ಪ್ರಸಿದ್ಧ.

ನಿಷೂದನ ni-shûdana. = ನಿಸೂದನ. (Sk.; My.).

ನಿಷೇಕ ni-sêka. Sprinkling, pouring upon or into; impregnation. 2, a ceremony performed before impregnation at the first menstruation (My.). 3, a ceremony performed upon impregnation (Sk.).

ನಿಷೇಧ ni-sêdha. *Prohibition, forbidding, keeping off or back, hindering, preventing; negation, denial* (Šmd. 291); discontinuance (ಬಾಧ, ಮಾಣಿಸುವುದು Nn. 64; ಮಾಣಿಸುಹ 93); exception. — ನಿಷೇಧರೂಪ. The negative form of a verb (My.).

ನಿಷೇಧಪರ nishêdha-para. Intent upon objection or denial (Kâvy. III, 3, B, 92).

ನಿಷೇಧಿಸು nishêdhisu. To prohibit, to forbid (My.).

ನಿಷೇವಣ ni-sêvana. Waiting on, serving, service, worship. (My.);—enjoying, using. See ಮರುಸ್-.

ನಿಷೇವ್ಯಮಾಣ ni-sêvyamâṇa. Being waited upon, served, attended, etc. Feminine ನಿಷೇವ್ಯಮಾಣೆ (Čpr. 3, after 50).

ನಿಷ್ಕ nishka. = ನಿಕ್ಕ. *A golden ornament for the neck or breast.* 2, *a weight of gold varying in value at different times.* 3, *gold.* See Si. s. ಬೆಸೆ 1.

ನಿಷ್ಕಣ್ಟಕ nish-kaṇṭaka. = ನಿಃಕಣ್ಟಕ. Thornless; free from danger or trouble.

ನಿಷ್ಕಪಟ nish-kapaṭa. Guileless, free from deceit or fraud. (My.). 2, guilelessness (My.).

ನಿಷ್ಕಪಟತನ nish-kapaṭatana. Guilelessness (My.; ದಾಕ್ಷಿಣ್ಯ G.).

ನಿಷ್ಕಪಟಸ್ಥ nishkapaṭa-stha. = ನಿಷ್ಕಪಟ No. 1. (My.).

ನಿಷ್ಕಪಟಿ nish-kapaṭi. A guileless, candid person (My.).

ನಿಷ್ಕಮ್ಪ nish-kampa. Not shaking, motionless, immovable (Šmd. 251).

ನಿಷ್ಕರ nish-kara. Taking away, removing; preparing, accomplishing. See ಉಪ-.

ನಿಷ್ಕರುಣ nish-karuṇa. = ನಿಃಕರುಣ. Pitiless, unmerciful, merciless, cruel.

ನಿಷ್ಕರುಣಿ nish-karuṇi. A pitiless, unmerciful, cruel person (Bp. 4, 55; My.).

ನಿಷ್ಕರ್ಮ nish-karma. Inactive. 2, sinless (Bp. 54, 20).

ನಿಷ್ಕರ್ಮಿ nish-karmi. Sinless (Bp. 22, 60; 51, 27).

ನಿಷ್ಕರ್ಷ nish-karsha. Drawing out, extracting; extraction of the essence: the essence of a thing, chief point, main point. 2, ascertainment, certainty, decision, settlement. (My., as ನಿಷ್ಕರ್ಷೆ).

ನಿಷ್ಕರ್ಷಿಸು nish-karshisu. To ascertain, to determine, to settle (My.).

ನಿಷ್ಕಲ nish-kala. Without parts, undivided, indivisible. (Bp. 7, 14; 51, 27; 61, 44; Šsv. 5, 24). 2, waned; impotent, barren; infirm.

ನಿಷ್ಕಲಂಕ nish-kalanka. Stainless, spotless, sinless, without blemish. (Bp. 46, 76; 61, 44; Šsv. 5, 24; My.).

ನಿಷ್ಕಲಂಕೇನ್ದು nishkalanka-indu. The moon without spots (J. 15, 36).

ನಿಷ್ಕಲೆ nish-kalĕ. *An elderly woman past childbearing or in whom menstruation has ceased* (ಹೊಲೆ ಕೆಡಲು Mr. 302). 2, absence of fine arts or skill in ನಿಷ್ಕಲಾತಿವರು (Bp. 58, 18).

ನಿಷ್ಕಾಪಟ್ಯ nish-kâpaṭya. Guilelessness (My.).

ನಿಷ್ಕಾಮ nish-kâma. Free from desire; disinterested, unselfish;—absence of desire or lust (My.).

Digitized by Google

ನಿಷ್ಕಾಮಿ **nish-kâmi.** A person free from desire or lust (Ṡmd. 64; Bp. 44, 54; My.).

ನಿಷ್ಕಾರಣ **nish-kâraṇa.** Causeless; groundless (Ċt. II, 121; Bp. 43, 15; B. 5, 180; My.).

ನಿಷ್ಕಾಸ **nish-kâsa.** Going out, exit. 2, a veranda. 3, *waning, disappearance.*

ನಿಷ್ಕಾಸಿತ **nish-kâsita.** = ನಿಃಕಾಸಿತ. *Turned out, expelled.* 2, gone forth or out. 3, reviled, reproached. 4, blown, expanded. See Mr. s. ಅವಕುಂಚಿತ.

ನಿಷ್ಕುಟ **nish-kuṭa.** *The hollow of a tree* (ಕೋಟರ, ಮರದ ಹೊಳಲು, ಹೋಟೆ Nn. 142). 2, *a garden* (or yard) *attached to a house* (ಹಿತ್ತಿಲ್, ಹಿತ್ತಲ 142; ಹಿತ್ತಲ Mr. 480).

ನಿಷ್ಕುಟಿ **nish-kuṭi.** *Large cardamoms.*

ನಿಷ್ಕುಹ **nish-kuha.** *The hollow of a tree.*

ನಿಷ್ಕೃತಿ **nish-kṛiti.** Doing away, removing. 2, *expiation, atonement; compensation, discharge of a debt or obligation.*

ನಿಷ್ಕೇವಲ **nish-kêvala.** = ನಿಕೇವಲ. Belonging exclusively.

ನಿಷ್ಕ್ರಮ **nish-krama.** Going out, coming forth. 2, *any intellectual faculty.*

ನಿಷ್ಕ್ರಮಣ **nish-kramaṇa.** Going out or forth; exit. See ಜಲ-, ತೋಡು. 2, the ceremony of taking a child out of the house for the first time to see the sun.

ನಿಷ್ಕ್ರಾಮಿತ **nish-krâmita.** Caused to go out, driven out (ಹೊರಗೆ ಹಾಕಿಸಿ ಕೊಂಡ್ಡವ G.).

ನಿಷ್ಟಪ್ತ **nis-tapta.** Purified by heat, free from impurities (Ċpr. 4, after 75); burnished, made bright.

ನಿಷ್ಟ್ಯ **nishṭya.** *An outcast, a barbarian, a mlēċċha.*

ನಿಷ್ಠ **ni-shṭha.** (= ನಿಟ್ಟು). Staying or being in or on, situated on, grounded on, fixed in; firm; intent on; devoted to, practising (My.); skilled in; believing in. 2, the state of being intent on, intention, aim, object (Ṡmd. 94).

ನಿಷ್ಠಾನ **ni-sthâna.** *Sauce, condiment* (ಅಮ್ಬಲಿ Mr. 215). See ಪಳಿದ್ಯ.

ನಿಷ್ಠಿತ **ni-sthita.** = ನಿಷ್ಠ. (Bp. 3, 78; 6, 16; 21, 5; 61, 43; J. 7, 14).

ನಿಷ್ಠೀವ **ni-shṭhîva.** *Spitting, spitting out.*

ನಿಷ್ಠೀವನ **ni-shṭhîvana.** *Spitting, spitting out.*

ನಿಷ್ಠುರ **ni-shṭhura.** = ನಿಟ್ಟುರ, ನಿಟ್ಟೂರ, ನಿಷ್ಠೂರ. *Hard, rough, rugged; harsh, coarse, gruff, unkind, cruel, severe;* contumelious (ಕಠೋರ, ಏಪ Nn. 11; ಕುಮುದ, ಕಠೋರ 29; ಪರುಷ, ತೀಕ್ಷ್ಣ 119; ಹೇಯ, ಕೋಪ 137; Kâvy. III, 1, A, 15). ದುಷ್ಟನಿಗೆ ಕಷ್ಟ ಬನ್ದರೂ ನಿಷ್ಠುರಗುಣ ಬಿಡಲಾರ (Prv.). See Prv. s. ಮುನಿಸು.

ನಿಷ್ಠುರತನ **ni-shṭhuratana.** = ನಿಷ್ಠುರತೆ. (B. 4, 73; G. 348).

ನಿಷ್ಠುರತೆ **ni-shṭhuratĕ.** Harshness, gruffness (of speech); coarseness; reviling, abuse (Sk.); severity (Grj. 9, after 83).

ನಿಷ್ಠುರತ್ವ **ni-sṭhuratva.** = ನಿಷ್ಠುರತೆ. (Sk.; My.).

ನಿಷ್ಠೂರ **ni-shṭhûra.** = ನಿಷ್ಠುರ, etc. (ವ್ಯಜನ Nn. 64; ಜಠರ 146; My.). — ನಿಷ್ಠೂರನಂಜಯ. o. r. of ನಿಷ್ಠೂರಸಂಜಯ (in a My. MS.). — ನಿಷ್ಠೂರಸಂಜಯ. N. of the commentator of the Ṡabdamaṇidarpaṇa (see IV. XIII). The probably oldest copy of the Ṡmd. at Mdb. does not give the commentator's name; that copy's commentary, though essentially identical with the others used by the editor, differs, however, from them in many particulars.

ನಿಷ್ಠೆ **ni-sthĕ.** = ನಿಟ್ಟೆ. Position, station; *condition, state;* stand-point, basis. 2, devotion or attachment to, devotedness; *ordinary and uniform practice;* religious duty; believing in, faith, reliance. 2, conversancy with, skill; *eminence, excellence, perfection.* 3, *conclusion, the end or catastrophe of a drama, etc.* 4, *destruction, death.* 5, *fixed or certain knowledge, certainty.* 6, *trouble, affliction.* ನಿಷ್ಠೆಯಿದ್ದವನಿಗೆ ನಷ್ಟವಿಲ್ಲ. — ನಿಷ್ಠೆಯಿಲ್ಲದವ ಭ್ರಷ್ಟನಾದಾನು (Prvs.). See ಮಜ್ಜಾಸಾರ.

ನಿಷ್ಠೇವ **ni-shṭhêva.** *Spitting, spitting out.*

ನಿಷ್ಠೇವನ **ni-shṭhêvana.** *Spitting, spitting out.*

ನಿಷ್ಠ್ಯೂತ **ni-shṭhyûta.** *Spit out, ejected, thrown out.*

ನಿಷ್ಠ್ಯೂತಿ **ni-shṭhyûti.** *Spitting, spitting out.*

ನಿಷ್ಣಾತ **ni-snâta.** Immersed; *deeply versed in, conversant with, learned.*

ನಿಷ್ಪಕ್ವ **nish-pakva.** *Decocted, boiled.*

ನಿಷ್ಪಕ್ಷಪಾತ **nish-pakshapâta.** = ನಿಃಪಕ್ಷಪಾತ. Impartial; impartiality (My.; B. 5, 8).

ನಿಷ್ಪತ್ತಿ **nish-patti.** Going forth or out; birth. 2, being prepared; *completion, conclusion, termination, consummation.* See ತೀರ್ಚು.

ನಿಷ್ಪನ್ದ **ni-spanda.** = ನಿಷ್ಪನ್ದ. Motionless, immovable. (Ṡsr. 4, 20).

ನಿಷ್ಪನ್ನ **nish-panna.** = ನಿಷ್ಪನ್ನ. Gone forth or out; sprung up, arisen, born; *accomplished, done, finished, ready.*

ನಿಷ್ಪಾದ್ಯ **nish-pâdya.** To be effected or accomplished; achievable; to be produced; to be ripened (ವೃಷ್ಟಿನಿಷ್ಪಾದ್ಯ Hlâ. II, 6).

ನಿಷ್ಪಾಪ **nish-pâpa.** Free from sin, sinless, guiltless. (J. 32, 16).

ನಿಷ್ಪಾವ **nish-pâva.** *Fanning, winnowing, cleaning corn, etc.* 2, = ನಿಷ್ಪಾವಕ (ಅವರೆ Nr.).

ನಿಷ್ಪಾವಕ **nish-pâvaka.** = ನಿಷ್ಪಾವಕ. *A species of pulse, Phaseolus radiatus* (also Dolichos lablab, see ಅವರೆ).

ನಿಷ್ಪೀಡನ **nish-pîḍana.** = ನಿಃಪೀಡನ No. 1. (My.). See ಮುಷ್ಟಿ-.

ನಿಷ್ಪೇಷಣ **nish-pêshaṇa.** Rubbing together, grinding, pulverizing. (My.).

ನಿಷ್ಪ್ರತ್ಯೂಹ **nish-pratyûha.** = ನಿಃಪ್ರತ್ಯೂಹ. Unobstructed, unimpeded.

ನಿಷ್ಪ್ರಪಂಚ **nish-prapañca.** = ನಿಃಪ್ರಪಂಚ. Without prapañca; without deceit, pure, honest. (Bp. 29, 33).

ನಿಷ್ಪ್ರಭ **nish-prabha.** = ನಿಃಪ್ರಭ.

ನಿಷ್ಪ್ರಯೋಜಕ **nish-prayôjaka.** Useless; needless (My.). Fem. ನಿಷ್ಪ್ರಯೋಜಕಳು.

ನಿಷ್ಪ್ರಯೋಜನ **nish-prayôjana.** Without motives; causeless, groundless; — useless; needless; uselessness (My.).

ನಿಷ್ಪ್ರವಾಣಿ **nish-pravâṇi.** Fresh from the loom, *quite new and unbleached.*

ನಿಷ್ಫಲ **nish-phala.** = ನಿಃಫಲ. *Bearing no fruit, fruitless, barren;* — useless, unprofitable (ವ್ಯರ್ಥ, etc. Mr. 462; My.). See Bp. 23, 38; 57, 15.

ನಿಷ್ಫಲೆ **nish-phalĕ.** *A woman in whom menstruation has ceased.*

Digitized by Google

ನಿಷ್ಯನ್ದಿ ni-syandi. Moving, blowing (used of the wind, Čpr. 4, 30).

ನಿಸ್ nis. = ನಿಃ, etc. *Out, forth, outward, out of, out from, away from; no, not, without.*

ನಿಸಂಗಿ ni-saṅgi. = ನಿಃಸಂಗಿ. — ನಿಸಂಗಿನಿರಾಳದೇವ. N. (Bp. 58, 7).

ನಿಸದ nisada. (Tbh. of ನಿಶ್ಚಯ?). Certainty, truth; certainly (ನಿಶ್ಚವ, ಸತ್ಯ Čt. II, 11; ನಿಶ್ಚವ, ನಿಸ್ಸಿ, ಸತ್ಯ Kk. 64; ನಿಶ್ಚವ, ನಿಸ್ಸಿ, ನನಸು, ವಲಂ, ದಿಟಂ, ದಲ್, ಸಾಜ, ದಿಟ Šm. 84; Čpr. 2, 28; 3, 37). ನಿಸದದಿಂ (Šm. 87).

ನಿಸರ್ಗ ni-sarga. Letting go; relinquishment; evacuation, voiding excrement (ವರ್ಗಸ, ವಿಮುಕ್ತ Mr. 488, one MS. ವಿಸರ್ಗ). 2, giving away, bestowing; a grant. 3, creation. 4, *the natural state, natural or peculiar character, true or natural form* (ನಿಜ್ಜಯಾಕಾರ Šmd. 32 Cm.; 38. 45; Râm. 1, 16, 28).

ನಿಸಾದಿ nisâdi. 1. Tbh. of ನಿಶಾದಿ. (Šmd. 335).

ನಿಸಾದಿ nisâdi. 2. Tbh. of ನಿಷಾದಿ. (Šmd. 335).

ನಿಸಿ nisi. To squeeze with the thumb and forefinger (My.).

ನಿಸಿ nisi. Tbh. of ನಿಶಿ. (Šmd. 357). — ನಿಸಿವಗೆಯ. -ಪಗೆಯ. The sun (ಸಪ್ತಾಶ್ವ Kk. 45; ಸೂರ್ಯ Šm. 14).

ನಿಸೂದನ ni-sûdana. = ನಿಷೂದನ. *Killing, destroying.*

ನಿಸೃಷ್ಟ ni-srishṭa. Let go, dismissed, set free; delivered; deposited; given, bestowed; allowed (ಬಿಟ್ಟದ್ದು G.).

ನಿಸೃಷ್ಟಾರ್ಥ nisrishṭa-artha. Finished, accomplished (Čpr. 8, after 92). 2, an envoy; a messenger (6, after 18; Sk.).

ನಿಸ್ತರಂಗ nis-taraṅga. Waveless, without waves (Čpr. 1, 138).

ನಿಸ್ತರಣ nis-taraṇa. Going out or forth, coming out (of danger); crossing over; passing or spending time.

ನಿಸ್ತರಿಸು nis-tarisu. = ನಿತ್ತರಿಸು. To spend or pass time, to wait, to bear or endure (Abh. P. 11, after 107).

ನಿಸ್ತರುಣ nis-taruṇa. Not becoming a young man or boy (Bp. 61, 44).

ನಿಸ್ತರ್ಹಣ nis-tarhaṇa. *Crushing, destroying, slaughter.*

ನಿಸ್ತಲ nis-tala. *Not flat, round, globular.*

ನಿಸ್ತಾರಕ nis-târaka. Causing to pass over; rescuing, delivering; a saviour. (Bp. 58, 52).

ನಿಸ್ತಾರ್ತ nistârta. Tbh. of ನಿಶ್ಚಿತಾರ್ಥ. (My.).

ನಿಸ್ತುಲ nis-tula. Unequalled, unrivalled (Šiv. 5, 24).

ನಿಸ್ತೂಕ nis-tûka. Without weight, light, pithless, weak; weakness (My.). ನಿಸ್ತೂಕವಾದವನು ಮಸ್ತಕವನ್ನು ಎತ್ತಲಾಱ (Prv.).

ನಿಸ್ತೇಜ nis-têja. Devoid of brilliancy or energy; dull; impotent;—want of brilliancy. — ನಿಸ್ತೇಜಮಪ್ಪುದು. -ಪಡು. To become devoid of brilliancy (Abh. P. 2, 66).

ನಿಸ್ತ್ರಾಣ nis-trâṇa. = ನಿತ್ರಾಣ, ನಿತ್ರಾಣ. Want of strength, weakness.

ನಿಸ್ತ್ರಾಣಿ nis-trâṇi. = ನಿತ್ರಾಣಿ, ನಿತ್ರಾಣಿ. A weak person.

ನಿಸ್ತ್ರಿಂಶ nis-trimśa. More than thirty; more than thirty fingers in length: *a sword, a scimitar, a sacrificial knife.*

ನಿಸ್ತ್ರಿಗುಣ nis-triguṇa. Destitute of the three qualities (Bp. 61, 44).

ನಿಸ್ಪೃಹ ni-spṛiha. = ನಿಃಸ್ಪೃಹ. (My.).

ನಿಸ್ಪೃಹತೆ ni-spṛihatĕ. = ನಿಸ್ಪೃಹೆ. (Bp. 20, 27).

ನಿಸ್ಪೃಹೆ ni-spṛihĕ. Freedom from desire; absence of covetousness (My.).

ನಿಸ್ರಾವ ni-srâva. = ನಿಃಸ್ರಾವ. Flowing down or off; *the scum of boiled rice.*

ನಿಸ್ವನ ni-svana. *Noise, sound, voice.* See ಶರ; Šiv. 4, 71.

ನಿಸ್ವಾನ ni-svâna. = ನಿಸ್ವನ. *Noise, etc.*

ನಿಸ್ಸಂಶಯ nis-samśaya. = ನಿಃಸಂಶಯ. (My.).

ನಿಸ್ಸಂಸಾರಿ nis-samsâri. = ನಿಃಸಂಸಾರಿ. (Bp. 33, 17).

ನಿಸ್ಸಂಕ nis-saṅka. Tbh. of ನಿಶ್ಶಂಕ (Šmd. 335).

ನಿಸ್ಸಂಕೆ nis-saṅkĕ. Tbh. of ನಿಃಶಂಕೆ. Boldness; disrespect (ಅವಜ್ಞೆ Šmd. II; Kk. 91).

ನಿಸ್ಸಂಗ nis-saṅga. = ನಿಃಸಂಗ. (My.).

ನಿಸ್ಸಂಗತ್ವ nis-saṅgatva. = ನಿಃಸಂಗತ್ವ. (My.).

ನಿಸ್ಸಂಗಿ nis-saṅgi. = ನಿಃಸಂಗಿ. (Bp. 7, 3; 27, 42; My.).

ನಿಸ್ಸತ್ವ nis-satva. = ನಿಃಸತ್ವ. Without strength, etc., pithless, sapless; absence of power, want of energy, weakness (My.; ಎತಾನ Čb.).

ನಿಸ್ಸನ್ತತಿ nis-santati. = ನಿಸ್ಸನ್ತಾನ. (My.).

ನಿಸ್ಸನ್ತಾನ nis-santâna. = ನಿಃಸನ್ತಾನ. (Bp. 61, 38; My.).

ನಿಸ್ಸನ್ದೇಹ nis-sandêha. = ನಿಃಸನ್ದೇಹ. (My.).

ನಿಸ್ಸನ್ದೇಹಿ nis-sandêhi. = ನಿಃಸನ್ದೇಹಿ. (Bp. 51, 29; My.).

ನಿಸ್ಸರಣ nis-saraṇa. = ನಿಃಸರಣ. (My.).

ನಿಸ್ಸಹಾಯ nis-sahâya. = ನಿಃಸಹಾಯ. (Šiv. 4, after 65).

ನಿಸ್ಸಾಣ nissâṇa. = ನಿಸ್ಸಾಳ. (G.; Tĕ.; M. ನಿಷಾಣ; T. ನಿಜಾನ).

ನಿಸ್ಸಾರ nis-sâra. = ನಿಃಸಾರ. (ಲಘು Nn. 145, Mr. 528; Bp. 24, 41; 40, 80; B. 3, 36; My.).

ನಿಸ್ಸಾಳ nissâḷa. = ನಿಸ್ಸಾಣ. A kettle-drum (ಭೇರಿ Bhn. 31; Bp. 5, 39; Bh. 1, 12, 7; 8, 23, 8; J. 4, 18. 30; 7, 3; 12, 5. 12; 13, 24. 41).

ನಿಸ್ಸೀಮ nis-sîma. = ನಿಃಸೀಮ. (Bp. 24, 74; 26, 56; 61, 43; J. 27, 1).

ನಿಸ್ಸ್ವ nis-sva. = ನಿಃಸ್ವ. (My.).

ನಿಹನನ ni-hanana. *Slaying, killing.*

ನಿಹಾಕೆ ni-hâkĕ. *An iguana,* or *the Gangetic alligator* (= ಗೋಧಿಕೆ).

ನಿಹಿಂಸನ ni-himsana. *Killing, slaughter.*

ನಿಹಿತ ni-hita. *Placed, laid, deposited;* fixed; infixed, attached; treasured up (Čpr. 2, after 59; 6, 97; Bp. 19, 4).

ನಿಹೀನ ni-hîna. Deprived of;—*low, vile, of low origin.*

ನಿಹ್ನವ ni-hnava. *Denial, abnegation;* concealment, secrecy; *deception; mistrust; doubt, suspicion;* a secret;—atonement, expiation. See ಅಪನಮ್ಬುಗೆ, ಬಾಯಾರುಹ.

ನಿಹ್ರಾದ ni-hrâda. *Sound, noise.*

ನಿಳಿಮ್ಪ ni-ḷimpa. = ನಿಲಿಮ್ಪ. (Čpr. 1, 84; 4, 74; Grj. 6, 6).

ನಿಳಿಮ್ಪಕಾನ್ತೆ niḷimpa-kântĕ. The wife of a god (Šiv. 3, 22).

ನಿಳ್ಕು niḷku. (= ನಿಲುಕು, etc.). To stretch one's self upwards, to rise up to one's full height, to stretch one's self (ಉಪರಿಸ್ಪರ್ಶನ Šmd. Dh.; Čpr. 7, 127; Šiv. 1, 7). ಕಟಿದ್ವಜಂ ನಿಳ್ಕಿ, ನಿವತಿರ್ಗಸುತ್ತುಮಿರೆ (Šmd. 280). ನಲಿನಿಯಂ ನೆಲ್ ನೆಗೆದ ನಿಡುಮಿಾನ್ಗಣ್ಗಳಿಂ ನಿಳ್ಕಿ ನೋಡಿ (Rśv. 2, after 8). ತಡಿಯೊಳ್ ನಿನ್ದು ನಿಳ್ಕಿ ನೀಡಿದ ಮುದಗಜದ ಕರದ ಮಾಪೋಗಿದಿಪು

Digitized by Google

(6, after 24). **2,** to come or be within reach, to be reachable (Čpr. 7, 102; Šâv. 2, 80). *Cf.* ನೀಳ್.

ನಿಱಿ nili. = ನೆಱಿಲ್. — ನಿಱ್ ನಿಟಿಲ್. rep. The sound of breaking. ಹೂಡಿದನ್ ಅಹಿತರಿದೆ ನಿಱ್ ನಿಟಿಲೆನಲು ಧನುವ (Râm. 3, 6, 6).

ನೀ nî. = ನಿನ್, etc. Thou (My.). Plural ನೀವು. See its declension s. ನಿನ್. ನೀ ಕಪಟಿಯಾದರೆ ನಿನಗೆಲ್ಲರು ಕಪಟಿಗಳೇ! (Prv.).

ನೀ nî. = ನಿಃ, etc.

ನೀಂ nîṁ. 1. = ನೀ, etc. Thou (Šmd. 262. 263). ಕೇಳ ನೀಂ! (45). ನೀಂ ಪಶು (109). ನೀಂ ಕಾಮುಂ (110).

ನೀಂ nîṁ. 2. = ನಿಮ್, etc. You (Šmd. 262. 263; Bh. 2, 13, 36). Also ನೀಂಗಳ್ in one Šmd. MS.

ನೀಕರಿಸು nî-karisu. To disrespect, to contemn (Bp. 49, 8; Râm. 6, 53, 34; Tĕ. ನ್ಯಕ್ಕಾರ, disrespect, contempt).

ನೀಕಾಶ nî-kâša. = ನಿಕಾಶ. *Like, resembling.*

ನೀಗಿಸು nîgisu. To cause to quit, etc. (My.).

ನೀಗು nîgu. To quit, to leave, to abandon, to give up, to get rid of; to lose; to remove, to take away, to do away; to squander (ತ್ಯಜನ Šmd. Dh.; My.; Tĕ.; T. ನೀಕ್ಕು, ನೀಂಗು, ನಿಯದು; M. ನೀಕ್ಕು). (**2,** to be got rid of, to go off or away, to vanish; Tĕ. ನಿಗ್ಗು; T. ನೀಂಗು; M. ನೀಙ್ಙು). ಸಂಕಟಗಳನ್ನು ನೀಗುವದು (B. 3, 70). ಕಷ್ಟವನ್ನು ನೀಗುವದು (5, 104. 202. 205). ಹಳಿಯನ್ನು ನೀಗು (5, 296). ಅಸು ನೀಗಿತು ಅಸುರನ ತನುವ (Bh. 1, 10, 38). ಕರ್ಕೋಟಕನ ದೆಸೆಯಿನ್ದ ಅಸುವ ನೀಗದೆ, ಸಾರಿದನು ಋತುಪರ್ಣಭೂಪತಿಯು (Râm. 3, 2, 14). ಅಭಿಮಾನವಂ ನೀಗು (Bp. 21, 47). ಭಾಷೆಯುಂ ನೀಗು (39, 17). ನೀಗಿದರೂ (though I want to get rid of it) ಬಡತನ ಬಿಡದು.— ನೀಗುವವನಿಗೆ ಭಾಗ ಸಿಕ್ಕಿದರೂ ಭೋಗಕ್ಕೆ ದಾರದು (Prvs.). See Bp. 1, 36; 31, 21; 34, 10; 36, 19; 40, 8. 48; 42, 13; 54, 61; 60, 25; Č. Bp. 32, 44; Bh. 8, 22, 44; Râv. 14, 28; V. 14, 61; J. 13, 40; 14, 17; 22, 41. — ನೀಗಾಡು. -ಆಡು. To renounce. ಒಡಲ ಹೋಗಾಡಿದರು (though—) ನುಡಿ ನೀಗಾಡಿದರು (though—) ನಡೆಯೊಳು ಎಚ್ಚಱಿನು ಬಿಡದಿರಲು (though—) ಪರವಶ, ದೃಢಮನವಿಡಿದು (though—, Sp.).

ನೀಚ nîča. *Low, not high, short, small;* deep, lowered, bass (in music); situated below; *low, base, vile, mean.* ನೀಚನ ಸಂಗವೂ ಈಚಲ ನೀರೂ ನಾಚಿಗೆ ಕೆಡಿಸುವದು.— ನೀಚರ ಸಭೆಗೆ ಹೋದರೆ ನಾಚಿಕೆಗೇಡಾಗುವದು.— ನೀಚರ ಸಂಗ ಅಭಿಮಾನಭಂಗ.— ನೀಚನಿಗೆ ಊಚುವಸ್ತು ಕೊಟ್ಟರೂ ನಾಚಿಕೆಗೇಡಿತನ ಹೋದೀತೇ? (Prvs.). 2, the lowest point of a planet, the seventh house from the highest point. — ನೀಚಾಟ. -ಆಟ. Base conduct (My.). See Prv. s. ಪೇಚಾಟ.

ನೀಚಕಿ nîčaki. The top; *the head of an ox.*

ನೀಚತನ nîčatana. Lowness, meanness, vileness (My.; B. 4, 89; ನಿಕರ್ಷ G.).

ನೀಚಾತ್ಮ nîča-âtma. A mean person (B. 5, 73).

ನೀಚೈರ್ಗತ nîčais-gata. (Šmd. 99). Gone downwards.

ನೀಚೈಸ್ nîčais. (Šmd. 99). Low, down, downwards, deep;— *short, small, little, dwarfish.*

ನೀಟ nîṭa. 1. = ನೀಳ. Length (ನೀಳ Bhn. 31; My.; T. ನೀಟ್ಟ; M. ನೀಟ್ಟ, ನೀಡು; see ನಿಡು).— ನೀಟಸಾಲು. A long line or row (My.).

ನೀಟ nîṭa. 2. = ನೀಟು No. 2. (My.).

ನೀಟು nîṭu. = ನೀಟ 2. Straightness: the state of not being curved, that of standing upright; the rêpha (ೃ, ಎಸಱ Nn. 62, o. r. ಗೀಟು). **2,** properness; neatness, elegance, beauty, tidiness (My.; Tĕ. ನೀಟು, ನೇಟು; T. ನೇತ್ತಿ, ನೇಱ್ಱ; M. ನೇಱ್ಱ; Mhr. ನೀಟ; *cf.* ನಿಱತ್ತ, ನೆಟ್ಟ, ನೇರ್ 3). ಆಡಿನ ಕೋಡುಗಳು ಮೇಲುಗಡೆಗೆ ನೀಟಾಗಿರುತ್ತವೆ (B. 5, 23). ನೀಟಾಗಿ ನಡೆದರೆ ಕಾಟ ದಾರದು.— ಊಟದಲ್ಲಿ ನೀಟಾಗಿರ ಬೇಕು (Prvs.). — ನೀಟುದಾರಿ. A nice road (My.).

ನೀಟುಗಾತಿ nîṭu-gâti. A tidy woman (My.).

ನೀಟುಗಾಱ nîṭu-gâṟa. A tidy man (My.).

ನೀಡ nîḍa. = ನೀಡು, ನೀಳ. A resting place; *a bird's nest.*

ನೀಡಜ nîḍa-ja. = ನೀಳಜ. Nest-born: *a bird.*

ನೀಡಱ್ nîḍaṟ. Whirling; giddiness; swoon (Abh. P. 14, after 34; *cf.* ನಿಟ್ಟನೆ). ನೀಡಱನ್ ಎಚ್ಚತ್ತು (Abh. P. 16, 15).

ನೀಡಿಸು nîḍisu. To cause to put (Bp. 57, 85); to cause to give (My.); etc.

ನೀಡು nîḍu. 1. = ನೀಳ್. To extend, to stretch out, as the fingers, the arms, the tongue, etc. (ಪ್ರಸಾರಣ Šmd. Dh.; My.; T., M. ನೀಟ್ಟು; *cf.* ನಿಗುರ್). **2,** to hold out, to offer, to present, to give; to serve out, to set (before one, as rice); to put (My.; T., M. ನೀಟ್ಟು). ನೀಡಿದ ಬೆರಳ ತಳಂ (ಪಾಣಿ Hlâ.). ನೀಡದವನಲ್ಲಿ ಹೋಗಿ ಬೇಡಿ ಕೊಳ್ಳುವವ ಮೂಢನು.— ಚಾಪೆಯಿರುವಷ್ಟಕ್ಕೆ ಕಾಲು ನೀಡ ಬೇಕು (Prvs.). See Čpr. 5, 63. 96; Bp. 1, 46. 51; 5, 41; 8, 15; 10, 2; 11, 11; 12, 35; 14, 32; 21, 32; 24, 82; 26, 62. 67; 27, 40; 33 sum.; 33, 11; 40, 42; 43, 84; 47, 29. 39; 48, 24; 50, 4. 36; 57, 34; 59, 2. 20; 60, 23. 28; Râm. 5, 8, 57; Râv. 2, 48; 5, 21. 39; 6, after 24; J. 11, 1; 15, 20; 16, 18. 41; 29, 33. 43; Si. 288; B. 5, 41.

ನೀಡು nîḍu. 2. = (ನಿಡು, ನೀಳ), ನೀಱ್. Extension, length (ದೀರ್ಘತೆ Čt. I, 38; M., T.); delay (Grj. 6, 34; 8, 29; Šâv. 2, 64. 122). **2,** further (Šm. 24); abundantly, much, etc. (ಅಧಿಕಾರ್ಥಂ Šmd. 291; ಕರಂ, ಪೆಱ, etc., ಪಿರಿದು Kk. 49; Râv. 6, 2; 13, after 86). **3,** presenting. — ನೀಡಡಿ. -ಅಡಿ. A long foot: a stretched leg (Grj. 7, 57; 8, 24). — ನೀಡಡಿಗೊಳ್. -ಕೊಳ್. To stretch a leg (Šâv. 3, 52; 4, after 19 & 24). — ನೀಡುಂ. -ಉಂ. = ನೀಡು No. 2. (Šmd. 391; ವಿಶೇಷಮಾಗಿ 172 Cm.; Čpr. 8, after 102; 8, 43. 49). — ನೀಡು ಕರಿಸು. = ನೀದ್ಘರಿಸು, q. v. (Šmd. 28). — ನೀಡು ಮಾಡು. To make long: to raise (J. 12, 4). — ನೀಡು ಮೊನೆ. Long, persevering fighting (Bh. 3, 10, 52). — ನೀಡುಮ್ಮಾಡು. -ಂ-ಮಾಡು. Idleness, sloth (ಆಲಸ್ಯಂ Čt. I, 51). 2, to delay.

ನೀಡು nîḍu. Tbh. of ನೀಡ. (ಕರಳ, ಗೂಡು Nn. 50).

ನೀಡುಕಾಱ nîḍu-kâṟa. A man who presents (arrows to a warrior, Bh. 8, 26, 11).

ನೀಡೋದ್ಭವ nîḍa-udbhava. *A bird.*

ನೀಣ್ಟಿಸು nîṇṭisu. = ನಿಟ್ಟಿಸು. (J. 4, 9).

Digitized by Google

ನೀಣ್ಟು niṇṭu. To throw away (ಬಿಸುಡು. Ċt. I, 42, o. r. ಎಣ್ಟು).

ನೀತ nīta. Led, conducted, guided; carried; brought; well-behaved. See ಅ-, ಪ್ರಣೀತ, ವಿ-.

ನೀತಿ nīti. Leading, guiding, guidance;—conduct, propriety;—right or moral or prudent behaviour;—political wisdom or science, political economy, policy, statesmanship;—moral philosophy, ethics, precepts for prudent and moral behaviour; prudence;—acquirement, acquisition. See Nn. s. ನಿಯತ. ಸುಮ್ಮನಿಹುದಿದು ನೀತಿಯೇ ನಿನಗೆ? (Bp. 61, 18). ನೀತಿಗಳ್ (55, 6). ನೀತಿಯುಳ್ಳವನ ಮನೆದೀವದಲ್ಲಿ ಜಾತಿಭೇದವೇನು?— ನೀತಿಯುಳ್ಳವನ ಮಾತು ಕೋತಿಯಾದೀತೇ?— ನೀತಿಯುಳ್ಳವನು ಖ್ಯಾತಿ ಪಟ್ಟಾನು.— ಜಾತಿ ಕೆಟ್ಟರೂ ನೀತಿ ಬಿಡ ಬಾರದು (Prvs.). See Prvs. s. ಪ್ರೀತಿ, ಮತ. — ನೀತಿ ಗೀತಿ. reit. (Bh. 1, 5, 15).

ನೀತಿಕೆ nītikĕ. N. of a vṛitta (Ċh.).

ನೀತಿಗ nītiga. A well-conducted, virtuous man (ಸಜ್ಜರಿತ Ċt. I, 89).

ನೀತಿಪರ nīti-para. Engrossed in or intent upon political wisdom, etc. (Śmd. 138).

ನೀತಿಮಾರ್ಗ nīti-mârga. The path of morality; moral conduct (My.).

ನೀತಿಯುತೆ nīti-yutĕ. A woman possessed of proper or prudent behaviour (Ċh. vs. 127. 221).

ನೆಲೆ nĕlĕ. Standing; standing place; a place of residence, an abode; an apartment of a house; a story of a house; a place; place; ground; footing; basis: firmness; certainty; certain knowledge; bottom: a mystery, a secret (ಪೊಡಲ್, ಇಕ್ಕೆ, ಹಕ್ಕೆ, ಚಾವಡಿ, ತಾಣ, ಬೀಡು, etc., ಆಶ್ರಯ Šm. 58; ನಿಜಾಗಾರ, ನಿಧಾನ 106; ಗವಿ, ಗರುಡಿ, etc., ಆಶ್ರಯ Kk. 64; ಸ್ಥಾನ Šmd. 24. 80 Cm.; ಕಕ್ಷಾನ್ತರ, ಪ್ರಕೋಷ್ಠ Hlâ.; My.; T. ನಿಲೈ, M. ನಿಲ). ಅವನಿಗೆ ನೆಪ್ಪ ನೆಲೆ ತಿಳಿಯುವದಿಲ್ಲ (My.). ಮನೆಯ ನೆಲೆ (ಗೃಹಭೂಮಿ, ವಾಸ್ತು Hlâ.). ನೆಲೆಯ ತೀವಿದ ಉಪ್ಪರಿಗೆ (ಸುಧಾಧವಲಿತ, ಸೌಧ Mr. 193). ಅದು ನೆಲೆ! (Bp. 10, 2; 53, 19). ನೆಲೆಯಿಲ್ಲದವನ ಮಾತು ಹೊಲೆಗಿನ್ತ ಹೆಚ್ಚು (Prv.). See Čpr. 1, 77; Abh. P. 3, after 17 and 26; 4, 11; 7, after 62; Bp. 1, 30; 10, 16; 40, 40; 43, 24; 57, 15; 60, 61; Râm. 1, 7, 14; J. 26, 41; 30, 41; ಕಟ್ಟೆಲೆ. — ನೆಲೆಕಟ್ಟು. = ನೆಲೆಗಟ್ಟು. (J. 17, 23). — ನೆಲೆಗಟ್ಟು. -ಕಟ್ಟು. = ನೆಲಗಟ್ಟು. (ಕುಟ್ಟಿಮ, ನಿಬನ್ಧಭೂಮಿ Nr.; Č. Bp. 5, 48; My.). 2, a fixed abode. ಕೋಪವೆಮ್ಬುದು, ಕೇಳಿ, ಪಾಪದ ನೆಲೆಗಟ್ಟು! ಕೂಪದೊಳು ನೇಣು ಹರಿದನ್ತೆ ನರಕಕೆ ಕೋಪಿ ತಾನ್ ಇಳಿವ (Sp.). — ನೆಲೆಗಾಣ್. -ಕಾಣ್. The bottom to appear; — to see the bottom (also figuratively, My.). ನೆಲೆಗಾಣ ಬಾರದುದು (ಅಗಾಧ Nr.). — ನೆಲೆಗಿಡು. -ಕಿಡು. The foundation to be destroyed, to be ruined (Abh. P. 6, 83). — ನೆಲೆಗೆಡಿಸು. -ಕೆಡಿಸು. To destroy one's firm position, station or welfare (J. 8, 32). — ನೆಲೆಗೆಡು. -ಕೆಡು. Footing, firm position, etc. to be impaired; to lose ground, etc. (J. 28, 40). — ನೆಲೆಗೊಳ್. -ಗೊಳ್ಳು. -ಕೊಳ್. To take footing; to take root, as plants, etc.; to take one's place; to occupy, as one's place; to touch the ground; to become established or settled; to take up habitation (ನೆಲಸು, q. v.; ನಿಲ್ Šmd. 24. 70 Čm.; My.). ಸಿರಿ ನೆಲೆಗೊಣ್ಡದಲ್ಲಿ (Šmd. 145). ಚಿತ್ತದಲ್ಲಿ ನೆಲೆಗೊಣ್ಡುದು (ಏರ್ದೆವತ್ತಿದುದು Čt. II, 12). ವರ್ತಕನ ಮನಸ್ಸಿನಲ್ಲಿ ಅವನ

Digitized by Google

ಮೇಲೆ ಸಂಶಯವು ಪೂರಾ ನೆಲೆಗೊಣ್ಡಿತು (B. 4, 169). ನಾಟುವಣ್ಬುಗಳು ನಾಲ್ಕೆಣ್ಬು ದಿವಸದಲ್ಲಿ ನೆಲೆಗೊಮ್ಬುವವು (Prv.). See Šmd. 209. 365; Bp. 17, 13; 46, 58; 47, 57; 50, 31; 54, 76; J. 6, 34; 18, 51; 24, 78. — ನೆಲೆಗೊಳಿಸು. -ಕೊಳಿಸು. To put down, to place, to establish, etc. (ಊಡು G.; Bp. 2, 11; Rśv. 6, after 11; J. 2, 64; 13, 37. 42; 30, 50; My.). ನೆಲೆಗೊಳಿಸೋಣ (ಸ್ಥಾಪನ G.). — ನೆಲೆದೀಪ. A lamp that is never removed from the niche in which it stands, and is adored when lighted, etc. (My.). — ನೆಲೆದೀವಿಗೆ. = ನೆಲೆದೀಪ. (My.). — ನೆಲೆ ನೆಲೆ. rep. (Č. Bp. 5, 3). — ನೆಲೆಮನೆ. An abode, a place of residence (Bp. 30, 22; Bh. 1, 8, 23). — ನೆಲೆಮಾಡ. = ನೆಲೆವಾಡ. An upper story with various apartments (Abh. P. 1, 124; Rśv. 11, after 124). — ನೆಲೆಮೊಲೆ. A stout, full breast (Šm. 118; Rśv. 7, 17; 10, after 57; J. 8, 20; 30, 7). — ನೆಲೆಯಾಗು. To become a basis, etc.; to be established, to get a firm footing, to obtain, to be in use (Čpr. 1, 93. 109; Bp. 24, 2; 51, 47; Šm. 118). — ನೆಲೆಯುಪ್ಪರಿಗೆ. An upper story with its various apartments (Bh. 1, 8, 69; 1, 7, 14). — ನೆಲೆವಡೆ. -ಪಡೆ. To take footing, to stand (Šśv. 3, after 35). — ನೆಲೆವನೆ. -ಮನೆ. A house furnished with stories (ಕರುಮಾಡ, ಉಪ್ಪರಿಗೆ Šs.). 2, = ನೆಲೆಮನೆ (Bp. 19, 25; Râm. 4, 2, 40; J. 18, 1). — ನೆಲೆವಾಡ. = ನೆಲೆಮಾಡ. (J. 10, 50; V. 5, 5. 12). — ನೆಲೆವೀಡು. -ಬೀಡು. = ನೆಲೆಮನೆ. (Čpr. 1, 99). — ನೆಲೆವೆಱ್. -ಪೆಱ್. To become constant or continual (V. 14, 27). — ನೆಲೆವೆರ್ಚಿಸು. -ಪೆರ್ಚಿಸು. To increase (v. t., Čpr. 3, 102). — ನೆಲೆವೆರ್ಚು. -ಪೆರ್ಚು. To increase in or to obtain ground, to extend, to increase (v. i., Čpr. 6, 81; 7, 127; Abh. P. 3, 52; 9, 109; 14, 2. 71; 16, 42).

ನೆಲ್ಲಿ nĕlli. The emblic myrobalan, Phyllanthus emblica Lin. (Emblica officinalis Gaert., ಧಾತ್ರಿ, ಆಮಲಕಿ, ತಿವೆ Hlâ.; Nr., except ತಿವೆ; Mr. 122; ಆಮಲಕ Nn. 6; My.; Tĕ., T., M.; Bp. 45, 39; Šśv. 3, 32; J. 19, 6). See ಅಡವಿ-, ಅರ-, ಅಡ-, ಕಿಱಿಯ-, ಕಿಱು-, ನೆಲ-, ಭೂ-. — ನೆಲ್ಲಿಚಟ್ಟು. = ಚಟ್ಟು 3. (My.). — ನೆಲ್ಲಿಯ ಕಾಯಿ. Its fruit (ಧಾತ್ರೀಫಲ Nn. 166; B. 2, 17). ನೆಲ್ಲೀ ಕಾಯಿ ಹುಲ್ಲಿಗೆ ಅದೀತೇ?—ಗಟ್ಟದ ಉಪ್ಪು, ಬೆಟ್ಟದ ನೆಲ್ಲೀ ಕಾಯಿ (Prvs.). — ನೆಲ್ಲಿಯ ಮರ. The nĕlli tree (ತಿಷ್ಯಫಲೆ, ಆಮಲಕ, ಅಮೃತ, ವಯಸ್ಥೆ Nr.; Si. 135; ಅಕ್ಷ Nn. 37; ಶ್ರೀಪರ್ಣಿ Si. 420). — ನೆಲ್ಲಿಹಿಣ್ಡಿ. A kind of nĕlli pickles (My.).

ನೆಲ್ಲು nĕllu. = ನೆಲ್. (ಶಾಲಿ, ವ್ರೀಹಿ, ಸ್ತಮ್ಬಕರಿ Mr. 373; My.; Si. 304. 305. 434; ಭತ್ತ, ವ್ರೀಹಿ G.; Oryza sativa L., Z.). ಬೇಗ ಬೆಳೆವ ನೆಲ್ಲು (ಪಾಟಲ); ಕರಿಯ ನೆಲ್ಲು (ಅಣು); ಷಷ್ಟಿಕಮೆಮ್ಬ ನೆಲ್ಲುಗಳು ಬೆಳೆವ ಭೂಮಿ (ಷಷ್ಟಿಕ್ಯ); ನೆಲ್ಲು ಕಱಿವೆಯೂ ಬೆಳೆವ ಭೂಮಿ (ವ್ರೈಹೇಯ, ಶಾಲೇಯ Nr.). ನೆಲ್ಲಪ್ಪ ಗದ್ದೆ (ವ್ರೈಹೇಯ, Mr. 94). ಸಿತಶಾಲಿ ಕೆಂಗಱಿವೆ ಕೆಮ್ಬುತ್ತಿ ರಾಜಾನ್ನಮ್ ಬಯಿಲಮ್ ಎಮ್ಬಿವು ನೆಲ್ಲ ಭೇದಂಗಳಕ್ಕು (373). ರಾಜಾನ್ನನೆಲ್ಲಿಂಗೆ (Bp. 27, 16). ನೆಲ್ಲನ್ನು, ನೆಲ್ಲಿನ, ನೆಲ್ಲಿಗೆ (My.). ನೆಲ್ಲೂ ಮೊಸರೂ ಕಲಸಿದ ಹಾಗೆ (Prv.). — ನೆಲ್ಲಕ್ಕಿ. -ಅಕ್ಕಿ. Rice (My.). ನಲ್ಲನ್ ಒಲ್ಲೀ ಒಲ್ಲ, ನೆಲ್ಲಕ್ಕಿಬೋನೊಲ್ಲ, ಅಲ್ಲನೆ ಒಲ್ಲ, ಮೊಸರೊಲ್ಲ; ಯಾಕೊಲ್ಲ? ಇಲ್ಲದಕ್ಕೊಲ್ಲ (Sp.). — ನೆಲ್ಲುಊಬುಮುಳ್ಳು. A bristle of a beard of rice (ಕಿಂಶಾರು, ಧಾನ್ಯಶೂಕ Si. 448). — ನೆಲ್ಲುಗದ್ದೆ. A paddy-field (ವಪ್ರ, ಕೇದಾರ, ಕ್ಷೇತ್ರ Si. 302). — ನೆಲ್ಲುಹುಲ್ಲುಸರವೆ. A band of paddy straw (My.). ನೆಲ್ಲುಹುಲ್ಲುಸರವೆ ಹಾಕು, to tie a cord of paddy straw to the right leg as a challenge, expressing that all opponents are like straw (My.).

ನೆವ nĕva. = ನೆಪ, ನೆವನ, ನೆವನು. Tbh. of ನಿಭ. A pretence, a pretext, a plea (ಅಪದೇಶ Nr.; Si. 460; ನಿಭ, etc. Hlâ.; ವ್ಯವಧಾನ, ತಿರೋಧಾನ, ಅಪವಾರಣ Mr. 435; ಕೂಟ, ಕಪಟ Nn. 152; C.; Tĕ.; ನಿಮಿತ್ತ G.). ಒನ್ದದನ್ನು ತಿಳಿಸದನ್ತೆ ಮತ್ತೊನ್ದದನ್ನು ತೋಱುವದು ಮುನ್ತಾದ ನೆವವು (ವ್ಯಾಜ, ಅಪದೇಶ Si. 72). ನೆವದಿನ್ದ ಹೋದರೆ ನೋವು ತಪ್ಪೀತೇ? (Prv.). See Čpr. 1, after 101; 2, 13; 8, 29; Bp. 3, 18; 5 sum.; 35, 44. 48; 36, 47; 38, 19; 47, 19. 25. 56; J. 3, 12; 19, 50. — ನೆವಂಗೊಳ್. -ಂ-ಕೊಳ್. = ನೆವ ತೆಗೆ. (Rśv. 4, after 14). — ನೆವ ತೆಗೆ. To take a pretext, to hold out as a pretext (B. 4, 80; My.). — ನೆವ ಮಾಡು. To make a pretext, to pretend (B. 4, 6; My.). — ನೆವ ಹೇಳು. To utter a pretext, etc. (B. 4, 6; My.).

ನೆವನ nĕvana. = ನೆವ, etc. (My.; B. 1, 14).

ನೆವನು nĕvanu. = ನೆವನ. (My.; G. 87. 302). Abl. ನೆವನಿನ್ದ (My.).

ನೆವರು nĕvaru. = ನಮಲು 1. ನೆವರಿ ಕೊಣ್ಡು ಹೋಗುವವ ಬವರಕ್ಕೆ ಬನ್ದಾನೇ? (Prv.).

ನೆಸೆ nĕsĕ. 1. = ನೆಗೆ 1. (ಉತ್ಪವನ Šmd. Dh. in all MSS.; see remarks ad ನೆಗೆ 1).

ನೆಸೆ nĕsĕ. 2. = ನೆಗೆ 2. To go upwards, to jump, to jump or fly about. P. ps. ನೆಸದು, ನೆಸೆದು, ನೆಸ್ತು. (Bp. 17, 2; 24, 44; 44, 7. 47; 49, 39; 57, 45). 2, to raise. ಬಾಲಂಗಳಂ ನೆಸದು (60, 32). — ನೆಸ್ತಾಟ. -ಆಟ. Jumping about (from anger). ನೆಸ್ತಾಟಕ್ಕೆ ಹೋಗಿ, ಮುಸ್ತಾಟ ಹೆಚ್ಚಿತು (Prv.). — ನೆಸ್ತಾಡು. -ಆಡು. To jump about (My.).

ನೆಸೆ nĕsĕ. = ನಸಿ, etc. (My.). ನೆಸೆ ಕೊಟ್ಟವ ಹಸೆ ಕದ್ದು ಕೊಣ್ಡು ಹೋದ (Prv.).

ನೆೞ್ಳು nĕḻḻu. 1. = ನರಲ್, etc. (My.).

ನೆೞ್ಳು nĕḻḻu. 2. = ನೆೞಲ್ 1, etc. (My.).

ನೆೞಲ್ nĕḻal. 1. = ನೞ್ಳು 3, ನೆರಳ್, ನೆರಳು 2, ನೆೞ್ಳು 2, ನೆೞಲು. Shade; shadow; shelter, protection (ಆತಪತ್ರಾದಿ ಛಾಯೆ Šmd. I; T. ನಿೞಲ್, ನೀೞಲ್; M. ನಿೞಲ್; Tĕ. ನೀಡ); a reflection, a reflected counterpart (ಜಲದರ್ಪಣ ಪ್ರತಿಬಿಮ್ಬ Šmd. I; T., M., Tĕ.). ನೆೞಲ್ಗಳ್ (J. 8, 5; 15, 2). ನೀರು ನೆೞಲಿಲ್ಲದ ಠಾವು (ಮರು Nr.). See Šmd. 284; Čpr. 1, 72. 90; 6, 47; 7, 125; 8, after 4; Abh. P. 7, 52; Bp. 20, 14; 42, 5; 51, 32; 60, 46; Rśv. 5, 42; 6, after 11; J. 30, 19; ತಣ್ಣೆೞಲ್, ಪಡಿ-. — ನೆೞಲ್ಗವಿ. -ಕವಿ. Shadow to spread over (J. 29, 45).

ನೆೞಲ್ nĕḻal. 2. = ನೇೞಲ್. A certain tree (ಜಮ್ಬು ಮರಂ Šmd. Dh.). ನೆೞಲ ಮರ (ಶ್ಯಾಮೆ, ಮಹಿಳೆ, ಲತೆ, ಗೋವನ್ದನಿ, ಗುನ್ದ್ರ, ಪ್ರಿಯಂಗು, ಫಲಿನಿ, ಫಲಿ, ವಿಷ್ವಕ್ಸೇನೆ, ಗನ್ಧಫಲಿ, ಕಾರಮ್ಭೆ, ಪ್ರಿಯಕ Nr.; Si. 135, which adds = ಪ್ರೇಂಕಣಗಿಡ; cf. T., M. ಞಾವಲ್).

ನೆೞಲು nĕḻalu. = ನೆೞಲ್ 1, etc. (My.). ನೆೞಲುಗಳು (Bh. 1, 5, 5). ನೆೞಲು ಇದ್ದ ಮರ ಚನ್ದ, ನಳಿನವಿದ್ದ ಕೊಳ ಚನ್ದ.—ನೆೞಲು ಇಲ್ಲದ ಬಱೀಲಿ ಬಲವುಳ್ಳವನಾದರೂ ಕಳಕಳಿಸನೇ?—ನೆೞಲು ಬೂರಗಕ್ಕಿಲ್ಲ, ಕೂೞಿಗೆ ನೀತಿಯಿಲ್ಲ.—ನೆೞಲು ನೇರ ಬೇಕೆನ್ದು, ಹದುಪ್ಪೆ ಹೋದ ಹಾಗೆ.—ನೆೞಲು ನೋಡಿ, ನಿಜ ಮಱೆತ (Prvs.). ಪಾಣ್ಡವರ ನೆೞಲಿರಲು ನಿನಗೆ ರಾಜ್ಯವನಾಳ್ವ ಫಲ ಜನಿಸಲಱಿಯದು (Bh. 1, 8, 32). See Bp. 19, 46; 22, 29; 32, 26; Bh. 2, 13, 28. — ನೆೞಲುಗೆಡು. -ಕೆಡು. Shadow to be impaired or gone (Bp. 60, 51).

ನೆೞಿಲ್ nĕḻil. = ನಿಱಿಲು, ನಿಱ್, ನೆಱನ್. A sound imitating that of breaking (cf. ನಱ 2; M. ಞೆಟ್ಟು, to

Digitized by Google

crash, burst; ನೊಟ್ಟು, ನೊಳ್ಳು, ನೊಡೆ, crashing, etc.; T. ನೊಱುಕು, to break). — ನೆಬಿಲೆನೆ. With a crash. ನೆಬಿಲೆನೆ ನೆಲ್ಕನೆಯೆ ಮುಱಿದುದು (Šmd. I).

ನೆಲ್ಕನೆ nelkanĕ. = ನೆಬಿಲೆನೆ, q. v.

ನೆಲ್ಗು nelgu. = ನೆಕ್ಕು 2, etc. To sink, etc. (ಅನ್ತರ್ಲೀನ Šmd. Dh.; see M. s. ನಳ, ನೆಗ್ಗು 1; M. also ನೊಮುಙ್ಙು = T. ನೆಮುಙ್ಙು).

ನೇ nê. 1. = ನೆಯ್ 1, etc. (My.). P. p. ನೇದು (My.; B. 5, 122). ಮಗ್ಗ ನೇಯಲಿಕ್ಕೆ ತಿಳಿಯದಿದ್ದರೂ ಹಗ್ಗ ನೇಯಲಿಕ್ಕೆ ತಿಳಿಯದೇ? (Prv.).

ನೇ nê. 2. = ನೆಯಿ 2, etc.

ನೇಕಾಱ nê-kâra. = ನೆಯಿಕಾಱ. (B. 4, 178. 188).

ನೇಗಲ್ nêgal. ನೇಗಲು. = ನೇಗಲ, ನೇಗಲಿ, ನೇಗಿಲ್, ನೇಗಿಲು. Tbh. of ಲಾಂಗಲ. A plough (ಲಾಂಗಲ, etc. Si. 303; My.; Tĕ. ನಾಗಲಿ, ನಾಗೇಲು; T. ನಾಂಜಲ್, ನಾಯಿಲ್, ನಾಂಜಲ್; M. ನೇಙ್ಙೋಲ್, ನೆಞ್ಞಲ್; Mhr. ನಾಗರ, ನಾಂಗರ). ನೇಗಲ ಮೂಗು (ಪೋತ್ರ Si. 452). ನೇಗಲಿನ್ದ ಉಡುವವನು (ಹಾಲಿಕ 320). ನೇಗಲು ಉತ್ತರೆ ಹೊಲ, ಹಾಲು ಇದ್ದರೆ ಗೋವು (Prv.). — ನೇಗಲ ಹೊಡೆ. To drive the plough: to plough (B. 5, 99; My.). ಹೊಲವನ್ನು ನೇಗಲ ಹೊಡೆದು ಹಸನು ಮಾಡಿ (5, 115).

ನೇಗಲ nêgala. = ನೇಗಲ್, etc. (ಗೋದಾರಣ G.).

ನೇಗಲಿ nêgali. = ನೇಗಲ್, etc. (S. Mhr.). ನೇಗಲಿಯ ತುದಿ (ಪೋತ್ರ); ನೇಗಲಿಯ ಕುಡ (ನಿರೀಶ, ಕೃಷಕ, ಕುಟಕ); ನೇಗಲಿಯ ದಿಣ್ಣು (ಈಶೆ, ಈಷ್ವರಿ); ಹೊಲದೊಳಗೆ ನೇಗಲೀ ಹೊಡೆದ ಗೆರೆ (ಸೀತ G.).

ನೇಗಿಲ್ nêgil. ನೇಗಿಲು. = ನೇಗಲ್, etc. (ಹಲ, ಲಾಂಗಲ, ಸೀರ Hlâ., Mr. 370, Nr.; ಗೋದಾರಣ Nr.; ಶೀರ G.; My.). ನೇಗಿಲ ಈಸು (ಹಲದಣ್ಡ Nn. 7). ನೇಗಿಲ ಮುಖ (ಪೋತ್ರ 151; Mr. 487). ನೇಗಿಲ ಸಾಲು (ಸೀತೆ Hlâ., Nr.). ನೇಗಿಲ or ನೇಗಿಲು ಹೊಡೆ (ಉಡು G.). ನೇಗಿಲ ಹೊಡದದ್ದು (ಹಲ್ಯ G.). ಪೊನ್ನ ನೇಗಿಲೊಳ್ ಉತ್ತು, ಗುಳ್ಳದ ಬೀಜಮಂ ನೆಱೆ ಬಿತ್ತುವ ಅನ್ದದಿ (Bp. 60, 50). ಊರ ಮುನ್ದೆ ನೇಗಿಲ ಹೂಡಿದರೆ ಕಣ್ಣ ಕಣ್ಣವರಿಗೆ ಒನ್ದೊನ್ದು ಮಾತು (Prv.).

ನೇಗಿಲ nêgila. = ನೇಗಿಲ್, etc. (ಸೀರ G.).

ನೇಗೆ nêgĕ. = ನೇಯಿಗೆ, etc. (My.).

ನೇಜಕ nêjaka. A man who washes. See ನಿರ್ಣೇಜಕ.

ನೇಜಯ nêjaya. A short spear, a lance (Rśv. 6, after 11; 6, 64. 65; H. ನೇಜಾ, ನೇಜಾರ್, ನೇರಿಜಾ, ನೇರುಜಾ; cf. ನಾರಾಚ).

ನೇಜಿ nêji. = ನಾಟಿ. (Tu.).

ನೇಟು nêṭu. (= ನೀಟು, q. v.). Straightness; directness; truth (My.). ಆಕಳುಗಳ ಕೋಡುಗಳು ನೇಟಾಗಿ ಅಥವಾ ಬಾಗಿ ಇರುವವು (B. 5, 18). — ನೇಟುಸುದ್ದಿ. Direct news; true news (My.).

ನೇಣ್ nêṇ. = ನೇಣು. A cord; a rope (ಶುಲ್ವ, ರಜ್ಜು, ವಟಾರ, ವಟ, ಗುಣ, ತನ್ತ್ರಿ Hlâ., Nr., Si. 383; Grj. 1, 95; J. 11, 27; 28, 47; T. ನಾಣ್, ನಾಣಿ, ನಾಣ್; M. ನಾಣ್). ಮೂಗುನೇಣ್ಕಿದ ಹೋರಿ (ನಸ್ತಿತ, ನಸ್ಯೋತ Hlâ.). ಕುಱಿಯುರವಣಿಸಿ, ಕೊರಳ ನೇಣಂ ಪಱಿದು (Bp. 28, 9). — ನೇಣ ಹೊಲೆಯ. An outcast with a sacrificial cord: a Brâhmaṇa (Bp. 55, 18). — ನೇಣ್ಗಯ್ಯ. -ಕೆಯ್ಯ. He who has a rope or noose in his hand: Varuṇa (Šm. 13).

ನೇಣು nêṇu. = ನೇಣ್. (My.). ಎತ್ತುಗಳ ಮೂಗುನೇಣು (ನಾಸ್ಯ); ಗಾಳದ ನೇಣು (ತಣಸೂತ್ರ, ಪವಿತ್ರಕ Nr.). ಕೋಪವೆಮ್ಬುದು, ಕೇಳಿ, ಪಾಪದ ನೆಲೆಗಟ್ಟು! ಕೂಪದೊಳು ನೇಣು ಹಱಿದನ್ತೆ ನರಕಕೆ ಕೋಪಿ ತಾನಿೞಿವ (Sp.). See Bp. 2, 28; 3, 49; 35, 6; 57, 79; Si. 76. 452. — ನೇಣಿನ ಹೊಲೆಯ. = ನೇಣ-. (Bp. 60, 9). — ನೇಣು ಹಾಕಿ ಕೊಳ್ಳು. To hang one's self. ನೇಣು ಹಾಕಿ ಕೊಳ್ಳುವವನ ಹತ್ತರ ಕೋಣ ಕೇಳಿದ ಹಾಗೆ.— ಅಪ್ಪ ನೆಟ್ಟ ಆಲದ ಮರವಾದರೆ ನೇಣು ಹಾಕಿ ಕೊಳ್ಳ ಬಹುದೋ? (Prvs.).

ನೇಣುಗ nêṇ-uga. (Šmd. 240). A man who deals in ropes.

ನೇತಾರ nêtâra. Tbh. of ನೇತೃ (Šmd. 104).

ನೇತಿ nêti. Tbh. of ನಿಯತಿ. — ನೇತಿಗಳೆ. -ಕಳೆ. To shake the fetters off, to reject. ದುರಿತವೆಳ್ಳನಿತನಾದರು ನೇತಿಗಳೆವುದೆ ಚನ್ದ! (Kp. III, 3).

ನೇತು nêtu. P. p. of ನೇಲು.

ನೇತೃ nêtṛi. = ನೇತಾರ. Leading; *a leader, a guide; a chief, a master.*

ನೇತೃತ್ವ nêtṛitva. Leadership. (My.).

ನೇತ್ರ nêtra. = ನೆತ್ತ, ಲೆತ್ತ. A leader; leading, conducting. 2, *the eye* (ಕಣ್ Nn. 8. 29; ಅಮ್ಬಕ, ಕಣ್ಣು 66; ಅಕ್ಷಿ Mr. 516). 3, the number two (ಎರಡು Mr. 347). 4, renowned (ಖ್ಯಾತ, ಪ್ರಖ್ಯಾತ 66). 5, a good quality (ಸದ್ಗುಣ, ಒಳ್ಳೆಹ ಗುಣ 66). 6, the string with which a churning-stick is whirled round (ಗುಣ 516). 7, *the root of a tree* (ಮೂಲ, ಬೇರುಗಳು 66; ಬೇರ್ Mr. 471). 8, a pendent root (ಕುಜಾತಜಟೆ, ಮರದ ಬೀೞಲು 66). 9, *cloth, or a kind of cloth* (ಚೇಲ, ವಸ್ತ್ರ 66; ಸೀರೆ 516; *cf.* ನೆಯ್ 1). 10, the areca-nut tree (ಪೂಗ, ಅಡಕೆಯ ಮರ 66). 11, N. of a mountain (ಕುಭೃತ್, ಪರ್ವತಭೇದ 66).

ನೇತ್ರಚ್ಛದ nêtra-c̆-c̆hada. *The eyelid.*

ನೇತ್ರತ್ರಯ nêtra-traya. Šiva (My.).

ನೇತ್ರಪುತ್ರಿಕೆ nêtra-putrikĕ. The pupil of the eye (Čpr. 6, after 64; Abh. P. 11, 164).

ನೇತ್ರಬನ್ಧ nêtra-bandha. Binding or blinding the eye (by magic, ಕಣ್ಣುಗಟ್ಟು Mr. 226).

ನೇತ್ರಮೂಲಿ nêtra-mûli. A small creeping herb with sky-blue flowers, growing on the roadside, Evolvulus alsinoides Lin. (ವಿಷ್ಣುಕ್ರಾನ್ತಿ, ಜಯನ್ತಿ Mr. 128).

ನೇತ್ರರುಜ್ nêtra-ruj. *Disease of the eyes.*

ನೇತ್ರವಿರೋಧಕರಣ nêtra-virôdha-karaṇa. Causing hinderance or opposition to the eye. See ಹರಳ್ಚು.

ನೇತ್ರವೈದ್ಯ nêtra-vaidya. An oculist (My.).

ನೇತ್ರಾಮ್ಬು nêtra-ambu. Eye-water: *tears.*

ನೇತ್ರಾವತಿ nêtrâvati. N. of a river in South Canara (My.).

ನೇತ್ರಾವಳಿ nêtrâvali. A kind of sirĕ (Bp. 11, 25).

ನೇತ್ರಿ nêtri. N. of a plant (ಕೃಕವಾಕು, ಮುಸ್ತಕ, ಚಮ್ಮಿ Mr. 140).

ನೇದಿಷ್ಠ nêdishṭha. *Very near, next.*

ನೇದು nêdu. P. p. of ನೇ 1.

ನೇಪಥ್ಯ nêpathya. (= ನೈಪಥ್ಯ). *An ornament, decoration, attire* (see Hlâ. s. ತುಡುಗೆ). 2, the postscenium; the tiring-room; a stage (ರಂಗಭೂಮಿ G.).

ನೇಪಾಲ nêpâla. ನೇಪಾಳ. N. of a country, Nepal (Bp. 6, 18; 61, 30). 2, the purgative-nut plant (Mhr.; see ಜಾಪಾಳ). ನೇಪಾಳದೇಶದ ಭೂಪಾಲನಾದರೆ ಗೋಪಾಳದವನಿಗೆ ಏನು? (Prv.). — ನೇಪಾಳದ ಬೇರು. A creeper, the vomiting swallow-wort, Tylophora asthmatica W. & A. (St. & Pl.).

ನೇಮ nêma. 1. Tbh. of ನಿಯಮ (Šmd. 357. 361; Bp. 48, 21; My.; Tĕ., T., Mhr.). A rule, an order, an appoint-

Digitized by Google

ment, etc. ನೇಮವಿದ್ದರೆ ವ್ರತ, ಹೋಮವಿದ್ದರೆ ಶೋಧನ.— ನೇಮ ಹೆಚ್ಚಿ, ಹೋಮ ಮೀಱಿ, ಶ್ವಾನನ ಹಾಗೆ ತಿರಿಗಾಡುವದಾಯಿತು (Prvs.). — ನೇಮಗಲೆ. -ಕಲೆ. Prescribed skill (? J. 11, 21). — ನೇಮ ತೆಗೆ. To find out or lay down as a rule (B. 5, 171). — ನೇಮದ ವೀರಸಂಗವ್ವೆ. N. (Bp. 59, 6). — ನೇಮನಿಷ್ಠೆ. = ನಿಯಮನಿಷ್ಠೆ. (My.). — ನೇಮವ್ವೊಱು. -ಂ-ಪೊಱು. To take an observance upon one's self (Bp. 50, 53; 57, 34).

ನೇಮ nêma. 2. *Half;* a part, a portion. 2, fraud, deceit (*cf.* ನೆವ; Tĕ. ನೇವ).

ನೇಮಕ nêmaka. Tbh. of ನಿಯಾಮಕ. Ruling, etc.; a rule; an order, an appointment (My.).

ನೇಮಣೂಕ nêmaṇûka. Appointment, as to a post; allowance, stipend (Mhr.; B. 5, 269).

ನೇಮಣೂಕಿ nêmaṇûki. = ನೇಮಣೂಕ. (B. 5, 269. 272).

ನೇಮವನ್ತ nêma-vanta. Tbh. of ನಿಯಮವನ್ತ. A man who practises religious observances, caste-rules, etc. (My.). ನೆಲ ಬಲವನ್ತನಿಗೆ, ಕುಲ ನೇಮವನ್ತನಿಗೆ (Prv.).

ನೇಮಸ್ತ nêma-sta. Tbh. of ನಿಯಮಸ್ಥ. = ನೇಮವನ್ತ. (My.). 2, moderate, temperate (My.).

ನೇಮಿ nêmi. = ನೆಮ್ಮಿ, ನೇಹಿ. *The circumference or ring or felly or outer rim of a wheel. 2, a windlass or framework for the rope of a well. 3, the tree Dalbergia oujeinensis* Roxb. 4, a large tree, frequently cultivated for its eatable fruit, Mimusops kauki L. (St. & Pl.). — ನೇಮಿರಾಯ. N. (see s. ಅಮ್ಮಿ 1).

ನೇಮಿತ nêmita. Tbh. of ನಿಯಮಿತ. (My.).

ನೇಮಿಸು nêmisu. Tbh. of ನಿಯಮಿಸು. (Čh. v. 333; Bp. 2, 46; 57, 54; B. 4, 79. 143; 5, 171. 236; Šsv. 4, 46; J. 2, 66; My.). ನೇಮಿಸಲಾಱದ ಸೊಸೆಗೆ ಪಾಯಸವೇ ಕಹಿ (Prv.).

ನೇಯ್ nêy. 1. = ನೆಯ್ 1, etc. P. p. ನೇಯ್ದು (My.; B. 4, 188). ನೇಯ್ದದೇ ಬಟ್ಟೆ, ಉಱಿದದೇ ಕರೆ (Prv.).

ನೇಯ್ nêy. 2. = ನೆಯ್ 2. (ಆಜ್ಯ Šs.).

ನೇಯ nêya. = ನೆಯಿ 2, etc. See ನೇಯಕಾಱ.

ನೇಯ nêya. 1. = ನಾಯ 2. Tbh. of ನ್ಯಾಯ (Šmd. 368, o. r. ನಾಯ. 175).

ನೇಯ nêya. 2. To be conducted or guided, to be governed. See ಪ್ರಣೇಯ; ಕೆಯ್-.

ನೇಯಕಾಱ nêya-kâṟa. = ನೆಯಿಕಾಱ. (B. 3, 103).

ನೇಯಿ nêyi. = ನೇಯ್ 1, etc. P. p. ನೇಯಿದು (B. 4, 178; My.). ನೇಯಿದರೆ ಬಟ್ಟೆ, ಕಟ್ಟಿದರೆ ಮೊಟ್ಟೆ (Prv.).

ನೇಯಿಗೆ nêyigĕ. = ನೆಯಿಗೆ, etc. (My.). ನೇಯಿಗೆ ನೇಯ್ದರೆ ಕೂಡೀತಲ್ಲದೆ ನೆಗದರೆ ಕೂಡೀತೇ? — ನೇಯಿಗೆಯಾದರೂ ನಯವಿದ್ದರೆ ನಾಣ್ಯ ಸಿಕ್ಕೀತು (Prvs.). — ನೇಯಿಗೆಯವ. -ಅವ. = ನೆಯಿಗೆಯವ. (ತನ್ತುವಾಯ, ಕುವಿನ್ದ Si. 338; My.). ನೇಯಿಗೆಯವನ ಕೆಯ್ಯೂ ಓದುವವನ ಬಾಯೂ ಚುರುಕಾಗಿರ ಬೇಕು.— ನೇಯಿಗೆಯವನ ಮಟ್ಟು ಕಟ್ಟುವವ ಬಲ್ಲ.— ನೇಯಿಗೆಯವನಿಗೆ ಯಾಕೆ ಕೋತೀ ಮಱಿ? (Prvs.).

ನೇಯಿಸು nêyisu. = ನೆಯ್ಸು. To cause to weave (My.; B. 4, 159).

ನೇಯು nêyu. = ನೇಯ್ 1, etc. (My.; B. 3, 9; 4, 165; Tĕ.). ನೇಯುವದು (ವಾಣಿ, ವ್ಯೂತಿ); ನೂಲುಕಣ್ಡಿಕೆಯನಿರಿಸಿ ನೇಯುವ ಕೊಱವಿ (ವೇಮ Si. 343).

ನೇಯ್ಗೆ nêygĕ. = ನೇಯಿಗೆ, etc. (My.).

ನೇರ್ nêr. 1. To cut, to cut off (ಕೃನ್ತನ Šmd. Dh.; ಅಂ Šmd. II; Kk. 88; Čpr. 6, 49; 8, 41; Abh. P. 13, 47; *cf.* ನಿರೆ). ನೇರ್ದಂ (Šmd. 50. 55). ಬಾದುಣ್ಬೆಸ್ದು, ಹತ್ತನೆಯ ತಲೆಯುಮಂ ನೇರ್ದಾಗಳ್ (288).

ನೇರ್ nêr. 2. To accord, to agree; to yield assent, to agree to. (T., M.). ತಾರದೆ ವಿನಾಯಕರ್ ನೇರದೆ (Mr. 2).

ನೇರ್ nêr. 3. = ನೇರ, ನೇರು, ನೇರ್. Straightness, (length T.); union; agreement; harmony; rightness, propriety, fitness, order (T., M.; *cf.* ನಿಗುರ್; ನಿಱ್ 3, ನೀಟು; ನೆರೆ 1). ನೇರ್ಗಳ್ (Šmd. 51). — ನೇರ್ಗೋಲ್. -ಕೋಲ್. A long staff: a lance (J. 4, 35). — ನೇರ್ಪಡಿಸು. To make fit or nice (Šsv. 2, 60). — ನೇರ್ಪಡು. 1. To be united; to agree; to be fitting, to fit, to be proper, becoming, or pleasant (ಸಂಶ್ಲೇಷ Šmd. Dh.; ಅಮರ್ 76; ಪೊರ್ದುಗೆಯಾಗು 76 Cm.; T.: to occur, meet, appear, happen); to be obtained or gained (My.). ಅಧೋರ್ಧರುಕಂ ನೇರ್ಪಡೆ, ಚಲ್ವಂಬೀಱ (Rsv. 13, 70). ವನದ ನಡುವೆ ದಿಟ್ಟಗೆ ಕಟ್ಟೆ ನೇರ್ಪಟ್ಟ ವಾಳವೇರ ಕೇರ್ಗಟ್ಟು (Čpr. 7, after 92). See Abh. P. 10, 67; 12, 60; 16, 81; Rsv. 14, 47; Šsv. 1, 53. — ನೇರ್ಪಡು. 2. Propriety, etc. ನೇರ್ಪಡುಗಿಡು. -ಕಿಡು. Propriety, etc. to be lost (Abh. P. 7, 81; 9, 85). — ನೇರ್ವಡು. -ಪಡು. = ನೇರ್ಪಡು. 1. (Čpr. 3, 20. 85).

ನೇರ nêra. = ನೇರ್ 3. Straightness; propriety, etc., pleasantness. ಅವನು ಮಾಡುವ ಕೆಲಸ ಬಹಳ ನೇರ (My.). ಅವನ ಮಾತಿನ ನೇರವೆಷ್ಟೆನ್ತ ಹೇಱಲಿ? (My.). ನೇರದಿಂ ಸ್ವರಗೆಯ್ತ ಕಲಪಿಕೋಚ್ಚಾರದಿಂ...ತೀರದೆಲ್ಲೆಲ್ಲಿಯುಂ ನನ್ದನದೊಳು (J. 3, 28). — ನೇರ ನೇರ. rep. Quite proportionate (My.); face to face (My.). — ನೇರಬೊಟ್ಟು. A mark made with coloured clay upon the middle of the forehead of females exactly under the division of hair, either round, or slightly pointed towards that division (above which the baitalĕ bŏṭṭu is worn, ತಿಂಗಳಿಗೆ, ಜೂಳೆಯ Kk. 27; Šm. 72).

ನೇರಿತು nêritu. = ನೇರಿತ್ತು (Šmd. 96. 184). That which is straight, fit, proper or right (ಸರಲ, ಸರಿಸ Nn. 63; ಸಾಧ, ಸಸಿನ, ನಿರುತ 94; ಪ್ರತ್ಯಯ, ನಿರುತ 137; ನೇರ್ಪು Čt. I, 52; Abh. P. 11, 176). Plural ನೇರಿದುವು. ನೇರಿದುವು ಬಿರಲ್ (Šmd. 170).

ನೇರಿತ್ತು nêrittu. = ನೇರಿತು, q. v. ನೇರಿತ್ತಿದು (Šmd. 109). — ನೇರಿತ್ತಂ ಮಾಡು. To make proper, to correct (ತಿದ್ದು Šmd. 4 Cm.).

ನೇರಿದು nêridu. Propriety, rectitude, religious loyalty (ಭಕ್ತಿ Čt. I, 75). — ನೇರಿದ. -ಅ 3. (Šmd. 109. 184). A Brâhmaṇa (ಸಯ್ದ Šmd. II, Kk. 93; ದಿಮ್ಮಿದ, ಸಯ್ದ, ಗನಕ, ಇಳೆಯ ಪಿರಿಯ, ದ್ವಿಜ Kk. 34, Šm. 52; Abh. P. 4, 13). ನೇರಿದರ್ (Šmd. 258). — ನೇರಿದಳ್. (Šmd. 109). A Brâhmaṇa woman.

ನೇರು nêru. = ನೇರ್ 3. (Rsv. 5, after 19).

ನೇರೆ nêrĕ. A breakfast (Mhr. ನ್ಯಹಾರೀ, ನ್ಯಾಹಾರೀ; B. 5, 287).

ನೇಱಲ್ nêṟal. ನೇಱಲು. = ನೇಱಲ್, etc. See ಜಮ್ಬು-; Šsv. 3, 32. — ನೇಱಲುಮರ. A common tree with purple berries, Eugenia jambolana Lam. (Calyptranthes caryophyllata Swartz, My.; Tĕ. ನೇರೆಡು, ನೇರೇಡು; T. ನಾವಲ್; M. ಞಾವಲ್).

ನೇಱಲೆ nêṟalĕ. = ನೇಱಲ್. (My.).

ನೇಱಳು nêṟaḷu. = ನೇಱಲ್. See ಪನ್ನೇಱಳು.

Digitized by Google

ನೇಱಳೆ nêṟaḷĕ. = ನೇಱಲ್. (My.). See ಕಾಗಿ-, ಕುಣ್ಣ-, ಗನ್-, ಗುಡ್ಡ-, ನಾಯಿ-, ನೆಲ-. — ನೇಱಳೆಹಣ್ಣು. (ಜಮ್ಬು, ಜಾಮ್ಬವ Si. 125).

ನೇಱಿಲ್ nêṟil. ನೇಱಿಲು. = ನೀಱಲು, ನೀಱಲೆ, ನೀಱ್ಲು, ನೇಱಲ್, ನೇಱಲೆ, ನೇಱಳು, ನೇಱಳೆ, ನೇಱಿಳೆ, ನೇಱ್ಲು. The tree Eugenia jambolana Lam. (ಜಮ್ಬು Mr. 115; Šmd. 176; B. 4, 54; My.). See ಅರ-, ಅರಸು-, ನಾಯಿ-, Rśv. 2, 46. 47. — ನೇಱಿಲ ಹಣ್ಣು. (ಜಮ್ಬು, ಜಾಮ್ಬವ Nr.).

ನೇಱಿಳೆ nêṟiḷĕ. = ನೇಱಿಲ್. (Bp. 18, 16).

ನೇರ್ nêr. = ನೇರ 3, q. v.

ನೇರ್ಪು nêrpu. Straightness; propriety; regular course, order, way; rectitude, uprightness (ನೇರಿತು Čt. I, 52; ಸಯ್ಪು II, 53; ಸಯ್ತು Ŝs.; Čpr. 8, 83). — ನೇರ್ಪುವೆಱ್. -ಪೆಱ್. To become proper, etc. (Abh. P. 16, 97).

ನೇಱ್ಲು nêṟlu. = ನೇಱಿಲ್. (My.).

ನೇಲ್ nêl. = (ನೆಲ್), ನೇಲು. To be suspended, to hang, to swing, to dangle (ಅಲಮ್ಬನ Šmd. Dh.; ನೆಲ್ Kk. 74; ಎಲ್ 72; T. ತಾಲು, ನಾಲು; M. ತಾಲು, ತೀಲು; Tĕ. ವೇಲು; *cf.* ನಾಮ್ಬು 2). ನೇಲ್ದಂ (Šmd. 288). ನೇಲ್ವುದು (Kk. 72). See Rśv. 5, after 55; 5, 79.

ನೇಲಿಸು nêlisu. To suspend, etc. (Mg.).

ನೇಲು nêlu. = ನೇಲ್. P. p. ನೇತು (My.). ಜಡ್ಡಿಕೆಯಲ್ಲಿ ಕಟ್ಟ ನೇಲುವ ಹೂಮಾಲೆ (ಪ್ರಭ್ರಷ್ಟಕ); ಬಯ್ತಲೆಯಲ್ಲಿ ನೇಲುವ ಹೂಮಾಲೆ (ಲಲಾಮಕ Nr.). — ನೇತಾಡು. -ಆಡು. = ನೇಲು. To hang, etc. (My.). ಜುಟ್ಟಿನಲ್ಲಿ ನೇತಾಡುವ ಹುವ್ವಿನ ಸರ (ಪ್ರಭ್ರಷ್ಟಕ, ಶಿಖಾಲಮ್ಬ Si. 229); ಕೊರಳಲ್ಲಿ ನೇತಾಡುವ ಒಡವೆ (ಲಮ್ಬನ, ಲಲನ್ತಿಕೆ 218). ನೇತಾಡುವವನ ಹತ್ತರ ಮಾತಾಡಲಿಕ್ಕೆ ಹೋದರೆ ಜೋತಾಡುವದು ಸಿಕ್ಕೀತು. — ಕಾಟನಾಯಕನ ಮನೆಗೆ ಕನ್ನಾ ಹಾಕಿದರೆ ನೇತಾಡುವದೆರಡು ಥಂಗೀ ಚೀಲ. — ನೂಲು ಹಿಡಿದು ಜೋಲುವವನ ಕಾಲು ಹಿಡಿದು ನೇತಾಡಿದ (Prvs.). See Prv. s. ಬೇತಾಳ.

ನೇವಣ nêvaṇa. = ನೇವಳ, etc. (Râm. 6, 53, 95).

ನೇವಣಿಸು nêvaṇisu. To make a necklace of (Bh. 10, 10, 10).

ನೇವರಿಸು nêvarisu. = ನಿವರಿಸು. To make straight, smooth or proper by gently rubbing with the hand or by fingering; to rub gently with the hand, to stroke (My.; Tĕ. ನೇವರಿಂಚು; *cf.* ನಿವರು). ಕರದೆ ನೇವರಿಸುವಲ್ಲಿ ತಡವೆಮ್ಬ ಶಬ್ದಮದು (Šm. 108). ಕುರುಳಂ ಕೊರುಗುರಿನ್ದೆ ನೇವರಿಸುತಂ (Rśv. 7, 10). ಕುರುಳಂ ನೇವರಿಸಿ (8, after 82). ಧನುವ ನೇವರಿಸಿದನು (Râm. 3, 6, 7). See Čpr. 7, 127; Râm. 3, 8, 23; 6, 12, 37; 6, 53, 29. 101; Rśv. 4, after 14; J. 26, 12.

ನೇವಳ nêvaḷa. (Šmd. 157). = ನೇವಣ, ಲೇವಳ, ಲೇವಾಳ. A necklace of silver or gold (Tĕ. ನೇವಳ, ನೇಹಳ; Grj. 3, after 91; Bp. 4, 37; 42, 11; 44, 48; *cf.* ನೇಲ್? M. ತೊಙ್ಙಲ್, ornamental hangings). **2,** a silver or gold girdle or zone (Tu.). ನೇವಳವಾದರೆ ಹವಳವ್ದು ಆದೀತೇ? (Prv.).

ನೇವುರ nêvura. Tbh. of ನೂಪುರ q. v. (ಅನ್ದುಗೆ Bhn. 21; Grj. 3, 118; 4, 19; Bp. 42, 11; V. 4, 86). See ಪಿರ-.

ನೇಸಱ್ nêsaṟ. (Šmd. 59). **ನೇಸಱು.** The sun (ಪೊತ್ತು, ಸೂರ್ಯ Šmd. I; ದಾನ ಜೊಡರ್ Čt. I, 91; ರವಿ I, 95. 103; II, 20; ನಿಸಿವಗೆಯ, ತಾವರೆಗೆಳೆಯ, ಪೊತ್ತು, etc., ಸೂರ್ಯ Šm. 14 Kk. 45; ಇನ, ಸೂರ್ಯ Si. 435; T. ಞಾಯಿಱು, ನಾಯಱು, ನಾಯಿಱು; M. ಞಾಯಱು, ಞಾಯಿಱು; T. ನೀಱಲ್ light; M. ನೇರ, the sun, daylight; *cf.* ನೆಗಱ್ 2). ನೇಸಱು ಬಟ್ಟಂ (ಪೊತ್ತು Čt. I, 35). ಆವನಾನೊಬ್ಬ ವಿಪ್ರ ನಿದ್ರೆಗೆಯ್ಯುತ್ತಿರಲು ನೇಸಱು ಅಸ್ತಮಯ ಮಾಡುಹುದು, ಆವನೊಬ್ಬ ಬ್ರಾಹ್ಮಣನು ಮಲಗಿರಲು ನೇಸಱು ಉದಯ ಮಾಡುಹುದು, ಆ ಇಬ್ಬರು ತಱುವಾಯೆನ್ದ ಅಭಿನಿರ್ಮುಕ್ತನು ಅಭ್ಯುದಿತನು ಎನಿಸುಗು (Nr.). ಕುಮುದಂಗಳ ನಗೆ ಬತ್ತಿದುವು ಪಾಯ್ವ ನೇಸಱಿನ್ ಅಗಲ್ (Lliv. 3, 5). ತಱ ತಱನೆ ನೇಸಱ್ ಮೂಡಿದುದು (Šmd. I & 229). See Šmd. 156. 264; Čpr. 4, 72; Abh. P. 9, 112; J. 7, 50; Si. 255; ಪಡು-, ಮುನ್-. — ನೇಸಱಣುಗ. -ಅಣುಗ. Yama (ಜವ, ಅಱ, etc., ಅನ್ತಕ Šm. 12). — ನೇಸಱುಗಲ್. -ಕಲ್. The sun-stone: crystal (ಸೂರ್ಯಕಾನ್ತ Ŝs.). — ನೇಸಗಗಲ್. = ನೇಸಱುಗಲ್. (ಮಾರ್ತಾಣ್ಡೋಪಲ Čt. II, 81). — ನೇಸಗುವರ. -ಕುವರ. Yama (Kk. 15). — ನೇಸಪಱು. The sun to set (Abh. P. 15, after 38). — ನೇಸಮ್ರಯಣ. (Šmd. 217). The sunny season of spring.

ನೇಸ್ತ nêsta. = ನೇಹ. Love (My.).

ನೇಸ್ತಗಾತಿ nêsta-gâti. A female friend (My.).

ನೇಸ್ತಗಾಱ nêsta-gâṟa. A male friend (My.).

ನೇಹ nêha. Tbh. of ಸ್ನೇಹ. (ತಕ್ಕ Čt. II, 36; ಅಕ್ಕಱು II, 72; ಕಾದಲ್ಮೆ II, 81; Kk. 88; ಕಾದಲ್ಮೆ, ನಲ್ಮೆ, ಒಲಿಪ್, ಕೂರ್ಮೆ Šm. 75; Kk. 30; Grj. 2, after 106; Râm. 6, 53, 101). 2, a sexual organ (Bp. 42, 15). — ನೇಹಗಲಹ. -ಕಲಹ. A lover's quarrel, mere wanton quarrelsomeness (J. 26, 5).

ನೇಹಿ nêhi. Tbh. of ನೇಮಿ. A large timber tree, Ougeinia dalbergioides Benth. (St. & Pl.).

ನೇಳಿಲ್ nêḷal. = ನೆಳಲ್ 2. (ಪ್ರಿಯಂಗು, ಶ್ಯಾಮ, ಫಲಿನಿ Mr. 111).

ನೈ nĕi. nay. For Kannada (or Tbh.) words that appear with this initial in writ see ನೆಯ್ or ನಯ್.

ನೈಋತ್ಯ nairitya. Tbh. of ನೈಋರ್ತ್ಯ. (J. 15, 11; B. 4, 115).

ನೈಕ na-êka. *Not one, more than one, several, many, manifold.*

ನೈಕಭೇದ naika-bhêda. *Of many kinds, various.*

ನೈಕಷೇಯ naikashêya. (fr. ನಿಕಷೆ). A child of Nikashâ: *a râkshasa, a fiend.*

ನೈಗಮ naigama. (fr. ನಿಗಮ). Relating or belonging to the vêda. 2, *a road.* 3, *a townsman, a citizen.* 4, *a trader, a merchant* (see s. ವಣಿಜ).

ನೈಚಿಕೆ naicikĕ. (fr. ನೀಚಿ). *An excellent cow* (ತಲೆಯಾವು Hlâ.). 2, the head or forehead of an ox (ಹಣೆ Mr. 179).

ನೈಚ್ಯ naicya. (fr. ನೀಚ). Lowness, vileness; humility (My.; Tĕ.).

ನೈಜ naija. (fr. ನಿಜ). *Own, one's own,* inherent. 2, real; reality, truth (ನನ್ನಿ, ಸತ್ಯ Kk. 48). See Bp. 3, 68; 57, 19; J. 9, 27; 26, 9; 27, 20; Ŝs. s. ಬೇದ 2.

ನೈಜಾಮು naijâmu. (fr. ನಿಜಾಮು). Relating or belonging to the nijâmu, Nizâm (My.).

ನೈಪಥ್ಯ naipathya. = ನೇಪಥ್ಯ. (J. 2, 27; 10, 6; Tĕ.). — ನೈಪಥ್ಯಂಗೆಯ್. -ಗೆ-. To attire one's self (Rśv. 5, after 19). — ನೈಪಥ್ಯನ್ದಳೆ. -ತಳೆ. To put on ornaments (Rśv. 6, after 11). — ನೈಪಥ್ಯಮ್ಬಡೆ. -ಂ-ಪಡೆ. To be decorated (Rśv. 6, after 11).

ನೈಪಾಲಿ naipâli. (fr. ನೇಪಾಲ). Nepaulese. 2, *red arsenic.*

Digitized by Google

ನೈಪುಣ್ಯ naipuṇya. (fr. ನಿಪುಣ). Dexterity, cleverness, skill; dexterous, etc. (Čpr. 3, 27; 4, after 12; Bp. 46, 39).

ನೈಮಿತ್ತಕ naimittaka. (fr. ನಿಮಿತ್ತ). Accidental, occasional, produced by particular circumstances. (My.).

ನೈಮಿಷ naimisha. (fr. ನಿಮಿಷ). Momentary. 2, N. of a forest. (J. 22, 22).

ನೈಮೇಯ naimêya. = ನಿಮಯ. *Barter, exchange.*

ನೈಯಗ್ರೋಧ naiyagrôdha. (fr. ನ್ಯಗ್ರೋಧ). *Belonging to or made of the nyagrôdha.*

ನೈಯಾಯಿಕ naiyâyika. (fr. ನ್ಯಾಯ). Knowing the nyâya philosophy or the laws of logic; a dialectitian, a logician. (Čpr. 1, 25).

ನೈರಸ nairasa. (fr. ನೀರಸ). The state of being devoid of taste, unsavory; saplessness (Bp. 56, 57).

ನೈರುತಿ nairuti. Tbh. of ನೈಋತಿ. (My.).

ನೈರುತ್ಯ nairutya. Tbh. of ನೈಋತ್ಯ. (Bp. 1, 64; 2, 28; My.).

ನೈರ್ಋತ nairṛita. (fr. ನಿರ್ಋತಿ). (= ನಿರುತಿ). Relating to nirṛiti; south-western. 2, *the ruler of the south-west quarter.* 3, a child of Nirṛiti: *a râkshasa, a demon.*

ನೈರ್ಋತಿ nairṛiti. = ನೈರುತಿ. The south-west quarter. 2, a râkshasa.

ನೈರ್ಋತ್ಯ nairṛitya. = ನೈಋತ್ಯ, ನೈರುತ್ಯ. Relating to nirṛiti; south-western.

ನೈರ್ಮಲ್ಯ nairmalya. (fr. ನಿರ್ಮಲ). Stainlessness, purity; virtue (ಪುಣ್ಯ, ನಿರ್ಮಲ Nn. 68; Bp. 54, 59). See ತಿಳಿ.

ನೈಲ್ಯ nailya. (fr. ನೀಲ). Blueness; dark-blue, blackness. (My.).

ನೈವೇದ್ಯ naivêdya. (fr. ನಿವೇದ್ಯ). = ನಿವೇದನ. An offering of eatables presented to a deity, an idol or any deified object. (Bp. 33, 10; J. 30, 40; Si. 242; My.). ನೈವೇದ್ಯಕ್ಕೆ ನಾಯಿ ಮುಟ್ಟಿದರೆ ನೈಷಧಪತಿ ಏನು ಮಾಡ್ಯಾನು? (Prv.). See Jns. s. ಎಬ್ಬಿಸು. — ನೈವೇದ್ಯ ಈ. To present a naivêdya (Bp. 33, 10). — ನೈವೇದ್ಯ ಕೊಡು. = ನೈವೇದ್ಯ ಈ. (B. 4, 133). — ನೈವೇದ್ಯ ತೋರಿಸು. To show eatables at one's dinner to a deity (liṅga, etc.) before eating them (B. 5, 61; My.). — ನೈವೇದ್ಯ ಮಾಡು. = ನೈವೇದ್ಯ ಕೊಡು. (My.).

ನೈಶಾಟ naiśâṭa. (fr. ನಿಶಾಟ). Relating to a demon or demons (Râm. 3, 6, 4).

ನೈಷಧ naishadha. (fr. ನಿಷಧ). Relating to Nishadha. 2, Nala (see Prv. s. ನೈವೇದ್ಯ). 3, an epic poem treating on Nala's adventures (My.).

ನೈಷ್ಕಿಕ naishkika. (fr. ನಿಷ್ಕ). *A mint-master.*

ನೈಷ್ಠಿಕ naishṭhika. (fr. ನಿಷ್ಠೆ). Steady, firm, devoted; vowing abstinence and chastity. (My.).

ನೈಷ್ಠಿಕತನ naishṭhikatana. Constancy, steady adherence to rule, firm belief (My.).

ನೈಸರ್ಗಿಕ naisargika. (fr. ನಿಸರ್ಗ). Natural, innate, inherent, original. (My.).

ನೈಸ್ತ್ರಿಂಶಿಕ naistrimśika. (fr. ನಿಸ್ತ್ರಿಂಶ). *A swordsman.*

ನೊಗ nŏga. = ನಗ 3. Tbh. of ಯುಗ (Śmd. 343). A yoke (ಯುಗ Nn. 90; ಸಂಯ, ಸಾಮ್ಯ, ಯುಗ Mr. 286; ಕೂಬರ, ಯುಗನ್ಧರ Si. 277; J. 25, 26; C.; Tĕ.; T., M. ನುಗ). ನೊಗನು ತಲೆಯೂರು ಬಣ್ಣಿ ಎಪ್ಪಿವೆಲ್ಲಂ ಹೂಡುವ ಎತ್ತುಗಳು ಕ್ರಮದಿನ್ದ ಯುಗ್ಯ ಪ್ರಾಸಂಗ್ಯ ಶಾಕಟ ಎನಿಸುಗು; ನೊಗದ ಕೀಲು (ಯುಗಕೀಲಕ); ತಿದ್ದಲಿನ್ದು ನೊಗದ ಕೆಲದಲ್ಲಿ ಕಟ್ಟಿದ ಹೋರಿ (ಯುಗಪಾರ್ಶ್ವಗ, ಪೃಷ್ಠವಾಹ್ Nr.). ಬಣ್ಣಿಯ ನೊಗ (ಯುಗ Si. 410). ನೊಗ ಇದ್ದರೆ ನೇಗಲು, ಮಗ ಇದ್ದರೆ ತನ್ದೆ (Prv.). — ನೊಗಪಟ್ಟಿ. The broad strap attached to a yoke and passed round the ox's neck (My.).

ನೊಚ್ಚಗೆ nŏččagĕ. = ಲೊಚ್ಚಗೆ. Agreeableness, pleasant feeling arising *e. g.* for the body from sitting before a fire, for the mouth from eating betel-nut, or for the ear from hearing pleasant words (My.; *cf.* ನಚ್ಚು 1). ನುಚ್ಚಿಗೆ ಬೆಚ್ಚುವವ ನೊಚ್ಚಗೆಮಾತಾಡಿದರೂ ನಚ್ಚಿಗೆ ಸಾಲದು (Prv.).

ನೊಚ್ಚಿತು nŏččitu. That is one's desire: that is to the full satisfaction of one's desire (Abh. P. 10, 153).

ನೊಣ nŏṇa. = ನೊಣವು, ನೊಳ, ನೊಳವು. A fly (Bp. 46, 59; 60, 43; My.; T., M. ನುಳಮ್ಬು, ನೊಳ್ಳಲ್, a musquito or gnat; M. ನುರಿಮ್ಬು, a gnat, chiefly an eye-fly, *cf.* ನೊರಜು). ಕಾಡ ನೊಣ (ದಂಶ, ವನಮಕ್ಷಿಕೆ); ಕರಿಯ ನೊಣ (ನೀಲಮಕ್ಷಿಕೆ, ಚರ್ವಣೆ); ದೊಡ್ಡ ನೊಣ (ಪತಂಗಿಕೆ, ಪುತ್ತಿಕೆ); ಜೇನ ನೊಣನು (ಸರಘೆ, ಮಧುಮಕ್ಷಿಕೆ Nr.). ನೊಣ ಕೂಡಿಸಿದ ಜೇನು ಮಣುವಾದರೆ ಹೆಣ ಹೊತ್ತವನಿಗೇನು? — ನೊಣ ಕೂತರೆ ವ್ರಣ ಹೊರ್ತು ಹೆಣ ಜೀವಿಸೀತೇ? — ನೊಣದನ್ತೆ ತಾನೂ ಕೆಟ್ಟು, ಪರರನ್ನೂ ಕೆಡಿಸುತ್ತಾನೆ. — ನೊಣ ಬಿದ್ದ ಊಟಾ ಮಾಡಿ ಕಳಕಳಿಸಿದ ಹಾಗೆ. — ನೊಣ ಮಣುವಾದೀತೇ? — ಬೆಲ್ಲವಿದ್ದ ಕಡೆ ನೊಣ, ದಡೆ ನಾಲ್ಕಕ್ಕೆ ಮಣ (Prvs.). See Si. 175. 176. 367. — ನೊಣಕಸ. A common plant, Plectranthos cordifolius Don. (Z.). — ನೊಣಗಿಚ್ಚಯಾಟ. A play at which one loses when a fly sits down on his peg (My.). — ನೊಣದ ಗಿಡ. = ನೊಣಕಸ. (Z.). — ನೊಣಬೇಸಚಿಕ್ಕಯ್ಯ. N. (Bp. 58, 11).

ನೊಣಚು nŏṇaču. = ನುಣ್ಚು, etc. (My.).

ನೊಣಬ nŏṇaba. A man of a caste-division of the Kuṛubas (My.).

ನೊಣವು nŏṇavu. = ನೊಣ. ನೊಣವಿಂಗೆ (Bp. 23, 6).

ನೊಣೆ nŏṇĕ. 1. (= ನುಂಗು). To swallow (ಗಿಲನ Śmd. Dh.; Čpr. 4, 34; Abh. P. 13, 45; Rāv. 8, 120; V. 4, 120).

ನೊಣೆ nŏṇĕ. 2. To clean with the tongue the teeth of substances lodged between them (My.).

ನೊತ್ತು nŏttu. = ನತ್ತು. (My.).

ನೊದೆ nŏdĕ. = ಮೊದೆ. (My.).

ನೊನ್ದಿಸು nŏndisu. = ನನ್ದಿಸು, ನುನ್ದಿಸು. To extinguish, to quench (Bp. 19, 58; My.; B. 4, 60; T. ನುದು, ನೊದು, ನೂರ್). ನೊನ್ದಿಸಿದಷ್ಟೂ ಉರಿದರೆ ಹನ್ದಿ ಏನು ಮಾಡೀತು? (Prv.).

ನೊನ್ದು nŏndu. 1. = ನನ್ದು 1, ನುನ್ದು. To be extinguished, to go out, to be quenched (My.; B. 4, 31. 60; T. ನೂರ್). 2, = ನೊನ್ದಿಸು (My.).

ನೊನ್ದು nŏndu. 2. P. p. of ನೋ.

ನೊಪ್ಪ nŏppa. = ನೊಪ್ಪನೆ (Śmd. 229). ನೊಪ್ಪ ನೆಗೆದು (Grj. 1, 104). — ನೊಪ್ಪ ನೊಪ್ಪನೆ. (Śmd. 229). ನೊಪ್ಪ ನೊಪ್ಪನೆ ಪೇರ್ (229 Mdb.). — ನೊಪ್ಪನೆ. = ನೊಪ್ಪ, q. v.

ನೊಯ್ nŏy. ನೊಯು. = ನೋ, etc. ನೊಯ್ಯವೇ ಕರಟಿಸರುಹಂಗಳ್? (Bp. 38, 36).

ನೊಯಿಸು nŏyisu. = ನೋಯಿಸು. To cause to feel pain (Tĕ. ನೊಂಚು). ನಿಷ್ಠುರನುಡಿಯಿನ್ದ ಅವರ ಮನಸ್ಸು ನೊ

Digitized by Google

ಯಿಸ ಬಾರದು (B. 4, 72). ನೊನ್ದವನಿಗೆ ನೊಯಿಸಿದರೆ ಕೊನ್ದ ಪಾಪ ವಲ್ಲವೇ? (Prv.).

ನೊಯ್ಯು nŏyyu. = ನೊಯ್. (My.). P. p. ನೊನ್ದು.

ನೊರಜು nŏraju. = ನೊರಂಜು (Śmd. 48), ನುಸಿ 2, No. 2. A (musquito or) gnat, an eye-fly (ತುಷ Mr. 177; ಭೃಂಗಾರಿ G.; Bh. 6, 5, 38; Śēv. 3, 45; C.; see s. ನೊಣ). ಕುರುಬು ಮೇರುವೆ ಇಲ್ಲ, ನೊರಜುಗಳ ಸ್ವರ ಹೆಚ್ಚು (Prv.).

ನೊರಂಜು nŏrañju. = ನೊರಜು, q. v.

ನೊರೆ nŏrĕ. Foam, froth, scum (ಫೇನ, ಡಿಣ್ಡೀರ, ಅಬ್ಧಿಕಫ Hlā., Nr., Mr. 415; ಫೇನ Nn. 6; ಜತ್ತುಳ Kk. 13, Śm. 35; C.; Tĕ. ನುರುಗು, ನುರುವು, ನುರ್ವು; M. ನುರೆ, T. ನುರೈ). ಸಮುದ್ರದ ನೊರೆ (ಫೇನ, etc. Si. 334). ನೊರೆ ಕಾಯುವಾಗ್ಯೆ ಹರ ಎನ್ದರೆ ಬಿಟ್ಟೀತೇ? (Prv.). See Čpr. 8, after 4; 8, 97; Bp. 51, 53; 61, 66; Č. Bp. 42, 14; Bh. 3, 6, 25; J. 6, 3. 9; ಬೆಳ್ನೊರೆ. — ನೊರೆಗಟ್ಟು. -ಕಟ್ಟು. Foam, etc. to be formed (My.). — ನೊರೆಗಡಯಣ. -ಕಡಿಯಣ. A bit full of foam (Rām. 6, 30, 10). — ನೊರೆನೆತ್ತರ್. Foamy or scummy blood (Abh. P. 13, 47). — ನೊರೆಮಾಲೆ. A garland of foam (Rśv. 13, after 77). — ನೊರೆವಾಯ್. -ಬಾಯ್. A mouth covered with or containing foam (Bp. 20, 11; 46, 56; V. 11, 61). — ನೊರೆವಾಲು. = ನೊರೆಹಾಲು. Frothing milk fresh from the cow (My.). — ನೊರೆವಿಣ್ಣು. -ಪಿಣ್ಣು. A foam-mass (Rśv. 6, after 24). — ನೊರೆವುಲ್. -ಪುಲ್. Frothy, soft grass (Čpr. 4, 47). — ನೊರೆಹಪ್ಪಳ. A kind of rice-happaḷa (C.). — ನೊರೆಹಾಲು. = ನೊರೆವಾಲು. See Sp. s. ಉಣ್ಣೆ 2.

ನೊಱಜು nŏṟaju. = ನಱುಜು, etc. (My.).

ನೊಸಲ್ nŏsal. = ನೊಸಲು. The forehead (ಲಲಾಟ, ಅಲಿಕ, ಗೋಧಿ Nr., Hlā.; ಪಣೆ, ಹಣೆ Śm. 71. 96; T., M. ನುದಲ್; Tĕ. ನುದುರು; Tu. ನೆಸಲ್; *cf.* ಮುಸುಡು). ನೊಸಲನ್ ಅಲಿವ ಕುರುಳು (ಭ್ರಮರಕ Hlā.). ನೊಸಲೊಳ್ ಅಲೆವ ಕುರುಳ್ಗಳ್ (ಅಲಿ Mr. 320). ನೊಸಲ ಇಲುವು (ಲಲಾಟಾಸ್ಥಿ, ಶಙು Nr.). See Čpr. 2, 89; 4, 14; 5, 127; Bp. 4, 28; 38, 41; 36, 23; 43, 32; 46, 13; Rśv. 6, after 11; 13, 63; J. 5, 7; ಪೆರ್-. — ನೊಸಲಕ್ಕರ. -ಅಕ್ಕರ. The writ of destiny on the forehead (Śmd. 69; Čpr. 8, 87). — ನೊಸಲ ಕಣ್ಣು. An eye on the forehead (Bp. 27, 14). ನೊಸಲ ಕಣ್ಣ, who has an eye on the forehead: Śiva (9, 30). ನೊಸಲ ಕಣ್ಣ ದೇವ, Śiva (Śmd. 162). — ನೊಸಲ ಪಟ್ಟ. A plate on which a favourite god's name is written and put on the forehead by the bride and bridegroom; a plate on which some laudatory words are written, put on the forehead of horses; etc. (ಲಲಾಟಿಕೆ Nr.). — ನೊಸಲ ಬರಹ. = ನೊಸಲಕ್ಕರ. (Bp. 61, 7). — ನೊಸಲ ಬೊಟ್ಟು. A mark made with sandal, etc. on the forehead. ಗೋರೋಚನ ಸುಗನ್ಧದಿನ್ದ ರಚಿಸಿದ (ದೇಡತಿಯರ) ನೊಸಲ ಬೊಟ್ಟು (Rāghč. 17, 65).

ನೊಸಲು nŏsalu. = ನೊಸಲ್. (Bp. 47, 31; My.). ಆನೆಯ ನೊಸಲು (ಅವಗ್ರಹ, ಲಲಾಟ Hlā.). ನೊಸಲಿನ ಬರಹ ಬಸಲೆಯಿನ್ದ ಬರಸ ಬಹುದೇ? (Prv.).

ನೊಳ nŏḷa. = ನೊಳವು (Śmd. 56), ನೊಣ, etc. (ಮಣ್ಚು Kk. 85; Śm. 44. 85).

ನೊಳಲೆ nŏḷalĕ. (ನೊಡಿಲೆ). = ಮೊಳಲೆ. A shell or tube (?; see ನಾಯ್-, ನಾಯಿ-; *cf.* ನಳ್ಳಿ? Tu. ನೊಲ್ಲು, a kind of water-snake).

ನೊಳವು nŏḷavu. = ನೊಳ, q. v. ಸಂಚರಿಸುವ ನೊಳವು (Śmd. 56).

ನೋೞೆ nōḻĕ. = ನುಗುಳ್. To creep in, etc. (T. ನುಜ್ಜೈ, M. ನುಟ್; My. occasionally).

ನೋ nō. = ನೊಯ್, ನೊಯ್ಯು, ನೋಯು. To feel or suffer pain, to ache; pain to be felt; to be afflicted or grieved (ವ್ಯಥನ Śmd. Dh.; M.; T. ನೋ, ನೋಗು). P. p. ನೊನ್ದು (Śmd. 276). ಕಣ್ ನೊನ್ದಪುದು (190). ಕಿಮುಟ್ಟಿದ ತಳರನ್ತೆ ನೊನ್ದು (39). ನೋವುದು (ಆದೀನವ, ಆಸ್ರವ, ಕ್ಲೇಶ Nr.). ಹಸ್ತಂ ನೊನ್ದಿತು (Bp. 38, 37). ಕೆಯ್ಗಳು ನೋಯೆ (38, 36). ನೋವನ್ನು (18, 52). ಬಿಱುಹೊಯಿಲಿನಿಂ ನೊನ್ದು ಅಖಿಲ ಜೈನರು (52, 15). ಆಪತ್ತಿನ್ದೆ ನೊನ್ದು (29, 12). ನೊನ್ದು ಮನದಲಿ (36, 8). ಚಿತ್ತದಲಿ ನೊನ್ದವರು (38, 8). ಮನಸು ನೊನ್ದಪುದೋ? (38, 35). ನೋಯಲೊಲಿಲುವ ಶರಭ ಸಿಂಹ etc. (Bh. 3, 13, 28). ಶಂಕರಶರಣಜನಂ ನೋಯೆ (Rśv. 13, 25). ಮಾಯದ ವೀರನಂ ನೋಯಲಿಬೀದು (6, after 11). ಮನ ನೊನ್ದು ನುಡಿದನು (Bh. 1, 8, 4). ಚನ್ದನವ ಕರಗಿಸಲು ನೊನ್ದು ಪರಿಮಳಮಕ್ಕು, ಸನ್ದಣಿವನದಿದ ಸತ್ಪುರುಷರೆನಿಸರು ಸಯ್ರಿಸರು (Sp.). See Bp. 38, 9. 10; Rśv. 13, after 96; J. 20, 20; 28, 18. 35; ಕಡು-.

ನೋ nō. *Nor; not.*

ನೋಚು nōču. (= ನೋಯಿಸು). (Abh. P. 3, 56).

ನೋಟ nōṭa. (fr. ನೋಡು). Looking at or on; viewing, beholding, seeing; (pondering); examination; a sight, a spectacle; sight, the power of seeing; a look; appearance (ನಿಭಾಲನ, ನಿಶಾಮನ, ನಿಧ್ಯಾನ, ಅವಲೋಕನ, ಈಕ್ಷಣ, ದರ್ಶನ, ದ್ಯೋತನ, ದೃಷ್ಟಿ Hlā., Nr.; ದರ್ಶನ, ಧ್ಯಾನ, ಅವಲೋಕನ, ಲಕ್ಷಣ Mr. 316; ಸದೃಶ್ಯ Nn. 158; ಪ್ರೇಕ್ಷಣ, ಪೆಕ್ಕಣ Kk. 59; ದೃಷ್ಟಿ, ದರ್ಶನ Si. 415; ಅವಲೋಕ, ಅವೇಕ್ಷೆ G.; C.; T., M. ನೋಟ್ಟ). ಒಳ್ಳಿಹ ನೋಟವು (ವಲ್ಗುದರ್ಶನ Nr.). ಕಡೆಗಣ್ಣ ನೋಟ (ಕಟಾಕ್ಷ Hlā.; ಕಟಾಕ್ಷ, ವಿಕ್ಷೇಪ Mr. 316). ಸಿಟ್ಟಿನ ನೋಟ (ಅದೃಷ್ಟ G.). ಮುನಿದು ನೋಡುವ ನೋಟ (ಅದೃಷ್ಟಿ Nr.). ಆಟಂ ಪಾಟಂ ತೀಟಂ ನೋಟಂ (Śmd. 250). ಅವನ ನೋಟ ದೂರ ಹರಿಯುವದಿಲ್ಲ (My.). ನೋಟವಿಲ್ಲದೆ ಓಟ ಮಾಡಿದರೆ ಕಾಟಾ ತಪ್ಪದು.—ನೋಟಕ್ಕೆ ನಾಟ್ಯ, ಊಟಕ್ಕೆ ಕೂಟ.—ನೋಟಕ್ಕೆ ಹೋಗಿ, ಊಟಾ ಬಿಟ್ಟು, ಕಾಟಾ ತನ್ದು ಕೊಣ್ಡ.—ನಾಣ್ಯದ ನೋಟ ಬಲ್ಲವನೇ ಸೆಟ್ಟಿ.—ನೋಟದಿನ್ದ ಕಣ್ಣು ಓಟ ಆಯಿತು.—ನೋಟ ನೆಟ್ಟಗಿದ್ದರೆ ಕಾಟ ಹ್ಯಾಗೆ ಬನ್ದೀತು?—ನೋಟ ನೋಡಿದರೆ ಕಾಟ ಉಣ್ಟು.—ನೋಟ ಪೆಟಿರಿಚ್ಛೆ, ಊಟ ಮನದಿಚ್ಛೆ (Prvs.). See Śmd. 244; Čpr. 8, 53. 56; Bp. 9, 12; 10, 55; 18, 83; 34, 9; 35, 21. 23; 35, 34; 40, 4; 47, 65; 48, 31; J. 5, 60; 7, 6; 15, 43; ಕಣ್ಣೋಟ, ಬಿಱು-, ಮೆಯ್-, ಸವಿ-. — ನೋಟವನ್ದಿಗೆ. -ಅಂತಿಗೆ. To look at one another (Grj. 4, 69). — ನೋಟ ಬೇಟ. Looks and love-gestures (Abhā. 2, 78).

ನೋಟಕ nōṭaka. A looker-on, a spectator; an eye-witness. ನೆಲನ್ ಅದಿರೆ, ನೋಟಕರ್ ಕಣ್ಣಲಸೆ, ಮನಂಗೊರಗೆ (Śmd. 294). See Čpr. 5, after 76; 8, 48; Abh. P. 3, 39; Bp. 28, 50; 57, 32; 60, 32; Bh. 2, 2, 94; 3, 19, 50; Rām. 5, 8, 29; J. 15, 39; 17, 9.

ನೋಟಕಾಱ nōṭa-kāṟa. = ನೋಟಕ. (Bh. 6, 4, 26).

ನೋಟಗಾಱ nōṭa-gāṟa. A looker-on, a spectator (My.). 2, an examiner: a shroff (My.). ಕತ್ತೆ ಚಿತ್ರಗಾಱನ ಮಿಣ್ಡ, ಹಣ ನೋಟಗಾಱನ ಮಿಣ್ಡ, ಟವಣೆ ಶಾನಭೋಗನ ಮಿಣ್ಡ (Prv.).

ನೋಡಿಸು nōḍisu. To cause to look at or on, to cause to examine (ಲೋಚನಕ್ರಿಯೆ Śmd. Dh.; Bp. 2, 48; J. 30, 53; My.).

Digitized by Google

ನೋಡು nôḍu. = ನೋಳ್. To look; to look on; to look at, to view, to behold; to look after; to examine; to consider; to take care; to see (ಪ್ರೇಕ್ಷಣ Šmd. Dh.; C.; T., M. ನೋಕ್ಕು; *cf.* ಚೂಪು 1). ಅಕ್ಷಿಯಿಂ ಕೆಳಗೆ ನೋಡಲು (ನಿಮೀಲನ Mr. 317). ಮೇಲು ಕೆಳಗಂ ನೋಡುವುದು (ದೇವದತ್ತ 52). ಕೋಪಿಸಿ ನೋಡಿದಂ (ಕಿಸುಗಣ್ಣಿದಂ Čt. II, 107). ನೋಡುವಂ or ನೋಳ್ಪಂ (Šmd. 28). ಯಕಾರ ಲಕಾರಂಗಳ್ಗೆ ನೋಡಿ ಕೊಳ್ವುದು (59). ಮೊಗನ್ನೋಡಿದಂ or ಮೊಗ ನೋಡಿದಂ (200). ಸಸಿಯಂ ನೋಡಿ (267). ಹೆಚ್ಚು ಕುನ್ದುಗಳ ನೋಡುವವರು (ಸದಸ್ಯರ್); ಮುನಿದು ನೋಡುವ ನೋಟ (ಅದೃಷ್ಟಿ Nr.). ನಿನ್ನಂ ನೋಡುವೆನ್ನ ಕಣ್ಗೊಡೆಯುದಿರದಕಟ! (J. 28, 17). ಲೀಲೆ ಮಿಗೆ ನೋಡುವಚ್ಚರಿಗಳಂ ನೋಡುವಂ (28, 22). ಕನ್ನಡಿ ಸಾಲಿಡೆ ನೋಡಿ ಬೇಡರಂ (Rśv. 5, 116). ಉಲ್ಲಾಸದಿನ್ದ ಜಗಿದಾ ಡುವ ಕುದುರೆ ಮರಿಗಳನ್ನು ನೋಡುತ್ತೇವೆ (B. 3, 90). ನೋಡುವ ಕನ್ನಡಿ (4, 226). ಅವನು ಊರೊಳಗಿನ ಬಡವರ ಸಾಲೆಗಳನ್ನು ನೋ ಡುತ್ತಿರ ಬೇಕು (5, 281). ನೋಡದ ಕಣ್ಣಿಗೆ ಕಾಣದ ಗೊಮ್ಬೆ.— ನೋ ಡದ ಕೆಲಸಕ್ಕೆ ಆಡದ (unfixed) ಸಮ್ಬಳ.— ನೋಡದ ವಸ್ತು ಆದಿದರೆ ಬನ್ದೀತೇ?— ನೋಡದೆ ಆಡಿದರೆ ಕೇಡು ತಪ್ಪದು.— ನೋಡಿ ಕೊಣ್ಡು ಉ ಣ್ಣದಿದ್ದರೆ ಮಾಡಿದವಳೆನ್ದ ಏನು?— ನೋಡಿದರೆ ಕಾಣದ್ದು ಓದಿದರೆ ಸಿಕ್ಕೀ ತೇ?— ನೋಡಿದಷ್ಟೂ ಮಗ ಬಡವನಾದರೆ ಮಾಡಿದವರ ಪುಣ್ಯ (simply: fruit of former actions).— ನೋಡಿ ನಡೆಯೋನಿಗೆ ಕೇಡು ಬಾರ ದು.— ನೋಡಿ ಬರದರೆ ಪರರನ್ನು ತಿನ್ದಿತು, ನೋಡದೆ ಬರದರೆ ತನ್ನನ್ನೇ ತಿನ್ದಿತು.— ನೋಡಿ ಗೇಯೋಕೆ ಉಣ್ಣು ಮಲಗೋಕೆ ಯಾರೂ ಕಲಿಸ ಬೇಡ.— ನೋಡಿ ಬಾ! ಎನ್ದರೆ ಸುಟ್ಟು ಬನ್ದ (Prvs.). See Šmd. 98. 112. 153. 255. 260. 272; Čpr. 1, 95; 2, 79; Bp. 4, 65. 66; 14, 18; 19, 85; 20, 13; 37, 52; 40, 14. 16. 36. 42; 45, 31. 32. 33; 49, 17; 50, 25; 52, 36; 53, 17; 54, 81; 57, 32; 58, 36; 60, 27; Bh. 2, 13, 23; Šm. 24. 33. 75; RÂm. 3, 2, 19; Rśv. 5, 39; 6, 32; J. 2, 65; 28, 35. 44; 31, 35; Si. 237. 356. 368. 378. — ನೋಡ ನೋಡು. rep. (B. 2, 30). — ನೋಡು ನೋಡು. rep. (Šmd. 230; Bp. 19, 24; 33, 3; 35, 2; 36, 51; 55, 37; J. 3, 37; 28, 26; B. 5, 143. 169). — ನೋಡೇ ನೋಡಿ. = ನೋಡಿಯೇ ನೋಡಿ. (B. 3, 2).

ನೋಡುವಿಕೆ nôḍuvikĕ. Looking, etc. (ಆಲೋಕ, ದರ್ಶನ Si. 404). ಹುಡುಕಿ ನೋಡುವಿಕೆ (ಅನ್ವೀಕ್ಷಣ, ವಿಚಯನ, ಮಾ ರ್ಗಣ, etc. 398).

ನೋತ nôta. Ache, pain (My.). ನೋತವಾದರೆ ಹೇತರೆ ತಪ್ಪೀತೇ?— ನೋತವುಳ್ಳವನು ಕೋತಿಯ ಹಾಗೆ (Prvs.). See Prv. s. ಮಣ್ಡೆ; ಮೆಯ್-.

ನೋತು nôtu. = ನೋನ್ತು. P. p. of ನೋನು.

ನೋದ nôda. Pushing, impelling, inciting. See ಎ-.

ನೋನ್ nôn. = ನೋನು. To observe a vow or religious obligation, to perform any (thing as a) meritorious act of devotion or austerity (ವ್ರತಾಚರಣ Šmd. Dh.; Tĕ. ನೋಚು, ನೋಮು; T., M. ನೋಲ್). P. p. ನೋನ್ತು (Šmd. 287 Cm.; Čpr. 1, 32. 75; Abh. P. 15, after 54; Bp. 2, 48. 51. 57; J. 18, 19). ನೋನ್ಪಂ (Šmd. 275).

ನೋನಿಸು nônisu. To cause to perform something as a meritorious act, etc. ಆಯಿರ್ದ ಮಾಟ್ಕಿಯೊಳೆ ಪರಮಾಯುಷ್ಯಾನ್ತಮ್ಬರಂ ನಿರಾಕುಲಮಾಗಿರ್ಪಾಯಿರವಿನ ಜೈನಾಭಿಪ್ರಾ ಯಂ ಪ್ರಾಯೋಪಗಮನಮಂ ನೋನಿಸಿದಂ (Šmd. 64. 128; Kâvy. I, 1*b*, 7).

ನೋನು nônu. = ನೋನ್. ನಿನ್ನಂ (*i. e.* ನಿನಗಾಗಿ) ನೋನುವೆವು (Bp. 48, 19). P. p. ನೋತು (My.).

ನೋಮ್ಪಿ nômpi. = ನೋಮ್ಪು. Any religious act or obligation enjoined by the gods; any meritorious act of devotion or austerity (Abh. P. 15, after 54; Bp. 2, 48. 49; 3, 14; J. 30, 40; My.; Tĕ. ನೋಮು; T., M. ನೋನ್ಬು; see ಉದ್ಗಿ).

ನೋಮ್ಪು nômpu. = ನೋಮ್ಪಿ. (V. 14, 56; My.).

ನೋಯಿಸು nôyisu. (Šmd. 25). = ನೊಯಿಸು. To cause to suffer pain, to pain; to afflict, to distress (C.). ನೋಯಿಸಿದಂ (Šmd. 64. 273). ನೋ ಯಿಸುವವನು (ಅರುನ್ತುದ, ವ್ಯಥಕ Hlâ.; Mr. 236). ನೋಯಿಸಲ್ ಪಟ್ಟುದು (ತುನ್ನ, ಪೀಡಿತ Hlâ.). ಮರ್ಮವ ನೋಯಿಸುವುದು (ಅರು ನ್ತುದ, ಮರ್ಮಸ್ಪೃಶ್ Nr.). ಗಾಳೀ ಗುದ್ದಿ, ಮೆಯ್ ನೋಯಿಸಿ ಕೊಣ್ಡ ಹಾಗೆ (Prv.). ಆಳುಮಕ್ಕಳಿಗೂ ಇತರರಿಗಾಗಲಿ ಕೆಟ್ಟ ಮಾ ತು ಆಡಿ, ಮನಸ್ಸು ನೋಯಿಸ ಬಾರದು (B. 4, 34). ನೀನ್ ಅವರು ಗಳ ನಾನಾರ್ಥನ್ದದಲಿ ನೋಯಿಸಿದೆ (Bh. 1, 8, 20). See Bp. 22, 17; 38, 10. 12. 34; J. 21, 34; Si. 89.

ನೋಯಿಸುಹ nôyisuha. Inflicting pain, etc. ಶತ್ರುಗಳ ನೋಯಿಸುಹ (ದಣ್ಡ Nr.).

ನೋಯು nôyu. = ನೋ, etc. (My.; B. 2, 24). P. p. ನೊನ್ದು. See Prv. s. ಬೆತ್ತ.

ನೋರು nôru. Fare, haulage: freight (Mhr., H.; Mg.).

ನೋವು nôvu. Ache, pain; affliction (ಪೀಡೆ, ಬಾಧೆ, ವ್ಯಥೆ Nr.; ಪ್ರಸರ Nn. 108; ವೇದನ 156; ವೇದನೆ Šmd. 393 Cm.; ಕ್ಲಮಥು, ಗ್ಲಾನಿ Mr. 384; ತುನ್ನ, ಪೀಡಿತ 448; ಕೋಟಲೆ Bhn. 41; Bp. 28, 11. 14; J. 13, 38; 19, 35; C.; T. ನೊ, ನೊಚವು, ನೋಯ್; M. ನೊಯ್, ನೋಯಿ; Tĕ. ನೊಪ್ಪಿ, ನೊಪ್ಪಿ). ಕಾಲಿಗೆ ನೋವು ಆಯಿತು (B. 1, 12). ನೋವು ಕಾಮಿಸುವರಿಲ್ಲ, ನಾ ಯಿ ಬೊಗಳಿಸುವರಿಲ್ಲ. — ಕಾವು ಕೊಟ್ಟು, ನೋವು ಪಡ ಕೊಣ್ಡಾ (Prvs.). ನಡುವಿನ ವಾಯುನೋವು (ಗೃಧ್ರಸಿ Si. 485). See ತಲೆ-, ಮಣ್ಡೆ-; Prv. s. ತನು. — ನೋವು ಕೊಡು. = ನೋಯಿಸು. (G. 304; My.). — ನೋವು ಮಾಡು. = ನೋಯಿಸು. ಬೇನೆಗಳು ಬನ್ದು ನೋವು ಮಾಡುವಾಗ (B. 5, 190; My.).

ನೋಳ್ nôḷ. To precede, to take the lead (ಅ ಗ್ರಗಮನ Šmd. Dh.).

ನೋಳ್ದು nôḷdu. — ನೋಳ್ದು ಕೊಣ್ಡನ್ತೆ ಬೆನ್ನೊಳ್ ನಿಲ್ತಂ ಗಾಣ್ದೀ ವಿ (Šmd. 288 Mdb., o. r. ನೊಳ್ಗಿ).

ನೋಳ್ಪು nôḷpu. To go fronting somebody, to go forward to meet (ಇದಿರ್ಗೆ ನಡೆ Šmd. II; ಇದಿರ್ Kk. 87).

ನೋಳ್ nôl. = ನೋಡು. ನೋಳ್ಪಂ or ನೋಡುವಂ (Šmd. 28). ನೋಳ್ಪಂ (217. 275). ನೋಳ್ಪೊಡೆ (ನೋಡುವಡೆ 198 Cm.). ನೋಳ್ಪೊಡೆ ಅವಳ್ ಕಿರು'ಯಳ್ (297). ನೋಳ್ಪಡೆ (Čt. II, 72). ನೋಳ್ದು (Čpr. 1, 93; Bp. 2, 18; Rśv. 6, after 11; 13, after 77). ನೋಳ್ಪುದು (Rśv. 2, 48). ನೋಳ್ಪಾಗಳ್ (5, after 27). See Bp. 10, 55; 32, 6; 42, 20.

ನೌ nau. For Kannaḍa words with this initial in writ see ನವ or ನವು.

ನೌ nau. *A ship, a boat.*

ನೌಕರ naukara. = ನವುಕರ, etc. (My.).

ನೌಕಾದಣ್ಡ naukâ-daṇḍa. *An oar.*

ನೌಕಾನಯನ naukâ-nayana. Ship-leading (or building. B. 5, 194).

Digitized by Google

ನೌಕೆ naukĕ. ನೌಕಾ. *A small ship, a boat.*

ನೌತಾರ್ಯ nau-târya. *Navigable.*

ನೌದಂಡ nau-daṇḍa. *An oar.*

ನ್ಯಕ್ nyak. = ನ್ಯಂಚ್.

ನ್ಯಕ್ಕು nyakku. Tbh. of ನ್ಯಂಚ್ (ನ್ಯಚ್ Śmd. 106).

ನ್ಯಕ್ಷ ni-aksha. *Low, inferior.* 2, *whole, entire.*

ನ್ಯಗ್ರೋಧ nyak-rôdha. = ನಗ್ರೋಧ. Growing downwards: *the Indian fig-tree or banyan tree, Ficus bengalensis* Lin. (Ficus indica Roxb., ವಟ, ಆಲದ ಮರ Nn. 42). 2, the tree Butea frondosa (ಪಲಾಶ, ಮುತ್ತುಗ 42). 3, the moon (ಶಶಿ, ಚನ್ದ್ರ 42). 4, *a fathom, measured by the arms extended.* 5, a road (ಮಾರ್ಗ, ಹಾದಿ 42). 6, a point of the compass (ದಿಕ್, ದಿಕ್ಕು 42). 7, fraud, etc. (ಛಲ 42). 8, a forest (ವನ, ಅರಣ್ಯ 42).

ನ್ಯಗ್ರೋಧಿ nyak-rôdhi. *The tree Salvinia cucullata* Roxb.

ನ್ಯಂಕು ni-aṅku. = ನಂಕು. *A deer, an antelope* (*cf.* ಜಿಂಕೆ). See Nr. s. ಬಿಳುಪು.

ನ್ಯಂಚ್ ni-añc. ನ್ಯಚ್. = ನ್ಯಕ್, ನ್ಯಕ್ಕು. *Going downwards, downwards, down.*

ನ್ಯಂಚಿತ ni-añcita. *Thrown or cast down, bent down.*

ನ್ಯರ್ಬುದ ni-arbuda. = ನಿರ್ಬುದ. One hundred millions.

ನ್ಯಸನ ni-asana. Casting, putting or laying down, depositing; delivering, giving up. (Kâvy. III, 3, B, 80).

ನ್ಯಸ್ತ ni-asta. *Thrown or cast down, put, placed.* 2, *delivered, deposited, consigned.*

ನ್ಯಾದ ni-âda. *Food.*

ನ್ಯಾಯ ni-âya. = ನಾಯ 2, ನೇಯ 1. *Method, way, rule, manner, system, plan.* 2, right or fit manner: *fitness, propriety, right, justice;* law; a lawful act. 3, *a lawsuit;* a dispute, a quarrel (My.). 4, judicial sentence, judgment. 5, a logical argument; a complete argument or syllogism; logic, logical philosophy; a system of philosophy delivered by Gôtama or Gautama (Bp. 51, 12; 53, 8; see ವೈಶೇಷಿಕ). 6, a general or universal rule in grammar, an axiom which precedes and must be kept in view in the explanation of special rules. ನ್ಯಾಯದಿನ್ದ ಆಯ ಹುಟ್ಟುವದು.—ನ್ಯಾಯಕ್ಕೆ ಸಹಾಯವೇ ಬಲ.—ನ್ಯಾಯವಿಲ್ಲದವ ನಾಯಿಗಿನ್ತ ಕಡೆ.—ನಿಯತ್ತಿದ್ದವನಲ್ಲಿ ನ್ಯಾಯ ಚನ್ದ (Prvs.). See Kâvy. II, 2, B, 24. — ನ್ಯಾಯಖಾತೆ. A judicial department (B. 5, 263). — ನ್ಯಾಯತೀರಿಕೆ. A lawsuit or case being settled or decided (My.; also ನ್ಯಾಯತೀರುವಿಕೆ). — ನ್ಯಾಯ ತೀರಿಸು. To settle or decide a case or quarrel (My.; B. 4, 6; 5, 228. 262). ನ್ಯಾಯ ತೀರಿಸೋಣ (ಸಾಚಿವ್ಯ G.). — ನ್ಯಾಯ ತೀರಿಸುವಿಕೆ. Settling or deciding a case (My.). — ನ್ಯಾಯದ ಕಟ್ಟು. A system of rules, a rule (My.). — ನ್ಯಾಯದೂರ. A man who is a long way off from justice, who does not care for it at all (Bp. 28, 62). — ನ್ಯಾಯವಾಡು. -ಆಡು. To engage in lawsuits (My.); to altercate, to quarrel (My.). — ನ್ಯಾಯಾಡು. -ಆಡು. = ನ್ಯಾಯವಾಡು. (B. 5, 282).

ನ್ಯಾಯಕಾರ nyâya-kâra. A quarrelsome man (Bp. 59, 37).

ನ್ಯಾಯನಿರ್ಣಯ nyâya-nirṇaya. A decision in a lawsuit, a sentence or verdict (My.).

ನ್ಯಾಯನಿರ್ಣಾಯಕ nyâya-nirṇâyaka. A judge (ಪ್ರಾಡ್ವಿವಾಕ, ಅಕ್ಷದರ್ಶಕ Si. 258).

ನ್ಯಾಯಪದ್ಧತಿ nyâya-paddhati. A guide-book on proper conduct (My.).

ನ್ಯಾಯಪ್ರಮಾಣ nyâya-pramâṇa. A standard of rules or law (My.).

ನ್ಯಾಯಮಾರ್ಗ nyâya-mârga. The way of propriety or justice (My.; ಸಂಸ್ಥೆ G.). ನ್ಯಾಯಮಾರ್ಗದಿನ್ದ ನಡೆಯೋಣ (ಮಯೂರ ಡೆ, ಸ್ಥಿತಿ G.).

ನ್ಯಾಯವನ್ತ nyâya-vanta. A properly behaving man (My.).

ನ್ಯಾಯವರ್ತಿ nyâya-varti. Well-behaved. 2, N. (J. 10, 44).

ನ್ಯಾಯವಿಚಾರಕ nyâya-vicâraka. A judge (My.).

ನ್ಯಾಯವಿಚಾರಣೆ nyâya-vicâraṇĕ. Investigation of a lawsuit (My.).

ನ್ಯಾಯವಿದ nyâya-vida. A man who knows the law: a judge (My.).

ನ್ಯಾಯವಿಧ nyâya-vidha. An arranger about lawsuits: a judge (ಅರ್ಥದೃಕ್, etc. Mr. 268).

ನ್ಯಾಯವಿಧಾಯಕ nyâya-vidhâyaka. Legislative (My.). — ನ್ಯಾಯವಿಧಾಯಕಸಭೆ. Legislative council (My.).

ನ್ಯಾಯಸಭೆ nyâya-sabhĕ. A court of justice (My.; B. 4, 169).

ನ್ಯಾಯಸ್ಥ nyâya-stha. = ನ್ಯಾಯವನ್ತ. (My.). See Prv. s. ಪ್ರಾಯಸ್ಥ.

ನ್ಯಾಯಸ್ಥಾನ nyâya-sthâna. A court, a cutcherry (My.).

ನ್ಯಾಯಾಧಿಪತಿ nyâya-adhipati. A judge; a magistrate (My.).

ನ್ಯಾಯಾಧೀಶ nyâya-adhîśa. = ನ್ಯಾಯಾಧಿಪತಿ. (My.; B. 4, 7. 169).

ನ್ಯಾಯಾಸನ nyâya-âsana. The judgment-seat, the bench (My.; B. 5, 280).

ನ್ಯಾಯಾಸ್ಥಾನ nyâya-âsthâna. = ನ್ಯಾಯಸ್ಥಾನ. (My.).

ನ್ಯಾಯ್ಯ ni-âyya. *Regular, adapted, fit, proper.*

ನ್ಯಾಸ ni-âsa. Putting down, placing; depositing; laying aside; putting on, as colour; impressing, stamping; striking in, as the claw; consigning. 2, *a deposit, a pledge.* See *e. g.* ವಿ-, ಸಂ-. 3, certain religious ceremonies consisting in putting the fingers into various forms (Mhr.).

ನ್ಯಾಸಕರಣ nyâsa-karaṇa. Putting down, placing. See ಸ್ಥಾಪಿಸು.

ನ್ಯಾಸಾರ್ಪಣ nyâsa-arpaṇa. *Delivery of a deposit.*

ನ್ಯುಂಖ nyuṅkha. *Sixfold repetition of the syllable Ôm.* 2, *proper; pleasing.*

ನ್ಯುಬ್ಜ ni-ubja. *Bent downwards;* lying on the face; crooked; *hump-backed, gibbous from disease.*

ನ್ಯೂನ ni-ûna. = ನೂನ. *Lessened, diminished, deficient, defective, wanting, deprived of.* 2, *inferior, low; vile, blamable.*

ನ್ಯೂನತೆ nyûnatĕ. Deficiency, incompleteness, want. (My.; B. 5, 1).

Digitized by Google

ಪ್

P

ಪ್ p. The forty-first letter of the Alphabet (Śmd. 12. 21). It often changes places with initial ಹ್, *e. g.* ಪಲಗೆ, ಹಲಗೆ; ಪನ್ನರ್, ಹನ್ನರ್; ಪಾಸು, ಹಾಸು; ಪಲ್ಲಿ, ಹಲ್ಲಿ; ಪುಲಿ, ಹುಲಿ; ಪಲಸು, ಹಲಸು (Śmd. 191), etc., etc.; and is replaced by ಹ್ in ಅನ್ತಹ, ಇನ್ತಹ, etc. (191); it becomes ಬ್, *e. g.* in ಕಣ್ಬನಿ, ತಣ್ಬುದಿಲ್ (78); and ವ್, *e. g.* in ಮನಮ್ಬುಗು, ಬಗೆವುಗು (3), ಎಳೆನೀರ್ವೊನಲ್, ಎಳವೆಱ (81), ತಮರೂರ್ಗೆ ವೋಗು (82), ಆಡುಮ್ಬೊಲಂ, ಮಿಂಚುಮ್ಬುಬು (204), ಮಾನಮ್ಬುಬು (205), ಮಂಗಳವಱ (207), ಏವೇಱ್, ಏವೋಗು (211), ಬೆಳ್ವಲ್ (213), ನಿಡುವಯಣಂ (215), ಕುಡುವುರ್ವು, ಬಿಱುವೊಯಲ್ (218), ನಾಣಿಲಿವೆಣ್ (221), ಅಱುವತ್ತು, ನಾಲ್ವತ್ತು (224), ಮುತ್ತಲ್ವೇಱ್ (277), ಉಡವೇಱ್, ಉಡಲ್ವೇಱ್, ತರವೇಱ್, ತರಲ್ವೇಱ್ (278; ಕಿಱುಪ್ಪೊಡೆ would be wrong, it is to be ಕಿಱುವ್ಪೊಡೆ 81). *Cf.* ತಪ್ಪಂ = ತಪ್ಪಂ, ತಪ್ಪಪಂ = ತಪ್ಪಪಂ (286); and see ಇಹ, ತಹ, ಬಹ, ಬೇಹ, etc.; ದಪ 2, ದಹ; ವ್.

ಪ pa. 1. The letter ಪ್ pronounced with a short a, as is generally done at school.

ಪ pa. 2. (ಪ-ಅ 17). = ಪ್ಪ, ಬ 2, ವ 2, (ಉವ 2). A syllable used in the formation of the future tense and of the present or future relative participle (Śmd. 274), *e. g.* ಕೂರ್ಪ, ಬರ್ಪ, ಇರ್ಪ (of ಕೂರ್, etc.);— ಆರ್ಪ, ತೋರ್ಪ, ಮಾರ್ಪ (of ಅಱ್ etc.);— ಅಗಲ್ಪ, ಕೀಲ್ಪ (of ಅಗಲ್, etc.);—ದೆಗಲ್ಪ, ಬಿಸುಲ್ಪ (of ಬೆಗಡು, etc.); ನೋಲ್ಪ, ಬೇಲ್ಪ, ಮಾಲ್ಪ (of ನೋಡು, etc.);— ಅನ್ಪ, ನೋನ್ಪ, ಸೀನ್ಪ (of ಅನ್, etc.);— ಪೋಪ, ತಾಪ, ತೂಪ (of ಪೋಗು, etc.);— ಮಿಱುಪ, ತೊಳಪ, ಬೆಳಪ (of ಮಿಱುಗು, etc.);—ಓಪ (of ಓ);— ಬೆಸಪ (of ಬೆಸಸು); ಕಾಪ (of ಕಾಸು);— ತರಿಪ, ಬರಿಪ, ಇರಿಪ (of ತರಿಸು, etc.);— ಉದಯಿಪ (of ಉದಯಿಸು, Śmd. 275). See further ಉದ್ಧಾಡಿಪ (1), ಅವಧರಿಪುದು (3), ಅಂಗೀಕರಿಪುದು (5), ಆಕಾಂಕ್ಷಿಪ (8), ಪರಿಹರಿಪರ್ (141), ಪೋಷುವು (195), ಆಚರಿಪರ್ (206), ಅಗ್ಗಲಿಪುದು (209), ಸನ್ನಿಪುದು (212), ಉದಯಿಪುದು (217), ನಿರವಿಪ (297), ತೂಕಡಿಪ (Lllv. 3, 3), ಸೇವಿಪ (Rśv. 5, 26), ಮಿಱುಪ (J. 25, 5). ಪರಿಯಿಪ ನೆಟ್ಟನೆ ಅಟ್ಟುವ ಇದಿರೇಱಪ ಪಾಱಪ ಕಿಱ್ತು ದಾಣ್ಬಿಪ ಇರ್ಬರಿಯೊಳೆ ಸುತ್ತಿಪ ಆಯತಿಕೆಯಿಂ ಮಿಗೆ ನರ್ತಿಪ ದಿಣ್ಣುವಾಯುಲುಪ್ಪರಿಪ ಬೆಡಂಗಿನಿಂ ನಡಯಿಪ ಅಂಗಮ ಲುಂಗಡೆ ಪಂಚಧಾರೆಯೊಳ್ ಪರಿಣತಿದೋರ್ಪ ವಾಹಳತನಂ (Rśv. 13, 82).

ಪ pa. 3. A letter used in reiteration, *e. g.* ಅಕ್ಕ ಪಕ್ಕ, ಎತ್ತು ಪತ್ತು, ಕಲ್ಲು ಪಲ್ಲು, ಕಾಯಿ ಪಾಯಿ, ಜಡ್ಡು ಪಡ್ಡು, ತಣ್ಣನೆ ಪಣ್ಣನೆ, ಟಿಕ್ಕ ಪಕ್ಕ, ಸಕ್ಕರೆ ಪಕ್ಕರೆ, ಸುಳ್ಳು ಪಳ್ಳು (My.).

ಪ pa. 1. Guarding, protecting, ruling. See *e. g.* ಅಧಿಪ, ನೃಪ. 2, the number 1 (Mr. 349).

ಪ pa. 2. Drinking. See *e. g.* ಅಂಘ್ರಿ-, ಸಿ-, ಪಾದ-.

ಪ pa. 3. An abbreviation of ಪಂಚಮ, the fifth note of the gamut (Mr. 76).

ಪಂ paṁ. = ಪಸ್ 2, etc. Greenness, etc. (ಪಚ್ಚನೆ, ಪಚ್ಚು, ಪಸು Śmd. 215).

ಪಂಸೆ paṁsĕ. = ಹಂಸೆ. (ಹಂಸ Mr. 505).

ಪಕ paka. Imitation of the sound of laughter: ha, ha! — ಪಕ ಪಕ ನಗು. To laugh very loudly, to giggle (C.; Tĕ.). ಪಕ ಪಕ ನಗುವವರನ್ನು ನೋಡಿ, ಬಿಕ್ಕಿ ಬಿಕ್ಕಿ ಅತ್ತ (Prv.). — ಪಕ ಪಕನೆ ನಗು. = ಪಕ ಪಕ-. (My.).

ಪಕ paka. = ಪ 1. See ಹಸ್ತಿ-.

ಪಕಳಿ pakaḷi. A corolla or row of petals (B. 3, 36; Mhr. ಫಕಡೀ).

ಪಕಾನ pakâna. (=ಪಕ್ವಾನ್ನ). (ಉಜ್ಜು, etc. Si. 313).

ಪಕಾರ pa-kâra. 1. The letter ಪ (Śmd. 11. 190).

ಪಕಾರ pakâra. 2. Tbh. of ಪ್ರಕಾರ. (My.).

ಪಕಾಲಿ pakâli. ಪಕಾಳಿ. A double water-skin carried on a bullock (My.; B. 5, 286; Br., T.; Mhr., H. ಪಖಾಲ; *cf.* ಕ ಪಾಲಿ 2). — ಪಕಾಲಿನೀರು. Pakâli-water. ಪಕಾಲಿನೀರು ಕುಡಿಯುವವಗೆ ಪಕ್ಷಪ್ರಾಯಶ್ಚಿತ್ತ ಯಾಕೆ? (Prv.).

ಪಕಾಸ pakâsa. Tbh. of ಪ್ರಕಾಶ. (S. Mhr.).

ಪಕೀರ pakîra. = ಫಕೀರ. (My.).

ಪಕ್ಕ pakka. = (ಪಕ್ಕ 2), ಪಕ್ಕು 1, ಪಕ್ಕೆ, ಪಂಕ 1. Tbh. of ಪಕ್ಷ (Śmd. 346). A wing (ಗರುತ್, ಛದ, ಪತ್ರ, etc. Nr.; ಎಱಂಕೆ Kk. 69, Śm. 78; Čpr. 8, after 101; Grj. 3, after 103; C.; B. 2, 9). ಪಕ್ಕಎದ್ದರೆ ಹಕ್ಕಿ, ಹಿಡೀಲಿ ಕೊಟ್ಟ ರೊಕ್ಕಕ್ಕೆ ದುಃಖವೇನು?— ಪಕ್ಕವಿಲ್ಲದ್ದಕ್ಕೆ ಕೊಕ್ಕು ಇದ್ದರೆ ಪ್ರಯೋಜನವೇನು? (Prvs.). 2, the shoulder (ಬಟ್ಟ Kk. 69). 3, the flank or side; a side, party, faction (ಬದಿ Kk. 32; ಕೆಲ Śm. 59; ಬದಿ 70. 78. 98; C.). 4, proximity, neighbourhood (ಸಮೀಪ Kk. 33; ಪೊರೆ, ಪೊರ್ದುಗೆ, ಸನಿಹ, ಸಮೀಪ Śm. 59; ಪೊರೆ 78; ಸನಿಹ 103). 5, favour, support (ಪೋಷಣ Śm. 103). 6, the half of a lunar month (ಕಾಲಭೇದ Śm. 78). — ಪಕ್ಕಜಲ್ಲಿ. Side-hangings (Śśv. 3, 16). — ಪಕ್ಕವೆಟ್ಟ. -ಬೆಟ್ಟ. The western mountain (Abh. P. 11, 177). — ಪಕ್ಕಶೂಲೆ. Severe pain in the right or left side of the body; pleurisy (C.).

ಪಕ್ಕಡಿ pakkaḍi. The flank or side. ಹೊಟ್ಟೆಯೊಳಗೆ ಎಡಗಡೆ ಪಕ್ಕಡಿಯಲ್ಲಿ ಗಣ್ಣು ಆಗುತ್ತದೆ, ಆ ರೋಗವು ಗುಲ್ಮ (Čb. 42).

ಪಕ್ಕಣ pakkaṇa. *The hut or abode of a savage* (ಶಬರರ ತಾಣ Śm. 32).

ಪಕ್ಕನೆ pakkanĕ. ಫಕ್ಕನೆ. Suddenly; without a why or wherefore (C.; Tĕ. ಪಕ್ಕುನ). ಆಕೆಯು ದಾಯೊಳಗೆ ಮಾತು ನಿಲ್ಲುವದಿಲ್ಲ, ಪಕ್ಕನೆ ಎಲ್ಲಾದರೂ ಎರಡನೆಯವರ ಮುಸ್ತೆ ನಮ್ಮ ಗುಟ್ಟು ಒಡೆದಾಳು (B. 4, 188). ಕೋಟೆಯೊಳಗಿನ ಹದಿಬರು ಪಕ್ಕನೆ ಹೊಡಿ ಬಿದ್ದು (4, 217). — ಪಕ್ಕನೆ ನಗು. To burst out a laughing (My.; Tĕ.; T. ಪಕ್ಕು ಪಕ್ಕೆನ್ನು ನಗು).

ಪಕ್ಕರಕೆ pakkarakĕ. = ಪಕ್ಕರಕ್ಕೆ, ಪಕ್ಕರೆ, ಪಕ್ಕರಿಕ್ಕೆ, ಹಕ್ಕರಿಕೆ, (ಪಕ್ಕರೆ). Tbh. of ಪಕ್ಷರಕ್ಷೆ. ಬಿಂಚ ಗುದುಗಳು ಕುದುರೆ ಆನೆಗಳ ಪಕ್ಕರಕೆ (Śm. 41, o. r. ಪಕ್ಕರೆ). ಗುದಿಮೆನ್ನು ಆನೆ ಕುದುರೆಗಳ ಪಕ್ಕರಕೆ (Śmd. I, 32, o. rs. ಪಕ್ಕರೆ, ಪಕ್ಕರಕ್ಕೆ).

ಪಕ್ಕರಕ್ಕೆ pakkarakkĕ. = ಪಕ್ಕರಕೆ, q. v. (ಗುದಿ, ಬಿಂಚ, ತಂಗುಡ Kk. 58). ಗುದಿಮೆನ್ನು ಬಿಂಚಮೆನ್ನೊಡಮ್ ಆನೆ ಕುದುರೆಗಳ ಪಕ್ಕರಕ್ಕೆ (42, o. r. ಪಕ್ಕರಿಕ್ಕೆ). ಮಿಸುನಿಯ ಪಕ್ಕರಕ್ಕೆ (Rśv. 13, 62).

ಪಕ್ಕರಿಕೆ pakkarikĕ. = ಪಕ್ಕರಕೆ, q. v. (ಆನೆ ಕುದುರೆಗಳ ಜೂಲ G.).

ಪಕ್ಕರಿಕ್ಕೆ pakkarikkĕ. = ಪಕ್ಕರಕ್ಕೆ, q. v.

ಪಕ್ಕರೆ pakkarĕ. 1. (= ಪಕ್ಕರಕೆ, etc.? Grj. 7, 46; Tĕ.: armour,

Digitized by Google

mail, housings). ಪದಿನೆಣ್ಬಾಸಿರ ಲೋಹಪಕ್ಕರೆಯ ಜಾತ್ಯಶ್ವಂಗಳ್ (Šmd. 22. 83). ಲೋಹಪಕ್ಕರೆಯ.... ಶಾನ್ತಿ (Abh. P. 13, 60).

ಪಕ್ಕರೆ pakkarĕ. 2. = ಪಕ್ಕಲೆ, q. v.

ಪಕ್ಕಲೆ pakkalĕ. = ಪಕ್ಕರೆ 2. A kind of vessel (ಬಗರಗೆ Čt. I, 86, o. rs. ಪಕ್ಕರೆ, ಬಗರಿಗೆ; ಬಗರಗೆ, ಬಕ್ಕರೆ Kk. 56, o. r. ಬಗರಿಗೆ; ಬಗರಿಗೆ, ಬಕ್ಕರೆ Šm. 62; ಪಾತ್ರ Bhn. 24; ಕೊಪ್ಪರಿಗೆ 65). ಸೊಡೆಗಳ ಬಾವಿಗಳ, ಪಕ್ಕಲೆಯ ಪನ್ನೀರುಗಳ (ಬಣ್ಣಿಗಳು) ಹಿಡಿದವು (Bh. 1, 12, 17). (ಭೀಮಂ) ಕುಡಿದು ಪಕ್ಕಲೆನೀರಂ (1, 10, 30). 2, a temporary well in a stream, etc. (ಪಜ್ಜರ, ಒಬನ್ತೆ Šs.).

ಪಕ್ಕಾ pakkâ. Tbh. of ಪಕ್ವ (Mhr.). — ಪಕ್ಕಾಖರಡೆ. The regular account compiled from the diary (Mhr.; R.). — ಪಕ್ಕಾದವ. -ಆದವ. A shrewd, cunning man (My.). — ಪಕ್ಕಾಪಾವು. A large measuring-pâvu (ಪಾವು My.). — ಪಕ್ಕಾಮಾತು. An accomplished, ready word (My.). — ಪಕ್ಕಾರಂಗು. Lasting colour (My.). — ಪಕ್ಕಾಸಿಪಾಯಿ. An accomplished, adept sipâhi (My.). — ಪಕ್ಕಾಸೇರು. A large measuring-sêru (My.).

ಪಕ್ಕಿ pakki. 1. = ಹಕ್ಕಿ, ಹಕ್ಕೆ. Tbh. of ಪಕ್ಷಿ. (ಎಕ್ಕಿರ Šmd. 350). ಪಕ್ಕಿ ಮಿಗಂಗಳ್ (89). See Šmd. I, 60. 61; Šm. 30; ಅಮಳ್ವಕ್ಕಿ, ಎಣೆವಕ್ಕಿ, ಕನ್ನಡ-, ಕೆಂಗಣ್ಣಲರ್-, ಜಕ್ಕ-, ಜೊನ್ನ-, ತಣ್ಣದಿರ್-, ಪಡಿಯಬಿ-, ಪಣ್ಡಿತ-, ಪೊಕ್ಕುಳಿ-, ಪೊಣರ್-, ಬಿಸುಲ್-, ಹಂಜರ-. — ಪಕ್ಕಿಗಳರಸ. -ಅರಸ. (ಗರುಡ Šm. 6). — ಪಕ್ಕಿಗಳಾಣ್ಮ. -ಆಣ್ಮ. (ಗರುಡ Kk. 8).

ಪಕ್ಕಿ pakki. 2. A manner, a way, a means (My.; Tĕ. ಫಕ್ಕಿ, ಫಕ್ಕಿಕೆ; Mhr. ಪಕ್ಷ).

ಪಕ್ಕು pakku. 1. = ಪಕ್ಕ, etc., ಪಕ್ಕೂ. Tbh. of ಪಕ್ಷ. (M.; T. ಪಕ್ಕರ್, relations). — ಪಕ್ಕುಗುಡು. -ಕುಡು. To give support, to nourish, etc. (Abh. P. 8, after 54).

ಪಕ್ಕು pakku. 2. Tbh. of ಪಕ್ವ. (Čpr. 1, 5; 5, after 35; Abh. P. 16, after 39; Grj. 9, 56; J. 16, 13; Rsv. 1, 45; 6, after 11).

ಪಕ್ಕುವಣಿ pakkul-vaṇi. A person of one's own side, a kinsman (ಪಕ್ಕೂವಣಿ, ಬನ್ಧು Šs.).

ಪಕ್ಕೂ pakkû. = ಪಕ್ಕು 1.

ಪಕ್ಕೂವಣಿ pakkû-vaṇi. = ಪಕ್ಕುವಣಿ, q. v.

ಪಕ್ಕೆ pakkĕ. 1. = ಪಟ್ಕಿ 1 q. v., ಹಕ್ಕೆ. Lying down, reposing; bending downwards (see ನಸುಪಕ್ಕೆ); a place (J. 20, 52). 2, a place for reposing: a dormitory (ಸಜ್ಜಮನೆ Šm. 79; Čpr. 1, 123; Tĕ.); the lair of a wild beast (see ಮಿಗಪಕ್ಕೆ); a nest (Grj. 4, 66). 3, a cow-pen, or a herd of kine (ತುರುಮನ್ದೆ Šm. 79). — ಪಕ್ಕೆವನೆ. -ಮನೆ. A dormitory (ಸಜ್ಜವನೆ, ಶಯ್ಯಾಗೃಹ Šs.).

ಪಕ್ಕೆ pakkĕ. 2. (fr. ಪಡು 1). (= ಪಟ್ಕಿ 2). Meeting with: closeness, contact, vicinity (ಪೊರ್ದುಗೆ Šm. 79; Tĕ. ಪಜ್ಜೆ). ನಿನ್ನನಿಯನ ಪಕ್ಕೆಯೊಳ್ ಇರು! ಎನ್ದು, ಸಖಿ ತೊಲಗುವುದುಂ (Šmd. 73, o. r. ಪಟ್ಕಿ). See ಮುದಪಕ್ಕೆ. — ಪಕ್ಕೆಮಟ್. A young one that is near (J. 28, 44).

ಪಕ್ಕೆ pakkĕ. 3. The tamarisk tree, Tamarix indica (Tĕ.; ಸಿಡುಲು, ಝಾವುಕ Si. 131).

ಪಕ್ಕೆ pakkĕ. = ಪಕ್ಕ, etc. The side (My.; Tĕ.); the page of a book (My.; Tĕ.).

ಪಕ್ಕೆಗ pakkĕ-ga. = ಪಟ್ಕಿಗ. A man who rests or reposes on. See ಎರಲೆಪಕ್ಕೆಗ, ಎಲರುಣಿ-, ನಾಗರ-, ಮಿಗ-, ಮುನ್ನೀರ್-.

ಪಕ್ವ pakva. = ಪಕ್ಕಾ, ಪಕ್ಕು 2. *Cooked, roasted, boiled, baked;* warmed. 2, *digested.* 3, *mature, ripe.* 4, *accomplished, come to perfection,* perfect, fully developed, ready, fair, adept; shrewd, experienced; strong, durable. 5, ripe for destruction: *on the eve of decay.* 6, grey, as the hair. See ತೂರೆ 2; Hlâ. s. ತುಪ್ಪ.

ಪಕ್ವಕೃತ್ pakva-krit. Cooking, etc. 2, the tree Azadiracta indica (ನಿಮ್ಬು). (R.).

ಪಕ್ವಧಾನ್ಯರಸ pakva-dhânya-rasa. The liquid of boiled grain. See ಕಟ್ಟು.

ಪಕ್ವಶ pakvaša. (= ಪುಲ್ಕಸ). *N. of a barbarous tribe.*

ಬೇಕು bêku. = ಬೇಲ್ಕು, ಬೇಲ್ಕುಂ, (ಬೇಹು 1). Third person singular future of ಬೇಡು 1: It desires: it is wished, desired, solicited or requested; it is desirable; it is requisite, it is required, it is necessary; it is wanted; it is fit; it is due, it must;—he or she is desirable, etc., etc.;—thou art desirable, etc., etc.; you are desirable, etc., etc.;—they are desirable, etc., etc. (ಬೇಹು Bhn. 45; C.; T. ವೇಣುಂ, ವೇಣ್ಡುಂ; M. ವೇಣಂ, ವೇಣ್ಡು; Tu. ಬೋಡು). ಪುರುಷರೊಳಗಭಿಮಾನವೇ ಬೇಕು (Bp. 40, 48). ಅಂಗಿಯನ್ನು ಇಟ್ಟು ಕೊಳ್ಳ ಬೇಕೋ? ಇಟ್ಟು ಕೊಳ್ಳ ಬಾರದೋ? (B. 4, 93). ಬೇಕು ಬೇಡೆನ್ದು, ಉಸುರಲೊಲ್ಲೆ (Bp. 14, 10). ಬೆಳ್ಳುಗಳು ಪೂರ್ಣವಾಗಿ ಬೆಳೆಯ ಬೇಕಾದರೆ ಹದಿನೆಣ್ಟು ತಿಂಗಳು ಬೇಕು (B. 5, 33). ಒನ್ದು ವಿದ್ಯದೊಳಗೆ ತುಮ್ಬಾ ಜ್ಞಾನವುಳ್ಳವನಾಗಿ ಹಸ್ತಾಗಿ ಕೆಲಸಾ'ಮಾಡ ಹತ್ತ ಬೇಕಾದರೆ ಬಹಳ ದಿವಸ ಬೇಕು (5, 81). ಕರೆದೆವಾಂ ಬೂಜಂಗೆ, ಬೇಕೇ? (Bh. 2, 13, 39). ತೋಟ ಬೇಕೇ? (2, 13, 47). ಒನ್ದು ತೆಐದ ಮಗನಾದೊಡಂ ಬೇಕು (J. 28, 57). ಸಚೇಲಸ್ನಾನವ ಮಾಡಲಿಕೆ ಬೇಕು (Bp. 55, 35). ಇವನನಟ'ಯಲು ಬೇಕು (Râm. 3, 2, 22). ಅರ್ಥಮಂ ತತ್ಕಾಲಕೇಯ ಬೇಕು (J. 29, 17). ಕಣ್ಡುದ ನುಡಿಯ ಬೇಕು (Bh. 1, 8, 16). ವಿನಾಶವಹಸಗ ಬೇಕು (1, 8, 56). ದ್ರೋಹ ಮಾಡ ಬೇಕೆಮ್ಬ ಕೆಟ್ಟ ಇಚ್ಛೆ (ವ್ಯಾಪಾದ Si. 48). ಪೆರರ ಒಡವೆಯನ್ನು ಅಪಹರಿಸಿ ದಕ್ಕಿಸಿ ಕೊಳ್ಳ ಬೇಕೆಮ್ಬುವ ದುರಾಶೆ (ಅಭಿಧ್ಯೆ 68). ಬೇಟೆಯಾಡುವ ಕೆಲಸಕ್ಕೆ ನಾಯಿಗಳು ಬೇಕೇ ಬೇಕು (B. 3, 40). ಬಿಸಿಯಾದ್ದು ಆರ'ಸ ಬೇಕು, ಹಸಿಯಾದ್ದು ಕಾಯಿಸ ಬೇಕು.—ಬೇಗೆ ಹತ್ತಿದ್ದಲ್ಲಿ ಹೊಗೆಗೆ ನಿಮಿತ್ತ ಕೇಳ ಬೇಕೇ? (Prvs.).—Occasionally the form ಬೇಕಿಲ್ಲ is used instead of ಬೇಡ (but not in My.).— ಬೇಕಾಗು. -ಅಗು. To be solicited, to be desired, to be required, to become or be necessary, etc. (ಬೇಡಿ ಇರು Šmd. 60 Cm.). ಎಣಿಸ ಬೇಕಾದುದು (ಗಣನೀಯ Nr.). ಬೇಕಾದುದು (ಪ್ರಯೋಜನ Nn. 132). ಬೇಕಾದನಿತನ್ ಆದದೆ ತನ್ದಪೆಂ (Bp. 14, 11). ಬೇಕಾದನಿತು ಎತ್ತವನಿತ್ತು (28, 22). ಬೇಕಾದಷ್ಟು (ಕಾಮ, ಪ್ರಕಾಮ, ಇಷ್ಟ, etc. Si. 317). ಮನಸ್ಸಿಗೆ ಬೇಕಾದದು (ಅಭೀಷ್ಟ, ಹೃದ್ಯ, etc. 368). ಬೇಕಾದದು (ಲಘು, ಇಷ್ಟ 412). ಮಾಡ ಬೇಕಾದ ಕೆಲಸಗಳನ್ನು ಮಾಡುತ್ತಿರುವಿಕೆ (ಪರಾಕ್ರಮ 441). ತನಗೆ ಬೇಕಾದನ್ತಾ ಪುರುಷನು (ರಮಣ, etc. Dhw.). ಎಳೆಯಂಗೆ ಬೇಕಾದುದು ಇಲ್ಲದಿರೆ ಮಱುಗುವಳ್ (J. 28, 16). ಬೇಕಾದ್ದು ಇದ್ದರೂ ಸೋಕೋದು ತಪ್ಪಲಿಲ್ಲ.—ಬೇಕಾದ್ದು ಕೊಟ್ಟರೂ ನೂಕಿಸಿ ಕೊಳ್ಳೋದು ತಪ್ಪಲಿಲ್ಲ.—ಬೇಕಾದದಾದರೆ ಬೇಗ ಸಿಕ್ಕೀತೇ? (Prvs.). ಬೇಕಾದ ಹಾಗೆ (ಪ್ರಕಾಮ G.). ಕಡುವಿಗೆ ತುಸ ಹುಲ್ಲು ಬೇಕಾಗಿತ್ತು (B. 2, 21). ಎಲೆಗಳ ತೂತುಗಳಲ್ಲಿ ಹವೆಯೊಳಗಿನ್ದ ತಮಗೆ ಬೇಕಾದ ವಾಯುವನ್ನು ಹೀರಿ ಕೊಣ್ಡು, ಬೇಡಾದನ್ಥ ತಮ್ಮೊಳಗಿನ ವಾಯುವನ್ನು ಹೊರಗೆ ಬಿಡುವ ಗುಣವುಣ್ಟು (3, 36). ಕಾಯಿ ಬೇಕಾಗಿದ್ದರೆ (3, 91). ಅವಳು ಬೇಕಾದಷ್ಟು ನೆವ ಹೇಳಿ' (4, 6). ವಿಜಯನಗರಕ್ಕೆ ಹೋಗಿ, ಬೇಕಾದ ಹಾಗೆ ಸುಲಿಗೇ ಮಾಡಿ (4, 10). ಕೊತವಾಲನು ಎಲ್ಲರಿಗೂ ಬೇಕಾದವನಾಗಿದ್ದನು (4, 20). ಹತ್ತೀ ಕಾಯಿಗಳು ಬಲಿತು ಹಣ್ಣಾಗಲಿಕ್ಕೆ ಹೆಚ್ಚು ಕಡಿಮೆ ಎರಡು ತಿಂಗಳು ಬೇಕಾಗುತ್ತದೆ (4, 27). ಒಳ್ಳೇ ನಡತೆಯ ಮನುಷ್ಯನು ಎಲ್ಲರಿಗೂ ಬೇಕಾದವನು (4, 35). ಈ ಅಚ್ಚುಕೂಟದಲ್ಲಿ ಒನ್ದು ದಿವಸದಲ್ಲಿ ಹೊಡಿಯುವಷ್ಟು ಪ್ರತಿಗಳನ್ನು ಲೇಖಕರ ಕೆಯ್ಲಿ ಬರಿಸ ಬೇಕಾದರೆ ಹದಿನಯ್ದು ಲಕ್ಷ ಲೇಖಕರು ಬೇಕಾಗುವರು (4, 103). ಸೂಜೆಗಳನ್ನು ಮಾಡುವ ಕೆಲಸಕ್ಕೆ ಬೇಕಾಗುವಷ್ಟು ಮನ್ದಿ ಇನ್ನೊನ್ದು ಯಾವ ಕೆಲಸಕ್ಕೂ ಬೇಕಾಗುತ್ತಿರಲಿಕ್ಕಿಲ್ಲ (4, 157). ಮಾವತನು ಆನೆಯ ಗಣ್ಡಸ್ಥಲಕ್ಕೆ ತಿವಿದು, ಬೇಕಾದತ್ತ ಅದನ್ನು ತರುತ್ತಾನೆ (5, 240). ಆ ಮೊಸಳೆಗಳಿಗೆ ಬೇಕು ಬೇಕಾದನ್ಥ ಸವಿ ಸವಿ ಆಹಾರಗಳನ್ನು ಒಯಿದು, ನೈವೇದ್ಯ ಕೊಡುತ್ತಿದ್ದರು (4, 132). ಕಟ್ಟಿಗೆಗಳನ್ನು ಕೆತ್ತಿ, ಬೇಕು ಬೇಕಾದ ಹಾಗೆ ಜೋಡಿಸಿ ಕೊಳ್ಳಬೇಕು (4, 152). ಆ ಹಾಳೆಯನ್ನು ಬೇಕು ಬೇಕಾದ ಹಾಗೆ ಕೊಟಿ'ದು (4, 225).— ಬೇಕನ್ನು. -ಅನ್ನು. To say "it is wished or desired", "it is desirable," etc., etc. ಬೇಕನ್ದಾಕ್ಷಣ ನಾಕ ಸೇರುವನೇ?—ಬೇಕನ್ತ ಬಯಸಿದ್ದು ಬೇಸಬವಾದೀತೇ? (Prvs.). It is used to express "purposedly": ನಾನು ಬೇಕನ್ತ ಕನ್ನಡಿಯನ್ನು ಒಡೆದೆನೋ? (B. 3, 82). ಬೇಕನ್ತ ಅಲ್ಲಿ ನಿಲ್ಲುವನು (5, 205). ಬೇಕನ್ತ ತಡ ಮಾಡಿದನು (5, 236).— ಬೇಕೆನ್ನು. -ಎನ್ನು. = ಬೇಕನ್ನು. (Bp. 24, 76; J. 5, 23).

ಬೇಕೂಬ bê-kûba. Not proper: foolish, silly; a fool (My., Si. 401; Mhr., H.).

ಬೇಗ bêga. Tbh. of ವೇಗ (Šmd. 342; Čpr. 5, 8. 106; Bp. 46, 56; 57, 2). Speed; quickly (C.). ಅಮ್ಬಿನ ಬೇಗ (ದೀಪ್ತಿ, ವೇಗ, ತೀವ್ರತೆ Hlâ.). ಬೇಗ ನಡಿಯುವವನು (ಜಂಘಾಲ, etc. Si. 282).— ಬೇಗನೆ. ಬೇಗನೇ. Quickly (C.; B. 1, 10; 3, 124; 5, 72).— ಬೇಗ ಮಾಡು. To hasten, to act with precipitance (Bp. 56, 20; ಸರಸರಿಸು G.). ಬೇಗ ಮಾಡಿದವನಿಗೆ (ಒನ್ದು ಹಣಕ್ಕೆ) ಹಾಗೂ ವೀಸ (Prv.).

ಬೇಗಡಿ bêgaḍi. = ಬೇಗಡೆ 1. (B. 1, 5).

ಬೇಗಡೆ bêgaḍĕ. 1. Talc mineral, Mica resembling glass (Tĕ.);—laminae of tin covered over with some colouring substance (My.; Tĕ.; Mhr. ಬೇಗಡ). ಬೇಗಡೇ ತಗಡಾದರೆ ಬುಗಡಿಗೆ ಆದೀತೇ? (Prv.).— ಬೇಗಡೆವೆಸ. -ಬೆಸೆ. To affix such laminae (Čpr. 1, 134).

ಬೇಗಡೆ bêgaḍĕ. 2. A bore, a hole, as in a gem (ಬೆಜ್ಜ Bhn. 12; Bh. 7, 1, 10; 8, 4, 15; 8, 26, 17).

ಬೇಗಾರಿ bêgâri. Labour exacted by a government or a person in power without giving remuneration for it (My.; Mhr., H. ಬಿಗಾರ).

ಬೇಗು bêgu. 1. ಕೆಯ್ಮಾಡೆನೆ ಬೇಗೆಮ್ಬುದರ್ಥಂ (Ċt. I, 51).

ಬೇಗು bêgu. 2. = ಬೇಹು 2. Spying (My.; Tĕ. ವೇಗು, ವೇಗು; T. ವೇ, ವೇಯ್, ವೇಗು, ವೇವು; M. ವೇವು; Tĕ. ವೇಗಿಂಚು, to keep awake, v. i.; ವೇಗು, to watch without sleeping; ವೇಚು, to wish for, hope, expect, watch for; *cf.* ಬೇಡು 1?).

ಬೇಗುಗಾಱ bêgu-gâṟa. = ಬೇಹುಕಾಱ. (My.; T. ವೇವುಕಾರ; Tĕ. ವೇಗುಲವಾಡು).

144*

Digitized by Google

ಬೇಗುದಿ (bê-kudi2). Burning heat: affliction, distress, grief (ಸನ್ತಾಪ Čt. II, 89; Šs.; Bhn. 12; Bh. 8, 23, 40). — ಬೇಗುದಿಗೊಳ್. -ಕೊಳ್. To begin to grieve, etc. (J. 13, 12; 19, 13).

ಬೇಗೆ bêgĕ. = ಬೆಂಕೆ. Fire; heat; wild fire in jungles (My.; Bp. 54, 54; 56, 24; 60, 58; Rŝv. 5, 45; J. 13, 47; Tĕ. ವೇಕ, fever). — ಬೇಗೆಗಿಚ್ಚು. -ಕಿಚ್ಚು. Wild fire (Abh. P. 13, 48; 15, after 39). — ಬೇಗೆಗೊಳ್. -ಕೊಳ್. To be heated, burnt (or boiled, Rŝv. 5, 36). — ಬೇಗೆ ಬೀಳು. Wild fire to originate (My.). — ಬೇಗೆ ಹತ್ತು. Wild fire to break out (My.). ಬೇಗೆ ಹತ್ತಿದ್ದಲ್ಲಿ ಹೊಗೆಗೆ ನಿಮಿತ್ತ ಕೇಳ ಬೇಕೇ? (Prv.).

ಬೇಚಿರಾಕು bê-čirâku. Untenanted, desolate (My.; Br.; Mhr., H. ಬೇಚಿರಾಖ).

ಬೇಜಾ bê-jâ. Meaningless, senseless, groundless, bad (My.; Br., H.).

ಬೇಜಾರು bê-jâru. Weariness (from fatigue, pain, vexation), annoyance (My.; Br.; Si. 398; Mhr. ಬೇಜಾರ).

ಬೇಟ bêṭa. 1. (fr. ಬಿಡು 1). Separation, parting, especially the separation of lovers (ವಿರಹಾರ್ಥ Bhn. 41; Bh. 2, 9, 17).

ಬೇಟ bêṭa. 2. (fr. ಬೇಡು 1). = ಬೇಣ್ಟ. Longings (T. ವೇಟ್ಟಲ್, ವೇಡ್ಕೈ, ವೇಳ್, desire, lust): sexual passion, erotic sentiments, the pleasures of sense; amorous pastime; love-gestures (ಉಬುಗು Šmd. 1). ನವವಿಧರತೋಪಚಾರದಿನ್ ಎನ್ದುಂ ಪದಿಸದು ಬೇಟಂ (Šmd. 291; see Šmd. s. ದಾಬ್ಬಿಣ). ಹಣವುಳ್ಳಂ ಹೆಣನಾದೊಡಂ, ಒಲಿದ ಪೋಲಾರೆ ನ್ದಡಂ ಬಿಟ್ಟರರ್ ಕ್ಷಣಮಾತ್ರಂ; ಬಡು ಕೂಟ ಬೇಟಗಳಲೇ ಸೋತನ್ದದಿಂ ಹಾಲ ಮುನ್ದಣ ಬೆಕ್ಕಾಡುವೋಲ್ ಅಡಿ, ಸರ್ವಧನ ತಾಂ ಪೋಗಲ್ಕೆ ಮಾತಾಡರ್ ಆಯ್; ಗಣಿಕಾಸ್ತ್ರೀಗುಣಮೇತಕಯ್? (Sâ. in W. v. 614). ಪರಸತಿಯ ಬೇಟದಿ ಪುಣ್ಣತನದಲಿ ಹೆಣ್ಣರನು ಬಿಟ್ಟರ್ದ ಪೋಟರು (Abhâ. 2, 2). See Čpr. 3, 42. 43; 5, 121; 8, 53. 56; Grj. 2, after 106; Bp. 40, 40; 42, 7; 45, 29; Č. Bp. 47, 15; Râm. 1, 5, 32; 1, 14, 24; 3, 7, 22; Rŝv. 11, 93. 152. 156; J. 6, 34; 7, 6; 15, 5. 26; 26, 7; 29, 35; 30, 23; Abhâ. 2, 78. 102; ಒಳ್ವೇಟ, ಕಣ್ಬೇಟ, ಕಿವಿವೇಟ, ತನಿವೇಟ, ಪೊಸವೇಟ.

ಬೇಟಕಾರ್ತಿ bêṭa-kârti. (Šmd. 244). A woman of erotic sentiments; one making love-gestures (Râm. 1, 5, 32).

ಬೇಟಿ bêṭi. = ಬಿಟ್ಟಿ, etc. (My.).

ಬೇಟೆ bêṭĕ. = ಬೆರಡು, ಬೇಣ್ಟೆ. Hunting, the chase (Čpr. 5, 120; Šsv. 8, 2; J. 5, 67; C.; ಆಚ್ಛೋದನ, ಮೃಗಯೆ, etc. Si. 342; Tĕ. ಏಟ, ವೇಟ; T. ವೇಟ್ಟ, ವೇಟ್ಟೈ, ವೇಡು; M. ವೇಟ್ಟ; Tu. ಬೋಣ್ಟೆ). ಬೇಟೆಯಲ್ಲಿ ಕುಶಲವಾದ ನಾಯಿ (ವಿಶ್ವಕದ್ರು Si. 342). ಬೇಟೆಯಲ್ಲಿರುವವಗೆ ಬೇಟೆಯ ಸುದ್ದಿ ಯಾಕೆ?— ಬೇಟೆಗೋಸ್ಕರ ಬನ್ದು, ಊಟ ಮಾಡಿದ ಹಾಗೆ (Prvs.). 2, animals persued and taken by sportsmen, game (C.; B. 3, 31; 4, 10. 11. 212). — ಬೇಟೆನಾಯಿ. A hunting dog (B. 4, 41; ವಿಶ್ವಕದ್ರು Čb.). — ಬೇಟೆಯಾಡು. -ಆಡು. To hunt (C.). ಬೇಟೆಯಾಡಲ್ ಪಡುವ ಬೇಟೆ ಬೇಟೆ ಮೃಗಜಾತಿಗಳು (ಕೃಷ್ಣಸಾರ, ರುರು, ನ್ಯಂಕು, etc. Si. 170). ಬೇಟೆಯನಾಡಲೆನ್ದು, ನಡೆ ತಹ ಕಿರಾತರ್ (Râghč. 17, 64). ಬೇಟೆಯಾಡುವದಕ್ಕೆ ಕಲಿತ ಮಲ್ಲ ಬೇಟೆ ನಾಯಿಯು ಟೊಂಕ ಮುರಿದ (Prv.). See J. 6, 20; B. 3, 75; 5, 28.

ಬೇಟೆಕಾತಿ bêṭĕ-kâti. A huntswoman. See ಬಡೆವೇಟೆಕಾತಿ.

ಬೇಟೆಕಾರ bêṭĕ-kâra. = ಬೇಟೆಗಾರ, ಬೇಣ್ಟೆಕಾರ. A hunter, a sportsman. ಹಕ್ಕಿಯ ಬೇಟೆಕಾರಂ (ಜೀವಾನ್ತಕ, ಶಾಕುನಿಕ Nr.).

ಬೇಟೆಗಾರ bêṭĕ-gâra. = ಬೇಟೆಕಾರ, etc. (My.; B. 3, 10). ಬೇಟೆಗಾರ ತೋಟ ಮಾಡ್ಯಾನೇ? (Prv.). See Prv. s. ಮೊಲ. — ಬೇಟೆಗಾರನ ಹಕ್ಕಿ. The common Indian king-fisher, Alcedo bengalensis (Bd.; My.).

ಬೇಡ bêḍa. 1. A huntsman (ಶಣ್ಬರ, ಉಬ್ಧಕ Nn. 39; T., M.; T. ವೆಟ್ಟು, to cut down; cf. ಬೆರಡು); a tribe of forest people living by the chase (ಬಿಲ್ಲ Čt. I, 93; ಬಿಯದ, ಬಿಲ್ಲ, ಶಬರ Šm. 32; C.; the Bêḍas at present are fowlers, farmers, merchants, peons, etc.). ಬೇಡರ ಪಳ್ಳಿ (ಪಕ್ಕಣ, ಶಬರಾಲಯ Hlâ.). ಬೇಡರ ಹಳ್ಳಿ (ಪಕ್ಕಣ, etc. Nr.). ಬೇಡರ ತಾಣ (ಪಕ್ಕಣ Šm. 32). ಬೇಡರ್ ಮೊದಲಾಗುಳ್ಳ ಅನ್ತ್ಯಜಾತಿಗಳು (ಕಿರಾತ, ಶಬರ, ಪುಲಿನ್ದ, ಭಟ, ಮೂಲ, ಮ್ಲೇಚ್ಛ Hlâ.). ಬೇಡರ ಪಾಳ್ಯ (ಪಕ್ಕಣ, etc. Si. 114). ನವಿಲುಗರಿಯುಟ್ಟ ಬೇಡನು (ಕಿರಾತ); ಸೊಪ್ಪನುಟ್ಟ ಬೇಡನು (ಶಬರ); ಬೇಡರ ಭಾಷೆಯನ್ನು ಬಲ್ಲವನು (ಪುಲಿನ್ದ Si. 341). ಬೇಡರ ಪೋಲ್ ಮುಸಗಿ ತುಡುಗೊಳಲ್ ಬದ್ ಸನ್ದಂ (Šmd. 281). See Bp. 54, 76; 58, 36. 48. 57. 64; Rŝv. 5, 28. 122; Šsv. 4, 6. 92; J. 28, 52; ಮ್ಲೇಚ್ಛ. — ಬೇಡಜಾತಿ. A Bêḍa-tribe. ಭಿಲ್ಲರ್ ಕಿರಾತರ್ ಪುಲಿನ್ದ ಶಬರರ್ ಅಟವಿಕರರ್ ಬೇಡಜಾತಿಗಳು (Mr. 379). — ಬೇಡರವನು. -ಅವನು. = ಬೇಡ. (ವ್ಯಾಧ, ಮೃಗವಧಾಜೀವ, ಮೃಗಯು, ಉಬ್ಧಕ Si. 341). ಬೇಡರವಗೆ ಗಾಡೀ ಸವಾರಿ ಯಾಕೆ? (Prv.). — ಬೇಡರಸ. -ಅರಸ. A chief of huntsmen (Abh. P. 4, 38). — ಬೇಡವಟ್ಟ. -ಹಟ್ಟ. A village of huntsmen (Abh. P. 8, after 54). — ಬೇಡವಡೆ. -ಪಡೆ. A company or force of huntsmen (Abh. P. 4, after 37; 7, after 115; Râghč. 17, 68. 73; J. 28, 40). — ಬೇಡವೆಣ್. -ಪೆಣ್. A Bêḍa woman (Rŝv. 5, after 55; 5, 112).

ಬೇಡ bêḍa. 2. A short form of ಬೇಡದು, 3rd person singular negative of ಬೇಡು 1 (the contrary of ಬೇಕು). It does not desire: it is not wished, desired, solicited or requested; it is not desirable; it is not requisite, required or necessary; it is not wanted; it is not fit; it is not due, it must not;—he or she is not desirable, etc., etc.;—thou art not desirable, etc., etc.;—you are not desirable, etc., etc.;—they are not desirable, etc., etc. (C.; ನಿಷೇಧ Si. 469; ವಾರಣ 473; T. ವೇಣ್ಡಾಂ; M. ವೇಣ್ಡ; Tu. ಬೊಡ್ಚಿ). In politely accosting the forms ಬೇಡಿರಿ or ಬೇಡರಿ are used (B. 4, 75. 76. 77; 5, 132. 133). ಇದರೊಳ್ ಸಾಕಲ್ಯಸಂಶ್ಲೆ ಪೇಳದಿವೆನಲ್ ಬೇಡ! (Šmd. 61). ಬೇಡ ಗಡಾ, ಬೇಡ ಗಡಾ ನಿನಗಾತನೊಳ್ ಛಲಂ! (143). ಕಿವಿಗೆ ಸುಗಯಿಸದೆದೆಯೊಳ್ ಅದನೆಸಗಲ್ ಬೇಡ (268). ಸೊಪ್ಪಿಕ್ಕುಮೆಸವೇಡ (269). ನಮ್ಮೊಳು ಭೀತಿ ಬೇಡ! (Bh. 1, 8, 74). ಪಾತಕನ ಹೆಸರ ಮೂರು ಲೋಕದೊಳಗೆ ಯಾತಕ್ಕು ಬೇಡ (Sp.). ಕುಶಲತ್ವವಿಲ್ಲದೇ ನೀನೀಕನೆನ್ತಾದಿ? ಕುಶನೀಕನೆನ ಬೇಡ! ಲೋಕಕೆ ಮಾನೀಕನೆ ಕುಶ (Sp.). ಅಸೂಯೆಗೀಡಾಗ ಬೇಡ! (J. 29, 17). ಇದನ್ನು ಮಾಡು! ಅದನ್ನು ಮಾಡ ಬೇಡ! ಎನ್ದು, ಹಿರಿಯರು ಕಿರಿಯರಿಗೆ ಹೇಳುವದೇ ಆಜ್ಞೆ (B. 3, 53). ಮೆತ್ತಗಾಗಿರ ಬೇಡವೇ? (Bp. 38, 35). ಇತ್ತ ಬರ ಬೇಡ! ಎಲವೊ, ಹೋಗು! (40, 12). ಅರಿಯಬೇಡ (40, 24). ನಿಮ್ಮ ದುರುಕ್ತಿಗಳು ಬೇಡ (56, 24). ಶಾಕುಮಾತು ಅದ ಬೇಡ, ಪೋಕವಿಷ್ಯೆಗೆ

Digitized by Google

ಹೋಗ ಬೇಡ.— ಹೂಮಾಲೆಯಿಲ್ಲದಿದ್ದರೆ ರೂಮಾಲೆ ಬೇಡವೋ?— ಬಡವಗೆ ಆಸೆ ಹೇಳಬೇಡ, ಬಲ್ಲಿದವಗೆ ಬಾಸೆ ಹೇಳ ಬೇಡ.— ಹಾರುವನಿಗೆ ಆಳಾಗ ಬೇಡ, ಗಾಣಿಗನಿಗೆ ಎತ್ತಾಗ ಬೇಡ (Prvs.). ಈ ಪುಸ್ತಕವನ್ನು ಮಾಸ ಬೇಡ! (B. 2, 1). ಪೊಱ ಬೇಡಂಗಡಿಸಾಲವೂರ ಹೊಣೆಯಂ ನಿಸ್ಸಂಗಳಂ ಪಾಪವಂ, ಮಱೆವೇಡಾತ್ಮಜಮಿತ್ರಸೈಜಸತಿಯೊಳ್ ನ್ಯಾಯಂಗಳೊಳ್ ಸತ್ಯಮಂ, ನೆಱೆವೇಡಂಗನೆಪಕ್ಷವೃದ್ಧತರುಣೀಗೋವಿಪ್ರ ದಾರಿದ್ರರಂ, ತೆಱ ಬೇಡೊತ್ತೆಗೆ ಬಡ್ಡಿಯಂ (Śi. 34). Honorific plural ಬೇಡಿರಿ! (C.), ಬೇಡಿ! (My.). — ಬೇಡನ್ನು. -ಅನ್ನು. = ಬೇಡೆನ್ನು. ಯಾರು ಬೇಡನ್ನುತ್ತಾರೆ? (who does object? My.). ಬೇಡನ್ದರೂ ಮಗ ಆಡು ಕಾಯೋದು ಬಿಡುವದಿಲ್ಲ (Prv.). — ಬೇಡ ಬೇಡ. rep. (Bp. 21, 47; 43, 52). ಬೇಡ ಬೇಡೆನ್ದು, ಬಿಡಿಸಿದಂ (Śmd. 272). — ಬೇಡವಾಗು. -ಆಗು. = ಬೇಡಾಗು. (My.). ಬೇಡವಾದ್ದು ಕೂಡಿಸಿದರೆ ಆದೀತೇ? (Prv.). — ಬೇಡವೆನ್. -ಎನ್. = ಬೇಡೆನ್. ಬೇಡವೆಮ್ಬುದು (ವಾರಣ Nr.). — ಬೇಡಾಗು. -ಆಗು. To be undesirable, etc., etc. ಎಲೆಗಳ ತೂತುಗಳಲ್ಲಿ ಹವೆಯೊಳಗಿನ್ದ ತಮಗೆ ಬೇಕಾದ ವಾಯುವನ್ನು ಹೀರಿ ಕೊಣ್ಡು, ಬೇಡಾದದ್ದನ್ನು ತಮ್ಮೊಳಗಿನ ವಾಯುವನ್ನು ಹೊಱಗೆ ಬಿಡುವ ಗುಣವುಣ್ಟು (B. 3, 86). ಬೇಡನ ಬಱಿಯಲ್ಲಿ ಕಾದು ಇದ್ದುದಱಿನ್ದ ಅವನಿಗೆ ಅವು ಬೇಡಾಗಿದ್ದರೆ (3, 91). ಲೋಕಾಪವಾದದಿನ್ದ ಜನರಿಗೆ ಬೇಡಾದವನು (ಅಭಿಶಸ್ತ G.). — ಬೇಡೆನ್. -ಎನ್. ಬೇಡೆನ್ನು. To forbid, etc.; to refuse, etc. ಬೇಡೆನುಹ (ನಿಷೇಧ); ಬೇಡೆನ್ದು ಒಱಲುಹ (ಆಕ್ರೋಶನ, etc. Nr.). ಬೇಡೆನ್ದು ಬಿಟ್ಟವನು (My.). ಬೇಡೆನವೇಡ! (Rśv. 18, 26).

ಬೇಡ bêḍa. 3. A man of a timid heart, a timid man (ಭೀತಚಿತ್ತ Bhn. 4; Bp. 9, 32; 31, 6; see ಬೆಳ್ಳಱ್).

ಬೇಡತಿ bêḍati. A female of the Bêḍa tribe (ಶಬರಿ G.; My.; see Rághc. 17, 66; Śśv. 3, 7; Bh. 1, 8, 87; ಎಳೆವೇಡತಿ).

ಬೇಡಿ bêḍi. A chain, a fetter (My.; Br.; B. 5, 151; Mhr., H.). ಆನೇ ಬೇಡಿ (ಶೃಂಖಲ, ಅನ್ದುಕ, ನಿಗಲ Si. 271). ಬೇಡಿಲಿ (or ಬೇಡೀಲಿ) ಇದ್ದವಗೆ ನಾಡಿನ ಯೋಚನೆಯೇ?— ಬೇಡಿಲಿ ಬಿದ್ದರೂ ಕೇಡು ಬಿಡಲಿಲ್ಲ (Prvs.).

ಬೇಡಿಕೆ bêḍikĕ. Asking, entreating (My.).

ಬೇಡು bêḍu. 1. (Śmd. 90). = ಬೇಱ್. To wish, to desire (ಬಯಸು Śmd. 387 Cm.; T. ವೇಣ್ಡು);—to solicit, to beg, to pray, to entreat, to request (ಯಾಚ್ಞೆ Śmd. Dh.; Śm. 95; C.; T. ವೇಣ್ಡು; Tĕ. ವೇಡು; Tu. ಬೇಡು; T. also: to be necessary, be wanted; see ಬೇಕು, ಬೇಡ 2, ಬೇಹ). ಬೇಡಿದನಿಷ್ಟಮಂ ಸಲಿಪುದು ಕರ್ಣಂಗೆ ಜನ್ಮವ್ರತಂ (Śmd. 89). ಜಾತವೇದಂ ಪಟುಕಪಟಮಯವ್ಯಾಜದಿಂ ಬೇಡಿ, ಪೆತ್ತಂ (285). ಕುರುಪತಿಯಂ ಎಷ್ಟು ಬೇಡಿದಂ ಧರೆಯುರೆಯಂ (77). ದಾನಿಯಂ ದಾನಮಂ ಬೇಡಿದಂ (157). ಆವುದು ಮಾಡಲ್ ಬೇಡಿದುದು, ಅದುವೆ ಕರ್ಮಂ (155). ಬೇಡುವಂ or ಬೇಟ್ಟಂ (28). ಬೇಡುವವ (ಅರ್ಥಿ, ಮಾರ್ಗಣಕ, ಯಾಚಕ, ವನೀಪಕ Hlâ.). ಬೇಡುವಂ (ಎರೆವಂ, ಯಾಚಿಸುವಂ Śm. 47). ಬೇಡುವವನು (ಮಾರ್ಗಣ, ಯಾಚಕಜನ Nn. 70). ಬೇಡುವವನು (ವನೀಪಕ, ಯಾಚನಕ, ಮಾರ್ಗಣ, ಯಾಚಕ, ಅರ್ಥಿ, ಕೇಳುವವನು Si. 367). ಮಾಡಲ್ ಬೇಡಿ ಅಂಗಡಿಯಲ್ಲಿ ಪಸರಿಸಿದ ದ್ರವ್ಯವು (ಕ್ರಯ್ಯ); ಆಗಲು ಬೇಡಿದುದು (ಭಾವುಕ, ಭವಿಕ, ಭವ್ಯ); ಬೇಡಿಕೊಳುಹ (ಪ್ರಾರ್ಥನ Nr.; cf. ಬೇಡುಹ). ಬೇಕಾದದು ಹೋಗಿ ಬೇಡದ್ದು ಆಗುವಿಕೆ (ಪ್ರಪಂಚ, ವಿಪರ್ಯಾಸ Si. 412). ಇನ್ನು ಮೇಲೆ ಇನ್ಥಾ ಕೇಡುಗಳು ಉಣ್ಟಾಗ ದಾರದೆನ್ದು, ನಾವು ದೇವರನ್ನು ಕುಱಿತು ಬೇಡಿ ಕೊಳ್ಳುತ್ತೇವೆ (B. 5, 2). ಅವನು ಅರಸನಲ್ಲಿ ಏನಿಕೆ ದ್ರವ್ಯ ಬೇಡಿದ್ದನು (5, 67). ತನ್ದೆಯ ಕೀರ್ತಿ ಹೆಚ್ಚಾಗಲೆನ್ದು, ದೇವರಿಗೆ ಬೇಡಿ ಕೊಣ್ಡೆನು (5, 72). ಈ ಮುದುಕ ಬಿಕ್ಕೆ ಬೇಡಿ, ಕಾದು ತರುತ್ತಾನೆ (2, 38). ಕುಣ್ಟರು ತಮ್ಮಲ್ಲಿ ಬಿಕ್ಕೆ ಬೇಡ ಬನ್ದರೆ ತಮ್ಮ ಕೆಯ್ಲಾದದು ಕೊಟ್ಟು, ಅವರನ್ನು ಕಳುಹಿಸ ಬೇಕು (4, 34). ತಲೆಗೆ ಎಣ್ಣೆ ಇಲ್ಲ, ತನು ಮೃಗನಾಭಿ ಬೇಡಿತು.— ಸಾನಾರಾಯನ ಹತ್ತರ ಹೋಗಿ, ನಾಲ್ಕು ಕಾಸು ಬೇಡಿದ.— ಪೆಟ್ಟು ಕೊಟ್ಟಾಗ್ಯೂ ಹಿಟ್ಟು ಬೇಡೋದು ಬಿಡಲಿಲ್ಲ.— ಬೇಡಿ ಉಣ್ಣ ನಾಲಿಗೆ ನಾಡು ಕಣ್ಡಿತು.— ಕಳ್ಳತನ ಎಮ್ಬ ಕಾಮಧೇನು ಇರುವಾಗ ಬೇಡಿ ತಿಮ್ಬುವ ಬಣ್ಣಜನ್ಮ ಯಾಕೆ?— ಬೇಡಿ ಕೊಣ್ಡಷ್ಟೂ ಹೇಡಿತನ ಹೋಗಲಿಲ್ಲ.— ಬೇಡಿ ಕೊಣ್ಡು ತಿನ್ನ ಬಹುದು, ಕದ್ದು ಕೊಣ್ಡು ತಿನ್ನ ದಾರದು.— ಬೇಡುವದೇ ಕಷ್ಟ, ಬೇಡಿದರೂ ಇಲ್ಲವೆನ್ನುವದು ಅತಿಕಷ್ಟ (Prvs.). See Čpr. 3, 103; 5, 102; Bp. 1, 65; 9, 32. 49; 22, 40; 26, 14. 67; 30, 30; 32, 63; 42, 6; 43, 60; 46, 47. 51; 47, 39; 50, 68. 80; 53, 39; Č. Bp. 47, 3; J. 4, 65; 5, 12. 59; 26, 52; Sp. s. ಮುನ್ನೀ; Prv. s. ಓಕೆ.

ಬೇಡು bêḍu. 2. A multitude of huntsmen or Bêḍas (ಬೇಡರ ಸಮೂಹ Śmd. Db.; ಶಬರಸಮೂಹ Śm. 95; ಬೇಡರ ಗೊನ್ದಣ Śm. 32; cf. ಬೀಡು 3; T. ವೇಡು, a tribe of wild people).

ಬೇಡುವಿಕೆ bêḍuvikĕ. = ಬೇಡಿಕೆ. (My.; B. 5, 67; ಯಾಚ್ಞೆ, ಅಭಿಶಸ್ತಿ, ಯಾಚನೆ, ಅರ್ಥನೆ, ಕೇಳಿ ಕೊಳ್ಳುವದು Si. 245; ಯಾಚ್ಞೆ, ಭಿಕ್ಷೆ, ಅರ್ಥನೆ, ಅರ್ದನೆ, ಕೇಳುವಿಕೆ, ತಿರಿದಾಡುವಿಕೆ 287).

ಬೇಡುಹ bêḍuha. Soliciting, begging, praying, etc. (ಅಧ್ಯೇಷಣೆ, ಏಷಣೆ, ಯಾಚ್ಞೆ, ಯಾಚನೆ, ಪ್ರಾರ್ಥನೆ Hlâ.; ಯಾಚೆ, ಭಿಕ್ಷೆ, ಅರ್ಥನೆ, ಅರ್ದನೆ Nr.).

ಬೇಡೆ bêḍĕ. = ವೇಡೆ 1. *A boat.*

ಬೇಣ್ಟ bêṇṭa. = ಬೇಟ 2. (Čpr. 6, 85).

ಬೇಣ್ಟಿಗ bêṇṭiga. A hunter (Śśv. 3, 24).

ಬೇಣ್ಟೆ bêṇṭĕ. (Śmd. 48). = ಬೇಟೆ, etc. (ಆಚ್ಛೋಟನ, ಮೃಗಯೆ, ಮೃಗವ್ಯ, ಪಾಪರ್ಧಿ, ಆಖೇಟಕ Hlâ., Mr. 270; ಸರವಿ Śmd. II, Čt. I, 7, Śm. 108; ಸರಡು, ಸರವಿ Kk. 51; ಸರ, ಸರವಿ Śm. 31; My.; Bp. 27, 22). ಬೇಣ್ಟೆಯ ಉಳಿ (Śmd. I). ಬೇಣ್ಟೆಯ ತೆರ (ಪದಿಹ I). ಬೇಣ್ಟೆಯ ಕೆರ (ಎಕ್ಕವಡ Čt. II, 36). ಬೇಣ್ಟೆಯ ನಾಯಿ (ಎತ್ತಕದ್ರು Hlâ.). ಮುಳಲ ಬೇಣ್ಟೆಯಂ ಮಾಡಿದ ಪೋಲ್ (Śmd. II). See Rśv. 5, 52; Śśv. 3, 48. 64; J. 2, 54; 28, 40; 29, 23; ಮಿಗವೇಣ್ಟೆ. — ಬೇಣ್ಟೆಯಾಡು. = ಬೇಟೆಯಾಡು. (Bp. 34, 17; Rághc. 17, 67). — ಬೇಣ್ಟೆವಸನ. -ಬಸನ. Pursuit of hunting (Čpr. 8, after 4). — ಬೇಣ್ಟೆವೋಗು. -ಪೋಗು. To go a hunting, to go to the chase (Rśv. 5, after 50).

ಬೇಣ್ಟೆಕಾಱ bêṇṭĕ-kâṟa. = ಬೇಟೆಕಾಱ, etc. (ವ್ಯಾಧ, ಮೃಗವಧಾಜೀವ, ಮೃಗಯು, ಲುಬ್ಧಕ Nr.; Bp. 9, 48; 34, 23. 36; 47, 36).

ಬೇತಾಳ bêtâḷa. = ವೇತಾಲ. (Abh. P. 14, after 90; J. 22, 23; My.). ಬೇತಾಳನಾದರೆ ನೇತಾಡ್ಯಾನು, ಮಾತಿಗೆ ಪ್ರಸವವೇದನೆ.— ಬೆನ್ನ ಹಿನ್ದೆ ಬನ್ದು ಬೇತಾಳ.— ಬೇತಾಳಗೆ ಜ್ಯೇಷ್ಠಾದೇವಿಯೇ ಒಪ್ಪಿದ ಹೆಣ್ಡತಿ.— ಕಾಡು ಬೆಳದರೆ ಬೇಡನಿಗೆ ಬಿಡ ಬೇಕು, ನಾಡು ಸೊಕ್ಕಿದರೆ ಬೇತಾಳನಿಗೆ ಬಿಡ ಬೇಕು (Prvs.). See Prv. s. ಬಾಯಿಗೆ ಬರು.

ಬೇತು bêtu. P. p. of ಬೇ 2.

ಬೇತು bêtu. Plan, scheme, plot; purpose, design; method; form (Mhr., H.; ಉದ್ದೇಶ, ಸಂಕೇತ Čb.).

ಬೇದ bêda. 1. Tbh. of ವೇದ (Čt. II, 44). — ಬೇದಬಿಜ್ಜಗ. Brahmâ (ಅಜ್ಜ Čt. II, 3; ಬೊಮ್ಮ Kk. 9; ಬಿದಿ, ಅಲರಿಚ, ಬೊಮ್ಮ, etc., ಬ್ರಹ್ಮ Śm. 8).

ಬೇದ bêda. 2. Tbh. of ಭೇದ (My.; B. 5, 23).

ಬೇದನೆ bêdanĕ. Tbh. of ವೇದನೆ (Śmd. 342).

ಬೇನೆ bênĕ. (Heat; T., M. ವೇನಲ್, ವೇನಿಲ್): pain; sickness, disease (C.). ಬೇನೆ ತಗಲುವಿಕೆ (ಸ್ಪರ್ಶ, ಸ್ಪೃಷ್ಟಿ, ಉಪತಪ್ತ Si. 392). ಒಳಗೊಳಗೆ ಬಸುಱಿವ ಬೇನೆ (Bp. 3, 14). ಬೇನೆ ಗಾನದಿನ್ದ ಹೋದೀತೇ?— ಬೇನೆ ನಿತ್ತರೂ ಹೇನಿನ ಕಾಟ ನಿಲ್ಲಲಿಲ್ಲ (Prvs.). See ಇಬ್ಬೇನೆ, ಕಣ್-, ಹೊಟ್ಟೆ-. — ಬೇನೆ ಬರು. Pain

Digitized by Google

or disease to come, be brought on or be created (B. 4, 32. 53. 141; My.). — ಬೇನೆ ಬೀಳು. Pain or disease to happen: to become unwell (My.). ಹಿನ್ದಕ್ಕೊಮ್ಮೆ ಬೇನೇ ಬಿದ್ದಿದ್ದನು (B. 3, 59). ಮಱುದಿವಸವೇ ಬೇನೆ ಬೀಳುತ್ತಾನೆ (4, 139). ಕುಟುಮ್ಬದೊಳಗಿನವರು ಬೇನೆ ಬೀಳುತ್ತಾರೆ (5, 90). ಯಾರಾದರೂ ಬೇನೆ ಬಿದ್ದರೆ (5, 304). — ಬೇನೆಯವ. -ಅವ. A sick, diseased man (ಅಭ್ಯಮಿತ, ರೋಗಿ, ಅಭ್ಯಾನ್ತ, ಆಮಯಾವಿ G.; B. 4, 76).

ಬೇಪರವಾ bê-paravâ. Carelessness, inattention (My.; Br., Mhr., H.).

ಬೇಪಾರ bêpâra. Tbh. of ವ್ಯಾಪಾರ. (My.; Br.; Mhr., H.). — ಬೇಪಾರ ಸಾಪಾರ. reit. (My.).

ಬೇಫಾಮು bê-phâmu. Inadvertence, heedlessness (My.; Br., Mhr., H.).

ಬೇಬನ್ದು bê-bandu. Devoid of order, confused; disorder, etc. (My.; Br., Mhr., H.).

ಬೇಯಿಸು bêyisu. = ಬೆಯಿಸು, ಬೇಸು. To consume with fire, to burn up. 2, to prepare, as food for the table, by boiling;—to bake, as bread (My.; Tĕ. ವೇಯಿಂಚು). ಬೇಯಿಸಿದ ಅನ್ನ ಪಾಯಸವಾಗದೇ? (Prv.). 2, to pain (v. t.), to afflict (J. 8, 47).

ಬೇಯು bêyu. = ಬೇ 1, etc. P. p. ಬೆನ್ದು. ಬೇಯುವದು (C.).

ಬೇರ್ bêr. (Šmd. 58). = ಬೇರು, ಬೇಱ್ 1. A root (ನೇತ್ರ Hlâ., Mr. 471; ಮೂಲ Nn. 66; ಜಟೆ Mr. 518; T., M. ವೇರ್). ಬೇರ್ಗಳ್ (Šmd. 51. 112. 133; Čpr. 1, 90; J. 3, 36). ನೆರಾವರೆಯ ಬೇರಂ (Šmd. 345). ಬೇರ್ ಪಱಿದುದು (219). ಪಸರಿಸಿದ ಬೇರ್ (ಪಾದ, ಮೂಲ Mr. 104). ಸಂಶಯದ ಬೇರ್ (Bp. 11, 15). ಭವದ ಬೇರ್ (37, 24). ಬೇರಿಂ (Čpr. 1, 71). — ಬೇರಿೞ್. -ಇೞ್. A root to descend. ಬೇರಿೞಿಯೆ ಜಡೆಗಳ್ (Râv. 1, 184). — ಬೇರೂಱು. -ಊಱು. To fix the root, to root, as plants, etc.; to take root, to be established; to spring up, to originate. See Bh. 2, 2, 114; J. 30, 30.

ಬೇರ bêra. 1. Tbh. of ವೈರ (Šmd. 357). Enmity (Tĕ. ವೇರ). 2, an enemy (ಮಱುವಸಲ, ಮಾಱಿಱಿ, ಪಗೆ Šs.; see ರಕ್ಷಸಬೇರ).

ಬೇರ bêra. 2. Tbh. of ವ್ಯಾಪಾರ. (My.; Tĕ.). — ಬೇರ ಮಾಡು. To traffic (My.).

ಬೇರಿ bêri. 1. Tbh. of ವ್ಯಾಪಾರಿ. (Si. 298; Tĕ.; M. ಬಿಯಾರಿ).

ಬೇರಿ bêri. 2. Tbh. of ಭೇರಿ (Šmd. 339; My.).

ಬೇರೀಜು bêrîju. The total of an addition: an amount (Mhr.); the total assessment of a land, a village, a district, etc. (My.; Br.). ಒಟ್ಟುಬೇರೀಜು (ಸಮಾಮ್ನಾಯ Čb.).

ಬೇರು bêru. = ಬೇರ್, etc. (C.; Tĕ. ವೇರು). ಮರದ ಬೇರು (ಪಾದ, ಮೂಲ Hlâ.). ಮೂಲ ಎನ್ದಿಡೆ ಬೇರಿಂಗೆ ಪೆಸರು (Nr.). ಕುಲದ ಬೇರಿಗೆ (Bp. 3, 58). ದುರ್ಭವದ ಬೇರು (61, 79). ಯುದ್ಧದ ಬೇರನ್ನು ಕಿತ್ತು ಚೆಲ್ಲ ಬೇಕು (B. 5, 70). ಕಬ್ಬಿನ ಬೇರುಗಳು (ಮೋರಟ, ಐಕ್ಷವಮೂಲ Si. 335). ಬೇರು ಇಲ್ಲದ ವೃಕ್ಷವೇಱಿ ನೋಡುವದೇನು? (Dp. 167). ಬೇರು ಇದ್ದರೆ ನಾರು ಸಿಕ್ಕೀತು.—ಬೇರು ಬಲ್ಲವಗೆ ಎಲೆ ತೋಱಿಸೋದು ಯಾಕೆ?—ಬೇರು ಹೋದ ಮೇಲೆ ಮರದ ಯೋಚನೆ ಯಾಕೆ? (Prvs.). — ಬೇರಿನ ಪಲ್ಲೆ. Roots used as vegetables (My.). — ಬೇರುಕಡಲೆ. = ನೆಲಕಡಲೆ. (St. & Pl.). — ಬೇರುಗೊಲೆ. -ಕೊಲೆ. Destruction of the root, utter ruin (Bh. 7, 19, 22). — ಬೇರು ಧರಿಸಲೆ (= ಧರಿಸಲೆ). With the roots, by the roots (My.). ಕಬ್ಬು ಸೀಯೆನ್ದು, ಬೇರು ಧರಿಸಲೆ ತಿನ್ನ ಬಾರದು (Prv.). — ಬೇರು ಬಿಡು. To begin to root (My.). ಒನ್ದು ತೊಲೆಕೆ ಕೆಳಗೆ ನೆಲದೊಳಗಿಱಿದು ಬೇರು ಬಿಡುತ್ತದೆ (B. 3, 85). — ಬೇರುವೆರಸಿ. -ವೆರಸಿ. With the roots (My., also ಬೇರುವರಿಸೆ, ಬೇರುವೆರಸಲೆ). — ಬೇರು ಸಹ. = ಬೇರು ವರಿಸೆ (ಸಮೂಲ Čb.; My.). — ಬೇರು ಸಹಿತ. = ಬೇರು ಸಹ. (Bp. 57, 16; My.).

ಬೇರುಗ bêr-uga. (Šmd. 240). A man who deals in, or sells, roots.

ಬೇರುಣ್ಡ bêrunda. Tbh. of ಭೇರುಣ್ಡ. (My.).

ಬೇರುಷ್ಟ bêrushta. See Mr. s. ಗೇರ ಕಾಯ್.

ಬೇರೋಜು bê-rôju. Without wages for a day.

ಬೇರೋಜುಗಾಱ bêrôju-gâṟa. A man without employment, an unemployed man (My.). ಬೇರೋಜುಗಾಱ ಸರ್ಮುಖ್ತ್ಯಾರ (is entirely his own master, Prv.).

ಬೇರೋಜುದಾರ bêrôju-dâra. = ಬೇರೋಜುಗಾಱ. (My.).

ಬೇಱ್ bêṟ. ಬೇಱು. = ಬೇಱ್ 2. Separation; the state of being separate, apart, or different (ಇತು Nn. 164; T. ಎೞು, ವೇಱು, ವೇಱ್ದು; M. ವೇಱ್, ವೇಱು; Tĕ. ವೇಱು; cf. ಬೀಱು 2; Tĕ. ಬಿಱು, to separate or fly off, as a splinter, etc.; ಎೞು, to be separated, loosened; T. ಎೞು, to be split, cleft = ಎಱಿ; to be alone; Tĕ. ಎೞು, to split, burst asunder). — ಬೇಱು ನುಡಿ. To express separation, etc. ಬೇಱು ನುಡಿವೆಡೆಯೊಳ್ ಆ ವ್ಯಕ್ತಿ ಪೃಥಕ್ ಎನಾ ಅಕ್ಷರಮೆಮ್ಬ ಪೆಸರ್ಗಳಕ್ಕು (Mr. 534). — ಬೇಱು ಮಾಡು. To separate, to set apart. ಬೇಱು ಮಾಡುವುದು (ಹಿ, ಪೃಥಕ್ Nn. 163).

ಬೇಱೆ bêṟĕ. (= ಬೇಱ್). Separation, etc.;—separate, apart, different, other, else; separately, etc. (My.; ಅನ್ಯವಾಗಿ Šmd. 74 Cm.; Tĕ. ವೇಱೆ; T., M. ವೇಱೆ); further (Bp. 36, 28; ತಿರ್ದಿ ನರನ್ ಉದ್ಯಮಿಸೆ ಬೇಱೆಟ್ಟಿಂ Šmd. 280). ಬಗೆಯೊಳ್ ಪೊದತೊನ್ದಿಸ್ ಅಣಂ ಬಗೆಯಲ್ಗಡ ನಿನಗೆ ಸುಮತಿ ಬೇಱಾಂ ಬೇಱೆಂ (Šmd. 277; Kâvy. 1, 5, 39). ಬೇಱೆಲ್ಲಿ? (Bp. 57, 70). ಬೇಱೇಂ ಗತಿಗಳುಣ್ಟೇ? (51, 6). ಬೇಱೆ ಪಾಣ್ಡವರಿರಲಿ! ರಾಯನ ನೂಱು ಮಕ್ಕಳು ಪುರವನಾಳಲಿ! ಬೇಱೆ ಕೌರವರಿರಲಿ! ಪಾಣ್ಡವರಾಳಲಿ ಇಭಪುರಿಯ! ನೂಱಿರೊಡನೆ ಅಯ್ವರನು ಧರಿಸಿರಲಾಱದು ಪುರಿ (Bh. 1, 8, 3). ಬೇಱೇನು? (2, 13, 24). ನೃಪತಿಲಕರಿದ್ದರು ಬೇಱೆ ರಚಿಸಿದ ರಾಜಭವನದಲಿ (2, 13, 14). ಗುಡಿಯ ಬೋದಿಗೆ ಕಲ್ಲು, ನಡುರಂಗ ಕಾ ಕಲ್ಲು, ಕಡೆ ಮೂಲೆ ಸೆರಗು ಕಾ ಕಲ್ಲು; ವರವನು ಕೊಡುವಾತ ಬೇಱೆ (Sp.). See Čpr. 3, 16; 8, 42; J. 3, 18. — ಬೇಱೂರ್. -ಊರ್. ಬೇಱೂರು. Another town or village (Čpr. 5, after 66; V. 9, after 71; B. 3, 72; see Sp. s. ಡಾಯಾಱು). — ಬೇಱೆ ಬೇಱೆ. rep. Separately, one by one, severally; separate, different; various, many (ಪೃಥಗರ್ಥಂ Šmd. 392; ಪ್ರತ್ಯೇಕ 255 Cm.; ಒನ್ದೊನ್ದಾಗಿ 353 Cm.; ಪರಸ್ಪರ, ಮಿಥಸ್, ಅನ್ಯೋನ್ಯ, ಇತರೇತರ Hlâ.; ಇತರೇತರ, ಅನ್ಯೋನ್ಯ, ಪರಸ್ಪರ Mr. 437). ಹಿಮವತ್ ನಿಷಧ ವಿನ್ಧ್ಯ ಮುನ್ತಾದವುಗಳೆಲ್ಲಾ ಪ್ರಸಿದ್ಧಗಳಾದ ಆಯಾ ಬೆಟ್ಟಗಳ ಬೇಱೆ ಬೇಱೆ ಹೆಸರುಗಳು (Si. 115). ಬೇಱೆ ಬೇಱೆ ರೂಪವುಳ್ಳದು (ವಿವಿಧ, ಬಹುವಿಧ, ನಾನಾರೂಪ, ಪೃಥಗ್ವಿಧ 279). ಒನ್ದೊನ್ದು ಕಟ್ಟಿಗೆಯನ್ನು ಬೇಱೆ ಬೇಱೆ ಮಾಡಿ ಮುಱಿಯ ಹೇೞಿದನು (B. 2, 30). ಬೇಱೆ ಬೇಱೆ ಮಾಡು (ಹಿಂಚು G.). See Bp. 51, 6; Bh. 2, 18, 9. 12; Râv. 5, after 22; 6, after 11; J. 2, 27; Si. 170. 237. 284. — ಬೇಱೆ ಮಾಡು. To separate (B. 4, 27; G. 382. 532). ಬೇಱೆ ಮಾಡಿದರೆ ನಾಱೋದು ತಪ್ಪೀತೇ? (Prv.). 2, to change, to alter (v. t., My.). — ಬೇಱೆಯಾಗು. -ಆಗು. (also ಬೇಱಾಗು, see Šs. s. ಮೆಳೆ). To become separate, to separate (v. i.); to be removed or withheld; to become different, changed, etc. ಬೇಱೆಯಾಗಿರುವಿಕೆ (ಪ್ರಕಾರ, ಭೇದ Si. 448). ಇಬ್ಬರು ಮಕ್ಕಳು ತಲೆಗೆ ಅಯ್ದು ಸಾವಿರ ರೂಪಾಯಿ ಪಾಲು ಹಂಚಿ ಕೊಟ್ಟು, ಬೇಱೆ

Digitized by Google

ಯಾದರು (B. 2, 25). ಬೇಱೆಯಾದರೂ ಹಾಱ್ಯಾಡೋದು ತಪ್ಪಲಿಲ್ಲ (Prv.). See Si. 47. 183. 257. — ಬೇಱೆವೇಱೆ. = ಬೇಱೆ ಬೇಱೆ. (Čpr. 7, after 120). — ಬೇಱೊನ್ದು. -ಒನ್ದು. Another thing, something else; another. ಪುರೋಚನನು ತಾನೊನ್ದು ನೆನೆದರೆ ದೈವಗತಿ ಬೇಱೊನ್ದ ನೆನೆದುದು (Bh. 1, 8, 87). ಆ ಕುಮತಿ ಬೇಱೊನ್ದು ಉಪಾಯಮಂ ಚನ್ತಿಸಿ (J. 28, 29). ಬೇಱೊನ್ದು ದಿನ (ಅನ್ಯೇದ್ಯುಸ್); ಇನ್ನು ಬೇಱೊನ್ದು ದಿನ (ಇತರೇದ್ಯುಸ್ Si. 477). See Šmd. 181; Čpr. 5, after 59; Bp. 41, 17; 47, 50; 48, 28; 55, 28; B. 2, 4. — ಬೇಱೊಬ್ಬ. -ಒಬ್ಬ. Another man; another (Si. 258; B. 4, 49).

ಬೇರ್ bêr. 1. = ಬೇರ್, etc. — ಬೇರ್ಗೊಲೆ. -ಕೊಲೆ. = ಬೇರುಗೊಲೆ. Root-killing: entire destruction or ruin (J. 7, 40). — ಬೇರ್ವರೆ. -ಪರೆ. A root, or roots, to spread (Čpr. 3, 20; Bp. 38, 42; Šîv. 2, 69). — ಬೇರ್ವೆರಸು. -ಬೆರಸು. Together with the root or roots, from the root. ಬೇರ್ವೆರಸು ಕಾಯ್ತ ಪಲಸು, ಎಳನೀರ್ವೊಱಲಂ ಕಱೆವ ತೆಂಗು (Šmd. 81).

ಬೇೞ್ bêṛ. 2. = ಬೇಱ್. — ಬೇರ್ಪಡು. To separate; to disjoin (ಎರಲಂ ಮಾಡು Šmd. 336; ಬೇಱ್ ಮಾಡು Mdb. Cm.; ಕಳೆ Mdb. Cm. in vritti 98; see 163). ಬೇರ್ಪಡಿಸುವ ಭಾವಂ (ವಿಧುರ Čt. I, 24). — ಬೇರ್ಪಡಿಸು. To make a difference; to distinguish (J. 6, 42); to separate. — ಬೇರ್ಪಡಿಸುಹ. Making a difference, etc. (ಭೇದ, ಅನ್ತರ Nr.). — ಬೇರ್ಪಡು. To be separated, to separate (ವಿವಿಕ್ತ Šmd. Dh.; Čpr. 2, 42). 2, to be spread out, opened, unfolded or exposed (ವಿವರ Šmd. Dh.). ಬೇರ್ಪಟ್ಟಂ (Šmd. 79. 217). 3, to become different, to be altered (*only* in Si.). ಬಣ್ಣವೇ ಮೊದಲಾಗುಳ್ಳ ಬೇರ್ಪಟ್ಟಿರುವದು (ವರ್ಣಾದಿಭೇದ Si. 321). ಬೇರ್ಪಟ್ಟವನು (ಇತರ, ಅನ್ಯ 454).

ಬೇಲ bêla. = ಬೆಳಲ, etc. (ಕಪಿತ್ಥ, ದಧಿತ್ಥ, ಗ್ರಾಹಿ, ಮನ್ಮಥ, ದಧಿಫಲ, ಪುಷ್ಪಫಲ, ದನ್ತಶಠ Si. 126; see Mr. 117 s. ಯಾಱ; My.). ಆನೇ ಹಿನ್ದೆ ಬೇಲದ ಕಾಯಿಯಾ ಹಾಗೆ (also ಆನೆ ನುಂಗಿದ ಬೇಲದ ಕಾಯಿಯಾ ಹಾಗೆ, Prv.). See Šîv. 3, 32; ಆನೆ-, ನಾಯಿ-, ನಾಯ್-, ಹುಳಿ-.

ಬೇಲಿ bêli. A hedge, a fence (ಆವೇಷ್ಟಕ, ವೃತಿ Hlâ.; ಆರಘಟ್ಟಕ, ವೃತ್ತಿ Mr. 192; ತೋಹು Mr. 380; C.; B. 5, 20. 115. 302; T., M. ವೇಲಿ). ಯಜ್ಞಶಾಲಾರಕ್ಷಣಾರ್ಥವಾಗಿ ಸುತ್ತು ಬರಲಿಕ್ಕೆ ಇಕ್ಕಿದ ಬೇಲಿ (ಕುಮ್ಪೆ Nr.). ಊರ ಸುತ್ತಲೂ ಹಾಕಿರುವ ಬೇಲಿ ಮುನ್ತಾದ ತಡೆಗಳು (ಪ್ರಾಚೀನ Si. 107). ಬೇಲಿಯೆದ್ದು ಹೊಲ ಮೇಯುವಾಗ್ಗೆ ಕಾಯೋದು ಯಾರು?—ಗೋಡೇ ಹಾಱುವವ ಬೇಲೀ ಹಾಱನೇ?—ಹೋಲಿಯವನ ಹೊಲಕ್ಕೆ ಬೇಲಿಯುಣ್ಟೇ?—ಬೈರಾಗಿಗೆ ಬಯ್ಲಾದರೇನು? ಬೇಲಿಯಾದರೇನು? (Prvs.). See Prv. s. ಜೋಲಿಗಾಱ. — ಬೇಲೂರು. -ಊರು. N. of places (My.).

ಬೇವಸ bêvasa. (fr. ಬೇ 1). Sorrowful thought, grief, anxiety (ಚಿನ್ತೆ Čt. I, 58. 95; II, 20; ದುಮ್ಮಾನ, ಉಮ್ಮಳ Ša.; ಚನ್ತಿಪುದು, ತನ್ನೊಱಿಪುದು Kk. 52). See Abh. P. 13, 125; 14, 184; 15, 65; Šîv. 2, 25.

ಬೇವಾರಸು bê-vârasu. Without heir, master or proprietor (My.; Br., Mhr., H.).

ಬೇವು bêvu. The neem tree or margosa tree, Melia azadirachta Lin. (ಅರಿಷ್ಟ, ಸರ್ವತೋಭದ್ರ, ಹಿಂಗುನಿರ್ಯಾಸ, ನಿಮ್ಬ, etc. Nr.; ನಿಮ್ಬ, ಅರಿಷ್ಟ, ಪಿಚುಮನ್ದ Mr. 115; C.; T., M. ವೇಪ್ಪು, ವೇಮ್ಬು; Tĕ. ವೇಮು). ಬೇವಿನ ಗಿಡ (ಅರಿಷ್ಟ, etc. Si. 136). ಬೇವು ಸೀಯಾಗದು, ಸಕ್ಕರೆ ಕಹಿಯಾಗದು (Prv.). See Bp. 3, 75; 60, 49; Šîv. 3, 32; B. 5, 41; ಆರೆ-, ಕಱಿ-, ಗನ್ಧ-, ಗರಡ-, ನೆಲ-; Sp. s. ಬಯ್ಗಿಡು.

ಬೇಷು bêshu. Good, proper, well (My.; Mhr., H. ಬೇಶ).

ಬೇಸಕಿ bêsaki. = ಬೇಸಗೆ, etc. (B. 5, 141. 205).

ಬೇಸಗೆ bêsagĕ. (fr. ಬಿಸು 1). = ಬೇಸಕಿ, ಬೇಸಿಗೆ. The hot season (from the middle of March to the middle of June, My.; ನಿದಾಘ, ಗ್ರೀಷ್ಮ Hlâ.; ನಿದಾಘ Mr. 72; ಮುಕೀರ, ಗ್ರೀಷ್ಮ Nn. 91; T. ವೇನಲ್, ವೇನಿಲ್, see ಬೇಗೆ, ಬೇನೆ; Tĕ. ವೇಸಗಿ, ವೇಸಂಗಿ, ವೇಸಲಿ, ವೇಸವಿ; Tĕ. ವೇಡಿ, ವೇಡಿಮಿ, heat). See Râghc. 17, 64; Rśv. 5, 32. 46; J. 13, 10; 15, 3. 18; 21, 36. — ಬೇಸಗೆಕಾಲ. The hot weather (My.; ಉಷ್ಣೋಪಗಮ, ಗ್ರೀಷ್ಮಋತು G.). — ಬೇಸಗೆಗಾಲ. = ಬೇಸಗೆಕಾಲ. (Abh. P. 7, 85). — ಬೇಸಗೆಪಯಿರು. Vegetables grown in the hot weather (My.).

ಬೇಸಗೆ bêsagĕ. Tbh. of ವೈಶಾಖ (Šmd. 340. 357; Šm. 20).

ಬೇಸತ್ತು bêsattu. P. p. of ಬೇಸಱ್ 1.

ಬೇಸದರ್ bê-sadar. That is not the heading. See ಸದರ್-.

ಬೇಸಱ್ bêsaṟ. ಬೇಸಱು. 1. To grow weary or fatigued; to get tired of, to be disgusted, to be vexed (ಅಸಱ್, ಅಲಸ್ಯ Šmd. Dh.; C.; Tĕ. ವೇಸರು, ವೇಸಾರು; T. ವೇಱಾರು). P. p. ಬೇಸತ್ತು (Šmd. 285 Cm.; Čpr. 1, 76; C.). See Bp. 18, 7. 51; 28, 9; 38, 31; Bh. 1, 8, 45; J. 2, 62; 16, 26; 22, 30; B. 3, 125.

ಬೇಸಱ್ bêsaṟ. ಬೇಸಱು. 2. = ಬೇಸಱ. Weariness, fatigue; disgust, vexation, dispiritedness (Čpr. 8, after 4 & 79; J. 2, 43; 17, 1; 18, 39; My.; Tĕ. ವೇಸಟ; T. ವೇಱ್ಱ್ಮೈ). ಬೇಸಱ್ಗೆನ್ನಾ, ಹಾಸರಕತ್ತೆ ಅಡಿಸಿದ (Prv.). — ಬೇಸಱಾಗು. -ಆಗು. = ಬೇಸಱ್ 1. To grow weary or fatigued; to get tired of, to feel dislike, etc. ರಾಜನು ತನ್ನ ಎಱ್ಪನೇ ಮಗನ ಮೇಲೆ ಬೇಸಱಾಗಿ (B. 5, 47). ನಿನಗೆ ಬೇಸಱಾಗುವ ಕೆಲಸಾ ನಾವು ಹೇಱಲಾಱೆವು (5, 134). 2, to become a matter of dislike, etc. (see ಬೇಸಱ). — ಬೇಸಱುಗೊಳ್ಳು. -ಕೊಳ್ಳು. = ಬೇಸಱಾಗು. (My.). ತನ್ನ ಉದ್ದೇಶವನ್ನು ಸಿದ್ಧಿಗೆ ಒಯ್ಯ ಬೇಕಾದರೆ ಎಷ್ಟೋ ಸಂಕಟಗಳು ತಟ್ಟಿದರೂ ಬೇಸಱುಗೊಳ್ಳುತ್ತಿದ್ದಿಲ್ಲ (5, 207). — ಬೇಸಱುನುಡಿ. (Šmd. 217). A word of disgust; a disgusting word.

ಬೇಸಱ bêsaṟa. = ಬೇಸಱ್ 2. (Bp. 2, 42; 14, 8; C.; ಉದಾಸ G.). ಒನ್ದೇ ಕಡೆಯಲ್ಲಿ ಕುಳಿತು ಕುಳಿತು, ನಿಮಗೆ ಬಹಳ ಬೇಸಱ ಬನ್ದಿದ್ದೀತು (B. 3, 67). ನಿದ್ದೆಯ ಹೊತ್ತಾಯಿತನ್ದರೆ... ತನ್ನ ಕೆಯ್ ಕಾಲು ಎತ್ತಿ ಕೊಳ್ಳುವದು ತನಗೇ ಬೇಸಱವಾಗುತ್ತದೆ (4, 134). ಬೇಸಱ ಹುಟ್ಟಿ (4, 154). ಬೇಕನ್ತ ಬಯಸಿದ್ದು ಬೇಸಱವಾದೀತೇ? (Prv.). ಆಸನದಲುಮ್ಮುವದು, ಸೂಸುವದು ಬಾಯಲ್ಲಿ, ಬೇಸಱದ ಹೊತ್ತು ಕೊಟ್ಟಿಹುದು (a syringe or fountain, Sp.). — ಬೇಸಱಗೊಳ್ಳು. -ಕೊಳ್ಳು. = ಬೇಸಱುಗೊಳ್ಳು. (B. 5, 169; My.).

ಬೇಸಱಕೆ bêsaṟakĕ. = ಬೇಸಱಿಕೆ. (B. 5, 231. 282).

ಬೇಸಱಿಕೆ bêsaṟikĕ. = ಬೇಸಱಕೆ. Weariness, etc. (= ಬೇಸಱ್ 2; Bh. 2, 2, 103; My.; ತ್ರಾಸ G.).

ಬೇಸಱಿಸು bêsaṟisu. = ಬೇಸಱ್ 1. (Čpr. 4, 34; Dp. 119, 1; My.).

ಬೇಸಾಯ bêsâya. Tbh. of ವ್ಯವಸಾಯ. Agriculture (My.). ಬೇಸಾಯ ಮಾಡಿದವ ಬೇಗ ಸಾಯ (Prv.).

ಬೇಸಾಯಗಾಱ bêsâya-gâṟa. An agriculturist, a farmer (My.; ಕ್ಷೇತ್ರಾಜೀವ, ಕರ್ಷಕ, etc. Si. 300).

ಬೇಸಿಗೆ bêsigĕ. = ಬೇಸಗೆ, etc. (C.; B. 2, 48; J. 15, 2; 17, 1).

ಬೇಸು bêsu. = ಬೇಯಿಸು, etc. To consume with fire, to burn up (J. 15, 17). 2, to prepare by

Digitized by Google

boiling, etc. (C.). ತಿನ್ನುವದಕ್ಕೆ ಬಿಸಿ ಬಿಸಿ ರೊಟ್ಟಿಗಳನ್ನು ಬೇಡುತ್ತಿ; ಬೇಸುವದಕ್ಕೆ ತಿಳಿಯಲಿಲ್ಲ, ಯಾಕೆ? (B. 5, 186).

ಬೇಸ್ತವಾರ bêsta-vâra. Tbh. of ಬೃಹಸ್ಪತಿವಾರ. (My.; Tĕ.).

ಬೇಸ್ತ್ವಾರ bêstvâra. = ಬೇಸ್ತವಾರ. (My.).

ಬೇಹ bêha. = ಬೇಡ್ಪು, (ಬೇಡುವ, ಬೇಕಾದ). ಬೇಹ ವಚನ (ಅಹೋ, ಒಳ್ಳಿಹ ಮಾತು Nn. 149). ಬೇಹ ನುಡಿ (ಅಹೋ Mr. 536). ಸ್ವವರ ಬೇಹ ಸಭೆ (ಅಸ್ಥಾನ 462). See Bp. 35, 43; 37, 53; Bh. 1, 8, 78; 2, 4, 4. ಬೇಹುದು (= ಬೇಡ್ಪುದು, ಬೇಕು, Bp. 3, 56; 20, 8; 49, 45; 50, 38; 61, 14; Bh. 1, 8, 18; 1, 10, 10; 3, 13, 11. 42; 7, 1, 18; J. 10, 19). ಬೇಹವರ್ (Bp. 12, 41; 28, 35; J. 2, 51).

ಬೇಹರ bêhara. 1. A very clever and able man (ಧೂರಿಬುದ್ಧಿ ಬಲಯುತಂ Bhn. 23; *cf.* ವೇತ್ತೃ?).

ಬೇಹರ bêhara. 2. = ಬೇಹಾರ (Śmd. 357 Mdb.).

ಬೇಹಾರ bêhâra. = ಬೇಹರ 2. Tbh. of ವ್ಯವಹಾರ (Śmd. 357. 368. 375; ವ್ಯವಹಾರ, ಭೋಗ Nn. 113; My.). ಕಿಸವಾಯ ಕಣ್ಣರಿ ಬಿಡದೇ ಬೇಹಾರ (Prv.).

ಬೇಹು bêhu. 1. = ಬೇಕು (Bhn. 45; *cf.* ಬೇಹ).

ಬೇಹು bêhu. 2. = ಬೇಗು 2. Spying (My.). ಬೇಹಿನ ಗೂಢಚರ (ಪ್ರಣಿಧಿ, ಚರ Si. 438). — ಬೇಹವ. -ಅವ. = ಬೇಹಿನವ. (Bh. 3, 18, 39. 42). — ಬೇಹಿನವ. -ಅವ. A spy, a scout (ಹೇರಿಗ Śmd. II; ಯಥಾರ್ಹವರ್ಣ, ಪ್ರಣಿಧಿ, ಅಪಸರ್ಪ, ಚರ, ಸ್ಪಶ, ಚಾರ, ಗೂಢಪುರುಷ Nr.; ಪ್ರಣಿಧಿ, ಚರ Nr.; My.). — ಬೇಹಿಂಸು. -ಇಂಸು. To spy (Rśv. 5, 82).

ಬೇಹುಕಾರ bêhukâra. (Śmd. 285). = ಬೇಗುಗಾರ. A spy (Bh. 1, 16, 15). ಬೇಹುಕಾರನಿನ್ ಅರಸಂ ಸುದ್ದಿಯಂ ಕೇಳಲ್ ಪಟ್ಟಂ (Śmd. 300).

ಬೇಹುಷಾರು bê-hushâru. Want of attention or care (My.).

ಬೇಳ್ bêḷ. 1. = ಬೇಳು 1. To offer into fire or with fire, as ghee, animals, etc. (ಹವಿಪ್ರದಾನ Śmd. Dh.; T. ವೇಳ್, ವೇಳ್; Tĕ. ವೇಲ್ಚಿಂಚು, to cause to offer a burnt offering). P. p. ಬೇಳ್ದು. ಬೇಳ್ದ ಹವಿ (ಹುತ, ವಷಟ್ಕೃತ Hlâ.). ಅಗ್ನಿಯಲ್ಲಿ ಬೇಳಲ್ ಪಟ್ಟುದು (ಅಗ್ನಿಹುತ, ವಷಟ್ಕೃತ Nr.). ಬೇಳ್ವ ತುತ್ತುಗಳು (ಚರು, ಹವಿಸ್ Mr. 260). ಹೋತೃವೆನ್ ಅನ್, ಅಧ್ವರಿಯಯ್ ಭ್ರಾತೃವೆ ನೀನ್, ಉದಿದ ಪುತ್ರಿಜರ್ ಯಾದವರ್, ಉದ್ಗಾತೃ ತುಟಿಸಟಿವನೆನೆ ಸುರಜಿತ್ಪುತ್ರನೆ ಪಶುವಾಗೆ ಅವೆ ಬೇಳ್ವೆವು ಮುನ್ನಂ (Śmd. 66. 412; Kâvy. I, 2, 91). See Čpr. 7, 53; J. 31, 66.

ಬೇಳ್ bêḷ. 2. (ನಿವೃದ್ಧಿ Śmd. Dh., o. r. ನಿವರ್ಧಿ).

ಬೇಳ್ bêḷ. 3. (= ಬೇಳುವೆ 2). Bewilderment, confusion, infatuation, madness (*cf.* ಬೆಗಡು, ಬೆಪ್ಪು; Tĕ. ಬೇಲು, trick, guile; ಬೇಲಿ, simple, ignorant; ಪ್ರೇ, ಪ್ರೇಗು, ವೇಡುಕ, astonishment, wonder = ಆಶ್ಚರ್ಯ, ವಿಸ್ಮ; T. ವೇಲ, a man infatuated or possessed = ಪೆಯಾಟ್ಪಾಳ, see ಪೆದ್; Mhr. ವೇಡ, madness; folly; a foolish act; a violent and unreasonable passion or desire after; *cf.* ಮೆಳ್). — ಬೇಳಾಗು. -ಆಗು. To grow bewildered, etc. (V. 9, 81; 30, 31). — ಬೇಳ್ಮಾಡು. To cause to grow bewildered, etc., to infatuate (ಮರುಳ್ಗೊಳಿಪುದು Kk. 72; Śm. 51).

ಬೇಳಮ್ಬ bêḷamba. 1. (fr. ಬೇಮ್ 1). Desire (J. 4, 57; 30, 19. 31; My.; T. ವೇಡ್, ವೇಳ್, to desire; T., M. ವೇಳ್, desire).

ಬೇಳಮ್ಬ bêḷamba. 2. (fr. ಬೇಳ್ 1). (An oblation with fire): destruction of human life (in fire, ಉಪಹತಿ Bhn. 20; Bh. 1, 8, 91).

ಬೇಳಿ bêḷi. = ಬೇಳೆ 2. — ಬೇಳಿಮಣಿ. = ಬೇಳೆಮಣಿ. ತಾಳಿದೋಳಿ ಯನ್ನಿಟ್ಟು, ಬೇಳಿಮಣಿಯನೆ ಕಟ್ಟಿ, ವೇಳ್ಯವನ್ನದಾತು ನಡವವಳು ದೊರೆವದು ತೂಲಿಯ ಕರುಣ (Sp.).

ಬೇಳು bêḷu. 1. = ಬೇಳ್ 1. P. p. ಬೇಳ್ (J. 31, 67). ಬೇಳುವರ್ (22, 31).

ಬೇಳು bêḷu. 2. (Mhr. ವೇಲ = ವಲ್ಲಿ, a creeping or climbing plant). — ಬೇಳುಬಳ್ಳಿ. A parasitical threadlike plant, Cassyta filiformis Lin. (St. & Pl.).

ಬೇಳುವೆ bêḷuvĕ. 1. (fr. ಬೇಳು 1). An oblation with fire, a burnt-offering (Bh. 1, 8, 84; T., M. ವೇಳ್ವಿ, ವೇಳ್ವಿ; Tĕ. ವೇಲಿಮಿ, ಪ್ರೇಲ್ಮಿ).

ಬೇಳುವೆ bêḷuvĕ. 2. (= ಬೇಳ್ 3). Bewilderment, etc. — ಬೇಳುವೆಯ ಬೂದಿ. Ashes of infatuation, a powder that confuses the mind (J. 26, 15).

ಬೇಳೆ bêḷĕ. 1. (fr. ಬೇಲ್). Splits, halves: split pulse (C.; B. 4, 32; Tĕ. ಬೇಡೆ). ಉದ್ದಿನ ಬೇಳೆ (Si. 313). ಹೆಸರಿನ ಬೇಳೆ (495). ತೊವ್ವುತ್ತಲ ಮೇಲೆ ತೊಗರೀ ಬೇಳೆ.—ವೇಳೇ ಸಾಬಾದರೆ ಬೋದಿಗೆ ಆಗದೇ? (Prvs.). **2,** the half of a seed of the guñja or Abrus precatorius, or the half of a ಪಾಗ or ಹಾಗ (My.; Tĕ. ಬೇಡೆ). ಒಕ್ಕಸಲು ಬೇಳೆಯೆರಡುಮುನ್ ಒನ್ದು ಪಾಗಂ (Mr. 355). ಗುಲಗಂಜಿಯ ಬೇಳೆತೂಕ ಮೊದಲು ಹಣವಷ್ಟತೂಕದ ವರಗೂ ಇರುತ್ತೆ (Si. 328). ಹಣಕ್ಕೊನ್ದೀಸಮ್, ಇಪ್ಪಣಕ್ಕೊನ್ದು ಬೇಳೆಯು, ತ್ರಿಣಯನ ಮಾಟವಾದರಕ್ಕಸಾಲೆಯು ಬೋನೆಯದೆ ಬಿಡನು (Sp.). See ಇಪ್ಪೇಳೆ. **3,** the sign for half a pâga is = (ಎರಡು ಬೇಳೆ Mr. 356; My.). — ಬೇಳೆಕಾಳಿ. (ಹಣಕ, ಹರಿಮನ್ಯ್ಮಕ Si. 304). — ಬೇಳೆಕಾಯಿ. A half of any pulse, but especially of tŏgari (B. 4, 65; My.).

ಬೇಳೆ bêḷĕ. 2. = ಬೇಳಿ. A common herb, used as a potherb, Chenopodium album Lin. (Z.; T. ವೇಳೈ, M. ವೇಳೆ, a small shrub, edible and medicinal, Cleone pentaphylla, and other kinds; My.). See ನಾರುಬೇಳೆ; ಳೆ, ನಾರುವ ಬೇಳೆ. — ಬೇಳೆಪುಂಗಳೆ. N. of a plant (ತಿಲುವಿಕಿ Mr. 133). — ಬೇಳೆಮಣಿ. = ಬೇಳಿಮಣಿ. Beads of the bêḷĕ shrub (My.).

ಬೇಳ್ತನ bêḷtana. (fr. ಬೇಳ್ 3). The state of being bewildered, etc. (Čpr. 8, 60; Abh. P. 3, 48; V. 3. after 31; 14, 37).

ಬೇಲ್ bêl. = ಬೇಡು 1. ಬೇಡುವಂ or ಬೇಡ್ಪಂ (Śmd. 28). ಬೇಡ್ಪಂ (217. 275; ಎರವಂ Čt. I, 27). ಬೇಡ್ಪ (Čpr. 3, 103) = ಬೇಹ, q. v. ಬೇಡ್ಪೊಡೆ ನೀನೊಳ್ಳಿದಯ್ (Śmd. 298). ಬೇಡ್ಪರ್ (Bp. 22, 54; 43, 60; 45, 37). ಬೇಡ್ಪುದು (Čpr. 3, 12. 41) = ಬೇಹುದು, q. v. ನುಡಿ! ನುಡಿಯೆ ಮಿಗೆ ಬೇಡ್ಪುದು, ಬೇಡ್ಪುದು! (Śmd. 272). ಬಗೆಗೊಂಡದ್ದೂಯಂ ಸಲಿಸವೇಡ್ಪುದು (Rśv. 13, 26). ಬೇಡ್ಪನಿತು (Abh. P. 3, 118). ಕೊಡವೇಡ್ಪುದು (J. 29, 16). ಪಾಲಿಸವೇಡ್ಪುದು (29, 33). ಬೇಡ್ಕುಂ (= ಬೇಡ್ಕು, ಬೇಕು). ಎನಲ್ವೇಡ್ಕುಂ (Śmd. 256). ಅಳ್ಕಲ್ವೇಡ್ಕುಂ (Rśv. 13, 22). ಬೇಡ್ಕು (= ಬೇಡ್ಕುಂ, etc., Bp. 2, 8; 22, 41; 37, 5).

ಬೈ bey. For *Kannada* words with this initial syllable in MSS. or books see ಬಯ್.

ಬೈಕ baika. Tbh. of ಭೈಕ್ಷ (Śmd. 346. 357; T. ಪೈಕ್ಷ; M. ಪೈಕ್ಕ). — ಬೈಕಂಗೊಳ್. -ಂ-ಕೊಳ್. To beg alms (Kâvy. III. 2, 82).

ಬೈರವ bairava. Tbh. of ಭೈರವ (Śmd. 339. 357; My.). See ಕಾಯಿ.

Digitized by Google

ಬೈರಾಗಿ bairâgi. Tbh. of ವೈರಾಗಿ. (My.; Br.; Mhr.). An individual of a class of mendicants. ಬೈರಾಗಿಗೆ ಬಯ್ಲಾದರೇನು? ಬೇಲಿಯಾದರೇನು? (Prv.).

ಬೈಷ್ಕಾರ baishkâra. Tbh. of ಬಹಿಷ್ಕಾರ. (My.).

ಬೈಸಿಕೆ baisikĕ. The act of sitting down on one's legs and when rising pushing one of them suddenly forwards (a kind of gymnastics, used also as a punishment at school, My., also ಬೈಸಿಗೆ; Mhr. ಬೈಸಣೇಂ, to sit); a certain movement in acting or dancing (ಚಾರಿ Mr. 82). — ಬೈಸಿಕೆಗೆಯ್. To perform ಬೈಸಿಕೆ (Bh. 8, 21, 13).

ಬೊಕ್ bŏk. = ಬೊಕ್ಕ. — ಬೊಕ್ ಬೊರಲು. = ಬೊಕ್ಕ ಬೋರಲು. (My.). — ಬೊಕ್ ಬೋರಲು. = ಬೊಕ್ ಬೊರಲು. (My.).

ಬೊಕ್ಕ bŏkka. (fr. ಬೊಗ್ಗು 1). With a turn, bend or bow. — ಬೊಕ್ಕ ಬೊರಲು. = ಬೊಕ್ಕ ಬೋರಲು. — ಬೊಕ್ಕ ಬೋರಲು. (a kind of reiteration). Headlong, flatwise (My.). ಬೊಕ್ಕ ಬೋರಲು ಬೀಳು. (My.). — ಬೊಕ್ಕ ಬೋರ್ಲ. = ಬೊಕ್ಕ ಬೋರಲು. ಬೊಕ್ಕ ಬೋರ್ಲ ಬಿದ್ದು (B. 4, 61). — ಬೊಕ್ಕ ಬೋರ್ಲು. = ಬೊಕ್ಕ ಬೋರ್ಲ. (My.).

ಬೊಕ್ಕ bŏkka. 1. Bare, uncovered, without hair (Mhr. ಬೋಡಕಾ, see ಬೋಡ). — ಬೊಕ್ಕತಲೆ. -ತಲೆ. A bare head (B. 5, 298).

ಬೊಕ್ಕ bŏkka. 2. (= ಬೊಚ್ಚು). A toothless man (My.; Tĕ. ಬೊಕ್ಕ, ಬೋಸಿ; T. ಪೊಕ್ಕೈ; Mhr. ಬೋಳಕೇಂ, a toothless mouth; see ಬೋಡ). ಬೊಕ್ಕನಾದರೂ ಟಕ್ಕುತನ ಬಿಡಲಿಲ್ಲ (Prv.). — ಬೊಕ್ಕಬಾಯಿ. A toothless mouth (My.). — ಬೊಕ್ಕಿ. A toothless woman (My.).

ಬೊಕ್ಕ bŏkka. 3. = ಬಕ್ಕ. See ಕೂಳು-.

ಬೊಕ್ಕಣ bŏkkaṇa. A pocket in a coat, a betel pouch, a beggar's bag, a horse's gram bag (My.; Tĕ. ಪೊಂಕಣ, ಪೊಂಕನ, ಬೊಕ್ಕಣ; T., M. ಪೊಕ್ಕಣ; Tĕ. also ಬೊಕ್ಕಸೆ; T. also ಪೊಕ್ಕಣಿ; cf. ಪೊರೆ 5, ಪೊರ್ 1).

ಬೊಕ್ಕಣ bŏkkaṇa. Tbh. of ಭಕ್ಷಣ. (My.).

ಬೊಕ್ಕಸ bŏkkasa. = ಬಕ್ಕಸ. (A bundle, Mhr. ಬೋಕಸಾ, ಬೋಚಕಾ; Br. ಬುಕ್ಕಿಸೆ, ಬೊಕ್ಕಿಸಾ, ಬೊಕ್ಕಿಸೆ, H. ಬಕ್ಸಾ; Tĕ. ಬೊಕ್ಕಸ, a money bag; a treasury); a treasury (of a king, of a rich man, or of a temple, My.). ಬೊಕ್ಕಸದಲ್ಲಿ ಹಣ ಉಕ್ಕಿಬಿದ್ದರೆ ಅಕ್ಕ ಸಾಕ್ಕಾಳೇ? (Prv.). — ಬೊಕ್ಕಸದ ಮನೆ. A treasury (Bp. 31, 10; My.). — ಬೊಕ್ಕಸದವನು. -ಅವನು. A treasurer (Bp. 47, 34; My.).

ಬೊಕ್ಕೆ bŏkkĕ. 1. (= ಬೊಬ್ಬೆ 1). A pustule, a pimple, a blister (in the face, the mouth, or on any other part of the body, My.; Tĕ. ಪೊಕ್ಕು, M. ಪೊಕ್ಕುಳ; see ಪುಗುಳ್; cf. Sk. ಸ್ಫೋಟಕ, a pustule). ಬೊಕ್ಕೆಯೆದ್ದರೆ ರೊಕ್ಕ ಬನ್ದೀತೇ? — ಬೊಕ್ಕೆಗೆ ಮದ್ದು ಬೋರೇ ಹಣ್ಣೇ? (Prvs.).

ಬೊಕ್ಕೆ bŏkkĕ. 2. Any round small hole made by rats, etc. (My.; Tĕ. ಬೊಕ್ಕೆ, ಬೊರಿಯೆ, ಬೊಱಿಯೆ, ಬೊಟ್ಟೆ; Mhr. ಭೋಕ, Sk. ಭೂಕ, a bore, hole; cf. ಪೊಟ್ಟರೆ?). See ಸೀರು-.

ಬೊಗರಿ bŏgari. = ಬುಗರಿ, etc. ಚೆಣ್ಡು ಬೊಗರಿಯುನು ಆಡಿ (Dp. 50). ಬೊಗರೀ ಹಾಗೆ ತಿರುಗಿದರೂ ಹಗರತ್ತ ಹೋಗಲಿಲ್ಲ (Prv.). ಲಲಿತೇನ್ದ್ರನೀಲದಿಂ ಸವೆದ ಬೊಗರಿಯ ಸಿರಿ (Râghč. 17, 66). See ನುಣ್ಬೊಗರಿ.

ಬೊಗಸಿ bŏgasi. = ಬಗಸೆ, etc. (ಅಂಜಲಿ, ಅಂಜಲಿಪುಟ, ಪುಟ G.; M. ಪೊತನ್ನ, as much as can be held by two hands; ಪೋಚ್ಚೆ, a handful; Mhr. ಬುಚಕಾ, the hand inverted with the fingers extended, so as to take up bran, flour, etc.).

ಬೊಗಸೆ bŏgasĕ. = ಬೊಗಸಿ, etc. (C.). ಕಿಡಿ ಬಿದ್ದರೂ ಕೆಯ್ಯೊಳಗೆ ಬೀಡಲೆನ್ದು, ಬೊಗಸೆಯ ಮಾಡಿ (B. 4, 63). ಬೊಗಸೇ ನೀರು ಅಗಸನಿಗೆ ಯಾಕೆ? (Prv.).

ಬೊಗಳು bŏgaḷu. 1. = ಬಗುಳ್ 1, etc. To bark, etc. (My.; Mhr. ಭೋಂಕಣೇಂ). ಬೀದೀ ನಾಯಿಗಳು ಬೊಗಳುತ್ತ ಬನ್ದವು (B. 3, 19). ಉಗುದು ಉಗುದು ರೋಗ, ಬೊಗಳಿ ಬೊಗಳಿ ರಾಗ. — ದಾಯಿವ ಮನೆಗೆ ಬೊಗಳುವ ನಾಯಿ. — ಬೊಗಳುವನ ಹೊಗದರೆ ಬಿಟ್ಟಾನೇ? — ಬೊಗಳುವ ನಾಯಿಗೆ ದಡಿ ಸರಿದ ಹಾಗೆ. — ಬೊಗಳುವ ನಾಯಿ ಕಚ್ಚದು, ಕಚ್ಚುವ ನಾಯಿ ಬೊಗಳದು (Prvs.). See Prvs. s. ತಿಗಳಗಿತ್ತಿ and ನುಚ್ಚು. ಆನೆ ಬೀದಿಯಲಿ ಬರೆ ಸೋಣ ತಾ ಬೊಗಳುವದು, ಸೋಣನನ್ತಾನೆ ಬೊಗಳೆ ಆನೆಯಭಿಮಾನವೇ ಹಾನಿ (Sp.).

ಬೊಗಳು bŏgaḷu. 2. = ಬಗುಳು 2, etc. (My.).

ಬೊಗುಳು bŏguḷu. 1. = ಬೊಗಳು, etc. (My.). ಆನೆ ಕಣ್ಡು ಶ್ವಾನ ಬೊಗುಳಿದ ಹಾಗೆ (Prv.).

ಬೊಗುಳು bŏguḷu. 2. = ಬಗುಳು 2, etc. (My.).

ಬೊಗ್ಗಿಸು bŏggisu. = ಬಗ್ಗಿಸು 2. To bend (v. t., My.; Si. 212). ತಲೇ ಬೊಗ್ಗಿಸಿಕೊಣ್ಡವನು (ಅವಾಚ್, ಅಧೋಮುಖ 362).

ಬೊಗ್ಗು bŏggu. 1. = (ಬಗ್ಗು 3), ಬಗ್ಗು 2. To bend (v. i.), etc. (My.). ಬೊಗ್ಗಿದನ್ತಾದು (ಅವಾಗ್ರ, ಅವನತ, ಅನತ Si. 372). ಬೊಗ್ಗಿದವನು (ಪ್ರವಣ 421). ಬೊಗ್ಗಿದ ಅಂಗೆಯ್ (ಪ್ರಸೃತಿ 212). ತನಗೆ ಎಧೇಯರಾಗಿ ಬೊಗ್ಗಿರುವ ಸಮಸ್ತರಾದ ತನ್ನ ದೇಶಕ್ಕೆ ಸುತ್ತಲೂ ಇರುವ ಅರಸುಗಳುಳ್ಳವನು (ಅಧೀಶ್ವರ, ಪ್ರಣತಾಶೇಷಸಮನ್ತ 256). ಬೊಗ್ಗಿ ನೋಡಿದರೆ ತಗ್ಗಿನಲ್ಲಿರುವದು ಸಿಕ್ಕೀತು. — ಗಿಡನಾಗಿ ಬೊಗ್ಗದ್ದು ಮರನಾದ ಮೇಲೆ ಬೊಗ್ಗೀತೇ? (Prvs.). ಬೇಟೆಯು ಸಿಂಹದ ಎಣಿಕೆಯೊಳಗೆ ಬನ್ದ ಕೂಡಲೆ ಮುದಿಯಾಗಿ, ಬೊಗ್ಗಿ ಕೊಣ್ಡು, ಬನ್ದೇ ಹಾರಿಕೆ ಹಾರಿ, ಹಿಡಿದು ಕೊಳ್ಳುವದು (B. 4, 212).

ಬೊಗ್ಗು bŏggu. 2. The state of being bent. **2,** = ಬೊಗ್ಗುಹೆಗ್ಗಾಳೆ. (Râm. 6, 11, 16). — ಬೊಗ್ಗುಹೆಗ್ಗಾಳೆ. A bent large kâḷĕ (Č. Bp. 42, 24).

ಬೊಂಕ bŏṅka. = ಬೊಂಕೆ. See ಅನ್ದುಗ-, s. ಅನ್ದುಗು.

ಬೊಂಕನೆ bŏṅkanĕ. In a bending or bent way (ಇದಿವಾರಿ, ವಾರಿ Čb.).

ಬೊಂಕಿ bŏṅki. = ಬಂಕಿ. — ಬೊಂಕಿದೇವ. = ಬಂಕಿ-. See ಸುಂಕದ-.

ಬೊಂಕು bŏṅku. To lie or speak falsely (My.; Tĕ.; T. ಪೊಕ್ಕು, a lie).

ಬೊಂಕೆ bŏṅkĕ. = ಬಂಕೆ, etc. Gum, etc. ಸರಲದೇವದಾರುವೃಕ್ಷದ ಬಂಕೆ (ಪಾಯಸ, ಶ್ರೀವಾಸ, ವೃಕ್ಷಧೂಪ, ಶ್ರೀವೇಷ್ಟ, ಸರಲದ್ರವ Si. 227). ತಕ್ಕೋಲದ ಬೊಂಕೆ (ಕೋಲಕ, etc. 228). — ಬೊಂಕೆಕಾಯಿಗಿಡ. (ಶೇಲು, ಶ್ಲೇಷ್ಮಾತಕ, ಶೀತ, etc. Si. 129). — ಬೊಂಕೆಮಣ್ಣು. A good kind of soil (Si. 100).

ಬೊಚ್ಚು bŏččŭ. Wool, fine hair, down (My.; Tĕ.; T. ಪೊಚ್ಚು; M. ಪೂಗುಡೆ, ಪೊಡೆ; cf. ಬಣ್ಣ).

ಬೊಚ್ಚು bŏččŭ. (= ಬೊಕ್ಕ 2). — ಬೊಚ್ಚುಬಾಯಿ. = ಬೊಕ್ಕಬಾಯಿ. (My.). ಬೊಚ್ಚುಬಾಯಿಯಾದವನು ಕೆಚ್ಚೆ ಕೆತ್ತಿದ ಕಬ್ಬು ಬಯಸಿದ ಹಾಗೆ (Prv.).

ಬೊಜಗ bŏjaga. = ಬೊಜಂಗ. Tbh. of ಭುಜಗ. (ವಿಟ, etc., ಭುಜಗ Mr. 239; Bp. 40, 32. 34; Râv. 11, after 121; Tĕ.). See ಕಾಟ್ಬೊಜಗ.

ಬೊಜಗತನ bŏjagatana. Lechery (V. 29, 25).

ಬೊಜಂಗ bŏjaṅga. = ಬೊಜಗ. Tbh. of ಭುಜಂಗ (Śmd. 355; Čpr. 8, after 4 & 58; Tĕ.). See ವಗಲ-.

Digitized by Google

ಬೊಜ್ಜ bŏjja. Tbh. of ಭೋಜ್ಯ. A feast, etc.: the last śrâddha ceremony performed to deceased relatives to relieve them from the state of being prêtas, when a dinner is served up to the surviving relatives (Tu.). ಅಜ್ಜ ಸಾಕಿದ ಮಗು ಬೊಜ್ಜಕ್ಕೂ ಬಾರದು.—ನಾಯಿಯ ಬೊಜ್ಜಕ್ಕೆ ಅವೇಧ್ಯದ ಹೋಳಿಗೆ (Prvs.).

ಬೊಜ್ಜು bŏjju. = ಬೊಜ್ಜೆ. A pot-belly (My.). ಬೊಜ್ಜು ಇದ್ದರೆ ಕಜ್ಜ ಬಿಡುವದೇ? (Prv.).

ಬೊಜ್ಜೆ bŏjjĕ. = ಬೊಜ್ಜು. The belly, a paunch (Tĕ., also ಬೋಕೆ; ಪಿಚಂಡ, ಕುಕ್ಷಿ, etc., ಹೊಟ್ಟೆ Si. 209; T. ಪೊಜ್ಜೈ, a little hill; a mountain; a paunch, a paunch belly; Tĕ. ಬೊಜ್ಜ, a pot-belly). ಬೊಜ್ಜೆ ಬೆಳದು ಅದಿಮಾಗಿ ಗುಣ್ಣೇ ಕಾಣಿಸುವ ಹೊಕ್ಕಳುಳ್ಳವನು (ವೃದ್ಧನಾಭಿ, etc. Si. 203).

ಬೊಟ್ಟ bŏṭṭa. A stump (Mhr. ಬೋಟೂಕ; Mhr. ಬೋಡ, bare, etc.; ಬೋಡಕಾ, a hand without fingers). ಬೊಟ್ಟಕೆಯ್ಯಿಯುಳ್ಳವನು (ಕುಕರ, ಕುಣಿ Si. 198).

ಬೊಟ್ಟಗ bŏṭṭaga. (Mhr. ಬೋಟೂಕ, a short, straight pod of the tamarind, etc., see ಬೊಟ್ಟು). — ಬೊಟ್ಟಗನ ತೂಪ್ಪಲು. A procumbent herb, Crotolaria bifaria L. (Z.).

ಬೊಟ್ಟು bŏṭṭu. 1. = ಬಟ್ಟು 2, etc. A finger; a toe (C.; Bp. 17, 8; 21, 37; J. 19, 50; B. 2, 5; Mhr. ಬೋಟ); the measure of a finger's breadth (Mhr.). 2, a fingerful: a small quantity, a drop (My.; Tĕ.; Bp. 10, 2; Mhr.). ಕಣ್ಣಾಗ ಹಾಲಿಗೆ ಒನ್ದೇ ಬೊಟ್ಟು ಹೆಪ್ಪು.—ಬಟ್ಟೆಯಿನ್ದ ಆಗುವನ್ತಾದ್ದು ಬೊಟ್ಟಿನಿನ್ದ ಆದೀತೇ?—ಬೊಟ್ಟು ಸೀಪಿದರೆ ಹೊಟ್ಟೆ ತುಮ್ಬೀತೇ? (Prvs.). See ಕಿಬ್-, ಹೆಬ್-.

ಬೊಟ್ಟು bŏṭṭu. 2. = ಬಟ್ಟ 1, etc. Tbh. of ವೃತ್ತ. That is round, a round thing;—an ornamental (and sectarial) mark (of sandal paste, etc.) on the forehead in the form of a circlet; that circlet made of metal, glass, pearls, etc. (ತಮಾಲಪತ್ರ, ಚಿತ್ರಕ, ವಿಶೇಷಕ, ಪುಣ್ಡ್ರ, ಲಲಾಟಿಕೆ Hlâ.; ತಮಾಲಪತ್ರ, ತಿಲಕ, ಚಿತ್ರಕ, ವಿಶೇಷಕ, ಹಣೆಗಿಟ್ಟು ಕೊಳ್ಳುವ ತಿಲಕ Si. 226; Čpr. 3, 45; Bp. 4, 40; Śsv. 3, 9. 19; J. 16, 4; My.; Tĕ.; M. ಪೊಟ್ಟು, ಪೊಟ್ಟು, ಪೊಟ್ಟು; T. ಪೊಟ್ಟು). ಸೊಡರಕ್ಕಿಯಲಿ (ಕೂಸಿಂಗೆ) ಬೊಟ್ಟಿಟ್ಟು (Prll. 3, 26). ಗೋರೋಜನಸುಗನ್ಧದಿನ್ದ ರಚಿಸಿದ (ಕಿರಾತರ) ನೊಸಲ ಬೊಟ್ಟು (Râghc. 17, 65). (ಪುಲಿನ್ದನ) ಕಸ್ತುರಿಬೊಟ್ಟು (Rśv. 5, 24). See ಮೂಗು-, ರಕ್ಷೆ-; Śmd. s. ಬಾನಲ್; Sp. s. ಬೆಟ್ಟಕರ್ಪುರ. — ಬೊಟ್ಟಂಚು. -ಅಂಚು. A round, *i. e.* regular, plain border (B. 3, 103). — ಬೊಟ್ಟಲುಬು. -ಅಲುಬು. A diffuse herb, Desmodium diffusum D. C. (Z.).

ಬೊಟ್ಟೆ bŏṭṭĕ. = ಬೊಡ್ಡಿ 1, etc. (ಸೂಳೆ Bhn. 63, o. r. ಜೋಡೆ; Tĕ. ಬೋಟಿ, a woman; a female servant).

ಬೊಡ bŏḍa. = ಬುಡ, etc. — ಬೊಡ ಬೊಡನೆ. = ಬುಡ ಬುಡನೆ. ಬೊಡ ಬೊಡನೆ ಸುರಿಯುವವನು ಕಡ ಕಡನೆ ನಡದಾನೇ? (Prv.).

ಬೊಡಿ bŏḍi. = ಬಡಿ 1, etc. To beat. ಮದ್ದಲೆ ಬೊಡಿಯುವವನು (ಮಾರ್ದಂಗಿಕ, etc. Si. 340). ಬೊಡಿಯುವ ಗಣ್ಡನ ಹತ್ತರ ಹಿಡಿವರಯಾ ಇದ್ದರೇನು? (Prv.).

ಬೊಡಿಸು bŏḍisu. 1. = ಬಡಿಸು 1.

ಬೊಡಿಸು bŏḍisu. 2. = ಬಡಿಸು 2. ಮದ್ಯ ಬೊಡಿಸೋಣ (ಸರಕ, ಅನುತರ್ಷಣ Si. 348).

ಬೊಡೆ bŏḍĕ. 1. = ಬಡಿ 1, etc. See ಜೇಪೊಡೆ 1.

ಬೊಡೆ bŏḍĕ. 2. = ಬಡಿ 3, etc. See ಜೇಪೊಡೆ 2.

ಬೊಡ್ಡಿ bŏḍḍi. 1. = ಬಡ್ಡಿ 1, ಬೊಟ್ಟೆ. A strumpet, a whore, etc. (My.). ಗೊಡ್ಡಿ ಹಡಿಯುವಳೇನು? ಬೊಡ್ಡಿ ಅಡಿಯುವಳೇನು?—ಬಡ್ಡಿಗೆ ಕೊಟ್ಟವ ಬೊಡ್ಡಿಮಗ.—ಬೊಡ್ಡೀ ಮಗನಾದರೆ ಬಡ್ಡಿಗೆ ಅಡ್ಡಿಯೇನು? (Prvs.). See Prv. s. ಪೇಳದವ. — ಬೊಡ್ಡಿಮನ. An unchaste mind (Dp. 34).

ಬೊಡ್ಡಿ bŏḍḍi. 2. = (ಬುಡ), ಬಡ್ಡೆ, ಬೊಡ್ಡೆ. The bottom of a tree, the trunk (Mhr. ಬೂಡ, the bottom of anything). ಬೇರುಗಳು ನೆಲದೊಳಗಿನ ರಸವನ್ನು ಹೀರಿ ಕೊಣ್ಡು, ಬೊಡ್ಡಿಯೊಳಗಿನ್ದ ಗಿಡಕ್ಕೆಲ್ಲ ಹಂಚಿ ಕೊಡುವವು (B. 3, 35). ಕಪ್ಪುರದ ಗಿಡದ ಬೊಡ್ಡಿಗೆ ಕೊಡ್ಡೆಯಿನ್ದ ಕಚ್ಚು ಹಾಕಿದರೆ ಹಾಲು ಹೊರಡುತ್ತದೆ (4, 70).

ಬೊಡ್ಡೆ bŏḍḍĕ. = ಬೊಡ್ಡಿ 2, etc. (ಬುಡ್ಡ, ಬುಡ G.; My.).

ಬೊಣ್ಡಾಲ bŏṇḍâla. See ನಿದ್ಪಲ್ಲಣ.

ಬೊಣ್ಡುಳ bŏṇḍuḷa. An annual herb, Physalis indica Lamb. (St. & Pl.; Tu. ಬೊಣ್ಡೊಲಿ).

ಬೊದ bŏda. A sound produced by somewhat loose discharges from the bowels. — ಬೊದ ಬೊದನೆ. With the repeated sound of ಬೊದ (My.).

ಬೊದದರಗ bŏdadaraga. The small tree Cluytia collina Roxb. (St. & Pl.).

ಬೊದ್ದಿ bŏddi. N. of a plant (Tĕ. = ಶ್ರೀವರ್ಣ, ಪಲಾಶ್ಯಾಮ; R.).

ಬೊನಗಾರೆ (bŏna-kârĕ). = ಬೋನಗಾರೆ. N. of a plant (ಮಗ್ಗಾರೆ, ಮಂಗಾರೆ, ಗೇಣೆ Mr. 119, o. r. ಮದ್ದಾರೆ).

ಬೊನ್ತ bŏnta. = ಬೊನ್ತೆ. — ಬೊನ್ತಗಳ್ಳಿ. = ಬೊನ್ತೆಗಳ್ಳಿ (My.).

ಬೊನ್ತಾ bŏntâ. = ಬೊನ್ತೆ. — ಬೊನ್ತಾದೇವಿ. N. (Bp. 59, 7).

ಬೊನ್ತೆ bŏntĕ. = ಬನ್ತೆ, ಬೊನ್ತ, ಬೊನ್ತಾ. A thick cloth made by sewing one cloth on another, a cloth made of quilted rags (My.; Tĕ.; ಕನ್ಥೆ Si. 485; Bp. 27, 43; Mhr. ಬುನ್ಥ, ಬುನ್ಥೀ, ಬೋನ್ಥ, a cloth thrown, or prepared to be thrown, over the head and body as a muffler; ಬೋನ್ಥೀ, a clout). ಕನ್ತೆಗೆ ತಕ್ಕ ಬೊನ್ತೆ (Prv.). — ಬೊನ್ತೆಗಳ್ಳಿ. -ಕಳ್ಳಿ. A large leafless shrub, the triangular spurge, Euphorbia antiquorum Lin. (St. & Pl.; My.). — ಬೊನ್ತೇ ಕಳ್ಳಿ. = ಬೊನ್ತೆಗಳ್ಳಿ (Si. 147).

ಬೊನ್ತೆಗ bŏntĕ-ga. (Śmd. 237). A man who wears a bŏntĕ.

ಬೊನ್ದರಿಗೆ bŏndarigĕ. = ಬನ್ದಣಿಕೆ, etc. (Čpr. 6, after 86).

ಬೊನ್ದಿ bŏndi. The body (ಶರೀರ Śmd. II; Tĕ.; T. ಪೊನ್ದಿ; *cf.* ಪುದಿ 1? or ಬ್ರಧ್ನ?). **2,** a bundle of coir or other rope (Mg.). ನಿನ್ದೆಯಿಲ್ಲದೆ ಬೊನ್ದಿ ಹೋಗದು (Prv.).

ಬೊನ್ದು bŏndu. = ಬನ್ದು 1.

ಬೊನ್ದುಕ bŏndu-ka. = ಬನ್ದುಕ, q. v. (ಪಲ್ಲವತ್ತ, ನಿಷ್ಟಿಕ ಶಿಪ್ಪದ Ss.).

ಬೊಪ್ಪ bŏppa. (= ಬಾಪು 2). A father (Bp. 3, 49; 14, 22; 15, 22; 18, 81; 24, 19; 26, 61; 47, 42; Bh. 1, 8, 59. 75. 94; J. 27, 13). — ಬೊಪ್ಪಯ್ಯ. -ಅಯ್ಯ. N. See ಸಿರಿ-.

ಬೊಪ್ಪರ bŏppara. A certain feat of wrestlers (Śsv. 4, 75; Bh. 2, 2, 98).

ಬೊಪ್ಪಲ bŏppala. N. of a man. ಇರದೆ ಗರ್ಜಿಸಿ ಬೊಪ್ಪಲಂ ಶರ್ದರ್ಪ ಜವಂ ತಳರ್ವನ್ದದಿಂ (Śmd. 73). ಸವಗರಮಿದು! ಬಯಸಿ ಮೆಚ್ಚುವುದು! ಅದ್ ಬೊಪ್ಪಲನಂ! (177).

ಬೊಪ್ಪಿ bŏppi. (Mhr. ಭೋಪೀ, the person that officiates in the temples of village-deities). — ಬೊಪ್ಪಿದೇವ. N. See ಬಲ್ತಯ-.

ಬೊಪ್ಪು bŏppu(?). See ಪೊಪ್ಪಪ್ಪಮಾನ್.

ಬೊಬ್ಬಡೆ bŏbbaḍĕ. Rind, bark (My.; Tĕ. ಬೊಬ್ಬರಿ). See ತಂಗೇಡಿ-.

Digitized by Google

ಬೊಬ್ಬುಲಿ bŏbbuli. = ಬಬ್ಬರ, etc. Tbh. of ಬರ್ಬರ (Šmd. 345), ಬರ್ಬೂಲ, ಬರ್ಬೂರ (359. 364). The thorny Babool tree, Acacia arabica Willd. (ಉದ್ಭಟ Mr. 117; Bp. 20, 10. 11; Bh. 1, 8, 5). See Sp. s. ನಿಬ್ಬಣ.

ಬೊಬ್ಬುಳಿ bŏbbuḷi. = ಬೊಬ್ಬುಳಿಕೆ. A bubble (J. 6, 3; 9, 24; 19, 5. 12; Tĕ. ಬುಬ್ಬುತ; Mhr. ಬುಡಬುಡಾ; *cf.* ಪುಗುಳ್, ಬುಡ್ಡೆ, & ಬುದ್ಬುದ). ನೀರ ಬೊಬ್ಬುಳಿ ನೆಚ್ಚ, ಸಾರಿ, ಕೆಡದಿರು, ಮರುಳೆ! (Sp.).

ಬೊಬ್ಬುಳಿ bŏbbuḷi. = ಬೊಬ್ಬುಲಿ, etc. (Bh. 2, 13, 14; My.).

ಬೊಬ್ಬುಳಿಕೆ bŏbbuḷikĕ. = ಬೊಬ್ಬುಳಿ. (Abh. P. 10, 173; Bh. 8, 25, 6). ನೀರ ಬೊಬ್ಬುಳಿಕೆ (ಬುದ್ಬುದ Nr.).

ಬೊಬ್ಬೆ bŏbbĕ. 1. (= ಬೊಕ್ಕೆ 1). A blister, a pustule from a burn, etc. (Tĕ.; ವಿಸ್ಫೋಟ, ಪಿಟಕ Si. 200).

ಬೊಬ್ಬೆ bŏbbĕ. 2. (fr. ಬೋ). An outcry, a loud call, a shout, a bawl, a yell; a great noise, a loud sound (C.; Tĕ.; ಕೋಲಾಹಲ, ಕಲಕಲ Nr.; Mhr. ಬೋಮ್ಬ); a battle-cry, a war-whoop (ಕ್ಷ್ವೇಡೆ Nr.; ಘಟಗರ್ಜನೆ Bhn. 44). ಬೊಬ್ಬೆ ಮಾಡಿದರೆ ಹಬ್ಬ ಆದೀತೇ?— ಬೊಬ್ಬೇ ಜಂಗಮನ ಸಂಗಡ ಕಬ್ಬಿನ ಸಮಾಚಾರವೇ? (Prvs.). See Bh. 3, 13, 25. 32; 6, 2, 3. 4; J. 3, 32; 13, 24; 28, 40. 47; Râm. 6, 44, 52. — ಬೊಬ್ಬಾಟ. -ಆಟ. Bawling, general outcry, clamorous complaint, etc. (C.; Mhr. ಬೋಂಭಾಟಾ; Bp. 56, 16; Bh. 2, 13, 47; Râm. 6, 13, 3; B. 4, 73. 80. 198). — ಬೊಬ್ಬಿಡು. -ಇಡು. To bawl, to shout, to roar, etc. (My.). ಬೊಬ್ಬಿಡುವುದು (ಕ್ಷ್ವೇಡೆ, ಪರಬಲವನು ಭಂಗ ಮಾಡಲೆನ್ದು ಜೋದರು ಮಾಡುವ ಸಿಂಹನಾದವು Nr.). See Bp. 17, 21; 22, 15; 49, 21; 52, 39. 42; 56, 37; 59, 24; 61, 32; Bh. 3, 13, 34; Rsv. 5, 123; 6, after 11. — ಬೊಬ್ಬಿಡ್. -ಇಡ್. = ಬೊಬ್ಬಿಡು. To bawl, etc. (ಮಹಾರವ Šmd. Dh.; Bp. 32, 14; 56, 16; Rsv. 13, 84. 88; J. 4, 13; 12, 33. 39; 23, 20. 21). — ಬೊಬ್ಬಿರ್ಪ. The act of bawling, etc. (Râm. 3, 6, 51; 4, 6, 10). — ಬೊಬ್ಬೆಕಾಯಕ. The practice of a mendicant standing on thorns, piercing himself with a dagger, and thus extorting alms (R.). — ಬೊಬ್ಬೆ ಕೊಳ್ಳು. To be bawled or hooted at. ದೆಬ್ಬೇ ಕೊಟ್ಟು, ಬೊಬ್ಬೇ ಕೊಣ್ಡ (Prv.). — ಬೊಬ್ಬೆಗೊಡು. -ಕೊಡು. = ಬೊಬ್ಬಿಡು. (Bp. 16, 20; Rsv. 6, after 11; 13, 83; J. 28, 45). — ಬೊಬ್ಬೆಯಿಡು. = ಬೊಬ್ಬಿಡು. (My.). — ಬೊಬ್ಬೆಯಿಡುವಿಕೆ. Bawling, etc. ವೀರಭಟರು ಗಟ್ಟಿಯಾಗಿ ಕಿರಿಚಿಕೂಗಿ ಭಯಂಕರವಾಗಿ ಬೊಬ್ಬೆಯಿಡುವಿಕೆ (ಕ್ಷ್ವೇಡೆ Si. 294). — ಬೊಬ್ಬೆ ಹಾಕು. = ಬೊಬ್ಬಿಡು. (My.). ತಪ್ಪಿಲಿಯಾದವನು ಬೊಬ್ಬೆ ಹಾಕಿ ಹೆಬ್ಬುಲಿಯನ್ನು ಓಡಿಸ್ಯಾನೇ? (Prv.). — ಬೊಬ್ಬೆ ಹೊಡೆ. = ಬೊಬ್ಬೆ ಹಾಕು. (My.).

ಬೊಮ್ಪು bŏmpu. = ಬಮ್ಪು, etc. (My.).

ಬೊಮ್ಬಯಿ bŏmbayi. = ಮುಮ್ಬಯಿ. (My.).

ಬೊಮ್ಬಲು bŏmbalu. = ಬೊಮ್ಪು, etc. (My.).

ಬೊಮ್ಬಾಳ (bŏmbĕ-âḷa). The palms of the hands of metal images (bŏmbĕs) joined so as to form a cup for the reception of combustibles (Bh. 7, 1, 19; Râm. 3, 6, 50; 6, 47, 12; J. 17, 27; 24, 26; 33, 27).

ಬೊಮ್ಬು bŏmbu. = ಬಮ್ಬು. (My.).

ಬೊಮ್ಬುಳಿ bŏmbuḷi. = ಬೊಮ್ಬುಬ್ (Šmd. 39), ಬೊಮ್ಬುಳಿಕೆ, q. v. (Rsv. 6, after 11).

ಬೊಮ್ಬುಳಿಕೆ bŏmbuḷikĕ. = ಬೊಮ್ಬುಳಿ, etc. A small drum or tabor (ಪಣವ Nr.).

ಬೊಮ್ಬುಱಿ bŏmbuḻi. = ಬೊಮ್ಬುಳಿ, q. v.

ಬೊಮ್ಬೆ bŏmbĕ. = ಬೊಮ್ಮೆ 2. An image, a figure, a puppet or doll; an idol (C.; Tĕ. ಬೊಮ್ಮ; M. ಬೊಮ್ಮ, ಭೊಮನ; T. ಪೊಮ್ಮಲ್, ಪೊಮ್ಮೈ; *cf.* ಪೊಡ 2?). ವಸ್ತ್ರದನ್ತ ಕಾಷ್ಠಾದಿಗಳಿನ್ದ ಮಾಡಿದ ಬೊಮ್ಬೆ (ಪಂಚಾಲಿಕೆ, ಪುತ್ರಿಕೆ); ಹೊನ್ನ ಬೊಮ್ಬೆ (ಹೇಮಪ್ರತಿಮೆ, ಹರಿಣಿ); ಕಣ್ಣ ಬೊಮ್ಬೆ (ತಾರಕೆ, ಕಣ್ಣ ಹಾಹೆ Nr.). ಪ್ರತಿರೂಪಿನ ಬೊಮ್ಬೆ (ಪ್ರತುಮೆ Nn. 73). ಮಂಚದೊಳ್ ನೃಪಗೆ ನಿನ್ದು ಸೇವೆ ಮಾಡ್ಪ ಬೊಮ್ಬೆಗಳು ಪಾಂಚಾಲಿಕೆಗಳು ಪುತ್ರಿಕೆಗಳಕ್ಕುಂ (Mr. 204). ಬೊಮ್ಬೆ ಅದರೆ ಹಮ್ಬಲಿಸಿದ ಹಾಗೆ ಕೊಟ್ಟೀತೇ? (Prv.). See Bp. 42, 3; Č. Bp. 5, 51; Rsv. 6, after 11; Si. 344; ಕೀಲಬೊಮ್ಬೆ. — ಬೊಮ್ಬೆದೊಟ್ಟಿಲ್. -ತೊಟ್ಟಿಲ್. A doll's cradle (Bp. 14, 15). — ಬೊಮ್ಬೆಯಾಟ. -ಆಟ. Playing with dolls (Bh. 1, 3, 17). 2, an exhibition of puppets moved by strings (My.).

ಬೊಮ್ಮ bŏmma. Tbh. of ಬ್ರಹ್ಮ (Šmd. 349; Šm. 8; ಬಿದಿ Čt. I, 7; ಪೊಮ್ಮಸುಣಿ, etc., ಅಜ II, 3; ತನ್ದೆಯ ತನ್ದೆ, etc. Kk. 9; My.; Grj. 4, 111; Bp. 28, 51; 31, 23). 2, N. of the author of the Čaturâsyanigaṇṭu (Čt. I, 1), and of other persons. ಬೊಮ್ಮ ನಿರ್ಮಿಸನೆಮ್ಬ ದುರ್ಮತಿಯ ನೀ ಕೇಳು! ಬೊಮ್ಮನ ಸತಿಗೆ ಮೂಗಿಲ್ಲ, ಆ ಮೂಗ ನಿರ್ಮಿಸನೇಕೆ? (Sp.; see Bp. 54, 52). See ಕನ್ನಡ-, ಬಾಹೂರ-. — ಬೊಮ್ಮಂ. The metrical foot — —(Ch.). — ಬೊಮ್ಮದೇವ. N. See ಕಿನ್ನರ-. 2, a Brâhmaṇa (Tĕ.; ದ್ವಿಜಾತಿ, ಬ್ರಾಹ್ಮಣ, etc. Si. 233). — ಬೊಮ್ಮಬಟ್ಟ. N. See Prv. s. ಯಾರ್. — ಬೊಮ್ಮಯ. -ಅಯ. N. (Bp. 29, 29; 61, 34). See ಕಲಕೇತ-, ಕಿನ್ನರ-, ಬಾಹೂರ-. — ಬೊಮ್ಮಯ್ಯ. -ಅಯ್ಯ. N. (Bp. 29, 11. 34; 31, 26; 35, 57; 36, 1. 7; 50, 78; 61, 21). See ಇಳಿಹಾಲಿ-, ಕರಿವಾಳ-, ಕಲಕೇತ-, ಕಾರಣಿಕ-, ಕೋವೂರ-, ಜಕ್ಕಯರ-, ನಾಗೂರ-, ಬಡಿಹೋರಿ-, ಬಾಹೂರ-, ಮುಣ್ಡು-, ಲಿಂಕ-, ವೀರ-. — ಬೊಮ್ಮರಸ. -ಅರಸ. N. of the author of the Čaturâsyanigaṇṭu (Čt. II, 122), and of other persons.

ಬೊಮ್ಮಾಣ್ಡ bŏmmâṇḍa. Tbh. of ಬ್ರಹ್ಮಾಣ್ಡ. (Bp. 36, 43; Č. Bp. 32, 43; 47, 20).

ಬೊಮ್ಮಾಸ್ತ್ರ bŏmmâstra. Tbh. of ಬ್ರಹ್ಮಾಸ್ತ್ರ. (Dp. 61, 4).

ಬೊಮ್ಮಿ bŏmmi. Tbh. of ಬ್ರಹ್ಮಿ and ಬ್ರಾಹ್ಮಿ. N. See ಕಲಕೇತ-. (In My. N. of females). — ಬೊಮ್ಮಕ್ಕ. -ಅಕ್ಕ. N. ತನ್ನಕ್ಕನ ಅರ್ಧಯದವಳು ನೆರೆಮನೇ ಬೊಮ್ಮಕ್ಕನ ಬಲ್ಲಳೇ? (Prv.). — ಬೊಮ್ಮಿದೇವ. N. (Bp. 22, 33; 36, 2; 37, 6; 47, 37; 50, 8; 61, 9). See ಇಣ್ಡೆಯ-, ಕನ್ನಡ-, ಕಲಕೇತ-, ಕಿನ್ನರ-. — ಬೊಮ್ಮಿದೇವಯ್ಯ. -ಅಯ್ಯ. N. (Bp. 28, 48). See ಕನ್ನಡ-, ಕಿನ್ನರ-, ನಿವಾಳಿಯ-, ತೂಲದ-, ಹಾಟಕೇಶ್ವರ-.

ಬೊಮ್ಮೇತಿ bŏmmêti. Tbh. of ಬ್ರಹ್ಮಹತ್ಯೆ. (V. 37, 38. 95).

ಬೊಯಿ bŏyi. 1. = ಬಯ್ 3, etc. To abuse, etc. P. ps. ಬೊಯಿದು, ಬೋದು (My.).

ಬೊಯಿ bŏyi. 2. Abuse, censure, etc. ಆಕರಣಿ ಅಜನಿ ಅವಗ್ರಹ ಇವು ಮೊದಲಾದ ಶಬ್ದಗಳು ಬೊಯಿಗಳು (Si. 401, *only* in Si.).

ಬೊಯಿಲು bŏyilu. = ಬೊಯಿ 2. (My.; ಆಕ್ರೋಶನ, ಅಭಿಷಂಗ Si. 387; ಹಿಂಸೆ 463; ಪರಿಗ್ರಹ 466; see also 59. 380).

ಬೊಯ್ಯು bŏyyu. = ಬೊಯಿ 1, etc. (My., only in ಬೊಯ್ಯಬೇಡ, ಬೊಯ್ಯುವದು). ಒಬ್ಬರಿಗೊಬ್ಬರು ಬೊಯ್ಯಿ ಕೊಮ್ಬುದು (Si. 482, *only* in Si.).

ಬೊಯ್ಯುವಿಕೆ bŏyyuvikĕ. Abusing, etc. (ಆಕ್ರೋಶನ, etc. Si. 387).

Digitized by Google

ಬೊರಲು bŏralu. 1. = ಬರಲು, etc. A broom (My.).

ಬೊರಲು bŏralu. 2. = ಬೋರಲು, etc. See ಬೊರ್-, etc.

ಬೊರ್ಮ bŏrma. Tbh. of ಬ್ರಹ್ಮ (Śâstrasâra in W. v. 1269).

ಬೊಲು bŏlu. = ಬಲ್ 2, etc. (My.).

ಬೊಲ್ಲ bŏlla. A horse with a white face. ಮುಖ ಬೆಳ್ಪುದೋಱೆ ಬೊಲ್ಲನಶ್ವ (Mr. 276; see Bp. 59, 40). 2, simple, silly (? Mhr. ಭೋಳಾ). — ಬೊಲ್ಲಜೀಯ. N. (Bp. 58, 21).

ಬೊಲ್ಲಿ bŏlli. (= ಬೊಲ್ಲ No. 2). — ಬೊಲ್ಲಿಭಟ್ಟ. N. (Bp. 56, 42).

ಬೊಸ್ bŏs. = ಬುಸ್. A sound to imitate the puffing of a pair of bellows (S. Mhr.).

ಬೊಸ bŏsa. A sound used to imitate that of breaking wind, that of treading in fresh cowdung, mud, etc., and that of loose stools (*cf.* ಬೊದ). — ಬೊಸ ಬೊಸನೆ. With the repeated sound of ಬೊಸ (My.).

ಬೊಸಕ್ಕನೆ bŏsakkanĕ. With the sound of ಬೊಸಕ್ (ಬೊಸ), in ಬೊಸಕ್ಕನೆ ತುಡು (My.).

ಬೊಸೆ bŏsĕ. = ಬಸಿ 1.

ಬೊಸ್ತು bŏstu. = ಬಸ್ತು. P. p. of ಬೊಸೆ (My.). ಬೋನ ಬೊಸ್ತ ಗಂಜ (ಆರನಾಲಕ, ಸೌವೀರ, etc., ಬಾಗಿದ ಗಂಜ Si. 311).

ಬೊಳಕ್ bŏḷak. = ಪಳಕ್. The sound produced when a full earthen water-pot falls and breaks (C.). **2,** that produced when saliva is ejected out of the mouth (S. Mhr.).

ಬೊಳಲಿ bŏḷali. = ಗೊಳಲಿ No. 2. (My.).

ಬೊಳ್ಳು bŏḷḷu. = ಬಗುಳು 2, etc. — ಬೊಳ್ಳಿಡು. -ಇಡು. To vociferate. ಒಳ್ಳೆಯ ಮಾತಿಂಗುಮುಳ್ಳೊಡವೆ ಬಿಡೆನೆನ್ನು, ಬೊಳ್ಳಿಟ್ಟು, ಬೊಗಳಿ, ಹುಸಿದು, ಸಾಲವ ನುಂಗಿ, ಇಲ್ಲೆನುತಲಿಹನು (Sp.).

ಬೊೞಿ bŏḻi. = ಬೞಿ 4. (My.). ಬೊೞಿಯಲ್ ಪಟ್ಟದು (ದಿಗ್ಧ, ಲಿಪ್ತ Si. 378). ವಿಷ ಬೊೞಿಯಲ್ ಪಟ್ಟ ಸರಳು (ದಿಗ್ಧ, ಲಿಪ್ತಕ 289). ಬೊೞಿದು ಮೆತ್ತುವ ಕೆಲಸ (ಪುಸ್ತ, ಲೇಪ್ಯಾದಿಕರ್ಮ 844).

ಬೊೞಿಯುವಿಕೆ bŏḻiyuvikĕ. Smearing, etc. (ಸಮಾಲಮ್ಭ, ವಿಲೇಪನ Si. 397).

ಬೊೞಿಸು bŏḻisu. = ಬೞಿಸು 2. (My.).

ಬೋ bô. (= ಭೋರ್). A sound used in bawling or shouting (My.); a sound in imitation of the howling of wind passing through holes or doors, and of the noise of a river or stream (My.).

ಬೋಕಿ bôki. A potsherd (My.; Tĕ. ಬೊಚ್ಚೆ; Tĕ. ಬೊಂಕಿ, a bit of a skull; ಬೋಂಕಿ, a pot). ನೂಕುವವನ ಮನೆಯೂಟಕ್ಕಿನ್ತ ಬೋಕಿಯ ಊಟ ಲೇಸು. — ನೂಕುವವನು ಹಾಕನು, ಬೋಕಿಯವನು ಕೊಡನು (Prvs.). See ತಿರು-; Prv. s. ಲೆತ್ತ.

ಬೋಗ bôga. Tbh. of ಭೋಗ (Śmd. 339; My.).

ಬೋಗಣಿ bôgaṇi. = ಬೋಗುಣಿ. (My.).

ಬೋಗಳ bôgaḷa. = ಬಯಿಗಳ್, etc. (My.).

ಬೋಗಾರ bôgâra. Tbh. of ವ್ಯೋಕಾರ. (ವ್ಯೋಕಾರ, ಲೋಹಕಾರ Hlâ. MS.; see Mr. s. ಲೋಹಕಾರಕ; Râm. 5, 8, 51; C.; ಕಾಂಚಿಕ, ಕಾಮ್ಸ್ಯವಿಕ, ತಂಬುದಿನ್ದ ಕೆಮ್ಬಳಿ ಮೊದಲಾದದನ್ನು ಮಾಡಿ ಮಾಱುವವನು Si. 389, sic!!). ಒಸದೆಣ್ಣ ದಿಕ್ಕಿನಲಿ ಮಸುಸಿಗಿಣಿಲುಗಿನ್ತೆ ಹುಸಿದು ಮಾಡುವವನ ಪೂಜೆ ಬೋಗಾರ ಪಸರವಿಟ್ಟನ್ತೆ (Sp.).

ಬೋಗಿ bôgi. Tbh. of ಭೋಗಿ (Śmd. 339 Mdb.).

ಬೋಗುಣಿ bôguṇi. = ಬೋಗಣಿ. A metal basin for washing; a metal vessel for culinary purposes (My.; Tĕ. ಬೋಗಾಣಿ, ಬೋಗಿಣಿ, ಭಗೋಣಿ); a vessel of stone for culinary purposes (B. 3, 58; Mhr. ಬಗುನೇಂ, a certain metal vessel for culinary purposes).

ಬೋಡ bôḍu-as. A toothless man (ಅದ್ವಿಜ Mr. 389; My.; *cf.* ಬೋಡಿ 2, ಬೊಕ್ಕ 1 & 2; Tĕ. also: tuskless; Mhr. ಬೋಡಕಾ, = Tĕ. ಬೋಡ, ಬೋಡಿ, bare, uncovered, as the head, the person; bare about the crop, as a tree; destitute of the usual appendages, as a cow's head without horns, or with short horns; a hand without fingers, a hill without trees, a house without roof; — a widower).

ಬೋಡತರ bôḍatara. = ಬೋಡಿತರ. (ಮುಕ್ಷಗನ್ಧಿ, ಅವೇಗಿ, etc., ಅನನ್ತನಗೊಣ್ಡೆ Si. 156; Tĕ. = Sphaeranthus indicus Wight., ಶ್ರಾವಣಿ, ಮುಣ್ಡಿ, or St. & Pl. = Sphaeranthus hirtus Willd.).

ಬೋಡಿ bôḍi. (= ಬೋೞಿ). A toothless woman (My.). **2,** one who is bare, or destitute of hairs, of a juṭṭu, or of horns (Tĕ.). — ಬೋಡಾಕಳು. -ಆಕಳು. A hornless cow (My.). — ಬೋಡಿಜಂಗಮ. A jangama who has no juṭṭu (as is the rule with all of them). ನಾನ ಜಂಗಮರಲ್ಲಿ ನನ್ನ ಬೋಡಿಜಂಗಮನೆಲ್ಲಿ? (Prv.). — ಬೋಡೆಮ್ಮೆ. -ಎಮ್ಮೆ. A hornless she-buffalo (My.).

ಬೋಡು bôḍu. (= ಬೋೞು). A toothless state. — ಬೋಡುವಾಯ್. -ವಾಯ್. A toothless mouth (Rāv. 5, after 55).

ಹಸುಬೆ hasubĕ. = ಪಸುಬೆ, etc. (My.).

ಹಸುಮ್ಬ hasumba. (Śmd. 48; not in Mdb. MS.). = ಹಸುಬ, etc. ಗಿಳಿ ಹಸುಮ್ಬಗಳ ಗಱಿಯನ್ತಪ್ಪ ವರ್ಣ (ಹರಿಣ Mr. 444).

ಹಸುಮ್ಬೆ hasumbĕ. (Śmd. 48). = ಹಸುಬೆ, etc.

ಹಸುರು hasuru. ಹಸುರ್. = ಪಸುರ್ 2 q. v., etc. Green colour, etc. (ಪಾಲಾಶ, ಹರಿತ, ಹರಿತ್ Hlâ.; ಹರಿತ Nr.; C.; B. 3, 30). ಹಸುರ ಶಾಕದ ಕಾವು (ಕದಮ್ಬ Śmd. 352 Cm.). ಹಸುರಾದ ಶಾಕವು (ಶಿಗ್ರು); ಹಸುರಾಗಿದ್ದ ಎವೆ (ತೋಕ್ಮ); ಬಾಲತೃಣದಿನ್ದ ಹಸುರಾಗಿರ್ದ ಭೂಮಿ (ಶಾದ್ವಲ Nr.). ಕೆಮ್ಪು ಹಸುರಪ್ಪುದು (ಧೂಮ್ರ, ಧೂಮಲ Hlâ.). (ಕುದುರೆ) ನೆಱೆ ಹಸುರ್ (*i. e.* ಶ್ಯಾಮ, see Mr. s. ಹಸಿರು) ಇರಲ್ ಮುಂಜನಕ್ಕ (Mr. 276). ಹಸುರ ಕಡ್ಲೆ (ಮುದ್ಗ G.). — ಹಸುರಂಗಿ. -ಅಂಗಿ. A green coat or jacket (Bh. 3, 13, 19). — ಹಸುರಱ್. -ಅಱ್. Greenness or freshness to disappear (Bp. 18, 30). — ಹಸುರುಗುಪ್ಪಸ. -ಕುಪ್ಪಸ. A green bodice (Râghô. 17, 65). — ಹಸುರುಗೆಮ್ಪು. -ಕೆಮ್ಪು. Reddish-brown (ಕಪಿಶ, ಶ್ಯಾವ Mr. 443). — ಹಸುರುಬಣ್ಣ. A green colour (My.). — ಹಸುರುಬಳೆ. A wrist-ring of green glass (My.). — ಹಸುರುಭಾಲೆಕಚೇರಿ. The green spearmen's office (My.). — ಹಸುರುಬೆಳಕು = ಪಸುರ್ವೆಳಗು. (G.). — ಹಸುರುಬೆಳೆ. A green crop (G. 323). — ಹಸುರುಶಾಲೆ. A green garment of women. ಬಸುರು ಬನ್ದಾಕ್ಷಣ ಹಸುರುಶಾಲೆ ಸಿಕ್ಕೀತೇ? (Prv.). — ಹಸುರುಹಾವು. = ಹಸರುಹಾವು. (My.). — ಹಸುರುಹಿಣ್ಡು. (Women) to express the juice of certain herbs with the hands upon the head of men to decoy or allure them (My.). — ಹಸುರುಹುಲ್ಲು. Green grass. ಹಸುರು ಹುಲ್ಲು ತಿನ್ನುವವಗೆ ಮೊಸರನ್ನ ಆಗದೇ? — ಮೊಸರು ಹುಳಿಯೆನ್ತ, ಹಸುರುಹುಲ್ಲು ಹಿಣ್ಡಿದನನ್ತೆ (Prvs.). — ಹಸುರೆಲೆ. -ಎಲೆ. A young green leaf or such leaves (ಪಲ್ಲವರ್ G.). — ಹಸುರ್ಗನ್ನೆ. -ಕನ್ನೆ. A moderate-sized tree, Dalbergia lanceolaria (Van Someren).

ಹಸುವು hasuvu. = ಹಸ 1, ಹಸವು, ಹಸಿವು. Tbh. of ಪಶು. A cow (ಅನಡ್ವಿ Mr. 180; My.). ಹಸುವಿನ ಸಗಣಿ (ಗೋಮಯ, etc. Si. 315). ಹಸುವುಗಳು (Si. 460).

ಹಸುಳ hasuḷa. = ಪಸುಳ. A (male) child (Bp. 25, 16; B. 5, 4).

ಹಸುಳೆ hasuḷĕ. = ಪಸುಳೆ. (ಅರ್ಭಕ, ಅರ್ಭ Nr.; Bp. 11, 17; 24, 65; ಕೂಸು Bhn. 23). See Śmd. 109.

ಹಸುಳೆತನ hasuḷĕtana. = ಪಸುಳೆತನ. (Bh. 5, 1, 89).

ಹಸೆ hasĕ. = ಪಸೆ 1, (ಹಾಸೆ). A layer: a bed; a beautiful seat (Grj. 7, after 11; 10, after 97; J. 31, 18; 34, 33; My.; *cf.* ಅಸೆ); a spot on the ground decorated with flowers or colours (My.). ಹಾದರಗಿತ್ತಿಯ ಕಾಲು ಹಸೆಯ ಮೇಲೆ ನಿಲ್ಲದು.— ದಸೆ ಬರುವಾಗ್ಯೆ ಹಸೇ ಮೇಲೆ ರತ್ನ ಬಿತ್ತು.— ನಸೆ ಇದ್ದ ಹಲಗೆ ಸಿಕ್ಕದರೆ ಹಸೆ ಯಾಕೆ? — ನೆಸೆ ಕೊಟ್ಟವ ಹಸೆ ಕದ್ದು ಕೊಣ್ಡು ಹೋದ.— ಬಿಸಲಲ್ಲಿ ಹೋಗುವಾಗ ಹಸೇ ಸುದ್ದಿ ಯಾಕೆ? (Prvs.). — ಹಸೆಜಗಲಿ. An artificially raised spot to put the ornamented seat upon (My.). — ಹಸೆಮಣೆ. A plank used to form a hasĕ (My.); the ornamented seat itself (My.; ಆಸನ್ದಿ Si. 485).

ಹಸ್ತ hasta. = ಹತ್ತ. *The hand* (ಕರ, ಕೆಯ್ Nn. 19; ಕರ, ಕಯಿ, ಕೆಯ್ಯಿ 131). 2, *an elephant's trunk.* 3, an elephant (ಗಜ, ಆನೆ 131). 4, *a measure of length from the elbow to the tip of the middle finger.* 5, *the fore-arm, cubit.* 6, *the thirteenth lunar asterism* (ಋಕ್ಷಭೇದ, ನಕ್ಷತ್ರಭೇದ 131). 7, *quantity, abundance, mass* (at the end of compounds with words signifying "hair"; see ಕೇಶಹಸ್ತ and ಹಿಮ್ಮುಡಿ). 8, a bamboo (ತ್ವಕ್ಸಾರ, ಬಿದಿರ್ 131). 9, N. of a râkshasa (Abh. P. 13, 12). See Mr. s. ಕೋಪು and ನಾಟಕ. ಹಸ್ತದ ಗುಣ ಸ್ವಸ್ತವಾದ ಮೇಲೆ ನೋಡ ಬೇಕು.— ಸ್ವಸ್ತವಿದ್ದವನ ಹಸ್ತ ನೋಡ ಬೇಕು (Prvs.). — ಹಸ್ತಕಡಗ. A bracelet for the wrist (Bp. 61, 27; My.).

ಹಸ್ತಕ hastaka. A mass of hair (ತುಱುಬು Mr. 320). 2, a position of the hands. 3, a mate, an associate, the hand of (B. 4, 81; Mhr.).

ಹಸ್ತಕಂಕಣ hasta-kaṅkaṇa. (Śmd. 386; Kk. 98). A bracelet for the wrist.

ಹಸ್ತಕೌಶಲ hasta-kauśala. Skilfulness of hand, manual dexterity.

ಹಸ್ತಕೌಶಲ್ಯ hasta-kauśalya. = ಹಸ್ತಕೌಶಲ. (My.).

Digitized by Google

ಹಸ್ತಕ್ರಿಯೆ hasta-kriyĕ. Any manual performance. (R.).

ಹಸ್ತಗತ hasta-gata. Gone into the hands of; come to hand, fallen into one's possession, procured, gained, obtained; fallen into the power, charge or care of. (My.; B. 5, 44; Mhr.).

ಹಸ್ತಗುಣ hasta-guṇa. Luck, quality of affecting, in a good or evil manner, the things touched, the works done, or the persons, business, etc. with whom or which connection is held, as supposed to inhere in every human agent:—the power or principle to which is referred, as the source and spring, the prosperousness or wretchedness, the successfulness or unsuccessfulness which attends and characterizes him through his course of life (Mhr.; My.).

ಹಸ್ತಚಾಪಲ್ಯ hasta-čâpalya. = ಹಸ್ತಕೌಶಲ. (Sk.; R.).

ಹಸ್ತತಲ hasta-tala. The palm of the hand.

ಹಸ್ತತಲಾಮಲಕ hastatala-âmalaka. An Emblic myrobalan fruit on the palm of the hand (Čpr. 3, 68).

ಹಸ್ತತಲಾಮಲಕನ್ಯಾಯ hastatalâmalaka-nyâya. The manner of an âmalaka on the palm of the hand, *i. e.* indisputable (My.).

ಹಸ್ತದೋಷ hasta-dôsha. A slip of the hand, a mistake committed by the hand. (My.).

ಹಸ್ತಪರೀಕ್ಷೆ hasta-parîkshĕ. Examination (of the lines) of the hand (by a chiromancer, My.).

ಹಸ್ತಬಿಮ್ಬ hasta-bimba. *Perfuming or smearing the body with unguents.*

ಹಸ್ತಭೂಷಣ hasta-bhûshaṇa. An ornament of the wrist, a bracelet (ಶಂಕರ Nn. 45).

ಹಸ್ತಮರ್ದನ hasta-mardana. Crushing or bruising with the hand. See ಕಿಮುಚು 1.

ಹಸ್ತಲಾಗ hasta-lâga. A respectful catch or hold of the hand of a râja to lead him (My.).

ಹಸ್ತಲಾಘವ hasta-lâghava. Lightness of hand, manual readiness, dexterity; sleight of hand, legerdemain. (My.).

ಹಸ್ತವರ್ತಿ hasta-varti. Being or remaining in the hand, seized, held, caught hold of. See ಹತೋಟಿ.

ಹಸ್ತವಾರಣ hasta-vâraṇa. Restraining the hand (of another); *warding off a blow.*

ಹಸ್ತವಿಭೂಷಣ hasta-vibhûshaṇa. = ಹಸ್ತಭೂಷಣ. (ಶಂಕರ, ಮುಂಗೆಯ್ಯಲ್ಲಿ ಇಕ್ಕುವನ್ತ ಆಭರಣ Nn. 127).

ಹಸ್ತವಿಮರ್ದನ hasta-vimardana. = ಹಸ್ತಮರ್ದನ. See ಕಿಮುಚು 2.

ಹಸ್ತಶುದ್ಧಿ hasta-śuddhi. Successful practice, as that of a skilful physician (My.).

ಹಸ್ತಸೂಚನ hasta-sûčana. Indication by signs of the hand. See ಕೈಯಿಸ್ಸಾಸು.

ಹಸ್ತಸೂತ್ರ hasta-sûtra. A bracelet worn on the wrist, *a cord used as an amulet worn round the wrist at nuptials,* etc. (ಮುಂಗೆಯ್ಯಲಿಹ ಸರ್ವಭೂಷಣಂ Mr. 840).

ಹಸ್ತಾಕ್ಷರ hasta-akshara. One's own sign manual, autograph signature, handwriting (ಕೆಯ್ಬರಹ G.; My.).

ಹಸ್ತಾನ್ತರ hasta-antara. That is in hand or charge: a treasury (My.).

ಹಸ್ತಾನ್ತ್ರ hasta-antra. = ಹಸ್ತಾನ್ತರ. ಹಸ್ತಾನ್ತ್ರ ದಾಕೆಯಾದರೆ ಪುಸ್ತಕ ಏನು ಮಾಡೀತು? (Prv.).

ಹಸ್ತಾನ್ವೇಷಣ hasta-anvêshaṇa. Seeking for or searching with the hand or hands. See ತಡವು 3, ಸಿಡುಗು.

ಹಸ್ತಾಭರಣ hasta-âbharaṇa. Adorned with the nakshatra called hasta (J. 31, 10). 2, an ornament for the wrist, a bracelet (31, 10).

ಹಸ್ತಾಹಸ್ತಿ hastâ-hasti. Hand to hand (Sk.). See ಕೈಯಾಕೈ.

ಹಸ್ತಿ hasti. Having hands, having a trunk; an elephant (ಅನೆ Nn. 144). 2, N. of a king, the founder of Hastinâpura.

ಹಸ್ತಿತ hastita. Thrown. See ಅಸು.

ಹಸ್ತಿದನ್ತ hasti-danta. The tusk of an elephant; ivory (My.; B. 4, 24).

ಹಸ್ತಿನಖ hasti-nakha. *A raised mound of earth or masonry protecting the access to the gate of a city or fort* (furnished with an inner staircase, etc., ಹೆಬ್ಬಾಗಿಲು ಕಟ್ಟು, Hil.). See Nr. s. ಮಣ್ಣು.

ಹಸ್ತಿನಾಪುರ hastinâ-pura. N. of a city founded by king Hasti (Hastin), the capital of the kings of the lunar race (about fifty-seven miles north-east of Delhi on the banks of a channel of the Ganges). (J. 2, 2. 4; 11. 7.).

ಹಸ್ತಿನಾವತಿ hastinâ-vati. = ಹಸ್ತಿನಾಪುರ. (J. 2, 11. 13; [illegible] 24, 81).

ಹಸ್ತಿನಿ hastini. *A female elephant.* 2, a woman of a particular class (having thick lips, thick hips, etc., Grj. 7, after 11).

ಹಸ್ತಿಪಕ hasti-paka. An elephant-driver or rider; an *elephant-keeper.*

ಹಸ್ತು hastu. P. p. of ಹಸಿ 3. (My.). ಹಸ್ತುದವ (ಕ್ಷುಧಿತ, etc. Si. 358). ಮಾತು ಕೇಳ್ದು ಹೋದವ ಗಟ್ಟಿ ಬನ್ದ, ಮಾಡಿಕ್ಕ ಕೇಳ್ದು ಹೋದವ ಹಸ್ತು ಬನ್ದ (Prv.).

ಹಸ್ತೋದಕ hasta-udaka. Hand-water, *i. e.* the water which at meals is poured upon the left hand that had been on the leaf-plate whilst the right was conveying some morsels of food to the mouth (My.).

ಹಸ್ತೋನ್ಮುಕ್ತಿ hasta-unmukti. Loosening from or with the hand. See ಸಿಡಿಲ್.

ಹಸ್ತ್ಯ hastya. Belonging to the hand, done with the hand, manual; given with the hand. (R.).

ಹಸ್ತ್ಯಾರೋಹ hasti-ârôha. *An elephant-rider, an elephant driver.*

ಹಸ್ರು hasru. = ಹಸರು, etc. (My.). — ಹಸ್ರುಗಣೆ N. of a plant (ಬಿಲಿತ Mr. 121).

ಹಹಹ ha-ha-ha. (= ಅಹಹ). Ha, ha, ha! (My.; Mhr.).

ಹಳ haḷa. (*Cf.* ಪಳಪಳ). — ಹಳ ಹಳ. rep. Constantly shine or motion (Bp. 5, 33). — ಹಳ ಹಳಿ. = ಹಳ ಹಳ. (Bp. 8, 23, 5; 8, 24, 53).

ಹಳಚಿಕೆ haḷačikĕ. Flash, glitter, shine (ಹೊಳಪು, ಬೆಳಗು, Čt. I, 23).

ಹಳಚು haḷaču. = ಪಳಚು, etc. To strike against, etc. (Bp. 51, 70; 61, 27; Bh. 4, 2, 56; 6, 3, 1; 6, 21 [illegible] 8, 23, 10; 10, 7, 2; Râm. 3, 6, 14; 5, 9, 5; 6. 10, 7. [illegible] ಹಲು ಹಲು).

ಹಳದಿ haḷadi. = ಅರಿಸಿ, ಪಳದಿ. The colour of turmeric, yellow, greenish yellow (ಅರದಾಳ, ಪೀತ Si. 427; [illegible] ಹರಿತ್ 443; C.; B. 1, 5). See ಅರ್ಸಿ. — ಹಳದಿದಾಸವಾಳ A small cultivated tree, yielding a red dye, the Ixora

Digitized by Google

mulberry tree, Morinda citrifolia Lin. (St. & Pl.). — ಹಳದಿಬಣ್ಣದ ಹಾವು. The venomous snake Trimeresurus erythrurus (Bd.). — ಹಳದಿಯೆಣೆ. -ಎಣೆ. (ತೋಕ್ಮ, ಹರಿತಯವ Si. 304). — ಹಳದಿವಣ್ಣ. -ಬಣ್ಣ. The colour yellow (Bp. 12, 17). — ಹಳದೀ ಗಿಡ. The long-rooted turmeric, Curcuma longa Lin. (St. & Pl.). — ಹಳದೀ ಗೋರಟೆ. (ಕುರಣ್ಟಕ, ವಜ್ರದನ್ತಿ, ಸಹಚರಿ G.). — ಹಳದೀ ಚನ್ದನ. (ಹರಿಚನ್ದನ Si. 228). — ಹಳದೀ ಚನ್ದನ. (ಕಾಲಾನುಸಾರ್ಯ G.). — ಹಳದೀ ನೀರುಳ್ಳಿ. (ಲತಾರ್ಕ, ದುದ್ರುಮ, ಹರಿತಪಲಾಣ್ಡು Si. 159). — ಹಳದೀ ಬಣ್ಣ. The colour of turmeric (B. 3, 52; 4, 209; 5, 252; ಹರಿದ್ರಾಭ G.). ಹಳದೀ ಬಣ್ಣವುಳ್ಳದು (ಹರಿಣಿ, ಹರಿತ Si. 419). — ಹಳದೀ ಸಾಮನ್ತಿ. (ಪೀತಮಾಗಧಿ, ಹೇಮಪುಷ್ಪಿಕೆ Si. 139). — ಹಳದೀ ಸಾಮನ್ತಿಗೆ. = ಹಳದೀ ಸಾಮನ್ತಿ. (My.).

ಹಳದು haḷadu. = ಹಳದಿ. (ಅವದಾತ G.; B. 3, 99; Mhr. ಹಳದ).

ಹಳವಣ್ಡ haḷavaṇḍa. Inquietude; painful restlessness; great perturbation (S. Mhr.; Mhr. ಹಳಹಳ, ಹಳಹಾಳ).

ಹಳವಳಿಸು haḷavaḷisu. To become unquiet and anxious, to become painfully restless, to be greatly perturbed (Râm. 6, 47, 38; J. 13, 59; 21, 4; 23, 27; Mhr. ಹಳಹಳಣೇಂ).

ಹಳಸು haḷasu. = ಹಲಸು. (ಪನಸ, ಕಣ್ಟಕಿಫಲ Nr.).

ಹಳಹಳಿ haḷahaḷi. = ಹಳವಣ್ಡ. (ಉಮ್ಮಳ, ಚಿನ್ತೆ G.).

ಹಳಹಳಿಸು haḷahaḷisu. = ಹಳವಳಿಸು. (Bh. 3, 9, 25).

ಹಳಿ haḷi. (= ಹಳುಕು). A bit, a piece, a lump, as of sugar-candy or camphor (My.; *cf.* ಹರಿ3).

ಹಳಿಗ haḷiga. (ಹೞಿಗ?). (The cripple, *cf.* ಹರುವ? or the derided one, *cf.* ಹೞಿ1?). The three-legged attendant of Śiva (ಭೃಂಗಿ Čt. I, 68).

ಹಳಿದಿಸು haḷidisu. = ಪಳಯಿಸು, etc. To lament.

ಹಳಿದಿಸುವ haḷidisuva. Lamentation (ವಿಲಾಪ, ಪರಿದೇವನ Nr.).

ಹಳುಕು haḷuku. (= ಹಳಿ). A bit, a piece, a lump (My.; Tĕ. ಪಲುಕು). See ತನಿ-; Râm. 6, 53, 88; Bh. 8, 24, 24. — ಹಳುಕುವೆರಸು. -ಬೆರಸು. A bit, etc. to be mixed with (Bh. 21, 5).

ಹಳುಂಗು haḷuṅgu. = ಹಣಿಕು, etc. To look slily or cautiously, etc. (Grj. 1, after 131).

ಹಳುವರ haḷuvara. Tenderness, delicateness, leanness (Râm. 6, 51, 64; Mhr. ಹಳವಟ, ಹಳವಾರ).

ಹಳುವಾಯಿ haḷuvâyi. A mode in saṅgîta (Bp. 19, 15; V. 11, 9).

ಹಳ್ಳ haḷḷa. = ಪಳ್ಳ. Depth; etc. (C.; Bp. 44, 5; Râghô. 17, 56; Si. 88. 91. 112. 115). ಒನ್ದು ನಾಯಿ ಮಾಂಸದ ಕರಣೆಯನ್ನು ಕಚ್ಚಿ ಕೊಣ್ಡು, ಹಳ್ಳಾ ದಾಟುವಾಗ (B. 2, 4). ಕುಣಿಗಳಿಗೆ ಹಳ್ಳದ ನೀರು ಕುಡಿಸುತ್ತಿದ್ದನು (5, 45). ಗಿರಿಯ ತುದಿಯಿನ್ದ ಬಿಸರಿ ಹರಿ ತಪ್ಪ ಹಳ್ಳ (ನಿರ್ಝರ Mr. 97). ಒಣಿತು ಹರಿವ ಹಳ್ಳ (ಸ್ರೋತಸ್ Nr.). ಸೋರುವ ಮನೆಲಿ ಉಚ್ಚೆ ಹೊಯ್ದರೆ ಹಳ್ಳದ ಕೂಡೆ ಹಳ್ಳ. — ಹನಿ ಕೂಡಿದರೆ ಹಳ್ಳ, ತೆನೆ ಕೂಡಿದರೆ ಬತ್ತ (Prvs.). — ಹಳ್ಳ ಕೊಳ್ಳ. dupl. (My.). — ಹಳ್ಳ ಪಳ್ಳ. dupl. (My.).

ಹಳ್ಳಿ haḷḷi. = ಪಳ್ಳಿ 1. A settlement, etc. (Râm. 3, 2, 16; Bh. 1, 8, 93; C.). ಗೊಲ್ಲರ ಹಳ್ಳಿ (ಅಭೀರಪಲ್ಲಿ, ಘೋಷ); ಬೇಡರ ಹಳ್ಳಿ (ಪಕ್ಕಣ, ಶಬರಾಲಯ Nr.). ಹಟ್ಟಿಕಾರರಿಹ ಹಳ್ಳಿ (ಘೋಷ Mr. 187). ಹಳ್ಳೀ ಗವುಡನಿಗೆ ಹುಳ್ಳೀ ಕಜ್ಜಾಯ. — ಹಳ್ಳಿ ಹಾದಾದರೇನು? ಡಿಳ್ಳಿ ಪುಸ್ಸಾದರೇನು? — ಹಳ್ಳೀ ಕುರುಬರಿಗೆ ಗಾಜೇ ಮಾಣಿಕ್ಯ. — ಹಳ್ಳೀ ದೇವರಿಗೆ ಕೊಳ್ಳಿಯೇ ದೀಪ. — ಬೆಳ್ಳುಳ್ಳಿ ಆದರೆ ಹಳ್ಳಿಯವಗೆ ಆಗದೇ? — ಲಾಭವಿಲ್ಲದೆ ಸೆಟ್ಟಿ ಹಳ್ಳಿಗೆ ಹೋಗ (Prvs.). — ಹಳ್ಳಿಗಾಡಿನವ. -ಅವ. A rustic (My.). — ಹಳ್ಳಿಗಾಡು. -ಕಾಡು. A hamlet surrounded by a forest, a hamlet without civilization (My.; Si. 113). — ಹಳ್ಳಿ ಪಳ್ಳಿ. dupl. (My.). — ಹಳ್ಳಿಸರಡು. N. of a plant (ಚೋರಪುಷ್ಪಿಕ Mr. 142).

ಹಳ್ಳಿಕಾತಿ haḷḷi-kâti. A female villager (Bh. 2, 2, 78).

ಹಳ್ಳಿಕಾಱ haḷḷi-kâṟa. A male villager (Râm. 3, 6, 8).

ಹಳ್ಳು haḷḷu. 1. = ಹರಳು, etc. (My.). — ಹಳ್ಳುಗುಣಿಮಣೆ. = ಹರಳುಗುಣಿಮಣೆ. (My.).

ಹಳ್ಳು haḷḷu. 2. = ಅಳ್ಳು 3, etc. — ಹಳ್ಳಯ್ಯ. -ಅಯ್ಯ. = ಅಳ್ಳಯ್ಯ. (Bp. 61, 1. 6). See ಎಡಿಹೂಟ-.

ಹೞ haḻa. 1. = ಪೞ 2, etc. Oldness: old, etc. — ಹೞಗನ್ನಡ. -ಕನ್ನಡ. = ಪೞಗನ್ನಡ. (My.).

ಹೞ haḻa. 2. (ಹಳ). = ಪೞು 2. Weeds, useless shrubs (My.).

ಹೞಕು haḻaku. Decay; that is decayed or rotten, etc. (ಜೊಟ್ಟೆ Śmd. II).

ಹೞಚು haḻaču. = ಹೞಸು. (S. Mhr.).

ಹೞತು haḻatu. = ಹೞದು. (My.). ಹೊಸತು ಮೆಯ್ಯಲ್ಲಿ, ಹೞತು ಹಗ್ಗದಲ್ಲಿ (Prv.).

ಹೞದು haḻadu. = ಪೞದು, etc., ಹೞತು. That is old, etc. (ಜೀರ್ಣ, ಜರಠ, ಪುರಾಣ, ಪ್ರತ್ನ, ಪ್ರತನ, ಪುರಾತನ Hlâ.; ಅನವ್ಯ, etc. Mr. 435; ಪುರಾಣ, ಜರಠ Nn. 138; Bp. 32, 22; My.). ಹೞದಾದುದು (ಘನ, ಜರಠ Nn. 15; ಜರಠ, ಪುರಾಣ 146). ಹೞದಾದನ್ತಾದ್ದು (ಜೀರ್ಣ, etc. Dhw.). ಹೞದಿನಲ್ಲಿ (Nn. 15). ಹೞದು ಮಾಡಿ ಹೊಸದಿಲ್ಲ, ಬಿಳಿದು ಮಾಡಿ ಬಣ್ಣ ಎಲ್ಲ (Prv.).

ಹೞಬ haḻaba. An old man; an old inhabitant; an old servant; one of the ancients, an ancestor (My.; B. 4, 157. 217).

ಹೞಮೆ haḻamĕ. = ಪೞಮೆ (see additions). Antiquity, old times: an old traditional saying, a tradition (Râm. 6, 45, 39).

ಹೞಯಿಗೆ haḻayigĕ. = ಪೞಯಿಗೆ, etc. (ವೈಜಯನ್ತಿ, ಪತಾಕೆ, ಕೇತು, ಕೇತನ, ಧ್ವಜ Hlâ.). ಹೞವಿಗೆಯ ತಲೆಮೊಗದ ಕೆಳಗೆ ಕಟ್ಟಿದ ಕುಂಚ (ಉಚ್ಚೂಡ, ಅವಚೂಲ Hlâ.).

ಹೞವಿಗೆ haḻavigĕ. = ಹೞಯಿಗೆ, etc. (ಪತಾಕೆ, ಕೇತು, ಕೇತನ, etc. Mr. 287; ಟೆಕ್ಕೆ Čt. I, 58; Grj. 4, after 120; Bp. 56, 13. 17; 58, 49). — ಹೞವಿಗೆಗೋಲ್. -ಕೋಲ್. A flag-staff (Bh. 6, 5, 13).

ಹೞವು haḻavu. = ಹೞುವು, etc. (ಮಹಾರಣ್ಯ G.).

ಹೞಸು haḻasu. = ಪೞಸು, ಹೞಚು. To spoil (v. i.), to become foul or old (My.). ಹೞಸಿ ಹೋದದು (ಯಾತಯಾಮ, ಜೀರ್ಣ Si. 443). ನಾಯಿ ಹಸಿದಿತ್ತು, ಹಿಟ್ಟು ಹೞಸಿತ್ತು (Prv.). — ಹೞಸಲು. Spoiling: that which is spoiled (My., in ಹೞಸಲನ್ನ, ಹೞಸಲುಹಿಟ್ಟು).

ಹೞಿ haḻi. 1. = ಪೞಿ 1. To revile, etc. (C.; Bp. 59, 54; B. 1, 4; 2, 14; 3, 19; 4, 181). ಹೞಿವ ನುಡಿ (ದುರ್ವಿಗಾನ, ದ್ವಿತಯವಾಕ್ Mr. 86).

ಹೞಿ haḻi. 2. = ಪೞಿ 2, etc. Blame, rebuke, calumny, etc. (My.). — ಹೞಿ ಪೞಿ. dupl. (Abh. P. 16, 56).

ಹೞಿವು haḻivu. = ಹೞಿ 2, etc. (ಗರ್ಹೆ Nr.; Râm. 6, 58, 6.

Digitized by Google

108). ನಿಃಹಮು ದುಷ್ಟಮು ಗರ್ಹ್ಯ ಎಮ್ಬುವು ಹೞಿಪಿನೊಳ್ ಅಪ್ಪವು (Nr.).

ಹೞಿಸು haḻisu. To cause to reprehend or chide, etc.; to cause one's self to be blamed or chidden, etc. (C., with ಕೊಳ್ಳು). ಹೞಿಸಿ ಕೊಮ್ಬುವನು (ಗರ್ಹ್ಯಾಧೀನ, ವಕ್ತವ್ಯ); ಹೞಿಸಿ ಕೊಮ್ಬ ನುಡಿಯ ನುಡಿವಂ (ಗರ್ಹ್ಯವಾದಿ, ಕದ್ವದ Nr.).

ಹೞುವ haḻuva. = ಪೞುವ, etc., ಹಱುವು. (J. 19, 7; 21, 4; Râm. 3, 2, 16; Bh. 1, 8, 93). ನೆಱಲು ಸೇರ ಬೇಕೆನ್ನು, ಹಱುವಕ್ಕೆ ಹೋದ ಹಾಗೆ (Prv.).

ಹೞುವು haḻuvu. = ಪೞು 1, etc., ಹಱವು, ಹಱುವ. A forest, a jungle (Bh. 1, 3, 21; 3, 5, 16; B. 2, 23; 3, 63; 4, 205).

ಹೞೆ haḻĕ. = ಪೞೆ, etc., ಹಱ 1. Oldness: old, etc. — ಹೞೆಗಂಡುಗನ್ನಡಿ. -ಕಂಚು-ಕನ್ನಡಿ. An old bell-metal mirror (Čpr. 9, 5). — ಹೞೆಗನ್ನಡ. -ಕನ್ನಡ. = ಹಱಗನ್ನಡ. — ಹೞೆಗನ್ನಡ ಲಿಪಿ. The old Kannaḍa character (Bp. 5, 53). — ಹೞೆಗರ್ನಾಟಕ. -ಕರ್ನಾಟಕ. A low class of Karṇâṭaka Brâhmaṇas (My.). — ಹೞೆಚಿಂದಿ. An old rag (My.). — ಹೞೆತರ. Old manner, etc. (ಜೀರ್ಣ G.). — ಹೞೆದಾರಿ. An old road (My.). — ಹೞೆನೀರು. Water not fresh, stale water (My.). — ಹೞೆಪೇಟೆ. N. (My.). — ಹೞೆಬಟ್ಟೆ. An old garment (My.). See Prv. s. ಹಾವು. — ಹೞೆಮಗ. A house-slave (My.). — ಹೞೆಮಾತು. An old, former word (My.). — ಹೞೆಯ. -ಅ 3. ಹಱಬ, q. v. (Bp. 59, 29). — ಹೞೆಯ ತುಱುಹಟ್ಟಿ. (ಗೋಷ್ಠೀನ Nr.). — ಹೞೆಯದು. -ಅದು. That is old, etc. (ಚಿರ, ಪೌರಾಣ Nn. 165). — ಹೞೆಯ ನೆಲ್ಲು. = ಪೞನೆಲ್, q. v. — ಹೞೆಯ ಸಾಲ. A debt contracted by one's deceased father (My.; Bp. 26, 61). — ಹೞೆಯ ಸೀರೆ. (ಪಟಚ್ಚರ Hlâ.; ಪಟಚ್ಚರ, ಜೀರ್ಣವಸ್ತ್ರ Nr.). ಮಾಸಿದ ಹೞೆಯ ಸೀರೆ (ನಕ್ತಕ, ಕರ್ಪಟ Nr.). — ಹೞೆಯೆತ್ತು. -ಎತ್ತು. An old bullock. ಹೞೆಯೆತ್ತು ಹೊೞೆಯಲ್ಲಿ ಹೂಡಿ ನೋಡು (Prv.). — ಹೞೆವಾತು. -ಮಾತು. = ಪೞವಾತು. A tradition, a legend (ಅನಾದಿವಾರ್ತೆ, ಐತಿಹ್ಯ Hlâ.). — ಹೞೆವಾರ್ತೆ. = ಹೞೆವಾತು. (Bp. 32, 22). — ಹೞೆ (i. e. ಹೞೆಯ) ಗಣ್ಡ. The old husband. ಹಬ್ಬದಲ್ಲಿ ಹೞೇ ಗಣ್ಡನೇ? (Prv.). — ಹೞೇದು. = ಹೞೆಯದು. (C.; ಪುರಾಣ, etc. Si. 374; B. 4, 187). — ಹೞೇ ನಾಣ್ಯ. An ancient coin (B. 5, 212). — ಹೞೇ ಬಟ್ಟೆ. = ಹೞೆಬಟ್ಟೆ. (ಪಟಚ್ಚರ Si. 223). — ಹೞೇ ರೊಟ್ಟಿ. Bread not fresh, stale bread (B. 3, 111).

ಹೞೆದು haḻĕdu. (ಹಱದು, etc.). That is old, etc. (C.; B. 3, 79. 111). ಹೞೆದಹುದು (ಪುರಾಣ, ಪ್ರತನ, ಪ್ರತ್ನ, ಪುರಾತನ, ಚಿರನ್ತನ Nr.).

ಹೞ್ಗಿ haḻgi. = ಪೞ್ಗಿ. The putting of full-grown fruits (cocoa-nuts and pods) into smoke for preservation (ಹೊಗೆಯೊಳ್ ತಱಲಂ ಹೂಡ್ದ ಕ್ರಿಯೆ Śmd. I, o. r. ಪೂಡ್ಚು).

ಹಾ hâ. *An interjection expressing grief* (ದುಃಖ Nn. 140), *pain, weariness,* disgust (ಹೇಯ, ಜುಗುಪ್ಸೆ 140), command (ಸಮ್ಪ್ರೇಷೆ, ಹೇಳುವುದು 140), remembrance (ಸ್ಮರಣೆ, ನೆನವುದು 104), laughter (ನಗೆ, ನಗುವುದು 104), stopping (ಹೋ ಎಮ್ಬುದು, ನಿಲ್ಲಿಸುವುದು 104), joy or surprise, and anger or reproach. See Grj. 8, 67; Bp. 11, 3; 14, 31; 28, 12; 36, 6; 45, 7; 46, 22; J. 13, 50. 53. 60. — ಹಾ ಹಾ. rep. (Grj. 8, 67; Bp. 45, 7). See ಹಾಹಾ separately. — ಹಾಹಾರವ. The sound of ಹಾ ಹಾ (Čpr. 5, 17; Bp. 46, 34).

ಹಾಂ hâṁ. = ಹಾಂವು, etc. (Bh. 8, 23, 40; C.).

ಹಾಂ hâṁ. Ah! yes! (B. 5, 144. 149. 150; Mhr.).

ಹಾಂವು hâṁvu. = ಹಾಂ, ಹಾವು. A snake (ಭುಜಂಗ, ವಿಷಧರ, ಸರೀಸೃಪ Čb.; C.).

ಹಾಂಸೆ hâṁsĕ. = ಪಾವಸೆ, etc., ಹಂಸೆ. (My.).

ಹಾಕಸು hâkasu. = ಹಾಕಿಸು. (C.). ಬೇಡಿ ಹಾಕಿಸಿ ಕೊಣ್ಡವನು (ಶೃಂಖಲಿತ Dhw.).

ಹಾಕಿಸು hâkisu. = ಹಾಯ್ಸಿಸು. To cause to put, to have put (as big stones, etc. Bp. 16, 10; as a cloth, B. 5, 39), to have put or poured (as milk, B. 2, 13), to cause to put or establish (as a school, B. 5, 188. 302), to lay out, to plan, to plant (as a garden, Si. 118), etc. ಹೊಱಗೆ ಹಾಕಿಸಿ ಕೊಣ್ಡ (ಅವಕೃಷ್ಟ), ಹೊಱಗೆ ಹಾಕಿಸಿ ಕೊಣ್ಡವನು (ನಿಷ್ಕಾಸಿತ, ನಿಷ್ಕ್ರಾಮಿತ G.). See ಅಟ್ಟು.

ಹಾಕು hâku. = ಆಕು 1, ಹಾಯಿಕು, ಹಾಯ್ಕು. To put (as fishes into a basket, Si. 86; as the hand into the pocket, B. 3, 62; as money into a box, 4, 52; as medicines into a bottle, 4, 226); to put on (as clothes, B. 3, 32; as a turban, 8, 80; as ornaments, 5, 76); to put or establish (as a school, B. 5, 270; as a shop, 5, 273); to lay out, to plan, to plant (as a garden, Si. 118); to sow (ಪಾಲಿನಲ್ಲಿ ಹರಳೆಯೂದರೂ ಹಾಕ ಬಾರದು Prv.); to give (as bread to a cow, B. 2, 19; as rice, ನೂಕುವವನು ಹಾಕನು, ಬೋಕಿಯವನು ಕೊಡನು Prv.); to put or pour (as milk, Si. 241; as water, B. 5, 201); to cast or throw (as a mirror, B. 3, 82; as stones, etc., C.); to bring forth (as beasts bring forth young, C.); ಕನ್ದ ಹಾಕಿದ ಆಕಳು ವೇಹಕ್ ಎನಿಸುಗು Nr.; ಅಂಕೋಳೆ ಎಮ್ಬುವದು ಕನ್ದು ಹಾಕಿದ ಹಸುವು Si. 321); to place or write (as numbers on the dial-plate of a clock, B. 3, 97); to apply (as the hand to a work, B. 5, 206; as the mind, ದ್ರವ್ಯ ಗಳಿಸುವದಕ್ಕೆ ಎಷ್ಟಿಗೂ ಮನಸು ಹಾಕುತ್ತಿದ್ದ, 5, 206); to appropriate, to devote (as wealth, B. 5, 204); to put (as to school, B. 5, 260; as to learn any science, 5, 82. 214); to employ, to perform (as magical art, môha, G. 572; as spying, ... B. 1, 21). ಕೂಸಿಗೆ ಹಾಲು ಹಾಕುವ ಸಿಮ್ಪು (ಒಳಲೆ); ಮೆಟ್ಟುಗಳ ಕಾಲವನ್ನು ಹಾಕಿ ಕೊಣ್ಡವನು (ಪ್ರತಿಮುಕ್ತ); ಕವಚವನ್ನು ಹಾಕಿ ಕೊಣ್ಡವನು (ಸನ್ನದ್ಧ G.). ಹಾಕುವದಕ್ಕೆ ತೆಗಿಯುವದಕ್ಕೆ ಗದ್ದಲ ಕೊಳ್ಳದೇ — ಎಣ್ಣೆ ಹಾಕಿದರೆ ಕಣ್ಣಿಗೆ ಗುಣ, ಮಣ್ಣು ಹಾಕಿದರೆ ಬುತ್ತಿಗೆ ಗುಣ — ಬಿಸಿ ಹರಳಲ್ಲಿದ್ದ ಕರಿ ಮರಿ ಹಾಕೀತೇ? — ಮಾಡಿ ಮಾಡಿ ಮಣ್ಣು ಹಾಕುತ್ತಾನೆ, ನೋಡಿ ನೋಡಿ ಬಾಯಲ್ಲಿ ಹಾಕುತ್ತಾನೆ (Prvs.). Remark: ಹಾಕು is frequently used in a pleonastic manner, e. g. ಪ್ರಾಣಿಗಳನ್ನು ಒನ್ದು ಗಿಡಕ್ಕೆ ಕಟ್ಟಿ ಹಾಕಿ, ಒಡಿ ಹೋದನು (B. 2, 53). ಅವನ್ನು ಹಿಡಿದು, ಚಾವಡಿಗೆ ಒಯ್ದು, ಕಟ್ಟಿ ಹಾಕಿದರು (3, 23). ಆನೆಯನ್ನು ಕಟ್ಟಿ ಹಾಕುವ ಲೋಹದ ಸರಪಣಿ (ಶೃಂಖಲ, etc. Si. 271); ಕಱುಗಳನ್ನು ಕಟ್ಟಿ ಹಾಕುವ ಗೂಟ (ಶಿವಕ); ದನಗಳನ್ನು ಕಟ್ಟಿ ಹಾಕುವ ಕೊರಳ ಕುಣಿಕೆಹಗ್ಗ (323); ಅಱಿಸಿ ಹಾಕುವದು (ಪವಮಾನ, ... etc. 297).

ಹಾಕುವಿಕೆ hâkuvikĕ. Putting, throwing, etc. (ಕ್ಷೇಪ, ಕ್ಷೇಪಣ Si. 390). ಕೆಳಗೆ ತೆಗದು ಹಾಕುವಿಕೆ, ಮೇಲಕ್ಕೆ ಎತ್ತಿ ಹಾಕುವಿಕೆ (ನಿಹಾರ, ಅಧ್ಯವಕರ್ಷಣ 393); ಮೇಲಕ್ಕೆ ಹಾರಿಸುವಿಕೆ (ಉತ್ಕ್ಷೇಪಣ 400); ಹುಟ್ಟು ಹಾಕುವಿಕೆ (ಪ್ರಸವ 434).

Digitized by Google

ಹಾಗ hâga. = ಪಾಗ, ಹಾಗು. One anĕ two kâsus (C.); one-fourth. ಕಡದು ಹಾಗ ಪಾಲು ನೀರು ಬೆರಸಿದ ಮಜ್ಜಿಗೆ (ತಕ್ರ, ಪಾದಾಮ್ಬು Si. 316). ಹಾಗದ ಕೋತಿ ಮುಪ್ಪಾಗದ ಬೆಲ್ಲ ತಿನ್ತು.— ಹಾಗದ ಕೋಡಿ ಮುಪ್ಪಾಗದ ಮೇವು ತಿನ್ತು.— ಹಾಗದ ಗೋಡಿ ಮುಪ್ಪಾಗದ ಬೆಲ್ಲ ತಿನ್ತು.— ಆಡು ಹಾಗ, ಕೂಲಿ ಮುಪ್ಪಾಗ.— ಊಟ ಹಾಗ, ಫಲಹಾರ ಮುಪ್ಪಾಗ.— ಭಾಗಾಕಾರಾ ತಿಳಿಯದಿದ್ದರೆ ಹಾಗದ ಲಕ್ಷಣ ತಿಳಿಯದೇ?— ಸಾವಿರ ತೂಕ ಚಿನ್ನಕ್ಕೆ ಹಾಗ ತೂಕ ಮಚ್ಚು.— ಸೂಜಿ ಚಿನ್ನವಾದರೆ ಹಾಗದ ಕಾಸು (Prvs.). See ನೆಲ-; Bp. 28, 5; 29, 15. 28; Prv. s. ಹಾಗಲವಾಡಿ.

ಹಾಗಲ್ hâgal. ಹಾಗಲು. = ಪಾಗಲ. A winding plant with bitter fruit, Momordica charantia Lin. (ಕರ್ಕೋಟಕಿ, ಪೀತಪುಷ್ಪ Mr. 146; ಕಾರವೇಲ್ಲ, ಕಟಿಲ್ಲಕ, ಸುಷವಿ Nr.; T. ಪಾಗಲ್, M. ಪಾವಲ್). See ಮಡುವಾಗಲ್.

ಹಾಗಲ hâgala. = ಹಾಗಲ್. (My.; Si. 160). — ಹಾಗಲಕಾಯಿ. The Momordica fruit (C.; ಕಟಿಲ್ಲಕ, ಸುಷವಿ G.). — ಹಾಗಲಗಿಡ. = ಹಾಗಲ. (ಕಾರವೇಲ್ಲ, etc. Si. 160; My.). — ಹಾಗಲಬಳ್ಳಿ. = ಹಾಗಲ. (C.). — ಹಾಗಲವಾಡಿ. -ಪಾಡಿ. N. of a place. ಹಾಗಲವಾಡಿಗೆ ಹೋದರೆ ಗೀದರೆ ಹಾಗಕ್ಕೊಸ್ಸ್ಯೆ ತನ್ದರೆ ಗಿನ್ದರೆ ನಿಮ್ಮವರಿಗೆ ಮಜ್ಜಿಗೆ ಕೊಟ್ಟೀಯಾ?— ಹಾಗಲವಾಡಿಸಂಸ್ಥಾನದ ಹಾಗೆ (Prvs.). — ಹಾಗಲಹಣ್ಣು. A ripe Momordica fruit (C.; B. 2, 38).

ಹಾಗು hâgu. = ಹಾಗ, etc. — ಹಾಗೂ ವೀಸ. A hâga and a vîsa, *i. e.* 1 anĕ 5¼ kâsus (My.). ಬೇಗ ಮಾಡಿದವನಿಗೆ ಹಾಗೂ ವೀಸ.— ಮಗ್ಗಿ ದಾರದಿದ್ದರೆ ಹಾಗೂ ವೀಸ ಗುಣಿಸು! ಅನ್ದ.— ಬೀಗನ ಹತ್ತರ ಹೋಗಿ, ಹಾಗೂ ವೀಸ ಕೇಳಿದ ಹಾಗೆ (Prvs.).

ಹಾಗೆ hâgĕ. = ಅಹಗೆ, etc., ಹಾಂಗೆ. In that manner or way, thus, so; like; as; as if; likewise; so that; without cause, for nothing (ಪೋಲ್ Śmd. 19 Cm.; ವತ್, ವಾ, ಯಥಾ, ತಥಾ, ಇವ, ಏವಂ Si. 473). ಆಕಳ ಕೊಳಗು ಕುದುರೆಯ ಕೊಳಗಿನ ಹಾಗಲ್ಲ, ಸೀಳಿರುತ್ತವೆ (B. 1, 21). ಕಣಿಕೆ ನನ್ನ ಕೆಯ್ಗೆ ನಿಲುಕುವ ಹಾಗಿಲ್ಲ (2, 19). ಮನಸ್ಸಿಗೆ ಬನ್ದ ಹಾಗೆ ತುಟ್ಟ ಮಾಡುತ್ತಿದ್ದರು (3, 13). ಅವರ ದನಗಳಿಗೆ ಒನ್ದು ಕಡೆಯಲ್ಲಿ ಮೇವು ಸಿಕ್ಕದ ಹಾಗಾಯಿತು (4, 218). ತಕ್ಕ ಹಾಗೆ ಹುಟ್ಟಾವಳಿ ಇಲ್ಲದ್ದರಿನ್ದ (5, 127). ನೀವು ಹೇಳಿದ ಹಾಗೆ (Bp. 14, 25). ಆ ಎಮಲಸುಜ್ಞಾನಿ ಕೇಳದ ಹಾಗೆ ಕೇಳುತ್ತಾ (22, 53). ಕೊಂಡಿತಯಾದ ಅರ್ಥವನ್ನು ಪೂರಯಿಸಿ ವಾಕ್ಯಸಮನ್ವಯ ಮಾಡಿ ಕೊಳ್ಳುವದಕ್ಕೆ ತಕ್ಕ ಹಾಗೆ ತನ್ದು ಇಟ್ಟು ಕೊಣ್ಡ ಪದ (ಅಧ್ಯಾಹಾರ, etc. Si. 48). ಬಳ್ಳಿಗಳಿನ್ದ ಹೊಚ್ಚಲ್ ಪಟ್ಟು ಮನೆಯ ಹಾಗೆ ಇರುವ ಬೇಲಿ (ನಿಕುಂಜ, ಕುಂಜ 117). ತುಟುಬು ಮುನ್ತಾದ ಕೀತಪಾತದ ನಡುವೆ ಈಚೆಗೆ ಕಾಣದ ಹಾಗೆ ಮುಡು ಕೊಣ್ಡಿರುವ ಹುವ್ವಿನ ಸರ (ಗರ್ಭಕ 229). ಕತ್ತೆಯ ಹಾಗೆ ಹೊರಳಾಡಿ ಮೇಲಕ್ಕೆದ್ದು ಬನ್ದ ಕುದುರೆ (ಉಪಾವೃತ್ತ, etc. 274). ಹೇಳಿದ ಹಾಗೆ ಮಾಡುವವನು (ವಚನೇಸ್ಥಿತ, ಆಶ್ರವ 359). ಮನಸ್ಸು ಬನ್ದ ಹಾಗೆ ಎಲ್ಲಾ ಬಿಡಿ ಬಿಟ್ಟಲಾಗಿ ಇರುವದು (ಯದೃಚ್ಛೆ, etc. 386). ಹಾಲಾಗಿದ್ದದು ಉಪಾಧಿಯಿನ್ದ ಮಸರಾದ ಹಾಗೂ ಮಣ್ಣಾಗಿದ್ದದು ಮಡಿಕೆಯಾದ ಹಾಗೂ ಬೀಜವು ವೃಕ್ಷವಾದ ಹಾಗೂ ಒನ್ದು ಬಗೆಯಾಗಿದ್ದದು ಮತ್ತೊನ್ದು ಬಗೆಯಾಗುವ ವಿಕಾರವಿಶೇಷ (ಪರಿಣಾಮ 392). ಅದರ ಹಾಗೆ ಇರುವಿಕೆ (ಅನುಕಾರ, etc. 893). ಹೀಗಾಯಿತೋ? ಹಾಗಾಯಿತೋ? ಎಮ್ಬುವದು (ಕಿಂವದನ್ತಿ Dhw.). ಹಾಗೆ ಕುಣಿಯುವ ಬಡ್ಡಿ ಹರಿಯಕ್ಕೆ ಬನ್ದರೆ ಬಿಟ್ಟಾಳೇ?— ಬೀಗನ ಹತ್ತರ ಹೋಗಿ, ಹಾಗೂ ವೀಸ ಕೇಳಿದ ಹಾಗೆ (Prvs.). See Prv. s. ಹಾವಿಯವ. — ಹಾಗೂ. -ಊ 7. So also, likewise also; (and). ಅವನು ನಿನ್ನನ್ನು ಬಿಡುಯುವದಿಲ್ಲ, ಹಾಗೂ ಅವನ ಸಿಟ್ಟು ಸಹ ಬೇಗ ಇಳಿಯುವದು (B. 3, 60). ತಿರಿಗಿ ಈ ಸ್ಥಳಕ್ಕೆ ತಾವು ಬರ ಬಾರದು, ಹಾಗೂ ನನಗೆ ಮೋರೆ ತೋರಿಸ ಬಾರದು (3, 67). ಇದು ಬಹಳ ಬೆಳೆಯುವದಿಲ್ಲ, ಹಾಗೂ ಬಹಳ ಸ್ಥಳಗಳಲ್ಲಿ ಬೆಳೆಯುವದಿಲ್ಲ (3, 107). ಎಲ್ಲ ಪ್ರಜೆಗಳು ಇವರ ಅಪ್ಪಣೆಯ ಮೇರೆಗೆ ನಡ ಕೊಳ್ಳ ತಕ್ಕದು; ಹಾಗೂ, ಇವರಿಗೆ ಕಲ್ಯಾಣವಾಗಲೆನ್ದು, ದಿನಾಲು ದೇವರನ್ನು ಬೇಡಿ ಕೊಳ್ಳ ತಕ್ಕದು (4, 3). ಆ ಖಣ್ಡದೊಳಗೆ ಈಗಿನಷ್ಟು ವಿದ್ಯೆಯೂ ಕಲಾಕೌಶಲ್ಯಗಳೂ ಎನ್ದಿಗೂ ಅಭಿವೃದ್ಧಿ ಹೊನ್ದುತ್ತಿದ್ದಿಲ್ಲ; ಹಾಗೂ ಅಲ್ಲಿಯವರು ಇಷ್ಟು ಉತ್ತಮಸ್ಥಿತಿಗೆ ಎನ್ದೂ ಬರುತ್ತಿದ್ದಿಲ್ಲ (4, 210). ಎತ್ತು, ಹಾಗೂ ಆಕಳ, ಶರೀರದಿನ್ದ ದೊಡ್ಡವಿದ್ದಾಗ್ಯೂ (5, 18). ಅವನು ತನ್ನ ಗ್ರನ್ಥದೊಳಗೆ ಹೊಟ್ಟೆ ಹಾಗೂ ಅವಯವಗಳ ಕಲ್ಪಿತಕಥೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ (5, 93). ಆ ವ್ಯಾಪಾರಕ್ಕೆ, ದಾಡಿಗೇ ಕೊಡೋಣ ಹಾಗೂ ದಾಡಿಗೇ ಇಸ ಕೊಳ್ಳೋಣ ಎನ್ದು, ಎನ್ನುತ್ತಾರೆ (5, 113). ಅವನು ಸುಮ್ಮನೇ ಹೊರಟು, ಸಂಕಟಗಳನ್ನು ಅನುಭೋಗಿಸುತ್ತ ಹಾಗೂ ಹೀಗೂ ಕಷ್ಟಬಡುತ್ತ ಪಟ್ಟಕ್ಕೆ ಹೋಗಿ ಮುಟ್ಟಿದನು (5, 69). — ಹಾಗೇ. -ಏ2. Even in that manner or so, etc.; without another cause or object. ಹಾಗೇ (without my ring) ನಿನ್ನ ಬೆರಳು ನೋಡಿ ಕೊಳ್ಳುತ್ತಿರು! (B. 3, 34). ಎಷ್ಟೋ ದೇಶಗಳ ಸ್ಥಿತಿಯೂ ಈ ಹೊತ್ತಿಗೂ ಹೀಗೇ ಉಣ್ಟು; ಅವುಗಳಲ್ಲಿ ಸುಲ ಕೊಳ್ಳುವವರು ಸುಲ ಕೊಳ್ಳುವದರ ಸಲುವಾಗಿ ನಾಲ್ಕು ಕಡೆಗೆ ಯಾವಾಗಲೂ ತಿರುಗುತ್ತಿರುತ್ತಾರೆ, ಅವರ ಅಂಜಿಕೆಯಿನ್ದ ಜನರು ಶಸ್ತ್ರಗಳನ್ನು ಹಿಡ ಕೊಣ್ಡು ಎಚ್ಚರದಿನ್ದ ಇರುವರು ಅಲ್ಲದೇ ಹಾಗೇ ತಿರುಗಾಡಿದರೆ ಬದುಕಿ ಬರುವ ಭರವಸವು ಅವರಿಗೆ ಇರುವದಿಲ್ಲ (5, 104). ಅನ್ದಿನಿನ್ದ ಅವರ ಕಡೆಗೆ ಬನ್ದ ಅಧಿಕಾರವು ಇನ್ದಿನ ತನಕ ಹಾಗೇ ಉಣ್ಟು (5, 188). ಎಣ್ಣೆ ಸೀಗೆಗೆ ಹ್ಯಾಗೋ, ಹಾಗೇ ಪ್ರೀತಿ (Prv.). — ಹಾಗೆಯೇ. -ಏ 2. = ಹಾಗೇ. (My.). ಬೇಗನೇ ಮಾಡಿದ್ದು ಹಾಗೆಯೇ ಹೋಗುವದು (Prv.). — ಹಾಗ್ಹಾಗೆ. = ಹಾಗೆ ಹಾಗೆ. ಹ್ಯಾಗೆ ಹ್ಯಾಗೆ ಭಯಗೊಮ್ಬುವ ಪ್ರಸಂಗಗಳು ಅವನಿಗೆ ಬರುವವೋ, ಹಾಗ್ಹಾಗೆ ಅವನು ಹೆಚ್ಚು ಧೈರ್ಯಗೊಳ್ಳುವನು (B. 5, 85).

ಹಾಂಗೆ hâṅgĕ. = ಹಾಗೆ, etc. (ಪೋಲ್ Śmd. 148 Cm.; ಅನ್ತಿರೆ 353; ಅನ್ತೆ 362 Cm.; Bp. 8, 44; 27, 36; 47, 70). ಇಚ್ಛೆ ಬನ್ದ ಹಾಂಗೆ (ಯಥೇಷ್ಟಂ Śmd. 140 Cm.). ರಸಮಿಲ್ಲದ ಹಾಂಗೆ ಅಟ್ಟ ಮದುರ (ಪಿಚ್ಛಿಲ); ಹೆಂಗೆ ಅಹುದು, ಹಾಂಗೆ ಎಮ್ಬರ್ಥದಲ್ಲಿ ಯಥಾಸ್ವಂ ಯಥಾಯಥಂ ಎನಿಸುಗು (Nr.). — ಹಾಂಗೂ. = ಹಾಗೂ. ಎಲವ್ಯುತ ಎಮ್ಬುವದು ಆಲಸ್ಯಕ್ಕೆ ನಾಮ, ಹಾಂಗೂ ಜೋಲು ಬಿದ್ದನ್ಥಾದ್ದಕ್ಕೆ ಸಹವಾಗಿ ಆಗುತ್ತದೆ (Dhw.).

ಹಾಚಿ hâci. = ಪಾಚಿ 1, etc. (ಜಲನೀಲಿ, ಶೈವಾಲ, ಶೈವಲ Si. 95).

ಹಾಜರಿ hâjari. = ಹಾಜರು, etc. Present (My.; Mhr., H. ಹಾಜಿರ). — ಹಾಜರಿಗೈರುಹಾಜರಿ. -ಗೈರು-. Present and absent (My.). — ಹಾಜರಿಗೈರುಹಾಜರಿಪಟ್ಟಿ. A list or roll of the names of the persons of an establishment used to ascertain who are present and who are absent (My.). — ಹಾಜರಿಜವಾಬು. A ready answer; a repartee; that answers readily (My.; Mhr., H. ಹಜೀರಜವಾಬ).

ಹಾಜರು hâjaru. = ಹಜೀರ, ಹಾಜರಿ. Present; ready (My.). — ಹಾಜರುಜಾಮೀನು. A security for the appearance of, bail (My.; Mhr., H. ಹಾಜೀರಜಾಮೀನ).

ಹಾಂಚೆ hâṁcĕ. = ಹಾಚೆ, etc. (G.).

ಹಾಟಕ hâṭaka. *Gold.* 2, the thorn-apple.

ಹಾಟಕಗಿರಿ hâṭaka-giri. Mêru (My.).

ಹಾಟಕೇಶ್ವರ hâṭaka-îśvara. N. of a liṅga at Śrîgiri (Bp. 53, 52); N. of a liṅga in pâtâlalôka (J. 24, 14). — ಹಾಟಕೇಶ್ವರಬೊಮ್ಮದೇವಯ್ಯ. N. (Bp. 58, 5).

ಹಾಟು hâṭu. (fr. ಹಡು). The emitted seminal fluid (My.).

ಹಾಡ hâḍa. = ಹಾಡು 2.

ಹಾಡಕಾಱ hâḍa-kâṟa. = ಹಾಡುಕಾಱ. ಸ್ವರ್ಗಲೋಕದ ಹಾಡಕಾಱ (ತುಮ್ಬುರ G.).

ಹಾಡಗ hâḍaga. = ಪಾಡಗ, (ಹಾಡಂಗ). N. of a plant (ಸಾರವತಿ Mr. 134).

ಹಾಡಂಗ hâḍaṅga. — ಹಾಡಂಗಮರ. The tree Cordia wulluchii G. Don. (Z.).

Digitized by Google

ಹಾಡಿಕೆ hâḍikĕ. Singing (ಗಾನ, ಸಂಗೀತ G.). ಬೀಡಿಕೆ ಯಿತ್ತು ಆದರೆ ಹಾಡಿಕೆಯಿನ್ದ ಬನ್ದೀತೇ?— ಹಾಡಿಕೆಯಿಲ್ಲದವನಾದರೆ ಹಾಡಿಕೆ ತಿಳಿಯುವದೇ? (Prvs.).

ಹಾಡಿಯ hâḍiya. = ಪಾಡಿಯ, etc. (Bp. 40, 35).

ಹಾಡಿಸು hâḍisu. = ಪಾಡಿಸು. To cause to sing (C.).

ಹಾಡು hâḍu. 1. = ಆಡು 4, ಪಾಡು 1. To sing (C.; Bp. 43, 32; 47, 39; 59, 24). ಹಾಡುವದು (ಗೀತ Si. 64). ಹಾಡೋ ತಮ್ಮ! ಹೂಡೋ, ಬೊಮ್ಮ!— ಹಾಡಲಿಕ್ಕೆ ತಿಳಿಯದಿದ್ದರೆ ಓಡಲಿಕ್ಕೂ ತಿಳಿಯದೇ?— ಹಾಡಿದ್ದೇ ಹಾಡೋ, ಕಿಸಬಾಯಿದಾಸ!— ಹಾಡುವ ವರೆಗೂ ಹಾಡು! ಕಡೇಲಿ ಕದಾ ಮುಚ್ಚಿ ಕೊಣ್ಡು ಹೋಗು!— ರೂಢಿಯಿಲ್ಲದವದ ಹಾಡಿದರೆ ತಿಳಿದಾನೇ? (Prvs.). — ಹಾಡು ಹಾಡು. rep. (Bp. 35, 3). ಹಾಡುತ್ತಾ ಹಾಡುತ್ತಾ ರಾಗ, ಉಗುಡುತ್ತಾ ಉಗುಡುತ್ತಾ ರೋಗ (Prv.).

ಹಾಡು hâḍu. 2. = ಆಡು 5, ಪಾಡು 2, ಹಾಡ. Singing; a song (ಗೀತ, ಗಾನ Hla.; Mr. 75; Si. 61; Bp. 55, 45; C.; B. 4, 136). ಗವುಡೀ ಹಾಡಿಗೆ ತವುಡೇ ತ್ಯಾಗ (Prv.). ರಾಗವಿಲ್ಲದ ಹಾಡು, ಭೋಗವಿಲ್ಲದ ಜನ್ಮ, ತ್ಯಾಗವಿಲ್ಲದನ ದೊರೆತನ ಹಾಡೂರ ಗೂಗೆಯನ್ತಕ್ಕ (Sp.). — ಹಾಡು ಹಾಡು. To sing a song (Bp. 22, 48).

ಹಾಡು hâḍu. 3. = ಪಾಡು 3, etc. Manner, mode (My.; B. 2, 30; 8, 7). **2**, suffering, trouble (My.; B. 2, 12. 47).

ಹಾಡುಕಾರ hâḍu-kâra. = ಹಾಡಕಾರ, ಹಾಡುಗಾರ, q. v. (ಗಾಯಕ G.). ಸ್ವರ್ಗಲೋಕದ ಹಾಡುಕಾರ (ಗನ್ಧರ್ವ G.).

ಹಾಡುಗಾರ hâḍu-gâra. = ಪಾಡುಂಗಾರ, ಹಾಡುಕಾರ, etc. A singer, a minstrel (My.; Si. 292).

ಹಾಡುಗಾರಿಕೆ hâḍu-gârikĕ. Singing (My.; ಗೀತ, ಗಾನ Si. 61).

ಹಾಣಾ hâṇâ. = ಹಣಾ. (Mhr. ಹಾಣಣೇಂ, to strike, beat; *cf.* ಹಣಿ 3). — ಹಾಣಾಹಾಣಿ. (Šmd. 220, o. r. ಹಣಾಹಣಿ). Mutual or vehement beating (Bp. 21, 19). 2, a mêlée (ಬಿರಸಿರುವದು Bhn. 18; Bh. 6, 7, 15).

ಹಾತು hâtu. A hand (My.; Mhr. ಹಾತ). — ಹಾತುಬೇಡಿ. A handcuff, a manacle (My.; Mhr.).

ಹಾತೆ hâtĕ. = ಆತೆ. (My.). — ಹಾತೆಹುಳು. = ಆತೆಹುಳು. (My.).

ಹಾದರ hâdara. = ಪಾದರ. Adultery; fornication (C.). ಹಾದರದ ನಾರಿ (ಸ್ವೈರಿಣಿ, ಪುಂಶ್ಚಲಿ, etc. Mr. 304); ಹಾದರದ ಮನೆ (ಅಸತೀವಸನ 198). ಗಣ್ಡನು ಸಾಯದೇ ಇರುವಾಗಲೇ ಮಿಣ್ಡನ ದೆಸೆಯಿನ್ದ ಹುಟ್ಟಿಸಿ ಕೊಣ್ಡ ಹಾದರದ ಮಗನು (ಕುಣ್ಡ Si. 193). ಹಾದರಕ್ಕೆ ಹುಟ್ಟಿದ ಮಗ ಹೊಯ್ಲಿಗೆ ಬಿದ್ದು ಸತ್ತ.— ಪಟ್ಟಿಗೆ ಮಯ್ಲಿಗೆ ಸಲ್ಲ, ಮುತ್ತಯ್ದೆಗೆ ಹಾದರ ಸಲ್ಲ.— ವಾದಾ ಮಾಡಿ, ಮಾಡಿ, ಹಾದರ ಕಲಿತು ಕೊಣ್ಡ.— ಹನ್ದಿಯವರು ಹಾದರ ಮಾಡಿದರೆ ತಮಟೆಯವರು ದಣ್ಡಾ ತೆತ್ತರು.— ಹಣವಿದ್ದವರು ಹಾದರ ಮಾಡಿದ್ದಕ್ಕೆ ಹಾದೀಲಿ ಹೋಗುವವರು ದಣ್ಡ ತೆತ್ತರು.— ಹೊನ್ನಿದ್ದಮ್ಮನ ತೊನ್ನು ಮುಚ್ಚಿತು, ಮುಕ್ಕಳಿದ್ದಮ್ಮನ ಹಾದರ ಮುಚ್ಚಿತು (Prvs.). ಹಾದರದ ಕಥೆಯನ್ನು (the Râmâyaṇa) ಸೋದರರ ವಧೆಯನ್ನು (the Bhârata) ಆದರಿಸಿ, ಪುಣ್ಯಕಥೆಯೆನ್ದು ಕೇಳುವ ಮಾದಿಗರ ನೋಡು! (Sp.). See Prvs. s. ದಣ್ಡ and ಹಗರಣ 1. — ಹಾದರಗಟ್ಟು. -ಕಟ್ಟು. To accuse of adultery (My.). — ಹಾದರಗಳ್ಳ. -ಕಳ್ಳ. An adulterer (My.). — ಹಾದರದ ಮೊಟ್ಟೆ. A bundle of adultery, *i. e.* a place where adultery abounds (My.). — ಹಾದರವಾಡು. -ಆಡು. To commit adultery (Bp. 54, 40; My.). ಹಗಲೆಲ್ಲಾ ಹಾದರವಾಡಿ, ಇರುಳು ಗಣ್ಡನ ತಲೆಯ ಹೇನು ತೆಗದಳನ್ತೆ (Prv.).

ಹಾದರಗಿತ್ತಿ hâdara-gitti. An adulteress; a fornicatress (ಜೋಡೆ, ಬೆದೆಗಾತಿ, ಪಾಣ್ಟ್ರು, ಸಿತಗೆ, ಜಾರೆ S[illegible], ಪುಂಶ್ಚಲಿ, ಧರ್ಷಿಣಿ, ಬನ್ಧಕಿ, ಅಸತಿ, ಕುಲಟೆ, ಇತ್ವರಿ, ಸ್ವೈರಿಣಿ, [illegible] ಸುಲೆ Si. 185; ಕುಲಟೆ Čb.; Bp. 40, 55; C.). ಹಾದರಗಿತ್ತಿಯ ಮಗನು (ದಾಣ್ಡಕಿನೇಯ, ಬನ್ಧುಲ, ಅಸತೀಸುತ, etc. Si. 190). ಹಾದರಗಿತ್ತಿಯ ಕರೆ ಹನ್ದರದೊಳಗೆ, ಗರ್ತಿಯ ಕರೆ ಪತ್ರಾವಳಿ [illegible]ಕ್ಕೆ.— ಹಾದರಗಿತ್ತಿಗೆ ಹದಿನೆಣ್ಟು ಹೆಸರು.— ಹಾದರಗಿತ್ತಿಯ ಕಾಲು [illegible] ಮೇಲೆ ನಿಲ್ಲದು.— ಕಳ್ಳಗೆ ಕಡುನಾಲಿಗೆ, ಹಾದರಗಿತ್ತಿಗೆ ಜಲವು [illegible]ಗೆ.— ನಾಗರಪಂಚಮಿಯಾದರೆ ಹಾದರಗಿತ್ತಿಗೆ ಏನು?— ಸೂಳೆಯ [illegible] ಸುಬೇದಾರ, ಹಾದರಗಿತ್ತಿಯ ಮಗ ಹವಲ್ದಾರ (Prvs.).

ಹಾದರತನ hâdaratana. Adultery (My.).

ಹಾದರಿ hâdari. = ಪಾದರಿ 1. Tbh. of ಪಾಟಳ (Šmd. 364 [illegible]. — ಹಾದರಿಯ ಮರ. (ಪಾಟಲಿ, ಅಮೋಘೆ, etc. Nr.). 2, a large tree Mimusops kauki Lin. (St. & Pl., = ಪಾತ[illegible]). — ಹಾದರಿಯ ಹೂ. (ಧಾತಕಿ Nr.).

ಹಾದರಿಗ hâdariga. = ಪಾದರಿಗ. An adulterer; a fornicator; a paramour (ಜಾರ, ಉಪಪತಿ Hla.; Mr. 243; Bp. 11, 51; ಅನುಕ. ಕಾಮೂಕ್ಥ, ವ್ಯಭಿಚಾರಿ G.).

ಹಾದರಿಗಿತಿ hâdariga-iti. (Šmd. 246). = ಹಾದರಗಿತ್ತಿ.

ಹಾದಿ hâdi. = ಪಾದಿ 1. A road, a way ([illegible] ಮಾರ್ಗ Nn. 42; ಅಯನ, ವರ್ತ್ಮ, ಮಾರ್ಗ, ಅಧ್ವ, ಪನ್ಥ, [illegible] etc. Si. 104; Rsv. 9, 26; C.). ನೀರು ಹರಿಯುವ ಹಾದಿ ([illegible] ಮಾರ್ಗ Si. 82); ೪೦೦೦ ಹಸ್ತಪರಿಮಾಣವಾದ ಹಾದಿ ([illegible] 1[illegible]). ಹಾದಿಗಳಿನ್ದ ಈಚೆಗೆ ಬರುವಿಕೆ (ಪ್ರವಹ 393). ಹಾದಿಯಾ [illegible] ಮಾಡಿ ನಮಿಸುವ ಮಾದಿಗರ ನೋಡು! (Sp.). ಅದೇ ಹಾದಿ [illegible] ಗವಳಿಗರು ನೆರೆವೂರಿಗೆ ಹಾಲು ಮಾರಲಿಕ್ಕೆ ಹೋಗುತ್ತಿದ್ದರು (B. 2, 13[illegible]). ಸುಮ್ಮನೇ ನಾನು ಹಾದೀ ಹಿಡಿದು ಹೋಗುತ್ತಿದ್ದೆನು (2, 47). [illegible] ದೆನ್ನ ಮೇಲೆ ಒಜ್ಜೆ ಹೇರಿದ ಬಡಿಕ ಕತ್ತೆಗಳು ಸುಮ್ಮನೇ ಹಾದೀ [illegible] ಹೋಗುತ್ತವೆ (3, 48). ಒನ್ದು ಹಾದುದೇಗುಲದ ಹಾದೀ [illegible] (3, 100). ಆತನನ್ನು ಹಾದಿಗೆ ತರ ಬೇಕೆನ್ದು, [illegible] ಣ್ಡರು (4, 56). ನೀನು ಅವನ ಹಾದಿಗೆ ಹೋಗ ಬೇಡ (4, 13[illegible]). ಅವರು ಅಗಸೆದಾಗಲಿಕ್ಕೆ ಬರಲಾಗಿ ಅಲ್ಲಿ ಒನ್ದು ಆನೆ ಹಾದೀ ಕಟ್ಟಿ ಕೊಣ್ಡು ನಿನ್ತಿತ್ತು (5, 48). ನಾನು ನನ್ನ ಹಳೋ ಹಾದಿಗೆ ತಪ್ಪಿದ್ದು, [illegible] ಲೋ ಹಾದೀ ಹಿಡಿಯುವದು ನನ್ನಿನ್ದಾಗಲೊಲ್ಲದು; ಅ[illegible], [illegible] ಬೇಕು? (5, 197). ಹಾದೀ ನೆಟ್ಟಗೆ ಮಾಡಿಸುವದಕ್ಕೆ [illegible] ದ ಹಣಾ ಕೊಡ ಬೇಕಾಗುತ್ತದೆ (5, 300). ಹಾದಿಯಲ್ಲಿ ಹೋಗುವವನನ್ನು ಅಪ್ಪ! ಅನ್ದರೆ, ನೀನು ಯಾರಿಗೆ ಹುಟ್ಟಿದಿ, [illegible]— ಬೋಧಕನಾದರೆ, ಸಾಧಕ ಮಾಡಲಿ! ಹಾದಿಗೆ ಏನು [illegible]?— [illegible] ದಾ ತಿಳಿಯದಿದ್ದರೆ ಹಾದಿ ತಿಳಿಯದೇ?— ಮಾದಿಗನ [illegible] ನ್ನವಿದ್ದರೆ ಹಾದೀಲಿ ಹೋಗೋರಿಗೆ ಏನು?— ಸೇದಿದ ನೀರು ಹಾದೀಗೆ ಹಾಕ್ಯಾರೇ? (Prvs.). — ಹಾದಿಖರ್ಚು. The expenses of a journey, travelling expenses (B. 5, 159). — ಹಾದಿಗೆ[illegible] ಕೊಳ್ಳು. To commence to go, to go (My.). — ಹಾದಿ[illegible] A road-quarrel (in which one has no personal concern My.). ಹಾದಿಜಗಳ ಹಣವದ್ದಕ್ಕೆ ಕೊಣ್ಡು ಕೊಣ್ಡರು (Prv.). — ಹಾದಿ ನಡೆ. To go along the road, to walk on a road (My.). ಹಾದಿ ನಡೆಯೋಣ (ಎರಿ Čb.). ವಾದಿಯ ಸಂಗಡ ವಾದಿ[illegible] ಕುಣ್ಟನ ಕೂಡ ಹಾದಿ ನಡಿಯಲು ಸಲ್ಲ (Prv.). [illegible] ವದು, ಮೃಗವು ತಾನಲ್ಲ; ಹಾದಿಬದಿಯದು, ಹಾದಿ ನಡೆಯುವ[illegible] (a boat, Bĕḍaguḍaspadi). — ಹಾದಿ ನೋಡು. To look out for, to wait for, to wait, to look forward to (My.). [illegible] ಅಪ್ಪ ಬರುವ ತನಕ ನಾನು ಹಾದೀ ನೋಡುತ್ತೇನೆ (B. 2, 7[illegible]). [illegible] ಗಳು ತಮ್ಮಷ್ಟಕ್ಕೆ ತಾವೇ ನಿಲ್ಲುವ ಹಾದೀ ನೋಡ ಬೇಕು (4, 6[illegible]). [illegible]ಕ್ಕನು ತನ್ನ ಗೆಳತಿಯರನ್ನು ಕರೆ ಕಳಿಸಿ, ಅವರ ಹಾದೀ ನೋಡುತ್ತ [illegible] ದ್ದಾಳೆ (4, 137). ಶಾನ್ತಮನಸುಳ್ಳವರಾಗಿ ಸಾವಿನ ಹಾದೀ ನೋಡ[illegible] ದರು (5, 155). — ಹಾದಿದಾಕ. A man who sits by the road

Digitized by Google

side (on festive occasions) and asks alms from them who pass by him (My.). — ಹಾದಿಯವ. -ಅವ. A man of the road, a wayfarer. ಬೀದಿಲಿ ಬೆಲ್ಲ ಸುರಿದು, ಹಾದಿಯವರ ಸಂಗಡ ಜಗಳಾಡಿದ ಹಾಗೆ (Prv.). — ಹಾದಿಹೋಕ. A man who goes on a road, a wayfarer. ಹಾದಿಹೋಕನ ತಲೆ ಕಟ್ಟೇ ದೇವರಿಗೆ ಪೂಜೆ (*i. e.* he is killed and offered to that deity as a nara-bali, a custom that prevailed in former times, Prv.).

ಹಾದಿಕಾಱ hâdi-kâṟa. A traveller (ಅಧ್ವಗ G.; C.; B. 2, 22; 3, 44; 4, 180).

ಹಾದು hâdu. P. p. of ಹಾಯು. (C.).

ಹಾನ hâna. The act of leaving or quitting. (Abh. Pr. 6, 66).

ಹಾನಿ hâni. Abandonment, relinquishment; neglect; loss, want, privation, absence; decrease, deficiency, diminution; detriment, damage, harm, destruction, extinction, hurt (ಅಪಹಾರ, ಅಪಚಯ Si. 392; Ĉh. v. 37; J. 7, 26; 10, 24; Bp. 40, 73; B. 4, 24). ಬುದ್ಧಿಯಿಲ್ಲದವನ ಸ್ನೇಹ ಇದ್ದ ಮಾನಕ್ಕೆ ಹಾನಿ. — ತನಗೆ ಬಂದ ಹಾನಿ ಅರ್ಥದಿಂದ ಹೋಯಿತು. — ಧ್ಯಾನಿಸಿ ಕೂತಾಗ್ಯೂ ಹಾನಿ ಬರುವದು ತಪ್ಪೀತೇ? (Prvs.).

ಹಾನು hânu. = ಅಹನು, ಆನು 4. See ಹಾನೆ; ಇದ್ಧಾನು.

ಹಾನೆ hânu-ĕ3. = ಆನೆ 1. See ಇದ್ಧಾನೆ.

ಹಾನೆ hânĕ. = ಪಾನೆ. A pot. ಸತ್ತ ಎಮ್ಮೆಗೆ ಹಾನೆಹಾಲು, ಹೆತ್ತ ಎಮ್ಮೆಗೆ ಮೂಳೆಹಾಲು (Prv.).

ಹಾನ್ತಿ hânti. — ಹಾನ್ತಿಹುಲ್ಲು. A common fodder-grass, Anthistiria ciliata Lin. (Z.). See ಮರ-.

ಹಾಪಿತ hâpita. Caused to be relinquished, made to give up; abandoned, left; omitted; lost. See ಪಿ-.

ಹಾಪೆ hâpĕ. = ಅಗಪೆ, etc. (My. among Brâhmaṇas who speak a corrupt Tamil).

ಹಾಮಚಿ hâmaĉi. — ಹಾಮುಚಿಬಳ್ಳಿ. (ವಿಷ್ವಕ್ಸೇನಪ್ರಿಯೆ, ಘೃಷ್ಟಿ, ವಾರಾಹಿ, ವದರೆ, ವಾಚಿತೀಗೆ Si. 159).

ಹಾಯ್ hây. 1. = ಪಾಯ್ 1 q. v., etc. To jump over; etc., etc. (Bh. 1, 5, 9; 1, 8, 88. 93; 2, 13, 28; 3, 13, 25. 27. 30. 31. 33; J. 7, 45. 52; 28, 6). P. p. ಹಾಯ್ದು (exceptionally also in the common language). ಹಾಯ್ದಿತ್ತು (B. 3, 94). ದೋಣಿ ಮುನ್ನಾದವುಗಳಿನ್ದ ಹಾಯ್ದು ಆಚೇ ದಡಕ್ಕೆ ಸೇರತಕ್ಕ ದುಸ್ತರಜಲವುಳ್ಳ ಹೊಟಿ ಮುನ್ನಾದವುಗಳು (ನಾವ್ಯ Si. 83); ಹೊಟಿ ಹಾಯ್ದು ದಾಟಿಸುವ ಹಡಗಿನವನಿಗೆ ಕೊಡುವ ಮಜೂರೀ ರೊಕ್ಕ (ಆತರ 84); ಕಡೆ ಹಾಯದ ದಾರಿ (ಅಪಥಿ, ಅಪಥ 105); ಹಾಯ್ದು ಓಡುವಿಕೆ (ವಲ್ಗಿತ 274); ಗೂಳಿ ಹಾಯ್ದು ಹಿಮ್ಮಾಲಿಸಿದ ಆಳಳು (ಸನ್ಧಿನಿ 321). ನೀರ ನಡೆ ಹಾಯ್ವ ತೆಪ್ಪ (ಉಡುಪ Mr. 416).

ಹಾಯ್ hây. 2. = ಪಾಯ್ 2, etc. Crossing; going; propriety: pleasurable, nice, pleasant (as a meal, a place, sleep, etc. My.). — ಹಾಯ್ಗಡ. -ಕಡ. A place where a river is forded (My.). — ಹಾಯ್ಬಿಡು. -ಬಿಡು. To let loose (Râm. 6, 19, 17).

ಹಾಯ್ hây. 3. A sail (My.; M. ಪಾ, ಪಾಯ್, a mat; a sail; a sheet of paper; T. ಪಾಯ್, a sail; a mat).

ಹಾಯನ hâyana. *A year.* 2, *a ray.* 3, *a sort of red rice.*

ಹಾಯಿ hâyi. 1. = ಹಾಯ್ 1, etc. P. p. ಹಾಯಿದು (My.; B. 5, 35).

ಹಾಯಿ hâyi. 2. = ಹಾಯ್ 2, etc. (Tĕ. ಹಾಯಿ = ಸುಖ, ಸೌಖ್ಯ). — ಹಾಯಿದೋಱು. -ತೋಱು. To appear, *i. e.* to be, agreeable. ಕಿವಿಗೆ ವ್ಯಕ್ತವಾಗಿ ಕೇಳ ಬಾರದೇ ಇದ್ದರೂ ಹಿತವಾಗಿ ಹಾಯಿದೋಱುವ ನಾದ (ಕಲ Si. 61).

ಹಾಯಿಕು hâyiku. = ಹಾಕು, etc. (Bp. 43, 13; Râm. 5, 8, 72; 6, 10, 11; Bh. 1, 8, 15; 2, 12, 50; 8, 24, 24).

ಹಾಯಿಸು hâyisu. = ಪಾಯಿಸು, ಹಾಯ್ಸು, ಹಾಸು 3. To cause to go (B. 5, 300); to cause to go forward, to stretch forward, to extend (B. 3, 114; My.); to cause to pass over or cross (My.); etc.

ಹಾಯಿಸುವಿಕೆ hâyisuvikĕ. Causing to go, etc. See ಕಡೆ-.

ಹಾಯು hâyu. = ಹಾಯ್ 1, etc. P. p. ಹಾದು (C.). ಅಲ್ಲದ ಹುದೆಮ್ಬ ಅಜ್ಞಾನಸೊಡನಾಟ ಕಲ್ಲು ಹಾದನ್ತೆ (Sp.). ಎಲೋ, ಹುಡುಗಾ! ನಿನ್ನ ಕೆಯ್ಯೊಳಗಿನ್ದ ನೆತ್ತರ ಹಾಯುತ್ತದೆ (B. 2, 47). ಆಡುಗಳು ಸಿಟ್ಟಗೆದ್ದು, ಅವರನ್ನು ಹಾಯುತ್ತವೆ (5, 24). ಹೋತಿನ ಕೋಡುಗಳು ಮೇಲ್ಗಡೆಗೆ ಹಾದಿರುತ್ತವೆ (3, 9). ಅವರಿಬ್ಬರು.. ಒನ್ದು ತೋಟಕ್ಕೆ ಹೋಗಿ, ಅಲ್ಲಿಯ ಮಾವಿನ ತೋಪಿನೊಳಗಿನ್ದ ಹಾದು ಬರುತ್ತಿದ್ದರು (3, 37). ನಮ್ಮ ಬಾಗಿಲ ಮುನ್ದೆ ಹಾದು ಹೋಗುತ್ತಿದ್ದರು (3, 38). ಮೋಟಿ ನೀರ, ಉದ್ದಕ್ಕೆ ಹಾದಿರುತ್ತದೆ (3, 74). ಮೇಲಕ್ಕೆ ಹಾದ ಹೊಕ್ಕುಳ (ಗಣ್ಡೂಷೆ); ವಾತದಿನ್ದ ಯಾವನ ಹೊಕ್ಕುಳ ಹಾದಿರುತ್ತದೋ, ಅವನು ತುಣ್ಡಿಲ (G.). ತಲೆ ಗಟ್ಟಿಯೆನ್ದು, ಕಲ್ಲು ಹಾಯ ಬಾರದು (Prv.). See Prv. s. ನಮ್ಬು. — ಹಾದಾಟ. -ಆಟ. Mutual butting (My.); fording (My.). — ಹಾದಾಡು. -ಆಡು. To butt with horns (My.); to pass over, to cross (My.; B. 1, 16).

ಹಾಯುವಿಕೆ hâyuvikĕ. Passing over, etc. (ಉಡ್ಡೀನ Si. 178). See ಕಡೆ-.

ಹಾಯ್ಕಿಸು hâykisu. = ಹಾಕಿಸು. (Bp. 28, 27; J. 11, 33; see ಕಡೆ-).

ಹಾಯ್ಕು hayku. = ಹಾಕು. (Bp. 18, 14; 21, 35. 48; 22, 10; 24, 59; 30, 15; 32, 26; 42, 35; J. 10, 30; 13, 63; 14, 18; Bh. 2, 13, 46. 50). See ಇದಿರ್ವಾಯ್ಕು.

ಹಾಯ್ಸು hâysu. = ಹಾಯಿಸು, etc. To cause to go or proceed, to drive (Bp. 21, 39); etc.

ಹಾರ್ hâr. = ಪಾರ್, ಹಾರು 1. To look for; to investigate, etc. **2,** to desire (Grj. 9, after 58; Bp. 23, 34). ಅಸನ ಎನ್ದೊಡೆ ಶತ್ರುವನಾಕ್ರಮಿಸಲು ಸಮರ್ಥನಲ್ಲ ಎನ್ದು, ದೇಶಕಾಲಾದಿಗಳಂ ಹಾರುತೆ ದುರ್ಗಾದಿಗಳಂ ಹೆಚ್ಚಿಸುವ ವಿಜಿಗೀಷುವಿನ ಸ್ಥಿತಿಯು (ಅಸನ Nr.). — ಹಾರ್ವ. = ಪಾರ್ವ, etc. A Brâhmaṇa (My.). ಪರ್ವಕಾಲದಲ್ಲಿ ಹಾರ್ವನಾದರೆ ಗರ್ವವು ಯಾಕೆ? — ಪೂರ್ವ ಹೇದ್‌ದರೆ ಹಾರ್ವ ಓಡ್ಯಾನು (Prvs.). See Sp. s. ಹೊಲೆ. — ಹಾರ್ವತಿ. = ಪಾರ್ವತಿ. A Brâhmaṇa woman (My.; see Sp. s. ತಿಳಿ 4).

ಹಾರ hâra. = ಹಗರ, etc. (Bh. 1, 7, 1; see ಕೆಯ್ವಾರ No. 1).

ಹಾರ hâra. = ಅರ 3. Taking; conveying; seizing; carrying away or off; robbing; removing, depriving of; obtaining, holding, retaining; captivating, charming; throwing, casting; offering; loss, waste. 2, *a string of pearls; a necklace of sixty-four or hundred and eight strings;* any necklace. See Mr. s. ಏಕಾವಲಿ; Si. 217. 218. 230.

ಹಾರಕ hâraka. = ಹಾರಕು. The grain Paspalum scrobiculatum Lin. (ಉದ್ದಾಳ, ಕೋದ್ರವ Mr. 373; ಕೋರದೂಷ, etc. Si. 304). ಹಾರಕ ಬೆಳೆಯುವ ನೆಲ (ಕೌದ್ರವೀಣ Si. 301). — ಹಾರಕದಕ್ಕಿ. -ಅಕ್ಕಿ. = ಹಾರಕ. (My.).

ಹಾರಕ hâraka. Taking; bringing; conveying; seizing; etc. See ಮಣ್ಡ-.

ಹಾರಕು hâraku. = ಹಾರಕ. (ಕೋರದೂಷ, ಕೋದ್ರವ Nr.).

Digitized by Google

ಹಾರಕಳು ಬೆಳೆವ ಕೆಯಿ (ಕೌದ್ರವೀಣ Nr.). ಹಾರಕಿನ ಕೆಯಿ (ಕೌದ್ರವೀಣ Hlâ.). ಹಾರಕಂ ಬೆಳೆವ ಕೆಯ್ (ಕೌದ್ರವೀಣ Mr. 94).

ಹಾರಯಿಸು hârayisu. = (ಆರಯಿಸು), ಹಾರಯ್ಸು, ಹಾರವಿಸು. (My.).

ಹಾರಯ್ಕೆ hârayke. (= ಆರಯ್ಕೆ, etc.). Wish, desire (ದೋಹದ, ಇಚ್ಛೆ, ಕಾಂಕ್ಷೆ, ಸ್ಪೃಹೆ, ಮನೋರಥ, ಕಾಮ, ಅಭಿಲಾಷ, etc. Si. 70; ತೃಷ್ಣೆ, ಸ್ಪೃಹೆ 420; ಶ್ರದ್ಧೆ, ಸ್ಪೃಹೆ 433). ಹಿತವಾಗಲೆಮ್ಬ ಹಾರಯ್ಕೆ (ಅತಿಸ್ 463).

ಹಾರಯ್ಸು hâraysu. = (ಆರಯ್ಸು), ಪಾರಯ್ಸು, ಹಾರಯಿಸು. To look for; to get a longing after; to desire. ಧನವನ್ನು ಹಾರಯ್ಸುವವಳು (ಇಚ್ಛಾವತಿ, ಕಾಮುಕಿ, ಭೋಗವನ್ನು ಬಯಸುವವಳು Si. 185); ಚನ್ನಾಗಿ ಹಾರಯ್ಸಲ್ ಪಟ್ಟದು (ಪ್ರಾರ್ಥಿತ, ಅರ್ಥಿತ, ಅಪೇಕ್ಷಿಸಲ್ ಪಟ್ಟದು 381). ಪರರ ದುಃಖವ ಕೇಳಿ, ಮನದಲಿ ಹಿರಿದು ಚಿನ್ತಿಸಿ, ಪರರ ಪದವಿಗೆ ಹರುಷ ಮಿಗೆ ಹಾರಯ್ಸ (Akrûraniti 32). See Grj. 4, after 104; 5, 81; Râm. 6, 14, 21; 6, 44, 52; J. 7, 40; 13, 5; 18, 9; 27, 18.

ಹಾರವ hârava. See s. ಹಾರು 2.

ಹಾರವ hâ-rava. The sound or cry of ಹಾ (Čpr. 5, 11. 12; Abh. P. 14, 101).

ಹಾರವಗಿತ್ತಿ hârava-gitti. See s. ಹಾರು 2.

ಹಾರವಲಯ hâra-valaya. An encircling necklace (J. 2, 8). 2, ಹಾ-ರವ-ಲಯ. destruction connected with the cry of ಹಾ (2, 8).

ಹಾರವಾಣ hâravâṇa. 1. Tbh. of ಪಾರಾವತ. (My.).

ಹಾರವಾಣ hâravâṇa. 2. = ಹಾರಿಯಾಳ q. v., etc. (My.).

ಹಾರವಿಸು hâravisu. = ಹಾರಯಿಸು, ಹಾರಯ್ಸು, etc. (Bp. 4, 13; 5, 42. 48; 12, 20. 23; 44, 15; 54, 65; 61, 64; Râm. 4, 2, 10; 5, 1, 5).

ಹಾರಹೂರೆ hârahûrĕ. *A grape* (ದ್ರಾಕ್ಷೆ Mr. 112).

ಹಾರಿ hâri. Taking; conveying; bringing; carrying away; removing, taking away; seizing, robbing; obtaining, acquiring; *captivating, charming, delighting; pleasant; agreeable, beautiful.*

ಹಾರಿಕೆ hârikĕ. She who brings, takes, seizes, removes, etc. See ಕುಟ್ಟ-.

ಹಾರಿದ್ರ hâridra. (fr. ಹರಿದ್ರಾ). *Yellow;* yellow colour.

ಹಾರಿಯಾಳ hâriyâḷa. = ಪಾರುವಾಣ 1, ಹಾರವಾಣ 2, ಹಾರಿವಾಳ, ಹಾರುವಾಣ, ಹಾಲಿವಾಣ. Tbh. of ಪಾರಿಭದ್ರ. — ಹಾರಿಯಾಳದ ಮರ. The coral tree, Erythrina indica Lam. (ಪಾರಿಜಾತಕ, ಪಾರಿಭದ್ರ, ಮನ್ದಾರ, ನಿಮ್ಬತರು Nr.).

ಹಾರಿವಾಳ hârivâḷa. = ಹಾರಿಯಾಳ, etc. The coral tree (ಮನ್ದಾರ, ಪಾರಿಭದ್ರಕ Hlâ.).

ಹಾರಿಸು hârisu. = ಹರಿಸು. See ಸಂ-.

ಹಾರೀತ hârita. *A kind of pigeon of a yellowish green colour, Columba hariola Buch.* (ಹೊರಸು Hlâ.).

ಹಾರೀತಕ hâritaka. = ಹಾರೀತ. (Čpr. 6, after 86).

ಹಾರು hâru. 1. = ಹಾರ್, etc. (Bp. 3, 80; 11, 11; 35, 54). ಹಾರುವುದು (ಯಾಚನೆ, ಪ್ರಾರ್ಥನ Mr. 235). ಹಾರಿಬೇಡ್ಪುದಂ (ಅರ್ಥ, ಯಾಚಕ, ಮಾರ್ಗಣ, ವನಿಪ Mr. 235). — ಹಾರುವ. = ಹಾರ್ವ, etc. A Brâhmaṇa (Bp. 57, 36; Râm. 5, 8, 49; C.; B. 2, 10). ಹಾರುವನಿಗೆ ಅಳಾಗ ಬೇಡ, ಗಾಣಿಗನಿಗೆ ಎತ್ತಾಗ ಬೇಡ. — ಕುದುರೇ ಹಿನ್ದಿರ ಬೇಡ, ಹಾರುವನ ಮುನ್ದಿರ ಬೇಡ. — ಹಾರುವನ ಬದುಕು ಮಗನಿಗೆ, ಸೆಟ್ಟಿಯ ಬದುಕು ಅಳಿಯನಿಗೆ. — ಹಾರುವರ ಮನೇಲಿ ಹರಿಸೇವೆ ಆದರೆ ಮೂದಿನಾಯಿಗೆ ಓಡ್ಯಾಟ. — ಹಾರುವನ ಮೋದಿಯಾದರೂ ನೀರಿನಿನ್ದ ತೊಳೆಯುತಿದ್ದರೆ ನಾಚಿದೆ ಇದ್ದೀತೇ? — ಎೀರನ ಶೌರ್ಯ ಹಾರುವನ ಮೇಲೆಯೇ? — ಹೊಲೆಯನ ಪಾಯಸ ಹಾರುವನಿಗೆ ಯಾಕೆ? — ಹಸಿದ ಹಾರುವನನ್ನು ತೊಡಗ ಬಾರದು, ಉಣ್ಡ ತುರುಕನನ್ನು ತೊಡಗ ಬಾರದು. — ಹಲವು ದೇವರನ್ನು ನಮ್ಬಿ, ಹಾರುವ ಕೆಟ್ಟ; ಹಾರುವನನ್ನು ನಮ್ಬಿ, ಹಲವರು ಕೆಟ್ಟರು. — ಹಾರುವನಿದ್ದ ಊರು ಹಾಳು, ಎಡವಿದ ಕೆಲ ಹಾಳು. — ಹಾರುವ ಮಾಡುವದು ಓಣ್ಣಿ, ಹೊಲೆಯ ಮಾಡುವದು ಹೆಣ್ಣಕ್ಕಿ. — ಹಾರುವನ ದೊಣ್ಣೆ ಹರದಾರಿ ದೂರ. — ಹಾರುವನ ಹಸಿ ಬೋನಗಿತ್ತಿಗೆ ಸೀರೆ ಬಿಟ್ಟಣ (Prvs.). — ಹಾರುವಕುಲ. The Brâhmaṇa tribe or caste (Bp. 3, 80). — ಹಾರುವಗಿತ್ತಿ. -ಕಚ್ಚೆ. The end of a garment put into regular folds and tucked in behind, as is done by Brâhmaṇas (My.). — ಹಾರುವಗಿತ್ತಿ. = ಹಾರ್ವತಿ. A Brâhmaṇa woman (My.). — ಹಾರುವಯ್ಯ. -ಅಯ್ಯ. Mr. Brâhmaṇa (ದ್ವಿಜಾತಿ, ಭೂದೇವ, ಬ್ರಾಹ್ಮಣ, etc. Si. 232). ಹಾರುವಯ್ಯನ ಸಂಗ ಹಲವು ಭಂಗ (Prv.). — ಹಾರು ಹಾರು. rep. (Bp. 6, 26). — ಹಾರೋ. ಹಾರೋನು. = ಹಾರುವ. ಹಾರುವನು. (My.). ಸೋರೆಕಾಯಿ ಆದರೆ ಹಾರೋನಿಗೆ ಆದೀತೇ? (Prv.). — ಹಾರೋಕುನ್ನಿ. A dog of a Brâhmaṇa, a mean Brâhmaṇa. ಹೋರನಿಗೆ ಸೇರಿ ಕೆಟ್ಟು, ಹಾರೋನಿಗೆ ಸೋತು ಹೋದ (Prv.). — ಹಾರೋಗೇರಿ. -ಕೇರಿ. A street where Brâhmaṇas live (My.).

ಹಾರು hâru. 2. = ಪಾರು 1. Looking for; looking after; desiring. — ಹಾರ. -ಅ. = ಹಾರವ. See ಹಿನ್ದೆ. — ಹಾರವ. -ಅವ. A Brâhmaṇa. ಅಧ್ಯಾಸವಿಲ್ಲದ ಹಾರವ ಅಳ್ಳಾಯರ್ ಮಾಡಿದರೆ ಗಡ್ಡ ಮೀಸೆ ಹೊತ್ತಿತು (Prv.). — ಹಾರವಗಿತ್ತಿ. A Brâhmaṇa woman. ಸೀರೆ ಆದರೆ ಹಾರವಗಿತ್ತಿಗೆ ಆದೀತೆ (Prv.). — ಹಾರವಯ್ಯ. Mr. Brâhmaṇa. ಅಸಗಾರ ಹಾರವಯ್ಯ ಗೋಣಿಯೊಳಗೆ ಮೂಗಳ ಕಟ್ಟಿದ (Prv.).

ಹಾರು hâru. = ಪಾರು. See ಕವಳಿಗೆ.

ಹಾರುವ hâruva. See s. ಹಾರು 1.

ಹಾರುವಗಿತ್ತಿ hâruva-gitti. See s. ಹಾರು 1.

ಹಾರುವಾಣ hâruvâṇa. = ಹಾರಿಯಾಳ, etc. (My.).

ಹಾರೆ hârĕ. = ಆರೆ 5. See ಇದ್ಧಾರಿ.

ಹಾರೆ hârĕ. = ಪಾರೆ, etc. A crowbar (ಬೇದಿ Mr. 371; My; Bp. 23, 34; C. Bp. 47, 42); a short hoe (S. Mhr.; Te. ಪಾರೆ). ಹಾರೆ ಮೋಟು, ಗುದ್ದಲಿ ಮೊದ್ದು, ಗೆಯ್ಯುವವಗೆ ಬಿತ್ತಿ ಪಟ್ಟೆ. — ರಾಯರ ಪಾದದಾಣೆ! ಹಾರೆ ನುಂಗು! — ಹಾರೇ ಕೆಲಸ ನನ್ನನ್ನ ಬಿಡಿಸು, ಉತ್ತರ ದೋಸೆಗೆ ನಾನು ಒಡೆಯ (Prvs.). — ಹಾರೆಕಾಲು. The spokes of a wheel (My.). — ಹಾರೆಗಟ್ಟಿಗೆ. -ಕಟ್ಟಿಗೆ. A crowbar (ಅಯೋಮುಖ, ತೂಲಿಕೆ Mr. 158).

ಹಾರೋ hârô. See s. ಹಾರು 1.

ಹಾಱ್ hâṟ. = ಹಾಱು 1, etc. ಹಾರ್ವುದು (Bp. 58, 36).

ಹಾಱಸು hâṟasu. = ಹಾಱಿಸು. (Čb. 25, 81).

ಹಾಱಿಕೆ hâṟikĕ. Jumping, a jump, etc. (Râm 6, 30, 13; B. 4, 37. 212; ಲಂಘನ G.).

ಹಾಱಿಸು hâṟisu. = ಆಱಿಸು 2, ಪಾಱಿಸು. To cause to jump or jump over (My.; B. 5, 62); to cause to fly (My.); to cause to fly down, to throw (as a horse does a rider, My.; B. 4, 184); to remove (as a fault, My.; B. 4, 200); to cause to copulate (My.); to cause to explode, to discharge, to fire (as gunpowder or fire-arms, My.; B. 4, 30. 112. 192).

ಹಾಱು hâṟu. 1. = ಆಱು 5, ಪಾಱು 1 q. v. To jump, to run; to run or go away; etc. (Bp. 29, 14.

Digitized by Google

86, 28; 46, 23; 52, 18; 56, 20; 59, 24; J. 20, 47; Bh. 2, 13, 44. 50; C.); to be discharged or fired (as fire-arms, My.). ಹಾಱುವುದು (ಡಯನ Hlâ.). ಕೆಳಯಿಕ್ಕೆ ಹಾಱುವ ಪಕ್ಕಿ (ಸಣ್ಡೀನ); ಮೇಲಕ್ಕೆ ಹಾಱುವ ಪಕ್ಕಿ (ಉಡ್ಡೀನ Nr.). ಹಾಱಿ ಬೀಳುವ ಮೀನು (ಪ್ರೋಷ್ಠಿ, etc. Si. 87); ಹಾಱುವ ಸ್ವಭಾವವುಳ್ಳವನು (ಉತ್ಪತಿಷ್ಣು, ಉತ್ಪತಿತೃ 360); ದನಗಳ ಮೇಲೆ ಗೂಳಿಗಳು ಹಾಱುವ ಸಮಯ ಗೂಳಿ ಬಸಱು ಮಾಡುವಿಕೆ (ಪ್ರಜನ, etc. 396); ಹಾಱಿ ಹೋಗುವದು (ಪ್ಲವಗ 410). ಆಱು ಬೆಟ್ಟವನೊಬ್ಬ ಹಾಱ ಬಹುದೆನ್ನಲ್ಲಿ, ಹಾಱ ಬಹುದೆನ್ನು, ಎನ ಬೇಕು; ಮೂರ್ಖನನು ಗೆಲ ಬಾರದಯ್ಯ! (Sp.). ನಿನಗೆ ಏನಾದರೂ ನೋವು ಆದಾಗ ಇಲ್ಲವೆ ಬೇನೆ ಬನ್ದಾಗ ನಿನ್ನ ತಾಯಿ ತನ್ನಗಳ ಹರಣ ಹಾಱುವದು (B. 1, 25). ಹಾಱುವ ಕಾಗೆ ಹೋಲ್ಯಾಡಲಿಕ್ಕೆ ಬಲ್ಲಿತೇ (or ಬಲ್ಲದೇ)?—ಹಾಱುವ ಗುಬ್ಬಿಗೆ ಗೋಡಿ ಕಲ್ಲು ಕಟ್ಟಿದ ಹಾಗೆ.—ಗೋಡೇ ಹಾಱುವವ ಬೇಲಿ ಹಾಱನೇ?—ಜಗಲೀ ಹಾಱದವ ಗಗನಾ ಹಾಱ್ಯಾನೇ?—ನಡಕಟ್ಟು ಕಟ್ಟಿದರೆ ಮುದೂ ಹಾಱಿ ಹೋಗ ಬಹುದೇ?—ಪಾಗಾರ ಹಾಱದವನು ಸಾಗರ ಹಾಱ್ಯಾನೇ?—ಬಾರಿ ಬಾರಿ ಬನ್ದವರು ಹಾಱಿ ಹಾಱಿ ಹೋಗರೇ?—ಮುಱಿಗೆ ಹೆದಱಿ, ಹೊಱೀಲಿ ಹಾಱಿದ ಹಾಗೆ.—ತೀರದ ಕಾರ್ಯ ಹಾಱಿದರೂ ಆಗದು (Prvs.). ಗುಣ್ಡು ಹಾಱು (G. 184).— ಹಾಱ ತೆಗಸು. To cause or make (somebody) to open (a door) suddenly (Bp. 50, 19).— ಹಾಱ ತೆಗೆ. To cause (a door) to fly open (Bp. 28, 49; 43, 47); to open a door completely (My.).— ಹಾಱ ಬಡಿ. To open (a door) completely (My.).— ಹಾಱಾಡಿಸುವಿಕೆ. -ಆಡಿಸುವಿಕೆ. Causing to jump or move quickly about. ಕಣ್ಣುಹುಬ್ಬುಗಳನ್ನು ಹಾಱಾಡಿಸುವಿಕೆ ಮುನ್ತಾದದು (ಅಂಗಿಕ Si. 66).— ಹಾಱಾಡು. -ಆಡು. To jump about, to run about, to fly about, etc. (B. 2, 2. 5; 3, 10. 68; 5, 86).— ಹಾಱಾಡುವಿಕೆ. -ಆಡುವಿಕೆ. Flying about, etc. ಹಾಱಾಡುವಿಕೆ (ಪ್ರಡೀನ, ಡೆಗೆಯುವಿಕೆ Si. 178).— ಹಾಱ್ಯಾಡು. -ಆಡು. = ಹಾಱಾಡು. (B. 3, 80). ಬೇಱೆ ಆದರೂ ಹಾಱ್ಯಾಡೋದು ತಪ್ಪಲಿಲ್ಲ (Prv.).

ಹಾಱು hâṟu. 2. = ಪಾಱು 2, ಹಾರ್. Running; jumping; flying; throbbing; copulating. See ಎದೆ-.— ಹಾಱುಗಾಲಿ. -ಕಾಲಿ. A woman who has feet that run about: a gad-about (My.).— ಹಾಱುಗುಪ್ಪೆ. -ಕುಪ್ಪೆ. A game at which boys form two parties each of which makes a heap of sand in its front, when one of a party is ordered to jump from one heap to the other; if he is not successful, one jumps on his shoulders and drives him about (My.; ಪಱಿಮುಱಿ Kk. 71; ಪಱಿಮುಱಿ Šm. 56, o. r. ಪರಿಮುಱಿ). ಹಾಱುಗುಪ್ಪೆಯಾಟ ಆಡು, to play that game (My.).— ಹಾಱುಗೆಯ್ತ. -ಕೆಯ್ತ. Copulation, coitus (Čpr. 8, after 56).— ಹಾಱುಮೀನು. (ಪ್ರೋಷ್ಠಿ, ಶಫರಿ Si. 87).

ಹಾಱುವಿಕೆ hâṟuvikĕ. Jumping, leaping over, etc. (ಅತಿ, ಲಂಘನ Si. 467).

ಹಾರ್ haṟ. = ಹಾಱು 2.— ಹಾರ್ಗುಪ್ಪೆ. -ಕುಪ್ಪೆ. = ಹಾಱುಗುಪ್ಪೆ. (Bp. 32, 37).

ಹಾರ್ದ hârda. (fr. ಹೃದ್). *Affection, love, kindness.*

ಹಾರ್ದಿಕ್ಯ hârdikya. A N. of Kritavarma. (J. 13, 35).

ಹಾರ್ಯ hârya. To be taken, to be taken away (adj.). See ಅ-, ಪರಿ-. 2, the dividend.

ಹಾರ್ವ hârva. See s. ಹಾರ್.

ಹಾರ್ವಿತಿ hârviti. See s. ಹಾರ್.

ಹಾರ್ಸ hârs. A horse (Si. 272).

ಹಾಲ್ hâl. = ಪಾಲ್ 1, ಹಾಲ, ಹಾಲು. Milk; the white juice of some plants; the juice of sugar-cane and that of a cocoa-nut; vaccine matter (My. as ಹಾಲು; ಊಧಸ್ಯ, ಕ್ಷೀರ, ದುಗ್ಧ, ಪಯಸ್, ಪೀಯೂಷ Hlâ.; Bp. 28, 65; 50, 35; 55, 15; 57, 80; 60, 49. 60). ಹಾಲಾ! ಅಮರ್ದಾ! ಇನಿದು, ಗಡಾ! (Šmd. 69). ನಾಗುಳ ಹಾಲ ಕಱೆವ ಆಕಳು (ದ್ರೋಣದುಘೆ); ನಿನ್ನೆ ಕಱೆದ ಹಾಲಿನ್ದಾದ ಬೆಣ್ಣೆ ತುಪ್ಪವು (ಹೈಯಂಗವೀನ Nr.). ಆವುಗಳು ಕಱವ ಹಾಲ್ (ಕ್ಷೀರ, etc. Mr. 182).— ಹಾಲ್ಕೊರಟಿಗಬಳ್ಳಿ. A climbing foetid milky herb, Daemia extensa R. Br. (St. & Pl.).— ಹಾಲ್ತುತ್ತ. = ಪಾಲ್ತುತ್ತ. (My.).— ಹಾಲ್ದೆನೆ. -ತೆನೆ. = ಪಾಲ್ದೆನೆ. (My.).— ಹಾಲ್ವಕ್ಕಿ. -ಹಕ್ಕಿ. = ಪಾಲ್ವಕ್ಕಿ, etc., ಹಾಲಕ್ಕಿ. (My.).

ಹಾಲ hâla. = ಹಾಲ್, etc. (B. 5, 247).— ಹಾಲವಕ್ಕಿ. -ಹಕ್ಕಿ. = ಹಾಲ್ವಕ್ಕಿ, etc. A small kind of owl of which the cry is ominous (Bd.).

ಹಾಲ hâla. (fr. ಹಲ). A plough. 2, Balarâma. (Colebr.).

ಹಾಲಹಲ hâlahala. = ಹಲಾಹಲ, ಹಾಲಾಹಲ No. 1. (Bp. 58, 55. 62).

ಹಾಲಹವಾಲು hâlahavâlu. Distressful condition; the woefulness of disgrace, fatigue, hunger, etc. (My.; Mhr., H.).

ಹಾಲಾಹಲ hâlâhala. = ಹಾಲಹಲ, etc. A sort of deadly poison (Bp. 58, 46. 64). 2, spirituous liquor. 3, *a kind of lizard* (*cf.* ಹಲ್ಲಿ 1).

ಹಾಲಿ hâli. (= ಹಾಲೆ 4?).— ಹಾಲಿಕಾಯಿ. The fruit of ಹಾಲಿಬಳ್ಳಿ (Z.).— ಹಾಲಿಬಳ್ಳಿ. A creeper common in hedges, Leptadenia reticulata Wight. (Z.).

ಹಾಲಿ hâli. A present; present (My.; Tĕ.; see ಹಾಲು).

ಹಾಲಿಕ hâlika. Relating to a plough, agricultural; *a ploughman, an agriculturist.*

ಹಾಲಿಗೆ hâligĕ. (Šmd. 25).

ಹಾಲಿವಾಣ hâlivâṇa. = ಪಾರುವಾಣ, etc. The coral tree (ಪಾರಿಭದ್ರ, etc. Si. 127; My.).

ಹಾಲು hâlu. = ಹಾಲ್, etc. Milk; etc. (C.; Bp. 14, 8; 28, 37; Bh. 1, 10, 25. 30; Si. 315). ಕುಱಿಯ ಹಾಲು (ಅವಿದೂಸ Hlâ.). ಆಕಳ ಹಾಲು ಮೊಸರು ಮೊದಲಾದವೆಲ್ಲಂ (ಗವ್ಯ); ಕಾಯ್ದು ಬಿಸಿಯಾಗಿರ್ದ ಹಾಲಿನಲ್ಲಿ ಆವುದಾನೊನ್ದು ಮೊಸರ ಹೊಯ್ದು ದಟ್ಟತನದ ಒಡೆದುದು (ಆಮಿಕ್ಷೆ, ಒಡೆ Nr.). ಹಾಲಿನ ಕಡಲು (ಕ್ಷೀರೋದ Si. 81). ಕಾಯಿಸಲ್ ಪಟ್ಟು ಬಿಸಿಯಾದ ಹಾಲಿನಲ್ಲಿ ಮೊಸರು ಸೇರಿ ಹೆಪ್ಪ ಕಟ್ಟಿ ಒಡದನ್ತೆ ಸಪ್ಪೆಯಾಗಿರುವದು (ಆಮಿಕ್ಷೆ 240). ಅರ್ಧ ಪಾಕವಾಗಿ ಕಾಯಿಸಿದ ಕಬ್ಬಿನ ಹಾಲು (ಫಾಣಿತ 312). ನಿನ್ನೆಯ ದಿನದಲ್ಲಿ ಆಕಳಿನ ದೆಸೆಯಿನ್ದ ಕಱೆದು ಹಿಣ್ಡಲ್ ಪಟ್ಟ ಹಾಲಿನಿನ್ದ ಹುಟ್ಟಿದ ತುಪ್ಪವೂ ಬೆಣ್ಣೆಯೂ (ಹೈಯಂಗವೀನ 316). ಆಱಿದ ಉಷ್ಣದ ಹಾಲಿನನ್ದದಿ ಸುಲಭವಾಗಿರ್ದ...ಕನ್ನಡದ ನುಡಿ (Abhâ. 1, 5). ಹಾಲಿನೂಟದ ಹಬ್ಬ (Dp. 4). ಕೊತ್ತಿ ಬಲ್ಲುದೆ ಹಾಲು ಮಾಸಲೆಮ್ಬುದನು? (Dp. 76). ಹಾಲಿಗಿನ್ತ ಕೆನೆ ರುಚಿ.—ಹಾಲಿದ್ದಾಗಲೇ ಹಬ್ಬ ಮಾಡು.—ಹಾಲು ಕಣ್ಡಲ್ಲಿ ಬೆಕ್ಕು, ಕೂಳು ಕಣ್ಡಲ್ಲಿ ನಾಯಿ.—ಆಕಳು ಕಪ್ಪಾದರೆ ಹಾಲು ಕಪ್ಪೇ?—ನೇಗಲು ಉತ್ತರೆ ಹೊಲ, ಹಾಲು ಇದ್ದರೆ ಗೋವು.—ಪೋಲೀ ದನಕ್ಕೆ ಹಾಲು ಹೆಚ್ಚು, ಕೂಲೀ ಮುಣ್ಡೆಗೆ ನಾಲಿಗೆ ಹೆಚ್ಚು.—ಬೆಳ್ಳಿ ಬಿಸಿಯ ಬೇಕಾದರೆ ಕಳ್ಳೀ ಹಾಲು ಬೇಕೇ?—ವಾಲೀ ಹಾಗೆ ಬಲವನ್ತನಿಲ್ಲ, ಹಾಲಿನಕ್ಕಿನ್ತ ಸವಿಯಿಲ್ಲ.—ಹಾಲು ಹೊದ್ದವನಾದರೂ ಹಾಲು ಬಿಟ್ಟಾನೇ? (Prvs.). See ಮಯ್ಲಿ-.— ಹಾಲ ಕಾಗದ. White paper (My.).— ಹಾಲಕ್ಕಿ. -ಅಕ್ಕಿ 1. = ಹಾಲುವಕ್ಕಿ, etc. A small owl, called pingalâ in Mahratta (Pr.). ಹಾಲಕ್ಕಿ ಆದರೆ ಹಾಲು ಕಱದೀತೇ? (Prv.).— ಹಾಲನ್ನ. -ಅನ್ನ. Milk and boiled rice (My.).— ಹಾಲ ಮಣಿ. A common white glass-bead (My.).— ಹಾಲಿನವ. -ಅವ. A seller of milk, a milk-man (My.).— ಹಾಲುಕುಮ್ಬಳ. = ಹಾಲುಗುಮ್ಬಳ. (ಇಕ್ಷ್ವಾಕು G.).— ಹಾಲುಕುಱುಬ. A class of Kuṟubas who keep cattle, sell milk and cultivate the soil (My.).— ಹಾಲುಗಿಣ್ಣು. = ಗಿಣ್ಣು 1. (My.;

Digitized by Google

ಕೂರ್ಚಿಕೆ Si. 312). — ಹಾಲುಗುಮ್ಮಳ. -ಕುಮ್ಮಳ. (ಕಟುತುಮ್ಮ G.). — ಹಾಲುಘಸ್ವಾಮಣಿ. (ಕ್ಷೀರಾವಿ, ದುಗ್ಧಿಕೆ Si. 146). — ಹಾಲುಣ್ಣೆ. -ಉಣ್ಣೆ. A wart (My.). — ಹಾಲುತೊಟ್ಟಿನ ಗಿಡ. (ಕ್ಷೀರಾವಿ, ದುಗ್ಧಿಕೆ Si. 146; My.). — ಹಾಲುತೊಟ್ಟಿಗಿಡ. = ಹಾಲುತೊಟ್ಟಿನ ಗಿಡ. (My.). — ಹಾಲುಬಳಪ. A milk-white superior kind of ಬಳಪ (for writing, My.). — ಹಾಲುಬಳ್ಳಿ. The creeper Argyrea malabarica Chois. (Z.). 2, = ರಾಜಾದನ, etc., ಹಾಲಿಯ ಗಿಡ, ಪಾಲೆ 2. (Si. 132). — ಹಾಲುಬೆಳ್ಳಿ. White, pure silver (My.; Tĕ. ಪಾಲಿವೆಣ್ಡಿ). — ಹಾಲುಮಡ್ಡಿ. A kind of incense (My.; ತುರುಷ್ಕ, ಪಿಣ್ಡಕ, ಸಿಹ್ಲ, ಯಾವನ, ತುರುಕಿನ ಮಡ್ಡಿಯೆಮ್ಬ ಧೂಪ, ಅಸ್ದುಗಬೊಂಕ Si. 227). — ಹಾಲುಮೊಸರು. Excellent curds. ಅತ್ತೆ ಮನೆಗೆ ಮಜ್ಜಿಗೆನೀರು, ತವರ ಮನೆಗೆ ಹಾಲುಮೊಸರು (Prv.). — ಹಾಲುವಕ್ಕಿ. -ಹಕ್ಕಿ. = ಪಾಲ್ವಕ್ಕಿ q. v., etc., ಹಾಲಕ್ಕಿ. A small owl etc. (ಪಿಂಗಲಿ, ಘಾಸ, ಶಕುನ್ತ Mr. 174). — ಹಾಲುಸಮುದ್ರ. The milk-sea (G. 56). — ಹಾಲುಸೋರೆ. A sweet kind of sŏrĕ fruit (My.). — ಹಾಲುಹಕ್ಕರಿಕೆ. A milky herb, Lactuca heyniana D. C. (Z.). — ಹಾಲುಹುರಳಿ. N. of a plant (ಕುಲಾಲಿ Mr. 148). — ಹಾಲೋಗರ. -ಓಗರ. Boiled rice mixed with milk (Dp. 55, 1). ಹಾಲೋಗರದ ಪಾಯಸ (ವ್ಯಂಜನ Mr. 215). ಲೋಗರ ಮನೇಲಿ ಎಮ್ಮೆ ಇದ್ದರೆ ತನ್ನ ಮನೇಲಿ ಹಾಲೋಗರಕ್ಕೆ ಕಡಿಮೆ ಏನು? — ರೋಗಿ ಬಯಸಿದ್ದು ಹಾಲೋಗರ, ವೈದ್ಯ ಹೇಳಿದ್ದು ಹಾಲೋಗರ (Prvs.).

ಹಾಲು hâlu. Now; current (Mhr., H. ಹಾಲ; Tĕ. ಹಾಲ್, ಹಾಲು). See ಸಾಲಿ-.

ಹಾಲುವಾಣ hâluvâṇa. 1. Tbh. of ಪಾರಾವತ. A dove (ಪಾರಾವತ, ಕಲರವ, ಕಪೋತ Si. 171; My.).

ಹಾಲುವಾಣ hâluvâṇa. 2. = ಪಾರುವಾಣ 1, etc. The coral tree (My.).

ಹಾಲೆ hâlĕ. 1. (= ಪಾಲೆ 1). (Tĕ. ಪಾಲಿ, milky; milk-white). — ಹಾಲೆಹಕ್ಕಿ. = ಹಾಲುವಕ್ಕಿ, etc. (My.).

ಹಾಲೆ hâlĕ. 2. = ಆಲೆ 6, ಪಾಲೆ 2 q. v. The tree Mimusops kauki (My.). 2, the tree Alstonia sholaris (St. & Pl.). See ಕಿರಿಯ-. — ಹಾಲೆಯ ಗಿಡ. = ಹಾಲೆಯ ಮರ. (ರಾಜಾದನ, etc. Si. 132). — ಹಾಲೆಯ ಮರ. = ಹಾಲೆ No. 1. ರಾಜಾದನ, ಫಲಾಧ್ಯಕ್ಷ, ಕ್ಷೀರಕೆ Nr.).

ಹಾಲೆ hâlĕ. 3. = ಪಾಲೆ 3, etc. The lobe of the ear (ಲಮ್ಬಿಕೆ, ಪತ್ರಾಶ್ರಯ Mr. 319; My.).

ಹಾಲೆ hâlĕ. 4. (= ಹಾಲಿ?). A species of creeper (? ಜಟಿ Mr. 110).

ಹಾಲೆ hâlĕ. 1. Tbh. of ಪಟೋಲ. A species of cucumber or gourd (ಕೋಶಾತಕಿ, ಪಟೋಲ Mr. 123; ಕಾಡ್ಪಿಗೆ 149).

ಹಾಲೆ hâlĕ. 2. The vinous juice of the palm, *spirituous liquor.*

ಹಾವ hâva. Calling, a call. 2, *any feminine or coquettish gesture tending to excite amorous sensations, blandishment, dalliance,* the airs and arts of lovers.

ಹಾವಡಿಗ hâvu-aḍiga. (Śmd. 239, o. r. ಪಾವಡಿಗ). = ಹಾವಡಿಗ, etc. A man who plays with snakes, a snake-catcher and exhibiter, a snake-charmer (ವ್ಯಾಲಗ್ರಾಹಿ, ಅಹಿತುಣ್ಡಿಕ Hlâ., Nr.; ಸರ್ಪತುಣ್ಡಿಕ Mr. 391; Râm. 5, 8, 50). ಹಾವಡಿಗನಿಗೆ ಹಾವಿನಿನ್ದಲೇ ಮರಣ. — ಲೇವಡಿ ರುಚಿ ಹಾವಡಿಗ ಬಲ್ಲನೇ? (Prvs.).

ಹಾವಭಾವ hâva-bhâva. Actions and postures expressive of sentiments, gestures and movements exhibiting the passions, gesticulation (Mhr.; J. 33, 22).

ಹಾವಸೆ hâvasĕ. = ಪಾವಸೆ, etc. The aquatic plant Vallisneria octandra, etc. (ಶೈವಾಲ, ಶೈವಲ, ಜಲಕೂಕ, ನೀಲಿಕೆ Hlâ., Nr., Mr. 421; ಶೇವಾಲ Kk. 13, Śm. 1.. Bp. 20, 11; Bh. 1, 5, 5). ನೀರ ಹಾವಸೆ (Śmd. 162). ಹಾವಸೆ (o. r. ಪಾವಸು) ಕಿಡಲೊಡಂ ನೀರ್ ತಿಳಿದುದು (o. r. ತಿಳಿವುದು. ...

ಹಾವಳಿ hâvaḷi. (fr. ಹಾಡು 3 No. 2 -ವಳಿ). Trouble, harass, annoyance, molestation (My.; R. 2, 1.. J. 20, 47; 24, 24; 30, 38). ಜಗಳೇ ಉಪದ್ರ, ... ಜಟೀ ಹಾವಳೀ ನೋಡಲೋ? — ರಾಯರು ಸತ್ತ ಹಾವಳಿ. — ಸತ್ತ ... ಯುವದಕ್ಕಿನ್ತ ಮುಂಚೆ ಗಣ್ಟುಗಳ್ಳರ ಹಾವಳಿ. — ಗಣ್ಡ ಇಲ್ಲದ ... ಳಿ, ದಣ್ಡ ಇಲ್ಲದ ಹಾವಳಿ (Prvs.).

ಹಾವಾಡಿಗ hâvu-âḍiga. = ಹಾವಡಿಗ. (ಕೌತಿಕ, ಸರ್ಪೋಪಜೀವಿ Nn. 10, o. r. ಹಾವಡಿಗ; ಕೌತಿಕ, ವ್ಯಾಲಗ್ರಾಹಿ S. 414. My.).

ಹಾವಿಗೆ hâvigĕ. = ಹಾವುಗೆ 1, etc. (ಅನುಪದೀನ, ಪಾದುಕೆ Mr. 2.., o. r. ಹಾವುಗೆ; My.). ಮರದ ಹಾವಿಗೆ (ಪಾದುಕೆ, etc. Si. 344).

